ಖಿಲವಾಯುಸ್ತುತಿ

ಬಳಿತ್ಥಾಸೂಕ್ತದ ವಿಸ್ತೃತ ವ್ಯಾಖ್ಯಾನಸಹಿತ

ಖಿಲವಾಯುಸ್ತುತಿ

ಮತ್ತು

ಬಳಿತ್ಥಾಸೂಕ್ತದ ವಿಸ್ತೃತ ವ್ಯಾಖ್ಯಾನ

ಶ್ರೀಹರಿವಾಯುಸ್ತುತಿಯ ನಾಲ್ಕನೇ ಭಾಗ

ವ್ಯಾಖ್ಯಾನಕಾರರು :

ಪಿ. ವಿಷ್ಣುತೀರ್ಥ

ನವವೃಂದಾವನ, ಆನೆಗೊಂದಿ

ವಾಸುದೇವಪದಸಂತತಸಂಗೀ

ಆನಂದ್ ಪ್ರಿಂಟರ್ಸ್

25, ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು-560004

KHILAVAYUSTUTHI — With commentary
by Sri P. Vishnu Theertha, Navavrindavana,
931, 2nd Main Road, 4th Block, Rajajinagar, Bangalore-10

Pp. xxxii-200 ; First Edition—December 1990 ; 1,000 copies

ಎಲ್ಲ ಹಕ್ಕುಗಳೂ ಲೇಖಕರದು

ಬೆಲೆ: ರೂ. 25-00

ಆನಂದ್ ಪ್ರಿಂಟರ್ಸ್
25, ಗಾಂಧೀ ಬಜಾರ್ (ಹಿಂಭಾಗ)
ಬಸವನಗುಡಿ ಬೆಂಗಳೂರು-560004

॥ ಶ್ರೀಮನ್ಮಧ್ವಾಂತರ್ಗತ ಶ್ರೀ ವೇದವ್ಯಾಸಾಯ ನಮಃ ॥

ಪ್ರಸ್ತಾವನೆ

"ಅಂಜಿಕಿನ್ಯಾತಕಯ್ಯ ಸಜ್ಜನರಿಗೆ। ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ" ಎಂದು ಶ್ರೀ ಪುರಂದರದಾಸರಾಯರು ಹಾಡಿದ್ದಾರೆ. ಅನೇಕರು ಇದನ್ನು ಹಾಡಿ ಹಾಡಿ ಆನಂದಪಟ್ಟರೆ, ಅದನ್ನು ಹಾಡುವ ಭಾಗ್ಯ-ದಿಂದ ವಂಚಿತನಾದ ನನಗೆ, ಕಳೆದ ನಾಲ್ವತ್ತು ವರ್ಷಗಳಿಂದಲೂ ಅದರ ಸವಿ. ಯೂಟವನ್ನೇ ಮಾಡಿಸುತ್ತಾ ಬಂದಿದ್ದಾರೆ—ಸ್ವತಃ ಆ ಸಂಜೀವರಾಯರು. ಅವರು ಹಾಗೆ ಧೈರ್ಯ ಕೊಡದಿದ್ದಿದ್ದರೆ ನನಗೆ ಅಷ್ಟು ವರ್ಷ ಕಾಲ ನವ ವೃಂದಾವನದಲ್ಲಿ ಸೇವೆ ಮಾಡಿಕೊಂಡಿರಲು ಹೇಗೆ ಸಾಧ್ಯವಾಗುತ್ತಿತ್ತು! ಅಷ್ಟೇಕೆ, ಈ ವಾಯುಸ್ತುತಿಯ ಲೇಖನವೇ ಮರೆಯಲಾಗದ ಆ ಸವಿಯೂಟದ ಸ್ಮರಣಸಂಚಿಕೆಯಾಗಿದೆ.

ಸುಮಾರು ಎಂಟು ವರ್ಷಗಳ ಹಿಂದೆ 'ನಖಸ್ತುತಿ'ಗೆ ಪೀಠಿಕೆಯನ್ನು ಬರೆಯಲು ಆರಂಭಿಸಿದಾಗ ಹದಿನೈದು ಇಪ್ಪತ್ತು ಸಾರಿ ಬರೆದರೂ ತೃಪ್ತಿ ಯಾಗದೆ ಬೇರೆ ಬರೆಯುತ್ತ ಬರೆಯುತ್ತ ಹೋದಾಗ, ಕೊನೆಗೆ ಒಂದು ರೂಪ ತೃಪ್ತಿಕರವಾಗಿ ಮೂಡಿಬಂದಾಗ ನನಗೆ ಆದ ಆನಂದ ವರ್ಣನಾತೀತವಾದುದು. ಮುಂದೆ ಆ ಆನಂದ—ಆ ಸ್ಫೂರ್ತಿ—ಹಾಗೆಯೇ ಸಾಗಿದ್ದರಿಂದ ನಖಸ್ತುತಿಯ ಎರಡು ಶ್ಲೋಕಗಳ ವಿವರಣೆಯೇ ಬೃಹದಾಕಾರ ತಾಳಿ ಮುನ್ನೂರು ಪುಟ ಗಳಿಗೂ ಮಿಂಚಿದ ದೊಡ್ಡ ಪುಸ್ತಕವೇ ಆಯಿತು. ಅಲ್ಲಿಯವರೆಗೂ ಈ ಲೇಖನವು ಧಾರಾವಾಹಿರೂಪವಾಗಿ 'ವಾಸುದೇವಪದಸಂತತಸಂಗೀ' ಪಾಕ್ಷಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಾ ಬಂದುದರಿಂದ ನನಗಾಗಲೀ ಪ್ರಕಾಶಕರಾದ ಶ್ರೀ ಶ್ರೀಶ-ಮೂರ್ತಿಗಳಿಗಾಗಲೀ ಯಾವ ಮುದ್ರಣಭಾರದ ಕಷ್ಟವೂ ಅರಿವಿಗೆ ಬರಲಿಲ್ಲ. ಎರಡನೇ ಭಾಗವು ಪುಸ್ತಕರೂಪವಾಗಿಯೇ ಪ್ರಕಟವಾಗಬೇಕೆಂದು ಅನೇಕರ ಸಲಹೆ ಬಂದು ನಿರ್ಣಯವಾದಾಗ ನಮಗೆ ನಿಜವಾಗಿಯೂ ಅನೇಕ ಎಡರು-ತೊಡರುಗಳು ಬಂದುವು. ಅಲ್ಲದೆ ಸಮಗ್ರ ವಾಯುಸ್ತುತಿಯು ೪೦೦ ಪುಟಗಳಲ್ಲಿ

ಮುಗಿಯಬೇಕೆಂಬ ನಿರೀಕ್ಷೆಯಲ್ಲಿದ್ದ ಈ ಗ್ರಂಥ ಸಾವಿರ ಪುಟಗಳಿಗೂ ಮೀರಿ ಬೆಳೆಯಿತಾದರೂ ಆ ಹರಿವಾಯುಗಳ ಕೃಪಾದೃಷ್ಟಿಯಿಂದಲೇ ಎರಡನೆಯ ಮತ್ತು ಮೂರನೆಯ ಭಾಗಗಳಾಗಿ ಪ್ರಕಟವೂ ಆದುವು, ಹೊರಗೂ ಬಂದುವು.

ನಮ್ಮ ಹಿಂದಿನ ಅಪೇಕ್ಷೆಯ ಪ್ರಕಾರ ಈಗ ನಿಮ್ಮ ಹಸ್ತಗತವಾಗಿರುವ "ಖಿಲವಾಯುಸ್ತುತಿ"ಯ ಅರ್ಥವೂ ಮೂರನೇ ಭಾಗದ ಕಡೆಯಲ್ಲೇ ನಲವತ್ತೊಂದನೇ ಶ್ಲೋಕದ ವಿವರಣೆಯಾದ ಬಳಿಕವೇ ಮುದ್ರಿತವಾಗಬೇಕಾಗಿತ್ತು. ಅದಕ್ಕೆ ಅನುಗುಣವಾಗಿ ನಲವತ್ತೊಂದನೇ ಶ್ಲೋಕದ ಅರ್ಥ-ವಿವರಣೆಗಳನ್ನು ಮುಳಬಾಗಿಲಲ್ಲಿ ವಿಭವಸಂವತ್ಸರದ ವೈಶಾಖ ಶುದ್ಧ ಬಿದಿಗೆ ಸೋಮವಾರ ದಿನಾಂಕ 18-4-1988ರಂದು ಮುಗಿಸಿ ಮರುದಿನವೇ 'ಖಿಲವಾಯುಸ್ತುತಿ'ಯನ್ನು ಆರಂಭಿಸಿ ಅಧಿಕ ಜ್ಯೇಷ್ಠ ಶುಕ್ಲ ದಶಮೀ ದಿನಾಂಕ 26 ಮೇ 1988ರಂದು ಆ ಶ್ರೀ ಶ್ರೀಪಾದರಾಜರ ಸನ್ನಿಧಿಯಲ್ಲೇ ಅದನ್ನು ಮುಗಿಸಿದ್ದಾಯಿತು. ಆದರೆ ಕೆಲವು ವಿಶೇಷ ಸನ್ನಿವೇಶಗಳ ಒತ್ತಡದಿಂದಲೂ ಸ್ವಲ್ಪಮಟ್ಟಿಗೆ ಆರ್ಥಿಕ ಮುಗ್ಗಟ್ಟಿನಿಂದಲೂ ಈ ಭಾಗವನ್ನು ಮೂರನೇ ಭಾಗದೊಂದಿಗೆ ಸೇರಿಸಿ ಮುದ್ರಿಸಲು ಅನುಕೂಲವಾಗಲಿಲ್ಲ. ದೊಡ್ಡ ಜ್ಞಾನಯಜ್ಞ ನಡೆದು ಮುಗಿಯಿತಾದರೂ ಅವಭೃಥಸ್ನಾನರೂಪಕಾರ್ಯ ಉಳಿದುಕೊಂಡಿತೆಂದು ಈ ಕಾರಣದಿಂದಲೇ ಮೂರನೇ ಭಾಗದ ನಮ್ಮ ಹೇಳಿಕೆಯಲ್ಲಿ ನಿವೇದಿಸಿಕೊಂಡೆವು. ಶ್ರೀಹರಿವಾಯುಗುರುಗಳೆಲ್ಲರ ದಯದಿಂದ 'ಖಿಲವಾಯುಸ್ತುತಿ'ಯ ಈ ಭಾಗವೂ ಈಗ ಮುದ್ರಿತವಾಗಿ ಪ್ರಕಟವಾಗಲಿದೆ. ಇದರೊಂದಿಗೆ ನಾವು ಎಂಟು ವರ್ಷಗಳ ಹಿಂದೆ ಆರಂಭಿಸಿದ ಜ್ಞಾನಯಜ್ಞಕಾರ್ಯವು ಸಂಪೂರ್ಣವಾಗಿ ಸಾಂಗೋಪಾಂಗವಾಗಿ ನೆರವೇರಿದಂತಾಗಿ ನಮ್ಮನ್ನು ಕೃತಕೃತ್ಯರನ್ನಾಗಿ ಮಾಡಿದೆ.

ಈ ನಾಲ್ಕನೇ ಭಾಗದ ಕಡೆಯಲ್ಲಿ ಕೊಟ್ಟಿರುವ "ಬಳಿತ್ಥಾಸೂಕ್ತದ ಶ್ಲೋಕರೂಪವ್ಯಾಖ್ಯಾನ"ದ ಕೇವಲ ಶ್ಲೋಕಗಳನ್ನು ಅನುಬಂಧರೂಪವಾಗಿ ಕೊಡಬೇಕೆಂಬುದೇ ನಮ್ಮ ಮೂಲಧ್ಯೇಯವಾಗಿತ್ತು. ಏಕೆಂದರೆ ಗದ್ಯರೂಪದಲ್ಲಿ ಹೇಳದ ವಿಷಯಗಳನ್ನೇ ಶ್ರೀ ಶ್ರೀಪಾದರಾಜರ ಸಾನ್ನಿಧ್ಯವಿಶೇಷದ ಮಹಿಮೆಯಿಂದ ಏನೋ ಸ್ಫೂರ್ತಿಯಿಂದ ಅಲ್ಲಲ್ಲೇ ಅರ್ಥರ್ಥ

ರಚಿಸಿಯೋ ಕರಡು ಪ್ರತಿಗಳಲ್ಲಿ ಬರೆದು ಬರೆದು ಇಡುತ್ತಿದ್ದೆ. ಎಷ್ಟೋ ಶ್ಲೋಕಗಳು ಅರ್ಧ ಗದ್ಯ—ಅರ್ಧ ಪದ್ಯರೂಪವಾದರೆ ಕೆಲವಕ್ಕೆ ನಾಲ್ಕೈದು ಬೇರೆಬೇರೆ ರೂಪಾಂತರಗಳೂ ಇದ್ದುವು. ಅವನ್ನು ಹಾಗೇ ಇಟ್ಟಿದ್ದೆನಾದರೂ ಅವನ್ನು ಒಂದುಗೂಡಿಸಿ ಪುನರ್ಲೇಖನ ಮಾಡುವ ಸುಯೋಗ ಎರಡು ವರ್ಷಗಳಾದರೂ ಬಂದಿರಲಿಲ್ಲ. ಮೊನ್ನೆ ಕಳೆದ ಜ್ಯೇಷ್ಠ-ಆಷಾಢಮಾಸಗಳಲ್ಲಿ ದೈವ-ಯೋಗದಿಂದ ಸ್ವಲ್ಪ ಕಾಲಾವಕಾಶವೂ ಸಿಕ್ಕಿತಲ್ಲದೆ ಸ್ಫೂರ್ತಿಯೂ ಬಂದಿದ್ದರಿಂದ ಆ ಕಾರ್ಯ ಮುಂದೆ ಸಾಗಿ ಆಷಾಢ ಶುದ್ಧ ದಶಮಿಯ ಹೊತ್ತಿಗೆ (ದಿನಾಂಕ ಜುಲೈ 2, 1990) ಅದರ ಸ್ಥೂಲರೂಪ ಒಂದು ನೆಲವಿಗೆ ಬಂತು. ಮುಂದೆಮುಂದೆ ಹೋದಂತೆಲ್ಲ ನನ್ನ ಮನಸ್ಸಿನಲ್ಲಿದ್ದ ಭಾವನೆಗಳೆಲ್ಲ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯಬೇಕಾದರೆ ಶ್ಲೋಕಗಳ ಸ್ಥೂಲಾರ್ಥವನ್ನಾದರೂ ಕೊಡು-ವುದು ಅನಿವಾರ್ಯವೆಂದು ಕಾಣಿಸಿತು. ಅಲ್ಲದೆ ಆಯಾ ಋಕ್ಕುಗಳಿಗೆ ಸಂಬಂಧಿಸಿದ ಶ್ಲೋಕಗಳನ್ನು ಆಯಾ ಋಕ್ಕುಗಳ ಜೊತೆಯಲ್ಲೇ ಕೊಡುವುದೂ ಉಚಿತವೆಂದು ತೋರಿತು. ಆದರೆ ಮುದ್ರಣಕಾರ್ಯ ಬಹಳ ಮುಂದುವರೆ-ದಿದ್ದುದರಿಂದ ಇದನ್ನು ಅನಿವಾರ್ಯವಾಗಿ ಅರ್ಥದೊಡನೆ ಅನುಬಂಧರೂಪ-ದಲ್ಲೇ ಕೊಡಬೇಕಾಯಿತು. ಮಾಧ್ವಭಾಷ್ಯದ ಅರ್ಥದೊಡನೆ ಸಾಯಣ-ಭಾಷ್ಯದ ಅರ್ಥವನ್ನೂ ತಿಳಿದುಕೊಳ್ಳಲು ಅನುಕೂಲವಾಗುವಂತೆ ಬಳಿತ್ಥಾ. ಸೂಕ್ತದ ಐದು ಮಂತ್ರಗಳಿಗೆ ಸಾಯಣಭಾಷ್ಯರೀತ್ಯಾ ಅರ್ಥ-ತಾತ್ಪರ್ಯಗಳನ್ನೂ ಬರೆದು ಅನುಬಂಧ (ಅ)ದಲ್ಲಿ ಕೊಡಲಾಗಿದೆ. ತುಲನಾತ್ಮಕದೃಷ್ಟಿ-ಯಿಂದ ಪರಿಶೀಲನೆ ಮಾಡುವ ವಿದ್ವದ್ವರೇಣ್ಯರಿಗೆ ಇದರಿಂದ ಅನುಕೂಲವಾಗುವುದೆಂದು ನಮ್ಮ ಭಾವನೆ.

ಪ್ರಾರಂಭದಿಂದ ಕಡೆಯ ಪುಟದವರೆಗೆ ಪ್ರತಿಯೊಂದು ಪಙ್ಕ್ತಿ ಬರೆಯುವಾಗಲೂ ನನಗೆ ಶ್ರೀಹರಿವಾಯುಗಳೇ ಮುಖ್ಯಪ್ರೇರಕರು, ಶ್ರೀ ಶ್ರೀಪಾದ-ರಾಯರು, ಶ್ರೀ ವ್ಯಾಸರಾಯರೇ ಮೊದಲಾದ ನವವೃಂದಾವನದ ಯತಿ-ವರೇಣ್ಯರು, ಶ್ರೀ ವಾದಿರಾಜರು, ಶ್ರೀ ಮಂತ್ರಾಲಯಪ್ರಭುಗಳೇ ನನಗೆ ಸ್ಫೂರ್ತಿದಾಯಕರು. ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರು ಉದಹರಿಸಿರುವ "ಹೃದಿಸ್ಥೋ ಬಾದರಾಯಣಃ । ಓಂಕಾರಪೂರ್ವಿಕಾ ವಿದ್ಯಾಃ ಪ್ರೇರಯತ್ಯ-

ಖಿಲೇಷ್ವಪಿ" ಎಂದರೆ ಸಕಲ ಯೋಗ್ಯಜೀವರ ಹೃದಯದಲ್ಲೂ ನೆಲೆಸಿರುವ ಶ್ರೀ ವೇದವ್ಯಾಸದೇವರೇ ಸರ್ವರಿಗೂ ಓಂಕಾರದಿಂದ ಆರಂಭಿಸಿ ಸಕಲ ವಿದ್ಯೆಗಳನ್ನೂ ಪ್ರೇರಿಸುತ್ತಾರೆ ಎಂಬ ಸಾತ್ವತಸಂಹಿತಾವಚನದ ಸಾಕ್ಷಾತ್ ಅನುಭವವು ಬಳಿತ್ಥಾಸೂಕ್ತದ ಈ ಶ್ಲೋಕರೂಪವ್ಯಾಖ್ಯಾನವನ್ನು ಬರೆಯುವಾಗ ನನಗೆ ಹೆಜ್ಜೆಹೆಜ್ಜೆಗೂ ಆಯಿತು ಎರಡು ವರ್ಷಗಳಿಂದ ಆಗದೆ ನಿಂತಿದ್ದ ಕೆಲಸ, ಏನು ಹಯಗ್ರೀವಸ್ವಾಮಿಯ ಮಹಿಮೆಯೋ, ಏನು ವೇದವ್ಯಾಸರ ಪ್ರೇರಣೆಯೋ—ಹೇಳಿಸಿ ಬರೆಸಿದಂತೆ ಶ್ಲೋಕಗಳೆಲ್ಲ ತವುಗೆ ತಾವೇ ಹೊಂದಿಕೊಂಡು ಸರಾಗವಾಗಿ ಸಲೀಸಾಗಿ ರಚಿತವಾಗಿ ರೂಪಗೊಂಡವು. ಶ್ಲೋಕಗಳಲ್ಲಿ ಹೇಳಿದ ವಿಚಾರಗಳು ಹಿಂದೆ ಗದ್ಯರೂಪವಾಗಿ ಯಾವ ಪುಟದಲ್ಲಿ ಯಾವ ಖಂಡದಲ್ಲಿ ಹೇಳಿದೆಯೆಂಬುದು ಎಲ್ಲರಿಗೂ ಅರ್ಥವಾಗುವಂತೆ ಪುಟಸಂಖ್ಯೆಯನ್ನೂ ಖಂಡಸಂಖ್ಯೆಗಳನ್ನೂ ಅಲ್ಲಲ್ಲೇ ಕಂಸಗಳಲ್ಲಿ ಸೂಚಿಸಿದ್ದೇನೆ.

ಹೀಗೆ ಶ್ಲೋಕಗಳನ್ನು ಅರ್ಥಸಹಿತ ಬರೆದದ್ದು ಮುಗಿದನಂತರ ಆಷಾಢ ಶುದ್ಧ ಹುಣ್ಣಿಮೆಯಂದು ಶ್ರೀ ನರಸಿಂಹತೀರ್ಥಕ್ಕೆ ಶ್ರೀ ಶ್ರೀಪಾದರಾಜರ ಸಂದರ್ಶನಕ್ಕಾಗಿ ಹೋಗುವ ಯೋಗ ಬಂದದ್ದರಿಂದ ಅರ್ಥಸಹಿತವಾದ ಈ ಶ್ಲೋಕಗಳ ಹಸ್ತಪ್ರತಿಯನ್ನು ಶ್ರೀ ಶ್ರೀಪಾದರಾಜರ ವೃಂದಾವನಸನ್ನಿಧಿಯಲ್ಲಿ ಸಮರ್ಪಿಸಿ ಬಂದೆ. ಆಮೇಲೆ ಆಷಾಢ ಬಹುಳ ಚೌತಿ ಶ್ರೀಮಟ್ಟೀಕಾಕೃತ್ಪಾದರವರ ಪೂರ್ವಾರಾಧನೆಯ ದಿನ ನವವೃಂದಾವನಕ್ಕೂ, ಪಂಚಮೀ ದಿನ ಶ್ರೀ ಯಂತ್ರೋದ್ಧಾರಕ ಪ್ರಾಣದೇವರ ಸನ್ನಿಧಿಗೂ ಹೋಗಿ ಅಲ್ಲಿಯೂ ಸಮರ್ಪಿಸಿ ಬಂದದ್ದಾಯಿತು ಈಚೆಗೆ ವಿಜಯದಶಮಿಯ ದಿವಸ ಇದನ್ನು ಶ್ರೀ ವಾದಿರಾಜರ ವೃಂದಾವನದ ಮುಂದೂ ಸಮರ್ಪಿಸಿದ್ದಾಗಿದೆ.

ನಾನು ಈ ಶ್ಲೋಕಗಳನ್ನು ಸ್ಫೂರ್ತಿಯಿಂದ ಬರೆದಿದ್ದ ಕಾರಣ, ನನಗೆ ಅರಿವಿಲ್ಲದೆ ಅವುಗಳಲ್ಲಿ ಅನೇಕ ನ್ಯೂನಾತಿರೇಕಗಳೂ ಛಂದೋಭಂಗಾದಿ ಅನೇಕ ದೋಷಗಳೂ ಇರುವುದು ಸಹಜವೆಂದು ಅನಿಸಿತ್ತು. ಆದಕಾರಣ ಈ ಶ್ಲೋಕಗಳನ್ನು ಯಾರಾದರೂ ಒಬ್ಬ ಹಿರಿಯ ವಿದ್ವಾಂಸರಿಗೆ ತೋರಿಸಿ ಅವರಿಂದ ಪರಿಷ್ಕರಿಸಿ ಲೋಪದೋಷಗಳನ್ನು ತಿದ್ದಿಸಬೇಕೆಂಬ ಉತ್ಕಟಾಭಿಲಾಷೆ ನನಗಿತ್ತು. ಆದರೆ ಪ್ರತಿಯೊಬ್ಬರಿಗೂ ಅನೇಕ ಕಾರ್ಯಗಳಿದ್ದು

ನನ್ನ ಶ್ಲೋಕಗಳನ್ನು ಸಮಗ್ರವಾಗಿ ಓದುವಷ್ಟು ವ್ಯವಧಾನವಾಗಲಿ ಓಪಿಕೆಯಾಗಲಿ ಇರುವುದಿಲ್ಲವೆಂಬುದೂ ಅದಕ್ಕೂ ಹೆಚ್ಚಾಗಿ ತಿದ್ದಿಕೊಡುವಷ್ಟು ಸಹಾನುಭೂತಿ ಸೌಜನ್ಯತೆಯುಳ್ಳ ಮಹನೀಯರು ಸಿಕ್ಕುವುದು ಕಷ್ಟವೆಂಬುದೂ ತಿಳಿದಿತ್ತು. ನನ್ನ ಪುಣ್ಯವಿಶೇಷದಿಂದಲೂ ಶ್ರೀಹರಿವಾಯುಗಳ ಅನುಗ್ರಹಬಲದಿಂದಲೂ ಪುಣ್ಯಾತ್ಮರಾದ ವಿದ್ಯಾಭೂಷಣ ವಿದ್ವಾನ್ ಆಚಾರ್ಯ ಶ್ರೀ ಮ॥ಶಾ॥ಸಂ॥ ಸಾಣೂರು ಭೀಮಭಟ್ಟರು, ಎಂ.ಎ , ಈ ಮಹನೀಯರ ನೆರವು ನನಗೆ ಸಿಕ್ಕಿತು. ಆದರೆ ಅವರಿಗೂ ಅನೇಕ ಕಾರ್ಯ ಕಲಾಪಗಳು, ಅನೇಕ ಕಡೆ ಹೋಗಬೇಕು. ಅಷ್ಟಾದರೂ ಆ ವಿದ್ವದ್ವರೇಣ್ಯರು ನನ್ನ ಶ್ಲೋಕಗಳನ್ನು ತಾಳ್ಮೆಯಿಂದ ಕೂಲಂಕಷವಾಗಿ ಓದಿ ನಾನು ಕೊಟ್ಟಿದ್ದ ಜೆರಾಕ್ಸ್ ಪ್ರತಿಯಲ್ಲೇ ತಿದ್ದುಪಡಿಗಳನ್ನು ಮಾಡಿಕೊಟ್ಟು ಮಹೋಪಕಾರ ಮಾಡಿದರು. ಅವರ ಈ ಮಹೋಪಕಾರಕ್ಕೆ ನಾನು ಅತ್ಯಂತ ಚಿರಋಣಿಯಾಗಿದ್ದೇನೆ.

ಆದರೆ ಅವರ ತಿದ್ದುಪಡಿ ನನ್ನ ಕೈಗೆ ಬಂದು ಸೇರುವುದರೊಳಗಾಗಿ ನನಗೆ ಅರಿವಿಲ್ಲದೆಯೇ (ನಾನು ಪ್ರವಾಸ ಹೋಗಿದ್ದುದರಿಂದ) ಈ ಶ್ಲೋಕಗಳು ನಾನು ಬರೆದಂತೆಯೇ ಮುದ್ರಣವಾಗಿಹೋಗಿಬಿಟ್ಟಿದ್ದುದಾದ ಕಾರಣ ಆ ವಿದ್ವನ್ಮಣಿಗಳ ತಿದ್ದುಪಡಿಗಳನ್ನು ಅಳವಡಿಸಲು ಕಾಲ ಮೀರಿಹೋಗಿತ್ತು. ಆದಕಾರಣ ಈ ಪ್ರಸ್ತಾವನೆಯಾದ ಬಳಿಕ ಮುಂದೆ ಶ್ಲೋಕಸಂಖ್ಯೆಗಳೊಡನೆ ಅವರ ತಿದ್ದುಪಡಿಗಳನ್ನೇ ಕೊಟ್ಟಿದ್ದೇನೆ. ಪಾಠಕರು ಕೃಪೆಮಾಡಿ ಇದರಂತೆಯೇ ಸುಧಾರಿಸಿಕೊಂಡು ಓದಿಕೊಳ್ಳಬೇಕಾಗಿ ನಮ್ರತಾಪೂರ್ವಕವಾಗಿ ವಿನಂತಿ.

ಅಲ್ಲದೆ ತಿದ್ದುಪಡಿ ಬರೆಯುವಾಗ ಶ್ಲೋಕಗಳನ್ನು ಸಾವಕಾಶವಾಗಿ ಓದುತ್ತಾ ಹೋದಾಗ ನನಗೇ ಇನ್ನೂ ಅನೇಕ ನ್ಯೂನಾತಿರೇಕಗಳು ಕಣ್ಣಿಗೆ ಬಿದ್ದುವಲ್ಲದೆ ಕೆಲವು ಸುಧಾರಣೆಗಳನ್ನು ಮಾಡಬಹುದೆಂದೂ ಗೋಚರವಾಯಿತು. ಅವುಗಳನ್ನೂ ಈ ತಿದ್ದುಪಡಿಯಲ್ಲಿ ಕೊಟ್ಟಿದ್ದೇನೆ. ಪಾಠಕರು ಕೃಪೆಮಾಡಿ ಇವುಗಳನ್ನೂ ಸೇರಿಸಿ ತಿದ್ದಿಕೊಂಡೇ ಓದಿಕೊಳ್ಳಬೇಕಾಗಿ ಸಾದರ ಸವಿನಯ ಪ್ರಾರ್ಥನೆ.

ಶ್ರೀಹರಿವಾಯುಸ್ತುತಿಯ ಈ ಸಮಗ್ರ ವ್ಯಾಖ್ಯಾನವು ಶ್ರೀಹರಿವಾಯು-ಗುರುಗಳೆಲ್ಲರ ಅನುಗ್ರಹವಿಶೇಷದಿಂದ ಇಷ್ಟು ಪ್ರೌಢವೂ ವಿಸ್ತಾರವೂ ಆದರೂ, ಅನೇಕ ವ್ಯಾಕರಣಾದಿ ವಿಚಾರಗಳು ಸಾಮಾನ್ಯಮಟ್ಟದ ಜನರಿಗೆ ಹೆಚ್ಚಿನ ವಿಚಾರಗಳೆಂದು ಎನಿಸಿದರೂ, ಎಲ್ಲರೂ ಸಾಮಾನ್ಯವಾಗಿ ಇದರ ವಿಷಯದಲ್ಲಿ ತಮ್ಮ ಮೆಚ್ಚಿಗೆಯನ್ನೇ ಸೂಚಿಸಿದ್ದಾರೆಂಬುದು ನಮಗೆ ಬಹಳ ಉತ್ತೇಜಕವಾಗಿದೆ. ನನಗೆ ಪರಿಚಿತರಾದ ನೂರಾರು ಮಂದಿ ನನ್ನ ಮುಂದೆ ಈ ವ್ಯಾಖ್ಯಾನದ ಮೆಚ್ಚಿಕೆಯನ್ನು ಪ್ರಕಟಪಡಿಸಿದರೆ ಅನೇಕ ಜನರು (ಅವರಲ್ಲಿ ನನ್ನ ಪರಿಚಯವಿಲ್ಲದವರೇ ಹೆಚ್ಚು ಮಂದಿ) ಅಪ್ರಾರ್ಥಿತವಾಗಿ ಪತ್ರ-ಮುಖೇನ ನನಗೂ ಶ್ರೀ ಶ್ರೀಶಮೂರ್ತಿಗಳಿಗೂ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಬಂದಿದ್ದಾರೆ. ಅವುಗಳನ್ನೇ ಸಂಗ್ರಹಿಸಿದ್ದರೆ ನೂರಾರು ಆಗುತ್ತ-ಲಿದ್ದುವೇನೋ! ಆದರೆ ನಾನು ಊರಿಂದೂರಿಗೆ ಆಗಾಗ್ಗೆ ತಿರುಗುತ್ತಿರುವವ ನಾದುದರಿಂದಲೂ ಅವುಗಳನ್ನು ಸಂಗ್ರಹಿಸಬೇಕೆಂಬ ಕುತೂಹಲವಿಲ್ಲದವ ನಾದುದರಿಂದಲೂ ಪ್ರಾಯಶಃ ಅವೆಲ್ಲ ಕಳೆದುಹೋದುವು. ಹಾಗೆ ಸುತರಾಂ ನನ್ನ ಪರಿಚಯವಿಲ್ಲದಿದ್ದರೂ ನಮಗೆ ಅಭಿಮಾನವಿಟ್ಟು ವಿಶ್ವಾಸಪೂರ್ವಕ ಪತ್ರ ಬರೆದ ಆ ಸಕಲ ಮಹನೀಯರಿಗೂ ನನ್ನ ಹೃತ್ಪೂರ್ವಕವಾದ ವಂದನೆ ಗಳನ್ನು ಈ ಮೂಲಕ ಅರ್ಪಿಸುತ್ತೇನೆ.

ಆದರೂ ಕೂಡ ಅಲ್ಲಿ ಇಲ್ಲಿ ಒಂದೊಂದು ಕೆಲವು ಪತ್ರ ಮಾತ್ರ ಹೇಗೋ ಏನೋ ನನ್ನ ಬಳಿ ಉಳಿದುಕೊಂಡಿವೆ. ಅವುಗಳಿಂದ ಮುಖ್ಯಾಂಶಗಳನ್ನು ಸಂಗ್ರಹಿಸಿ ಪಾಠಕರ ಅವಗಾಹನೆಗಾಗಿ ಕೆಳಗೆ ಕೊಟ್ಟಿದ್ದೇನೆ. ಇವನ್ನು ಕೊಡು-ವಾಗ—ಈ ಪ್ರಶಂಸೆಯೆಲ್ಲವೂ ಮುಖ್ಯವಾಗಿ ಶ್ರೀಹರಿವಾಯುಗಳಿಗೇ ಸೇರಿದ್ದು. ಅಥವಾ ಈ ಲೇಖನಕ್ಕೆ ಸ್ಫೂರ್ತಿಯನ್ನು ಕೊಟ್ಟ ನವವೃಂದಾವನದ ಯತಿ-ವರೇಣ್ಯರಾದ ಶ್ರೀ ಪದ್ಮನಾಭತೀರ್ಥ ಶ್ರೀ ವ್ಯಾಸರಾಜಪ್ರಭೃತಿಗಳು, ಶ್ರೀ ಶ್ರೀಪಾದರಾಜರು, ಶ್ರೀ ವಾದಿರಾಜರು ಮತ್ತು ಶ್ರೀ ಮಂತ್ರಾಲಯದ ಪ್ರಭು-ವರೇಣ್ಯರೇ ಮೊದಲಾದ ಮಹನೀಯರಿಗೆ ಸೇರಿದ್ದು—ಅತ್ಯಲ್ಪನಾದ ನಾನು ಇದಕ್ಕೆ ಅತ್ಯಂತ ಅನರ್ಹ—ಎಂದೇ ನನ್ನ ಆಶಯ.

ವಾಯುಸ್ತುತಿಯ ಮೂರನೆಯ ಭಾಗದ ವಿಮರ್ಶೆಯು *The Hindu* ಪತ್ರಿಕೆಯ ದಿನಾಂಕ 31-7-1990ರ ಸಂಚಿಕೆಯಲ್ಲಿ ಈ ರೀತಿ ಬಂದಿತ್ತು—

Sri Hari Vayu Stuti........contains 41 slokas. The author has already given the explanations of 21 slokas ....in his earlier volumes. In this third volume he gives scholarly explanations of the remaining 20 slokas,........ The uniqueness of this work is that each of the slokas can be explained with reference to both Hari and Vayu. ....The learned scholar follows the traditional Gurukula teaching method in writing this work. For each sloka the explanation begins with an introduction—original sloka in Kannada transliteration—word analysis—grammatical notes—explanation with reference to Hari—prose order—meaning—explanation with reference to Bhima/Vayu—the relevant epic stories, etc. Thus the explanation is thorough. This work will be of use to the student of Sanskrit studying Dwaita Philosophy.

A. K. KADILAYA

2. ದಿನಾಂಕ 21-10-1986ರಲ್ಲಿ ಉಡುಪಿಯಿಂದ ನಮ್ಮ ಪರಮ ಮಿತ್ರರಾದ ಡಾ॥ ಎಂ. ಕೆ. ಭಾರತೀರಮಣಾಚಾರ್ಯರು, M.A., Ph.D., ಇವರು ಹೀಗೆ ಬರೆದಿದ್ದಾರೆ—

[ಸೂಚನೆ: ಉಡುಪಿಗೆ ಹೊರಟಿದ್ದ ವೇ। ಶ್ರೀ। ವ್ಯಾಸನಕೆರೆ ಪ್ರಭಂಜನಾಚಾರ್ಯ, ಎಂ.ಎ. ಇವರ ಕೈಲಿ ಎರಡು 'ನಖಸ್ತುತಿ' ಪುಸ್ತಕಗಳನ್ನು ಕೊಟ್ಟು, ಒಂದನ್ನು ಸಂಸ್ಕೃತದಲ್ಲಿ ಬರೆದ ಪತ್ರಸಹಿತ ಶ್ರೀ ಶ್ರೀ ಪರ್ಯಾಯಪೀಠದ (ಭಂಡಾರಕೇರಿ ಮತ್ತು ಫಲಿಮಾರು ಮಠಗಳ) ಶ್ರೀ ಶ್ರೀಗಳವರ ಕರಕಮಲಗಳಲ್ಲಿ ಸಮರ್ಪಿಸಬೇಕೆಂದೂ ಇನ್ನೊಂದು ಪ್ರತಿಯನ್ನು ಶ್ರೀಮಾನ್ ಭಾರತೀರಮಣಾಚಾರ್ಯರಿಗೆ ಕೊಡಬೇಕೆಂದೂ ನಾನು ಅವರನ್ನು ಪ್ರಾರ್ಥಿಸಿಕೊಂಡಿದ್ದೆ. ಅದರ ಬಗ್ಗೆ ಈ ಪತ್ರ ಬಂದಿತ್ತು.]

“ ನಿನ್ನೆ ಬೆಳಿಗ್ಗೆ 8-15ಕ್ಕೆ ಸುಧಾಪಾಠ ಮುಗಿದಮೇಲೆ ಮ॥ಶಾ॥ಸಂ॥ ಪ್ರಭಂಜನ ಅವರು ಶ್ರೀ ಶ್ರೀ ೧೦೮ ಪರ್ಯಾಯಪೀಠಸ್ಥ ಶ್ರೀಪಾದಂಗಳವರಿಗೆ ನಖಸ್ತುತಿಯನ್ನು ಸಮರ್ಪಿಸಿದರು ಆಗ ನಿಮ್ಮ ಕಿಂಚಿತ್ ಪರಿಚಯ ಮಾಡಿ-ಕೊಡುವ ಸೌಭಾಗ್ಯ ನನ್ನ ಪಾಲಿಗೆ ಬಂತು ಎಂದು ಸಂತೋಷಪಟ್ಟೆ. .... ನಿಮ್ಮ ಪುಸ್ತಕವನ್ನು ಪೂರ್ತಿ ಓದಿಲ್ಲ. ವಿಷಯವೇನಿರಬಹುದೆಂದು ಅಲ್ಲಲ್ಲಿ ನೋಡಿದೆ. ಶ್ರೀಮದಾಚಾರ್ಯರ ಒಂದೊಂದು ಮಾತು ಎಷ್ಟು ಗಂಭೀರವಾದುದು, ವಿಶ್ವತೋಮುಖವಾದುದು, ಪ್ರಮಾಣಪ್ರಮಿತವಾದುದು ಎಂಬುದನ್ನು ತೋರಿಸಲು ಪ್ರಯತ್ನಶೀಲರಾಗಿರುವಿರೆಂದು ತೋರಿತು. ಓದುವ ಕುತೂಹಲವಿದೆ. ಬಿಡುವು ಮಾಡಿಕೊಂಡು ಖಂಡಿತ ಓದುತ್ತೇನೆ........”

3. ದಿನಾಂಕ 21-4-1988ರಲ್ಲಿ ಬೊಂಬಾಯಿಂದ ಶ್ರೀ ಪ್ರಭಂಜನ ಕುಲಕರ್ಣಿಯವರು ಹೀಗೆ ಬರೆಯುತ್ತಾರೆ—

I gratefully acknowledge receipt of your kind letter, and request you, at the outset, to excuse me for having given you trouble. I did not have any idea that the explanation sought for would stretch to as many as 14 foolscap sheets. ....I preserve this documentation along with the original text of *Pratas-Sankalpa-Gadya*......... With all the authorities quoted by you, and with the very lucid explanation provided, and with the excellent logical reasoning and argument, I am once again convinced that it is not only those nine Gurus at Nava-Vrindavan, but the others also have favoured you with a thorough mastery over the Bhashyas and commentaries, and it is through their grace alone that you have been able to author the treatise on *Sri Harivayustuti* in an unprecedentally comprehensive and exhaustive manner........

4. ದಿನಾಂಕ 29-7-1987ರಲ್ಲಿ ಬೆಂಗಳೂರಿಂದ ಪ್ರೊಫೆಸರ್ ಶ್ರೀ ಎಸ್. ಕೆ. ರಾಮಚಂದ್ರರಾವ್ ಇವರು ಹೀಗೆ ಬರೆದಿದ್ದಾರೆ—

ಸನ್ಮಾನ್ಯ ಶ್ರೀ ವಿಷ್ಣುತೀರ್ಥ ಅವರಿಗೆ ಸಾದರ ವಿಜ್ಞಪ್ತಿ. ....ಪಂಪಾ-ಮಾಹಾತ್ಮ್ಯೆಯ xerox ಪ್ರತಿಯನ್ನು ಓದಿ ಮುಗಿಸಿದ್ದೇನೆ. ನಾಳೆನಾಡಿದ್ದರಲ್ಲಿ ಶ್ರೀ ಶ್ರೀಶಮೂರ್ತಿಯವರಿಗೆ ಹಿಂದಿರುಗಿಸುತ್ತೇನೆ. ಓದುವ ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೆ ಕೃತಜ್ಞನಾಗಿದ್ದೇನೆ. ತುಂಬಾ ಸ್ವಾರಸ್ಯವಾದ ಗ್ರಂಥ. ಹರಿ-ವಾಯುಸ್ತುತಿಯ ವಿಮರ್ಶೆಯನ್ನು ಪ್ರಜಾವಾಣಿ ಸುಧಾ ಪತ್ರಿಕೆಗಳಿಗೆ ಕಳುಹಿಸಿದ್ದೇನೆ. [ಸೂಚನೆ: ಆದರೆ ಅವರ ವಿಮರ್ಶೆ ಪತ್ರಿಕೆಯಲ್ಲಿ ಪ್ರಕಟವಾಗಿ ಬರಲೇ ಇಲ್ಲ]

5. ದಿನಾಂಕ 12-1-88ರಲ್ಲಿ ಬಿಜಾಪುರದಿಂದ ಶ್ರೀಮಾನ್ ಡಿ. ಕೆ. ಕೊಲ್ಹಾರ್, ಎಂ.ಎ. (ನಿವೃತ್ತ ಡೆಪ್ಯುಟಿ ಕಲೆಕ್ಟರ್, ಬರೋಡ), ಬಿಂದೂ. ರಾವ್ ಬಾಗಲ್‌ಕೋಟ್ ಚಾಲ್, ಮುಖ್ಯರಸ್ತೆ, ಬಿಜಾಪುರ-586101 ಇವರು ('ಹರಿವಾಯುಸ್ತುತಿ ಪುಸ್ತಕವನ್ನು ಓದಿದೆ'ನೆಂದು ತಿಳಿಸುತ್ತಾ) "ಎಷ್ಟು ಓದಿದರೂ ಪುನಃಪುನಃ ಓದಬೇಕೆನ್ನಿಸುತ್ತದೆ........ ನೀವು ಉಪ-ನಿಷದಾದಿ ಗ್ರಂಥಗಳೇನಾದರೂ ಬರೆದಿದ್ದರೆ ತಿಳಿಸಿ" ಎಂದು ಬರೆದಿದ್ದಾರೆ.

6. ಹಾಸನ ಜಿಲ್ಲೆಯ ರಾಮನಾಥಪುರದಲ್ಲಿ ನಿವೃತ್ತ ಕನ್ನಡ ಪಂಡಿತರಾಗಿದ್ದ (ಈಗ ಸ್ವರ್ಗಸ್ಥರಾಗಿರುವ) ಆರ್. ಎಸ್. ರಾಘವೇಂದ್ರಾಚಾರ್ಯರವರು ಬೆಂಗಳೂರು ಪ್ರವಾಸದಲ್ಲಿದ್ದಾಗ ದಿನಾಂಕ 28-1-87ರಲ್ಲಿ ನನಗೆ ಈ ರೀತಿ ಪತ್ರ ಬರೆದು ಕಳುಹಿಸಿದ್ದರು—

"ಶ್ರೀಮನ್ಮಧ್ವಶಾಸ್ತ್ರಾಂಬುಧಿಮಗ್ನ ದಿವ್ಯಚಿತ್ತವೃತ್ತಿಮಹಾಪ್ರಾಜ್ಞ-ರಾದ ಹಾಗೂ ಅಭಿನವಪಾಣಿನಿ ಎಂದೆನಿಸಿಕೊಳ್ಳಲು ಅರ್ಹರಾದ, ಪರಮ ಪೂಜ್ಯರಾದ ಶ್ರೀಮಾನ್ ವಿಷ್ಣುತೀರ್ಥವರ್ಯರಲ್ಲಿ ರಾಘವೇಂದ್ರಕೃತ ಸಾಷ್ಟಾಂಗಪ್ರಣಾಮಪೂರ್ವಕ ಅಭಿನಂದನಸೂಚಿತ ವಿಜ್ಞಾಪನೆಗಳು. ಉ॥ಕು॥ಸಾಂ॥ ಪ್ರಕೃತ ನಾನು ತಮ್ಮನ್ನು ಭೆಟ್ಟಿ ಮಾಡಲು ರಾಜಾಜಿನಗರಕ್ಕೆ

ಸೋಮವಾರ ಹೋಗಿದ್ದೆ. ತಾವು ಮಂಗಳಕಾರ್ಯದಲ್ಲಿ ಭಾಗವಹಿಸಲು ಮೈಸೂರಿಗೆ ಪ್ರಯಾಣ ಮಾಡಿರುವುದಾಗಿ....ತಿಳಿಯಿತು. ....ನಾನು ತಾವು ಪ್ರಕಟಪಡಿಸಿರುವ ಗ್ರಂಥವನ್ನು ನೋಡಲು [ಶ್ರೀ ಶ್ರೀಶಮೂರ್ತಿಯವರ ಬಳಿಗೆ] ಹೋದೆನು. ಶ್ರೀಮಾನ್ ಶ್ರೀಶಮೂರ್ತಿಗಳು ಉದಾರ ಮನಸ್ಸಿನಿಂದ ಅವಲೋಕಿಸಿ ತಿರುಗಿಕೊಡಲು........ಪುಸ್ತಕವನ್ನು ದಯಪಾಲಿಸಿದರು. ನಾನು ನನ್ನ ಬುದ್ಧಿಗೆ ತಿಳಿಯುವ ಮಟ್ಟಿಗೆ ಸಿಂಹಾವಲೋಕನ ಮಾಡಿ ತೃಪ್ತಿಪಟ್ಟು ಈ ಪತ್ರವನ್ನು ವಂದನಾಪೂರ್ವಕ ಮುಟ್ಟಿಸುತ್ತಿರುವೆನು. ನಿಮ್ಮ ಹಿರಿಯರು ನಿಮಗೆ ನಾಮಕರಣ ಮಾಡಿದುದರ ಸಾರ್ಥಕತೆಯನ್ನು ಹೊಂದಿಸುವು-ದಕ್ಕಾಗಿಯೇ ಆ ಗ್ರಂಥದಲ್ಲಿ ವಿಷ್ಣುನಾಮದ ವಿಶಾಲ ವ್ಯಾಪ್ತವಾದ ಅರ್ಥವನ್ನು ನಮ್ಮಂತಹವರಿಗೆ ಸೂಚಿಸಿ ಉದ್ಧಾರ ಮಾಡಲೆಂದೇ ನಾಮಕರಣ ಮಾಡಲು ಕಾರಣವೆಂದು ನಾನು ಭಾವಿಸಿರುವೆವು. 'ವಿಷ್ಣೋಃ ದಿವ್ಯಪದಜ್ಞಾನಕಾರಕ ತೀರ್ಥ(ಗ್ರಂಥ)ರಚನಂ ಯೇನ ಸಃ ವಿಷ್ಣುತೀರ್ಥಃ' ಎಂದು ಹೇಳಬಹು ದಲ್ಲವೇ? ....ನಿಮಗೆ ಅನುಗುಣವಾಗಿ ಸಹಾಯಕರಾಗಿ ಶ್ರೀಶಮೂರ್ತಿಗಳು ಇದ್ದಾರೆ. ....ಅವರ ಸದ್ಗುಣಗಳನ್ನು ಎಷ್ಟು ಹೊಗಳಿದರೂ ಸಾಲದು. ....ನನ್ನ ಈ ಲೇಖನದಲ್ಲಿ ಸೀಮಾತೀತ ಬರವಣಿಗೆ ಇದ್ದರೆ ಕ್ಷಮಿಸಿ ಅಭಿಮಾನ ದಿಂದ ಪತ್ರ ಹಾಕಿ. —ಆರ್. ಎಸ್. ರಾಘವೇಂದ್ರಾಚಾರ್

7. 12-7-1987ರಲ್ಲಿ ನಮ್ಮ ಮಿತ್ರರಾದ ಶ್ರೀ ಕೆ. ವಿ. ಉಪಾಧ್ಯೆ ಬೊಂಬಾಯಿಂದ ಹೀಗೆ ಬರೆದಿದ್ದಾರೆ—

Your interpretation of slokas is so explicit and vivid that even a small boy can follow.... As you trace the meanings of words to their very roots, they are fool-proof. ....The paraphrases of slokas are wonderfully excellent—most appropriate as well as appealing.

8. ದಿನಾಂಕ 27/28-10-87ರಲ್ಲಿ ಸಾಗರದಲ್ಲಿ ಪೋಸ್ಟ್‌ಮಾಸ್ಟರ್ ಆಗಿದ್ದ ಶ್ರೀಮಾನ್ ಎಸ್. ಹೆಚ್. ಪ್ರಹ್ಲಾದರಾವ್ ಅವರು ಹೀಗೆ

ಬರೆದಿದ್ದಾರೆ— “ನೀವು ಕೊಟ್ಟಿರುವ- ಮುಕ್ತಿಯ ವರ್ಣನೆ, ಗುರುಗಳ ವಿಚಾರ, ತಾರತಮ್ಯ, ಭಕ್ತಿಯ ವಿಚಾರ ಮೊದಲಾದುವು ಮನಸ್ಸಿಗೆ ನಾಟಿ- ಕೊಂಡು ನಿಲ್ಲುತ್ತವೆ. ಅವನ್ನು ಎಂದೆಂದಿಗೂ ಮರೆಯುವಂತಿಲ್ಲ. ....ಎಲ್ಲರೂ ಸಂಸ್ಕೃತ ಶ್ಲೋಕಗಳನ್ನು ಉದಹರಿಸುತ್ತಾರೆಯೇ ವಿನಾ ನಿಮ್ಮಂತೆ ಬೇರೆ ಯಾರೂ ಅವುಗಳ ಅರ್ಥವನ್ನು ಮನಸ್ಸಿಗೆ ನಾಟುವಂತೆ ವಿವರಿಸುವುದಿಲ್ಲ.

9. ಸಿಕಂದರಾಬಾದಿನಲ್ಲಿ ಆಗ ವಾಸವಾಗಿದ್ದ ನಮ್ಮ ಆಪ್ತಮಿತ್ರರಾದ ಶ್ರೀಮಾನ್ ಸಿ. ಕೆ. ನಾಗರಾಜರಾಯರು ದಿನಾಂಕ 17-8-90ರಲ್ಲಿ ಹೀಗೆ ಬರೆದಿದ್ದಾರೆ—

> I went through all the three volumes of your book *Sri Harivayustuti*. It is a precious gift. ....The explanation of difficult words and phrases is your masterpiece. They are singularly apt and explicit—unmistakably clear and precise. ....The exposition (bhavartha) of all slokas is simply marvellous. ....The epic stories are splendidly narrated—accurate, brief and yet thrilling........

ಅವರ ಧರ್ಮಪತ್ನಿಯವರಾದ ಶ್ರೀಮತಿ ಕಾವೇರಮ್ಮನವರು ಹೀಗೆ ಬರೆದಿದ್ದಾರೆ—“ಮಹಾಭಾರತ, ಭಾಗವತ ಮತ್ತು ಹರಿವಂಶಗಳ ಕಥೆಗಳನ್ನು ಅದೆಷ್ಟು ಮುದ್ದಾಗಿ ಬರೆದಿದ್ದೀರಿ—ಆಚಾರ್ಯರೇ! ಜರಾಸಂಧ ವಧೆ, ಬಕ ಕಿರ್ಮೀರರ ವೃತ್ತಾಂತ, ನರಕಾಸುರನ ಹಾವಳಿ, ಸೌಗಂಧಿಕಾ ಪುಷ್ಪಗಳ ಹರಣದ ಕಥೆ ಎಲ್ಲಾ ಎಷ್ಟು ಅದ್ಭುತವಾಗಿವೆ! ದ್ರೌಪದಿಯ ವಿಚಾರ- ವನ್ನಂತೂ ಹತ್ತಿ ಬಿಡಿಸಿದಂತೆ ವಿವರಿಸಿದ್ದೀರಿ.”

ಅವರ ಮಗಳು ಕುಮಾರಿ ನಳಿನೀ ಹೀಗೆ ಬರೆಯುತ್ತಾಳೆ— “ನಿಮ್ಮ ಬರವಣಿಗೆಯಲ್ಲಿ ಏನು ಅಮೃತಧಾರೆ ಇದೆಯೋ ವರ್ಣಿಸಲು ಸಾಧ್ಯವಿಲ್ಲ. ಸಾಕ್ಷಾತ್ ವೇದವ್ಯಾಸರೇ ನುಡಿಸಿದಂತೆ ನನಗೆ ಭಾಸವಾಗುತ್ತದೆ. ಭೀಮನ

ಸಾಹಸದ ವರ್ಣನೆ, ಅವನ ವಿಷ್ಣುಭಕ್ತಿ ಮನಸ್ಸಿಗೆ ಕಟ್ಟಿದಂತಾಗಿದೆ ಎಷ್ಟು ಓದಿದರೂ ಮತ್ತೆಮತ್ತೆ ಓದಬೇಕೆನ್ನಿಸುತ್ತದೆ."

10. ದಿನಾಂಕ 12-2-90ರಲ್ಲಿ ನಮ್ಮ ಬಂಧುವರ್ಗಕ್ಕೆ ಸೇರಿದವರಾದ ಶ್ರೀ ಎಸ್. ಎಸ್. ರಾವ್ (ಶ್ರೀನಿವಾಸರಾವ್) ಬೊಂಬಾಯಿಂದ ಹೀಗೆ ಬರೆಯುತ್ತಾರೆ—

"ಪರಮಪೂಜ್ಯ ಶ್ರೀ॥ ವಿಷ್ಣುತೀರ್ಥರಿಗೆ ಶ್ರೀನಿವಾಸನು ಮಾಡುವ ಸಾಷ್ಟಾಂಗನಮಸ್ಕಾರಗಳು. ....ನಿಮ್ಮ ವಾಯುಸ್ತುತಿ [೩ನೇ ಭಾಗ] ಪುಸ್ತಕದ ಜೊತೆ ಮೂರು ಜನರು [ಹನುಮ, ಭೀಮ, ಮಧ್ವರು] ಬಂದಿದ್ದರಿಂದಲೇ ನಮ್ಮ ಮನೆಯಿಂದ ಕಲಿಯ ಪ್ರಭಾವ ದೂರ ಸರಿದುಹೋಯಿತು. ಈಗ ಚಿ॥ ಮೋಹನ ಬಹಳ ಸುಧಾರಿಸಿದ್ದಾನೆ. .... ವಾಯುಸ್ತುತಿಯಲ್ಲಿ ನೀವು ಗುರುತು ಹಾಕಿಕೊಟ್ಟಿರುವ ಭಾಗಗಳನ್ನು ಓದುತ್ತಾ ಹೋದರೆ ಮನಸ್ಸಿಗೆ ಆನಂದೋದ್ರೇಕವಾಗುತ್ತದೆ. ....ಸಣ್ಣಸಣ್ಣ ವಿಷಯಗಳನ್ನೂ ನೀವು ಎಷ್ಟು ಚೆನ್ನಾಗಿ ವಿವರಿಸಿದ್ದೀರಿ. ಓದುತ್ತಾ ಹೋದರೆ ತಾಯಿ ಎಳೆಮಕ್ಕಳಿಗೆ ಬೆನ್ನು ತಟ್ಟಿ ತಟ್ಟಿ ಹೇಳಿಕೊಟ್ಟಂತೆ ಭಾಸವಾಗುತ್ತದೆ."

11. ಡಾ॥ ಆರ್. ಆರ್. ಬಾಡಗಂಡಿ, ಎಂ.ಬಿ.ಬಿ.ಎಸ್., ಎಂ.ಎಸ್. ಪ್ರೊಫೆಸರ್ ಆಫ್ ಅನಾಟಮಿ, ಕೆ.ಎಂ.ಸಿ., ಹುಬ್ಬಳ್ಳಿ-580022 ಇವರು ದಿನಾಂಕ 15-6-90ರ ಪತ್ರದಲ್ಲಿ ಹೀಗೆ ಬರೆಯುತ್ತಾರೆ—

Dear Sri Vishnu Teertha, Received the I and II volumes of Vayustuti. ....Your treatment of slokas is splendid, ...I never knew that Vayustuti was such a rich storehouse of Madhwa philosophical tenets. ....The episodes of Jarasandha, Narakasura etc are wonderfully narrated. ....The philosophical bearing connected with Draupadi is remarkably laid bare even to a layman.,....Our profound respects to your goodself.

Dr. Mohan, Smt. Parimala Badagandi, Rajit & Shruti

12. In his letter of 13th March, 1990, our friend Sri P. T. Kulkarni, 15/456, Wartak Nagar, Thane-400606 Mah. writes from Bombay thus :

At the cost of repetition I am obliged to say that *Sri Hari Vayu Stuti* is a splendid work that both Hari and Vayu have got done through you for the benefit of both the informed and not-so-well-informed. I feel myself to be singularly fortunate in having the rarest opportunity of knowing so many things in the course of just reading the volumes. Revision of grammar is an added advantage the reader gets as he goes through the pages even for fun ! The books are worth much more than their weight in gold, and every Madhwa must possess a set of them for his serious study and adoration.

ನಾವು ಈ “ ಖಿಲವಾಯುಸ್ತುತಿ ”ಯನ್ನು ಏನಾದರೂ ಮಾಡಿ ಶ್ರೀ ಪದ್ಮನಾಭತೀರ್ಥರ ಮುಖ್ಯ ಆರಾಧನೆಯ ದಿನವೇ ಶ್ರೀ ಶ್ರೀಗಳವರ ಅಮೃತ-ಹಸ್ತದಿಂದಲೇ ಬಿಡುಗಡೆ ಮಾಡಿಸಬೇಕೆಂದು ಸಂಕಲ್ಪಿಸಿದ್ದೆವು. ಅದೇ ಪ್ರಕಾರ ಶ್ರೀಹರಿವಾಯುಗಳ ದಯದಿಂದ ಶ್ರೀ ಶ್ರೀಮದುತ್ತರಾದಿಮಠಾಧೀಶರಾದ ಶ್ರೀ ೧೦೦೮ ಶ್ರೀ ಶ್ರೀ ಸತ್ಯಪ್ರಮೋದತೀರ್ಥಶ್ರೀಪಾದಂಗಳವರೇ ಈ ಪುಸ್ತಕವನ್ನು ಶ್ರೀಮತ್ಪದ್ಮನಾಭತೀರ್ಥರ ಮುಖ್ಯ ಆರಾಧನೆಯ ದಿನವೇ ಎಂದರೆ ದಿನಾಂಕ 16-11-1990ನೇ ಶುಕ್ರವಾರದ ದಿನ ನವವೃಂದಾವನದಲ್ಲಿ ತಮ್ಮ ಅಮೃತ ಹಸ್ತದಿಂದ ಬಿಡುಗಡೆ ಮಾಡಿ ನಮ್ಮನ್ನು ಅನುಗ್ರಹಿಸಿದರೆಂಬುದೂ ಸಂತಸದ ಸುದ್ದಿ.

ಕೊನೆಯದಾಗಿ ಈ ವಾಯುಸ್ತುತಿಯ ವಿವರಣೆಯನ್ನು ಓದಿ ತಮ್ಮ ತಮ್ಮ ಮೇಧಾಶಕ್ತಿಗೆ ತಕ್ಕಂತೆ ಇದರಲ್ಲಿ ಹೇಳಿದ ವಿಷಯಗಳನ್ನು ತಿಳಿದು-ಕೊಳ್ಳುವ—ತಿಳಿದುಕೊಂಡು ಮನನ ಮಾಡಿಕೊಳ್ಳುವ ಸಕಲ ಭಕ್ತರಿಗೂ

ಶ್ರೀಹರಿವಾಯುಗಳು ಜ್ಞಾನಭಕ್ತಿವೈರಾಗ್ಯಸಂಪತ್ತನ್ನು ದಯಪಾಲಿಸಿ ಅವರಿಗೆ ಇತೋಽಪ್ಯಧಿಕವಾಗಿ ಜ್ಞಾನಾರ್ಜನೆ ಮಾಡಿಸಿ ಉದ್ಧೃತರಾಗುವಂತೆ ಅನುಗ್ರಹ ಮಾಡಲೆಂದು ಪ್ರಾರ್ಥಿಸಿಕೊಂಡು ಈ ಸಮಗ್ರ ಗ್ರಂಥವನ್ನು ಅವರ ಚರಣಾರವಿಂದಗಳಲ್ಲಿ ಸಮರ್ಪಿಸುತ್ತೇನೆ.

ಪಿ. ವಿಷ್ಣುತೀರ್ಥ
ನವವೃಂದಾವನ, 931, 2ನೇ ಬೀದಿ
ನಾಲ್ಕನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010

ಪ್ರಮೋದೂತ ಸಂವತ್ಸರ ಶಕೆ (೧೯೧೨)
ಕಾರ್ತಿಕ ಬಹುಳ ಅಮಾವಾಸ್ಯೆ, ಶನಿವಾರ
ದಿನಾಂಕ 17-11-1990

ವಿಷಯಾನುಕ್ರಮಣಿಕೆ

ಪ್ರಸ್ತಾವನೆ iii

ಶ್ಲೋಕವ್ಯಾಖ್ಯಾನದ ತಿದ್ದುಪಡಿ xxi

ಮಂಗಳಾಚರಣೆ (ಪುಟ ೧-೨)

೧. ವಾಯುದೇವರ ಉತ್ತಮತ್ವ (ಪು. ೨-೯) ಖಂಡ 361. ಅವತಾರಿಕೆ, ಶ್ಲೋಕಪಾಠ—ಪದವಿಭಾಗ—ವೃತ್ತ-ಛಂದಸ್ಸುಗಳು—ಅನ್ವಯಾರ್ಥ—ಫಲಾರೀ ಅರ್ಥ. 362. ವಾದಿರಾಜರ ವಿವರಣೆ—ಜೀವೋತ್ತಮತ್ವ ಸ್ಥಾಪನೆ. 363. ಆಖ್ಯಾಯಿಕೆ. 364. ಅನಾವೃತ್ತಿ—ಅರ್ಥಾಂತರ.

೨. ಅವತಾರತ್ರಯ (ಪುಟ ೯-೧೧) 365. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ತಾತ್ಪರ್ಯ.

೩. ಸದ್ವೈಷ್ಣವಾಭಿಲಾಷೆ (ಪುಟ ೧೧-೧೪) 366. ಅವತಾರಿಕೆ—ಶ್ಲೋಕ—ಅರ್ಥ—ತಾತ್ಪರ್ಯ—ವಿಶೇಷ—ಬ್ರಹ್ಮಾಂತಾ ಗುರವಃ—ತಂತ್ರಸಾರದಲ್ಲಿ.

೪. ನಾನ್ಯೋ ಹನುಮತ್ಸಮಾನಃ (ಪುಟ ೧೪-೧೬) 367. ಅವತಾರಿಕೆ—ಶ್ಲೋಕ—ಅರ್ಥ—ತಾತ್ಪರ್ಯ.

೫. ಭೀಮಮಹಿಮೋತ್ಕರ್ಷ (ಪುಟ ೧೬-೧೮) 368. ಅವತಾರಿಕೆ—ಶ್ಲೋಕ—ಅನ್ವಯಾರ್ಥ — ವಿಶೇಷ — ಬಲವಾನ್ — ಶೂರಃ — ಭಾವಾರ್ಥ.

೬. ಅವತಾರತ್ರಯದ ಸೇವೆ (೧೮-೩೧) 369. ಅವತಾರಿಕೆ—ಜಯತೀರ್ಥರ ಹೇಳಿಕೆ—ವೇದೇಶತೀರ್ಥರ ಹೇಳಿಕೆ—ಶ್ಲೋಕ—ಪಾಠಾಂತರಗಳು—ಶ್ಲೋಕದ ವಿಶ್ಲೇಷಣೆ—ಕಠಿನ ಶಬ್ದ ವಿವರಣೆ—i) ಯಸ್ಯ, ii) ವೇದವಚನೇ, iii) ಅಲಂ, iv) ಬಟ್, v) ದರ್ಶತಂ, vi) ಇತ್ಥಮೇವ, vii) ದೇವಸ್ಯ, viii) ಭರ್ಗಃ, ix) ಮಹತ್,

x) ರಾಮುವಚೋನಯಂ, xi) ಪೃಕ್ಷಃ, xii) ವಪುಃ, xiii) ಕೇಶವೇ—ಅನ್ವಯಾರ್ಥ—ಭಾವಾರ್ಥ.

ಬಳಿತ್ಥಾಸೂಕ್ತ (ಪುಟ ೩೧-೯೦) 370. ಅವತಾರಿಕೆ—೧ನೇ ಋಕ್ (ಪುಟ ೩೨-೪೨) ಋಷ್ಯಾದಿಗಳು — ಪದಪಾಠ — ಅನ್ವಯ — ಅನ್ವಯಾರ್ಥ 371. ವಿಶೇಷ ವಿಚಾರಗಳು—i) ಸಹಸಃ, ii) ಮತಿಃ, iii) ಋತಸ್ಯ, iv) ಧೇನಾಃ, v) ಅನಯಂತ, vi) ಸಸ್ರುತಃ, vii) ಹೆಚ್ಚಿನ ಅರ್ಥಗಳು. 372. ಮಂತ್ರದ ಭಾವಾರ್ಥ.

೨ನೇ ಋಕ್ (ಪುಟ ೪೩-೫೩) 373. ಅವತಾರಿಕೆ—ಮಂತ್ರ—ಪದಪಾಠ—ಅನ್ವಯ — ಅನ್ವಯಾರ್ಥ — ವಿಶೇಷ ವಿಚಾರಗಳು — ಪೃಕ್ಷಃ ಕ) ಪಿತುಮಾನ್, ಖ) ನಿತ್ಯಃ, ಗ) ಸಪ್ತಶಿವಾಸು ಮಾತೃಷು, ಘ) ಆಶಯೋ, ಙ) ವೃಷಭಸ್ಯ, ಚ) ದೋಹಸೇ ದಶಪ್ರಮತಿಂ, ಛ) ಯೋಷಣಃ—ಭಾವಾರ್ಥ.

೩ನೇ ಋಕ್ (ಪುಟ ೫೪-೭೨) 374. ಅವತಾರಿಕೆ—ಮಂತ್ರ—ಪದಪಾಠ ಕ) ಅನ್ವಯಭೇದ, ಖ-ಗ) ವಾದಿರಾಜರ ಅನ್ವಯ — ಅರ್ಥ, ಘ) ಉಪನಿಷಟ್ಟೀಕಾಕಾರರ ಅನ್ವಯ—ಅರ್ಥ. ಚ) ವಿಶೇಷ ವಿಚಾರಗಳು i) ಬುಧ್ನಾತ್, ii) ಮಹಿಷಸ್ಯ, iii) ವರ್ಪಸಃ, iv) ಈಶಾನಾಸಃ, v) ಸೂರಯಃ, vi) ನಿರಾಕ್ರಂತ, vii) ಪ್ರದಿವಃ, viii) ಮಧ್ವಃ, ix) ಮಾತರಿಶ್ವಾ, x) ಗುಹಾಸಂತಂ, xi) ಆಥವೇ, xii) ಮಥಾಯತಿ, xiii) ಯದೀಂ, xiv) ಸ್ಮೃತಿಯ ವಿವರಣೆ ಛ) ಭಾವಾರ್ಥ

೪ನೇ ಋಕ್ (ಪುಟ ೭೨-೮೦) 375. ಮಂತ್ರ—ಪದಪಾಠ—ವಿಶ್ಲೇಷಣೆ—ಅನ್ವಯ—ಅರ್ಥ—ಹೆಚ್ಚಿನ ವಿಚಾರಗಳು i) ಪಿತುಃ, ii) ಪರಮಾತ್, iii) ಪ್ರ ನೀಯತೇ, iv) ಪೃಕ್ಷುಧಃ, v) ವೀರುಧಃ, vi) ದಂಷ್ಟು, vii) ಇನ್ವತಃ, viii) ಯತ್, ix) ಯುವಿಷ್ಠಃ, x) ಘೃಣಾ ಶುಚಿಃ (ಛ) ಭಾವಾರ್ಥ.

೫ನೇ ಋಕ್ (ಪುಟ ೮೧-೯೦) 376. ಅವತಾರಿಕೆ—ಮಂತ್ರ—ಪದಪಾಠ—ವಿಶ್ಲೇಷಣೆ—ಅನ್ವಯ—ಅರ್ಥ—ವಿಶೇಷ ವಿಚಾರಗಳು i) ಆತ್, ii) ಇತ್, iii) ಆವಿಶತ್, iv) ಅನು, v) ಸನಾಜುವಃ, vi) ಅರುಹತ್, vii) ನಿ ನವ್ಯಸೀಷು, viii) ಧಾವತೇ (ಛ) ಭಾವಾರ್ಥ.

೭. ಹನೂಮಂತನ ಧ್ಯಾನ (ಪುಟ ೯೦-೯೧) ಅನ್ವಯ, ಅರ್ಥ, ಭಾವಾರ್ಥ

೮. ವೀರಾಗ್ರೇಸರನಾದ ಭೀಮ (ಪುಟ ೯೨-೯೩) 378. ಅನ್ವಯಾರ್ಥ—ವಿವರಣೆ—ಭಾವಾರ್ಥ.

೯. ಮಧ್ವಾಚಾರ್ಯರೆಂಬ ಕ್ಷೀರಸಮುದ್ರ (ಪುಟ ೯೩-೯೫) 379. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ಭಾವಾರ್ಥ.

೧೦. ನಮ್ಮ ಮಾರ್ಗದರ್ಶಕರು (ಪುಟ ೯೫-೯೬) 380. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ಭಾವಾರ್ಥ.

೧೧. ಪರಮಾತ್ಮನ ಆಶ್ವಾಸನ (ಪುಟ ೯೬-೯೯) 381. ಅವತಾರಿಕೆ—ಶ್ಲೋಕ—ಶಬ್ದಾರ್ಥ—ಅನ್ವಯಾರ್ಥ—ಭಾವಾರ್ಥ—ವಿಶೇಷಾರ್ಥ

೧೨. ಪರಮಾತ್ಮನ ಶರಣಾಗತಿ (ಪುಟ ೯೯-೧೦೧) 382. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ವಿಶೇಷಾರ್ಥ—ಭಾವಾರ್ಥ.

೧೩. ಹಿರಿಯರಾದ ಮಹಾತ್ಮರು (ಪುಟ ೧೦೨) 383. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ಭಾವಾರ್ಥ.

೧೪. ಹನೂಮಂತನ ದ್ವಾದಶನಾಮಾವಳಿ (ಶ್ಲೋ. ೧೪-೧೭) (ಪುಟ ೧೦೨-೦೬) 384. ಅವತಾರಿಕೆ—ಶ್ಲೋಕಗಳು—ಅರ್ಥವಿವರಣೆ—ಫಲಶ್ರುತಿ. 384. ಶ್ರುತಿಸಮಾಖ್ಯೆ.

೧೫. ಭೀಮನ ದ್ವಾದಶನಾಮಾವಳಿ (ಶ್ಲೋ. ೧೮-೧೯ ; ಪು. ೧೦೭-೧೦) 385. ಅವತಾರಿಕೆ—ಶ್ಲೋಕಗಳು—ವಿವರಣೆ—ಫಲಶ್ರುತಿ — ಶ್ರುತಿ-ಸಮಾಖ್ಯೆ.

೧೬. ಮಧ್ವಾಚಾರ್ಯರ ದ್ವಾದಶನಾಮಾವಳಿ (ಶ್ಲೋ. ೨೦-೨೨) (ಪುಟ ೧೧೦-೧೪) 386. ಅವತಾರಿಕೆ—ಶ್ಲೋಕಗಳು—ನಾಮಗಳ ವಿವರಣೆ—ಫಲಶ್ರುತಿ—ಶ್ರುತಿಸಮಾಖ್ಯೆ.

೧೭. ರಾಮದೂತನಿಗೆ ವಂದನೆ (ಪುಟ ೧೧೪-೧೫) 387. ಅವತಾರಿಕೆ—ಅನ್ವಯಾರ್ಥ—ಭಾವಾರ್ಥ.

೧೮. ಹನೂಮತ್ಸ್ಮರಣೆಯ ಮಹಾಫಲ (ಪುಟ ೧೧೫-೧೬) 388. ಅವತಾರಿಕೆ—ಶ್ಲೋಕ—ವಿವರಣೆ—ಭಾವಾರ್ಥ.

೧೯. ಹರಿಸರ್ವೋತ್ತಮ, ವಾಯುಜೀವೋತ್ತಮ (ಪುಟ ೧೧೬-೧೮) 389. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ಭಾವಾರ್ಥ.

೨೦. ಜಯ ಭೀಮಸೇನ (ಪುಟ ೧೧೮-೧೯) 390. ಅವತಾರಿಕೆ—ಶ್ಲೋಕ—ಅನ್ವಯಾರ್ಥ—ಭಾವಾರ್ಥ.

ಉಪಸಂಹಾರ—ಕೃತಿಸಮರ್ಪಣೆ (ಪುಟ ೧೧೯-೨೧)

ಅನುಬಂಧ (ಅ) ಬಳಿತ್ಥಾಸೂಕ್ತಕ್ಕೆ ಸಾಯಣಭಾಷ್ಯಾರ್ಥ (ಪು. ೧೨೨-೩೩)

ಅನುಬಂಧ (ಆ) ಬಳಿತ್ಥಾಸೂಕ್ತಕ್ಕೆ ಶ್ಲೋಕರೂಪವ್ಯಾಖ್ಯಾನ ಮತ್ತು ಕನ್ನಡ ಭಾವಾರ್ಥ—

ಶ್ಲೋಕ	೧- ೨	ಮಂಗಳಾಚರಣೆ	ಪುಟ ೧೩೪
	೩- ೪	ಮುಖ್ಯಾದಿ ನಿರೂಪಣಂ	೧೩೫
	೫- ೫೫	ಪ್ರಥಮಾಖ್ಯಃ ಅರ್ಥವಿವರಣೆ	೧೩೬- ೪೯
	೫೬- ೭೭	ದ್ವಿತೀಯಾ ,,	೧೫೦- ೫೪
	೭೮-೧೩೯	ತೃತೀಯಾ ,,	೧೫೫- ೭೧
	೧೪೦- ೭೪	ಚತುರ್ಥೀ ,,	೧೭೧- ೭೯
	೧೭೫- ೯೫	ಪಂಚಮೀ ,,	೧೭೯- ೮೪
ಸಿಂಹಾವಲೋಕನಮ್ (ಶ್ಲೋ. ೧೯೬-೨೪೭)			೧೮೫- ೯೭
ಹರಿಸಮರ್ಪಣಮ್ (ಶ್ಲೋ. ೨೪೮-೫೨)			೧೯೮- ೯೯

ವಿದ್ವಾನ್ ಮ॥ರಾ॥ಸಂ॥ ಭೀಮಭಟ್ಟರು ಸೂಚಿಸಿದ
ಬಳಿತ್ಥಾಸೂಕ್ತದ ಶ್ಲೋಕವ್ಯಾಖ್ಯಾನದ
ತಿದ್ದುಪಡಿ

[ಪೂ = ಪೂರ್ವಾರ್ಧ ಉ = ಉತ್ತರಾರ್ಧ]

ಶ್ಲೋಕ		ಈಗ ಇರುವುದು	ಹೀಗೆ ತಿದ್ದಬೇಕು
೧	ಉ	ಶಮಾಶ್ರಯೋ	ಸಮಾಶ್ರಯೋ
೧೨	ಪೂ	ಜ್ಞಾನಪ್ರಾಚುರ್ಯಂ	ಜ್ಞಾನಬಾಹುಲ್ಯಂ
೧೪	ಪೂ	ಅನೇಕಾರ್ಥತ್ವಾದ್ಧಾತೂನಾಂ	ಅನೇಕಾರ್ಥೋ ಯತೋ ಧಾತುರ್
೧೬	ಪೂ	ಏವಂ ಭರ್ಗ	ಏವಂ ಚ ಭರ್ಗ
೧೮	ಪೂ	ಪ್ರದಾನಂ ಚ	ಪ್ರದಾನಂ ತು
೨೪	ಉ	ಪ್ರಥಮನಿರ್ದಿಷ್ಟೋ	ಪ್ರಥಮೋದ್ದಿಷ್ಟೋ (ಅಥವಾ ಬಟ್ ಶಬ್ದ ಆದೌ ನಿರ್ದಿಷ್ಟೋ)
೨೮	ಪೂ	ಪ್ರಚಕ್ಷತೇ	ಪ್ರಬೋಧ(ತಿ)ಯೇತ್
೩೯	ಪೂ	ದೋಷೈಶ್ಚ	ದೋಷೇಭ್ಯಃ
೪೦	ಪೂ	ಅತೋ ವ್ಯಾಹರತಾ	ಬಹುವ್ಯಾಹರತಾ
೭೫	ಪೂ	ಬಂಧೇರ್ನಕಿ	ಬಂಧೇರ್ನೀ ಚ
೯೨	ಉ	ಈಮಿತ್ಯವ್ಯಯಃ ಪ್ರೋಕ್ತ	ಈಮಿತ್ಯವ್ಯಯಂ ಪ್ರೋಕ್ತಂ
,,		ಭೋಧಕಃ	ಬೋಧಕಮ್
೯೪	ಪೂ	ಸಕಾರಾಂತಸ್ತು	ಸಕಾರೋಽನ್ತೇ ತು
೯೪	ಉ	ಭವೇತ್ತತಃ	ಬೋಧಕಃ (ವೈ ಭವೇತ್)
೧೦೪	ಪೂ	ಮಧ್ವೋ	ಮಧ್ವೋಽಯಂ
೧೦೬	ಪೂ	ದೀವ್ಯತೇ....ಪಕಾರಾಂ	ಭಾವೇ ತು ದೀವ್ಯತೇಃ ಕೇ ಚ ಹ್ಯಕಾರಾಂ
೧೧೨	ಉ	ಪ್ರತ್ಯರ್ಥಾನು	ಪ್ರತ್ಯರ್ಥಶ್ಚಾನು

ಶ್ಲೋಕ	ಈಗ ಇರುವುದು	ಹೀಗೆ ತಿದ್ದಬೇಕು
೧೨೪ ಪೂ	ಸರ್ವಸ್ವಾಮಿತ್ವೇ	ಸರ್ವನೇತೃತ್ವೇ
೧೩೭ ಉ	ಜ್ಞಾನರೂಪಶ್ಚ	ಜ್ಞಾನರೂಪೋ
೧೩೭ ಪೂ	ದೋಷೈಶ್ಚ	ದೋಷೇಭ್ಯಃ
೧೪೦ ಉ	ಪ್ರಶಂಸನ್ನಾಹ	ಪ್ರಶಂಸಂತ್ಯಾಹ
೧೪೧ ಉ	ಪ್ರಣೀಯತೇ ಇತಿ ತಾವತ್	ಪ್ರಣೀಯತ ಇತಿ ಸ್ಮೃತಮ್
೧೪೪ ಉ	ಹನುಮದಾದಿ	ಹನೂಮದಾದಿ
೧೪೫ ಉ	ಇತ್ಯಭಾವಪಿ	ಇತ್ಯುಭಾವಪಿ
೧೫೫ ಉ	ವ್ಯತ್ಯಯೇನ	ವ್ಯತ್ಯಯೇನ ಚ
೧೫೭ ಉ	ವೃಷಭೋ ಮತ್ತೋ	ವೃಷಭಃ ಕ್ಷುತ್ತಃ (ಅಥವಾ ಪೀನಃ, ಪುಷ್ಟಃ)
೧೫೯ ಉ	ಖಂಡಯತ್ಯಥಾ	ಖಂಡಯತ್ಯಥೋ
೧೬೦ ಪೂ	ಪ್ರಶಂಸತಿ ಸ್ವಯಂ ಶ್ರುತಿಃ	ಶ್ರುತಿಃ ಶಂಸತಿ ಚ ಸ್ವಯಮ್
೧೬೧ ಉ	ವಾಕ್ಯೇಽತ್ರಾಪಿ	ವಾಕ್ಯೇ ಚಾತ್ರ
೧೬೩ ಪೂ	ಆದಿತ್ಯವ್ಯಯೌ ಪ್ರೋಕ್ತಾ	ಆದಿತ್ಯವ್ಯಯೇ ಪ್ರೋಕ್ತೇ
೧೬೩ ಉ	ವ್ಯಯಃ ಪ್ರೋಕ್ತ ಏವೇ	ವ್ಯಯಂ ಪ್ರೋಕ್ತ—ಮೇವೇ
೧೬೫ ಪೂ	ತಯೋರ್ದ್ವಯೋ	ತಯೋರ್ದ್ವಯೋ
೧೬೫ ಉ	ಹೀಗೆ ತಿದ್ದಿಕೊಳ್ಳಬಹುದು	ಅನ್ವಯೋಽ'ಭವದಿ'ತ್ಯೇವ ಸ್ಯಾದರ್ಥೋಽಸ್ಯ ನಿರೂಪ್ಯತೇ
೧೭೦ ಉ	ಅನ್ಯೇಭ್ಯಸ್ತು ಸರ್ವೇಭ್ಯೋ	ಅನ್ಯೇಭ್ಯಃ ಸರ್ವದೇವೇಭ್ಯೋ
೧೭೩ ಪೂ	ಯುವಿಷ್ಠೋ ಕನಿಷ್ಠೋ	ಯುವಿಷ್ಠಃ ಕನಿಷ್ಠೋ (ಅಥವಾ ಯರ್ವಿಷ್ಠಸ್ತು ಕನಿಷ್ಠಕಃ)
೧೭೪ ಪೂ	ಶುಚಿರ್ಭೂತೋ	ಶುಚಿಃ ಸೋಽಯಂ
೧೭೫ ಪೂ	ವದನ್ ಪುನಃ	(ವದೇತ್ ಪುನಃ ಚ ಸರ್ವಥಾ
೧೮೦ ಉ	ಪ್ರವವೃಧೇ	ಪ್ರವಾವೃಧೇ
೧೮೭ ಪೂ	ಪ್ರೋಚ್ಯಂತೇ	ಪ್ರೋಚ್ಯಂತೇ ಹಿ

ಶ್ಲೋಕ	ಈಗ ಇರುವುದು	ಹೀಗೆ ತಿದ್ದಬೇಕು
೧೯೨ ಪೂ	ಹ್ಯುಪಸರ್ಗಃ ಕಥಿಷ್ಯತೇ	ಹ್ಯುಪಸರ್ಗೋ ಭವಿಷ್ಯತಿ
೨೦೦ ಪೂ	ಉಪಹ್ವರಣಂ ಚ ರಾಮಸ್ಯ	ರಾಮಸ್ಯ ಚೋಪಹ್ವರಣಂ
೨೦೧ ಉ	ತದೇತದಖಿಲ—	ತದೇತತ್ ಸರ್ವ—
೨೦೨ ಉ	ಪ್ರಸ್ತಾಪಮಾ—	ಪ್ರಸ್ತಾವಮಾ—
೨೦೩ ಉ	ಪ್ರಥಮಮುಚ್ಯತೇ	ಪ್ರಥಮೋದಿತಾ
೨೦೪ ಪೂ	ಭೋಕ್ತೃತ್ವಂ ತಸ್ಮಾ-ನ್ನಾನ್ಯಸ್ಯ	ಭೋಕ್ತಾ ಸ್ಯಾದ್ ಭುಕ್ತಿರ್ನಾನ್ಯಸ್ಯ
೨೦೫ ಉ	ಅಥಾಪಿ ಗೌಣಗುಣ್ಯತ್ವಾತ್	ಅಸ್ಯಾಪ್ರಾಧಾನ್ಯಮಾಲಕ್ಷ್ಯ
೨೦೭ ಉ	ಪ್ರಮಾಣಾ	ಪ್ರಮಾಸ್ತ್ರಾ
೨೧೬ ಪೂ	ರಕ್ಷಕಾಶ್ಚೈವ	ರಕ್ಷಕಾಶ್ಚ
೨೧೯ ಉ	ಯೋ ಹ್ಯೈ ಪೂರ್ಣ-ಬೋಧಾಖ್ಯಃ	ಯಃ ಪೂರ್ಣಬೋಧೋ ವಿಖ್ಯಾತಃ (ಅಥವಾ, ಯ ಏವ ಪೂರ್ಣ-ಬೋಧಾಖ್ಯಃ)
೨೨೦ ಉ	(ಪ್ರಣೇತೃ) ಪ್ರವಕ್ತೃತಃ	ಪ್ರಪಂಚಕಃ (ಪ್ರವಕ್ತೃತಃ)
೨೨೩ ಉ	ಽಜಾನನ್ ವಿಷ್ಣುಂ ಪರಾತ್ಪರಂ	ವ್ಯಜಾನನ್ ಹರಿಮುತ್ತಮಮ್
೨೩೪ ಉ	ಪ್ಯನ್ವಭೂದ್ದುಃಖಂ	ಪ್ಯನ್ವಭವದ್ದುಃಖಂ
೨೩೫ ಪೂ	ವದನ್ ಶಕ್ತಿಂ ಮಹತ್ತರಾಂ	ವದಂತೀ ಶಕ್ತಿಮವ್ಯಯಾಮ್
೨೪೧ ಪೂ	ವ್ಯಾಖ್ಯಾಯಮಾನಸ್ತಾ	ವ್ಯಾಖ್ಯಾನಕಾಲೇ ತು
೨೫೨ ಪೂ	ವಚನಪ್ರಸೂನಮಾಲಾ	ವಚನಾಖ್ಯಾ ಪುಷ್ಪಮಾಲಾ (ಅಥವಾ ವಚನಾಖ್ಯ-ಪುಷ್ಪಮಾಲಾ)

ಹೆಚ್ಚಿನ ತಿದ್ದುಪಡಿಗಳು

ಶ್ಲೋಕ		ಈಗ ಇರುವುದು	ಹೀಗೆ ತಿದ್ದಬೇಕು
೭	ಪೂ	ಽವ್ಯಯ ಉದ್ದಿಷ್ಟೋ	ವ್ಯಯಮುದ್ದಿಷ್ಟಂ
೧೦	ಪೂ	ವಾಯೋ ರಾಯ್ವರ್ಥ	ವಾಯೋರಾಯ್ವರ್ಥ
೩೩	ಉ	ಯ್ಯೈವ ಹಿ	ಯ್ಯೈವ
೪೩	ಉ	ಕ್ರೀಡತೇ	ಕ್ರೀಡೇಚ್ಚ
೫೦	ಪೂ	ವೇದತೇ	ಮೋದತೇ
೫೧	ಪೂ	ತ್ಯವ್ಯಯ ಏವಾರ್ಥೇ	ತ್ಯವ್ಯಯಮೇವಾರ್ಥೇ
೫೧	ಉ	ಸಾಮೀಪ್ಯ	ಸಾಮೀಪ್ಯಂ
೫೩	ಉ	ತತ್ವಶ್ಚಾ	ತತಶ್ಚಾ
೫೪	ಪೂ	ಪ್ರಥಮಂರೂಪಂ	ಪ್ರಥಮಂ ರೂಪಂ
೬೦	ಪೂ	ಸರ್ವಮನ್ನ	ಸರ್ವಮನ್ಯ
೭೯	ಉ	ಭಿನ್ನಾಃಸ್ಯು	ಭಿನ್ನಾಃ ಸ್ಯು
೧೦೩	ಉ	ತಸ್ಯನು	ತಸ್ಯ ನು
೧೧೧	ಉ	ಭವತ್ಯತ್ರಃ	ಭವತ್ಯತ್ರ
೧೧೯	ಪೂ	ತ್ಯವ್ಯಯೌ ಪ್ರೋತ್ತೌ— ವೀಂ ತ್ವೇವಾ	ತ್ಯವ್ಯಯೋ ಪ್ರೋಕ್ತೇ—ಈಂ ತ್ವೇವಾ
೧೨೩	ಉ	ಗುಹಾಸಂತಂ	ಗುಹಾ ಸಂತಂ
೧೨೭	ಪೂ	ಸರ್ದಿಷ್ಟ	ನಿರ್ದಿಷ್ಟ
೧೪೧	ಉ	ತೇ ಇತಿ ತಾವತ್	ತ ಇತಿ ಸ್ಮೃತಮ್
೧೫೬	ಪೂ	ಯಾಶ್ಚ ಕಶ್ಚವ	ಯಾಶ್ಚ ಕಾಶ್ಚನ
೧೬೩	ಪೂ	ತ್ಯಪ್ಯಯೌ ಪ್ರೋಕ್ತೌ	ತ್ಯವ್ಯಯೋ ಪ್ರೋಕ್ತೇ
೧೭೫	ಪೂ	ವದನ್ಪುನಃ	ಚ ಸರ್ವಥಾ
೧೭೮	ಪೂ	ರಾವಿಶಚ್ಛ	ರಾವಿಶಚ್ಚ
೧೮೦	ಉ	ತಸ್ಮಾದ್ದಿ	ತಸ್ಮಾದ್ಧಿ

ಶ್ಲೋಕ		ಈಗ ಇರುವುದು	ಹೀಗೆ ತಿದ್ದಬೇಕು
೧೯೧	ಪೂ	ನಾವಿಚಾರಂ ತ್ವರತೇ ಮನ್ವ	ನಾವಿಚಾರ್ಯಾಹ ಕಿಂಚಿದ್ವಾ
೨೦೧	ಉ	ಅಮೃತ....ವಾಚೋ	ವಾಚಶ್ಚಾಮೃತಸ್ರಾವಿಣ್ಯೋ
೨೦೨	ಉ	ಪ್ರಸಜ್ಞತಿ	ಸಮಾ(ಹೃತೇ)ಹಿತೇ
೨೦೪	ಉ	ಅಥಾತಿ....ತ್ವಾತ್	ಗೌಣತ್ವಮುಪಲಕ್ಷ್ಯಾಸ್ಯ
೨೦೬	ಉ	ಯಸ್ಮಿನ್ವಾ	ಯಸ್ಮಿನ್ವಾ
೨೧೨	ಪೂ	ತ ತೀಯಕಮ್	ತೃತೀಯಕಮ್
೨೧೫	ಉ	ಜ್ಞಾನಿನಾಂ ಸನ್ಮಾರ್ಗ	ಜ್ಞಾನಿಸನ್ಮಾರ್ಗ
೨೧೬	ಉ	ಜ್ಞಾನದೋಹೋಯು	ಜ್ಞಾನದೋಹೋ ಯು
೨೧೮	ಪೂ	ತದೋಹಾ	ತದ್ದೋಹಾ
,,		ಮಹಿರ್ಷಸ್ಯ	ಮರ್ಹಿಷಸ್ಯ
೨೨೬	ಉ	ಕನೀಯಾತ್	ಕನೀಯಾನ್
೨೩೦		ಹೀಗೆ ತಿದ್ದಿಕೊಳ್ಳಿ— ಉತ್ತರಾರ್ಧೇ ತು ಮಧ್ವಸ್ಯ ಶುಚಿತ್ವಂ ಸಂಪ್ರಕಾಶ್ಯ ಚ । ಸ್ವಪಿತ್ರೋಃ ಕೇವಲಂ ತಸ್ಯ ಕನಿಷ್ಠತ್ವಂ ಚ ವಕ್ಷ್ಯತಿ ॥	
೨೩೩	ಉ	ಜ್ಯೇಷ್ಠಃಶ್ರೇಷ್ಠ	ಜ್ಯೇಷ್ಠಃ ಶ್ರೇಷ್ಠ
೨೩೫-೩೬		ಮಧ್ಯದ ರೇಖೆಯನ್ನು ಶ್ಲೋಕ ೨೩೭ ಆದಮೇಲೆ ಸೇರಿಸಿಕೊಳ್ಳಿ	
೨೩೬	ಉ	ಪೂರ್ವೋಕ್ತಾರ್ಥಿ	ಪೂರ್ವೋಕ್ತಾದ್ಧಿ
೨೪೨	ಉ	ಕಶ್ಚಿದಾ.........ಪುಮಾನ್	ಪುಮಾನಾ-ರೋಹತಿ ಕಶ್ಚಿತ್
೨೪೩	ಪೂ	ಇತಿಹಾಸಂ	ಇತಿಹಾಸಃ
೨೪೬	ಉ	ರುತ್ಕರ್ಷ ಬೋಧಕಃ	ರುತ್ಕರ್ಷಬೋಧಕಃ
೨೪೮	ಪೂ	ಸ್ತುತಿಪ್ರಾಢ	ಸ್ತುತೇಃ ಪ್ರಾಢ
೨೫೧		ಪ್ರೇರಿತಶ್ಚಕ್ರೀ	ಪ್ರೇರಿತಶ್ಚಕ್ರೇ

ಹೆಚ್ಚಿನ ತಿದ್ದುಪಡಿಗಳು

ಪುಟ	ಪಂಕ್ತಿ	ತಪ್ಪು	ಒಪ್ಪು
೭೫	ಕೆ ೩	ಜ್ಞಾನಕ್ಕಾಗಿಜ್ಞಾನ	ಜ್ಞಾನಕ್ಕಾಗಿ (ಜ್ಞಾನ
೧೪೪	೭	ಅಜ ಸಿ	ಅಜನಿ
,,	೧೧	ಧಃ ಯಿಃ	ಧಾಃ ಯಿಃ
೧೬೯	೧೫	ಧೇನಾಃ । ಈಂ	ಧೇನಾಃ ಈಂ
,,	,,	ಅಸ್ಯಾಃ	ತಸ್ಯಾಃ
೧೯೨	೪	ವೀರು)ಧೋಃ	ವೀರುಧೋಃ
೧೯೫	೪	(ಅಸಂ ಯುತ್....ಸನಾಜುವಃ)	ಹೊಡೆದು ಹಾಕಿ

ತಪ್ಪೋಲೆ

(ಕೆ — ಕೆಳಗಿನಿಂದ)

ಪುಟ	ಪಂಕ್ತಿ	ತಪ್ಪು	ಒಪ್ಪು
೧೩	೧೪	ಸಾಧನಸಂ ಪೂರ್ಣ	ಸಾಧನಸಂಪೂರ್ಣ
೧೬	ಕೆ ೩	ನಿರತ-ಆಸಕ್ತ	ರತಃ-ಆಸಕ್ತ
೨೦	ಕೆ ೯	ತೈತ್ತೀರಿಯ	ತೈತ್ತಿರೀಯ
೨೬	೧	xi) ಮಹತ್	ix) ಮಹತ್
	೪	ಮಹಪೂಜಾಯಾಂ	ಮಹ ಪೂಜಾಯಾಂ
೩೦	ಕೆ ೯	ಬಲಸ್ವರೂಪವು	ಬಲಸ್ವರೂಪವೂ
೩೩	೪	ದೇನಾಃ	ಧೇನಾಃ
	೮	ಉಪ	ಉಪನಿಷದ್-
೩೯	೩	ಈ ಸೂಕ್ತವು ಪ್ರಾಣಾಗ್ನಿ ಪರವಾಗಿದ್ದರೂ ಮು ಖ್ಯತಃ ವಾಯುು.	ಈ ಸೂಕ್ತವು ಆಪಾತತಃ ಅಗ್ನಿ ಪರವಾಗಿದ್ದರೂ ಮುಖ್ಯತಃ ಪ್ರಾಣಾಗ್ನಿ (ವಾಯುು).
೪೧	೪	ಅವರಿಗೆ ಅನ್ವರ್ಥ-	ಅನ್ವರ್ಥ-
೪೪	೫	ಪೃಕ್ಷ ಕೌರ-	ಪೃಕ್ಷಃ-ಕೌರ.
೪೫	ಕೆ ೬	ನಿತ್ಯ ಮಾಡಿದ್ದಾರೆ	ಮಾಡಿದ್ದಾರೆ
೪೬	೭	(ಸಪ್ತ.)	(ಸಪ್ತ)
೪೭	ಕೆ ೧೨	(ತಾವು.)	(ತಾವ್ರು)
೮	೧೧	ದಹ್ ಧಾತುವಿನ	ದುಹ್ ಧಾತುವಿನ
೪೯	ಕೆ ೧೨	ಯೋಷಿ ದಬಲಾ	ಯೋಷಿ-ದಬಲಾ
	ಕೆ ೧೧	ಯೋಷಾ)	ಯೋಷಾ—ಮೇದಿನೀ)
೫೧	೧೪	ನಾಲ್ಕೂ ಸಾಮವೇದ	ಸಾಮವೇದ
	೧೫	ಇವು ಅಪೌರುಷೇಯ	ಇವು ನಾಲ್ಕೂ ಅಪೌರುಷೇಯ

ಪುಟ	ಪಂಕ್ತಿ	ತಪ್ಪು	ಒಪ್ಪು
೫೪	೧೦	ಗುಹಾಸಂತಂ	ಗುಹಾ ಸಂತಂ
೫೭	೧೧	ಆ ಧವೇ–ಭಾವ	ಆ ಧವೇಃ–(ಭಾವ
	೧೨	ಯುತ್–ಮಥಾಯುತಿ	ಯುತ್ ಮಥಾಯುತಿ–
೫೮	೩	(ವೇ.)	—ೀ.)
	೪	ಅವತಾರಗಳನ್ನು	ಅವತಾರಗಳನ್ನು,
	೭	ವಪು	ವಪುಃ
	ಕೆ ೧	ದಕಾಂತ	ಧಕಾರಾಂತ
೫೯	೭	ಬಂಧೇಬ್ರದಿ	ಬಂಧೇಬ್ರ್ಧಿ
	೮	ಆದೇಶ ಬಂಧು	ಆದೇಶ ಬಂದು
೬೧	೪	ಅಸನ್ ಪ್ರತ್ಯಯು	ಅಸುನ್ ಪ್ರತ್ಯಯು
	ಕೆ ೯	(ಕ್ರಿ.)	(ಕ್ರಿಃ)
೬೨	೨	ಧಾತುವಿಗೆ	ಧಾತುವೇ
	ಕೆ ೮	ಶಾಸ್ತ್ರಪರ-	ಶಾಸ್ತ್ರಪರ-
೬೩	ಕೆ ೧೨	ಮಾರುತೀತನುಃ ’, ಮಾರುತೀ-ತನುಃ ಎಂದು	ಮಾರುತೀತನುಃ ’ ಎಂದು
೭೩	ಕೆ ೮	ಇನ್ವತ	ಇನ್ವತಃ
೭೪	೧೧	ಯು ವಿಷ್ಠಃ	ಯುವಿಷ್ಠಃ
	೧೩	ಘೃಣಾಶುಚಿಃ	ಘೃಣಾ ಶುಚಿಃ
೭೫	ಕೆ ೭	ಯುವಿಷ್ಠ–	ಯುವಿಷ್ಠಃ–
೭೬	ಕೆ ೯	ಮುಕ್ತಾ	ಮುಕ್ತ
೭೭	ಕೆ ೪	ರೂಪದಿಂದ	ರೂಪದಂತೆ
೭೯	೧೨-೧೩	ಹೇಗೆ ನಡೆದುಕೊಂಡದ್ದು ಪ್ರಸಿದ್ಧ	ನಡೆದುಕೊಂಡದ್ದು ಹೇಗೆ ಪ್ರಸಿದ್ಧ

ಪುಟ	ಪಂಕ್ತಿ	ತಪ್ಪು	ಒಪ್ಪು
೭೯	ಕೆ ೧	ಗೂಳಿಯು ಹುಲ್ಲಿನ	ಗೂಳಿಯು ಹೇಗೆ ಹುಲ್ಲಿನ
೮೦	೭-೯	ಹೋಗುತ್ತಿರಲಿಲ್ಲ. ಅಂಥಾ........ಇರಲಿ. ಇವರಿಗೆ ಹೇಳುತ್ತಾರೆ—	ಹೋಗುತ್ತಿರಲಿಲ್ಲ. ಇರಲಿ. ಅವರಿಗೆ ಅಂಥಾ........ಕಾರಣವನ್ನು ಹೇಳುತ್ತಾರೆ
೮೧	ಕೆ ೫	ನಿ ನವ್ಯಸಿಷ್ವೀವರಾಸ	ನಿ ನವ್ಯಸೀಷ್ವವರಾಸು
೮೨	೯	ಉರ್ವಿ ಯಾ	ಉರ್ವಿಯಾ
೮೩	ಕೆ ೬	ಅದು ; ಅದು—	ಅದು ; ಅನು—
೮೪	೧೪	ಹೇಳಿದೆ. ಅವಕ್ಕೆ	ಹೇಳಿದೆ. ಅದಕ್ಕೆ
೮೫	ಕೆ ೪	ಗಂಧರ್ವನು ದ್ವಾತ್ರಿಂಶ	ದ್ವಾತ್ರಿಂಶ
೮೭	ಕೆ ೯	ಕಾಳಿದಾಸಾದಿಗಳ, ಗ್ರಂಥ	ಕಾಳಿದಾಸಾದಿಗಳ ಗ್ರಂಥ
೮೮	ಕೆ ೧೨-೫	(ಮಧ್ವಾವತಾರದ........ಬಂದಿದೆಯಂತೆ ಇರಲಿ) ಈ ಇಡೀ ಪ್ಯಾರಾವನ್ನೇ ಬಿಟ್ಟುಬಿಡಬೇಕು.	
೮೯	೯	ಮಾಡುತ್ತಾನೆ	ಮಾಡುತ್ತಾರೆ.
೯೦	೧	ಸೇವಯಾವಿಷ್ಣು	ಸೇವಯಾ ವಿಷ್ಣು
	೬.	ವ್ಯಾಕರ್ಣಾಂ ಭೋಧಿ	ವ್ಯಾಕರಣಾಂಭೋಧಿ
೯೪	ಕೆ ೧೩	ನೀರಾಗಿರುವ ಕ್ಷೀರ	ನೀರಾಗಿರುವ. ಕ್ಷೀರ
	ಕೆ ೧೦	ಅಬ್ದಯೇ	ಅಬ್ಧಯೇ
೯೭	೧	ದುರ್ಮಾರ್ಗಾದುದ್ಧೃ	ದುರ್ಮಾರ್ಗಾ—ದುದ್ಧೃ
೯೮	೨	ಎಡರನ್ನೂ ಅಥವಾ	ಎರಡನ್ನೂ ಅಥವಾ
೧೦೦	೮	ಯಾವ ಭಗವಂತನನ್ನು	ಯಾವ ಭಗವಂತನು
೧೦೩	ಕೆ ೫	'ತದಸ್ಯಾಸ್ತ್ಯಸೀನ್'	'ತದಸ್ಯಾಸ್ತ್ಯಸ್ಮಿನ್'
೧೦೪	೩	ಅಸ್ಮಹಾತಃ	ಅನ್ಮಹತಃ
೧೦೫	೧೩	ಸಂದೇಶ ಹಾ(ಕಾ)ರಕಃ	ಸಂದೇಶಹಾ(ಕಾ)ರಕಃ
೧೧೦	ಕೆ ೧	ನಂದಸನ್ನಾ—	ನಂದಸನ್ನಾವ್ನಾ—

ಪುಟ	ಪಂಕ್ತಿ	ತಪ್ಪು	ಒಪ್ಪು
೧೧೧	೧	ಸನ್ನ್ಯಾಮಾಹ್ಯೇವಂ	ಸನ್ನ್ಯಾಮಾ ಹ್ಯೇವಂ
	೫	ಪೂರ್ಣಾ-	ಪೂರ್ಣಾ-
	೭	ಜ್ಞಾನದಾತ	ಜ್ಞಾನದಾತಾ
	ಕೆ ೯	ತೋರಿಸಿದಂತೆದದಾತೀತಿ	ತೋರಿಸಿದಂತೆ ದದಾತೀತಿ
೧೧೨	ಕೆ ೫	(೨ ೫-೬	(೨-೫೬)
	ಕೆ ೪	ಕಲುಷಿಕ-	ಕಲುಷಿತ-
	ಕೆ ೨	ಅಲ್ಲೇ ೩೨/೧೭೫	ಅಲ್ಲೇ (೩೨/೧೭೫)
	ಕೆ ೧	ರಚಿಸಿ) ಇತರ	ರಚಿಸಿ ’.
೧೨೦	೬	ಮೋ ಲ್ಪಮಾತ್ರಸ್ಯ	ಮೋಽಲ್ಪಮಾತ್ರಸ್ಯ
೧೨೧	೧೦	ಯಂತೆಸಹಾಯ	ಯಂತೆ ಸಹಾಯ
೧೨೩	೪	ಹೀಗೆಯೋ ಸರಿ.	ಹೀಗೆಯೋ ಸರಿ (ಖಳಿತ್ಥೇತ್ಯಭೇ ಅಪಿ ಸತ್ಯನಾಮನೀ).
	೧೪	ಭರ್ಜನಾ	ರ್ಭರ್ಜನಾ
೧೨೬	ಕೆ ೧	ಗುಹಾಸಂತಂ	ಗುಹಾ ಸಂತಂ
೧೨೭	೧೧	ಗುಹಾಸಂತಂ	ಗುಹಾ ಸಂತಂ
೧೨೮	ಕೆ ೧೧	(ಗುಹಾ-	(ಗುಹಾ
೧೩೧	೪	ವೇಠಸ್ಪೃಕ್ತಸ್ಯ	ವೇರಸ್ಪೃಕ್ತಸ್ಯ
೧೩೪	೭	ಮಂಗಳಾಚರಣ್	ಮಂಗಳಾಚರಣವ್
೧೩೫	೮	ಬಂದಿವೆ	ಬಂದಿದೆ
೧೩೯	ಕೆ ೭	೨೪-೫೨).	೨೪-೨೫).
	ಕೆ ೧	(371, x, ೩೯)	(371, x, ೩೯-೪೦).
೧೪೦	೧೦	(೨೦-೨೨ ಪೂ)	(೨೦-೨೨ ಪೂ*)
೧೪೨	೧೦	ಮತ್ತು xi,	ಮತ್ತು ix
	ಕೆ ೯	ಅಭಿದಾನ	ಅಭಿಧಾನ

ಪುಟ	ಪಂಕ್ತಿ	ತಪ್ಪು	ಒಪ್ಪು
೧೫೧	೧೧	ಮನುಷ್ಯನಿಗೆ	ಮನುಷ್ಯನು
೧೫೨	ಕೆ ೧೧–೧೦	(399, ೧೩೦)	(373 ಕ. ೪೫)
೧೫೭	೧೨	ಬಂಧೀ ಬ್ರಧಿ ಬುಧೀ ಚ	ಬಂಧೀಬ್ರರ್ಧಿಬುಧೀ ಚ
೧೫೯	೧೨	ಗುಣಸಂಪನ	ಗುಣಸಂಪನ್ನ
೧೬೦	ಕೆ ೧೦	ಸೂಜ್ ಕ್ರಿಃ	ಸೂಜಃ ಕ್ರಿಃ
,,	,,	ಡಿಂದ ಕ್ರಿ	ಕ್ರಿ
೧೬೨	೧೩	ಭೂತಕಾಲಕ್ಕೇ	(ಭೂತಕಾಲಕ್ಕೇ)
	ಕೆ ೧	ಪ್ರ ದಿವಃ	ಪ್ರದಿವಃ
೧೬೩	ಕೆ ೧೦	ಶಸ್-ಅಂತ್	ಶಸ್-ಅಂತ
೧೬೭	೧೩	ಮಹಿಂ-	ಮಹಿ-
೧೭೦	ಕೆ ೫	ಅಲ್ಲ.	ಅಲ್ಲ—
	ಕೆ ೨	ಪೂರ್ಣ ಸದ್ಗುಣನೆಂದೂ	ಸದ್ಗುಣಪೂರ್ಣನೆಂದೂ
೧೭೨	ಕೆ ೮	ಪ+ಆ)	ಪರಿ+ಆ)
	ಕೆ ೭	ಎಂದು ಪ್ರಣೀಯತೇ	ಪ್ರಣೀಯತೇ ಎಂದು
೧೭೩	ಕೆ ೫	ದಂಸು.	ದಂಸು
೧೭೪	ಕೆ ೮	ಹೆಸರು. (೧೫೫)	ಹೆಸರು. ಇದಕ್ಕೆ ಕೆಲವರು 'ಸ್ತಂಭಾದಿಗಳು' ಎಂದೂ ಅರ್ಥ ಹೇಳುತ್ತಾರೆ. (೧೫೫)
೧೭೫	ಕೆ ೧೦	ಮದಿಸಿದ	ಕೊಬ್ಬಿದ
	ಕೆ ೨	(೬೦–೬೧)	(೧೬೦–೬೧)
೧೭೮	ಕೆ ೭	ಇವರಿಂದ ಮಿಕ್ಕ ಎಲ್ಲ	ಮಿಕ್ಕ ಎಲ್ಲ
೧೭೯	ಕೆ ೧	(ವಾಯು-)	(ವಾಯುಃ)
೧೮೧	ಕೆ ೭	ಯೋಜನೆಗೂ	ಯೋಚನೆಗೂ
೧೮೩	೧೧	ಪುಟ ೧೨೪ರಲ್ಲಿ	ಪುಟ ೧೨೩ರಲ್ಲಿ
೧೮೪	೭	ಜೊತೆ ಸೇರಿಸ	ಜೊತೆಯೂ ಸೇರಿಸ

ಪುಟ	ಪಂಕ್ತಿ	ತಪ್ಪು	ಒಪ್ಪು
೧೮೫	೧೩	(೧೯೫)	(೧೯೬)
	೧೬	(೧೯೫ ೭–೯೮)	(೧೯೬–೯೮)
೧೮೬	ಕೆ ೩	ವರ್ಣಿಸುತ ದೆ;	ವರ್ಣಿಸುತ್ತದೆ.
೧೯೦	ಕೆ ೨	ದುರ್ಮತಗಳು ನಿರ್ಗುಣ	ದುರ್ಮತಗಳು ಭಗವಂತನನ್ನು ನಿರ್ಗುಣ
೧೯೨	೯	ದ್ವಾರೋ	ದ್ವಾರೆ.
	ಕೆ ೫	ಮದಿಸಿದ	ಕೊಬ್ಬಿದ
೧೯೩	೧೩	ರೆಂದೂ ಮಿಕ್ಕ....ರೆಂಬು ದನ್ನೂ ಹೇಳುತ್ತದೆ.	ರೆಂದು ಹೇಳುತ್ತದೆ.
	ಕೆ ೩	ಯಣರಿಗೆ ಇವರು	ಯಣರಿಗೆ ಮಾತ್ರ ಇವರು
೧೯೪	೫	ಸೂಚನೆ— ಮಧ್ಯದ ಅಡ್ಡಗೀಟು ೨೩೭ ನೇ ಶ್ಲೋಕ ಆದಬಳಿಕ ಕೆಳಗೆ ಬರಬೇಕು.	

ಖಿಲವಾಯುಸ್ತುತಿ

ಮಂಗಳಾಚರಣೆ

ಯ ಏಕೋಽಪಿ ರಾಮಕೃಷ್ಣ—ವ್ಯಾಸಾದಿಬಹುರೂಪವಾನ್ ।
ತಸ್ಮೈ ಸ್ತುತ್ಯೈ ನೃಸಿಂಹಾಯ ಶ್ರೀಪ್ರಾಣಪತಯೇ
ಭೃಶಮ್ ॥ ೧ ॥

(ಅರ್ಥ) ಒಬ್ಬನೇ ಆದರೂ ಎಂದರೆ ಪರಸ್ಪರ ಭೇದವಿಲ್ಲದಿದ್ದರೂ ವಿಶೇಷದಿಂದ ರಾಮ–ಕೃಷ್ಣ–ವೇದವ್ಯಾಸ–ಹಯಗ್ರೀವ ಮೊದಲಾದ ಅನೇಕ ರೂಪಿಯಾದ, ಮತ್ತು ಶ್ರೀದೇವಿಗೂ ಮುಖ್ಯಪ್ರಾಣನಿಗೂ ಸ್ವಾಮಿಯಾದ, ಆ ನೃಸಿಂಹಸ್ವಾಮಿಗೆ ಅನಂತ ನಮಸ್ಕಾರಗಳು.

ಆಂಜನೇಯ ನಮಸ್ತುಭ್ಯಂ ಭೀಮಾಯ ಬಲಶಾಲಿನೇ ।
ಪೂರ್ಣಪ್ರಜ್ಞಾಯ ಮಧ್ವಾಯ ಮುಖ್ಯಪ್ರಾಣಾಯ ತೇ
ನಮಃ ॥ ೨ ॥

(ಅರ್ಥ) ಹೇ ಪ್ರಥಮಾವತಾರನಾದ ಆಂಜನೇಯಸ್ವಾಮಿಯೇ! ನಿನಗೆ ನಮಸ್ಕಾರ. ದ್ವಿತೀಯಾವತಾರನಾದ, ಬಲದಲ್ಲಿ ಸರ್ವಶ್ರೇಷ್ಠನಾದ ಕ್ಷತ್ರಿಯನಾದ ಹೇ ಭೀಮಸೇನ! ನಿನಗೆ ನಮಸ್ಕಾರ. ಸರ್ವಜ್ಞಶಿಖಾಮಣಿಗಳಾದ್ದರಿಂದ ಪೂರ್ಣಪ್ರಜ್ಞರೆಂದು ಪ್ರಸಿದ್ಧರಾದ ಮಧ್ವಾಚಾರ್ಯರಿಗೆ ನಮಸ್ಕಾರ. ಹೀಗೆ ಮೂರು ಅವತಾರಗಳನ್ನೆತ್ತಿರುವ ಮೂಲರೂಪಿ ಭಾರತೀರಮಣಮುಖ್ಯಪ್ರಾಣನೇ ನಿನಗೆ ನಮಸ್ಕಾರ.

ಶ್ರೀಪದ್ಮನಾಭತೀರ್ಥಾದಿ—ಟೀಕಾಕಾರಾಂಸ್ತಥಾ ಗುರೂನ್ ।
ನಿರ್ಮಲಜ್ಞಾನಸಿದ್ಧ್ಯರ್ಥಂ ಭೂಯೋ ಭೂಯೋ
ನಮಾಮ್ಯಹಮ್ ॥ ೩ ॥

(ಅರ್ಥ) ಶ್ರೀಮತ್ಪದ್ಮನಾಭತೀರ್ಥರು, ಶ್ರೀಮಜ್ಜಯತೀರ್ಥರೇ ಮೊದಲಾದ ಸಮಸ್ತ ಟೀಕಾಕಾರರನ್ನೂ, ವಾಯುಸ್ತುತಿಗೆ ಟೀಕೆಗಳನ್ನು ಬರೆದ

ಸಕಲ ಟೀಕಾಕಾರರನ್ನೂ, ನನ್ನ ಸಕಲ ಗುರುಗಳನ್ನೂ, ನಿರ್ಮಲ ಜ್ಞಾನ-ಸಿದ್ಧಿಗಾಗಿ ನಾನು ಪುನಃಪುನಃ ನಮಸ್ಕರಿಸುತ್ತೇನೆ.

ಅಜ್ಞೋಽಹಂ ಮಂದವಿದ್ಯೋಽಪಿ ತದನುಗ್ರಹಪ್ರೋಷಿತಃ ।
ಹರಿವಾಯುಸ್ತುತೇರ್ಮೂಲ—ಶ್ಲೋಕಾನ್ ವ್ಯಾಖ್ಯಾಯ
ಸಾದರಮ್ ॥ ೪ ॥

ಪರಂಪರಾಕ್ರಮಪ್ರಾಪ್ತಾನ್ ಸಾಂಗತಾಸಿದ್ಧಯೇ ಪುನಃ ।
ಖಿಲವಾಯುಸ್ತುತೇಃ ಶ್ಲೋಕಾನ್ ವ್ಯಾಖ್ಯಾಸ್ಯಾಮಿ
ಯಥಾಮತಿ ॥ ೫ ॥

(ಅರ್ಥ) ನಾನು ಸ್ವತಃ ದಡ್ಡನೂ ಶಾಸ್ತ್ರದಲ್ಲಿ ಅತ್ಯಲ್ಪ ತಿಳಿವಳಿಕೆ-ಯುಳ್ಳವನಾದರೂ ಶ್ರೀಹರಿವಾಯುಗಳ ಹಾಗೂ ಶ್ರೀಮತ್ಪದ್ಮನಾಭತೀರ್ಥಾದಿ ಸಕಲ ಗುರುಗಳ ಅನುಗ್ರಹಬಲದಿಂದ ಇದುವರೆಗೆ ಶ್ರೀಹರಿವಾಯುಸ್ತುತಿಯ ಮೂಲದ ಸಕಲ ಶ್ಲೋಕಗಳಿಗೂ ಆದರಪೂರ್ವಕವಾಗಿ ವ್ಯಾಖ್ಯಾನವನ್ನು ಬರೆದು, ಆರಂಭಿಸಿದ ಆ ವ್ಯಾಖ್ಯಾನಕಾರ್ಯವು ಸಾಂಗೋಪಾಂಗವಾಗಿ ಮುಗಿ-ಯುವ ಸಲುವಾಗಿ ಈಗ ಅನೇಕ ಪರಂಪರೆಗಳಲ್ಲಿ ಹೇಳಿಕೊಳ್ಳುತ್ತಾ ಬಂದಿರುವ ಖಿಲವಾಯುಸ್ತುತಿಯ ಶ್ಲೋಕಗಳಿಗೂ ಯಥಾಮತಿ ವ್ಯಾಖ್ಯಾನವನ್ನು ಬರೆಯುತ್ತೇನೆ.

ಖಿಲವಾಯುಸ್ತುತಿಯ ಶ್ಲೋಕಗಳಿಗೆ ಛಲಾರಿಯವರನ್ನು ಬಿಟ್ಟರೆ ಬೇರೆ ಯಾರೂ ಟೀಕೆಯನ್ನು ಬರೆದಿಲ್ಲ ಉಡುಪಿಯ ಪಾವಂಜೆ ಗುರುರಾಯರ ಕನ್ನಡಾರ್ಥ ಪುಸ್ತಕದಲ್ಲಿ ಈ ಶ್ಲೋಕಗಳಿಗೆ ಕನ್ನಡಾರ್ಥ ಬರೆದಿದ್ದಾರೆ. ಆದರೆ ಖಿಲವಾಯುಸ್ತುತಿಯಲ್ಲಿ ಸಂಗ್ರಹೀತವಾದ ಅನೇಕ ಶ್ಲೋಕಗಳು ಸರ್ವಮೂಲ ಗ್ರಂಥಗಳಲ್ಲೇ ಅಲ್ಲಲ್ಲೇ ಆರಿಸಿಕೊಂಡವಾಗಿವೆ. ಆ ಶ್ಲೋಕಗಳ ಮೂಲಗ್ರಂಥವನ್ನೂ ಸಾಧ್ಯವಾದ ಮಟ್ಟಿಗೆ ಹುಡುಕಿ ಸೂಚಿಸಿ ಅವುಗಳ ಟೀಕಾಗ್ರಂಥಗಳಲ್ಲಿ ಹೇಳಿದ ವಿಷಯಗಳನ್ನೇ ಯಥಾಮತಿ ಸಂಗ್ರಹಿಸಿ ವಿವರಿಸಿದ್ದೇನೆ.

೧. ವಾಯುದೇವರ ಉತ್ತಮತ್ವ

361. ಅವತಾರಿಕೆ—(ಛ.) ವಾಯುದೇವರು ಸರ್ವದೇವೋತ್ತಮ-ರೆಂಬುದಕ್ಕೆ ಪ್ರಮಾಣವನ್ನು ಪಠಿಸುತ್ತಾರೆ. (ಟೀ.) ತಾತ್ಪರ್ಯನಿರ್ಣಯದ

ಎರಡನೇ ಅಧ್ಯಾಯದಲ್ಲಿ ಶ್ರೀವಿಷ್ಣುಸರ್ವೋತ್ತಮತ್ವವು ಮಹಾಭಾರತದಲ್ಲಿ ಹೇಗೆ ಸ್ಥಾಪಿಸಲ್ಪಟ್ಟಿದೆಯೆಂಬುದನ್ನು ವಿಸ್ತಾರವಾಗಿ ಭಾರತದ ವಾಕ್ಯಗಳಿಂದಲೇ ಸಾಧಿಸಿ ತೋರಿಸಿಕೊಟ್ಟು ಅನಂತರ ತಾರತಮ್ಯಕ್ರಮದಲ್ಲಿ ವಾಯುಜೀವೋತ್ತಮತ್ವಪ್ರಮೇಯವನ್ನೂ ಭಾರತ ವಾಕ್ಯಗಳಿಂದಲೇ ಸಾಧಿಸಿಕೊಡಲು ಆರಂಭಿಸಿ* ಬಳಿತ್ಥಾ ಸೂಕ್ತದಿಂದ ವಾಯುದೇವರ ಅವತಾರತ್ರಯದ ಮಹಿಮೆಯನ್ನು ಹೇಳಿದ ಬಳಿಕ ಮುಖ್ಯಪ್ರಾಣನೇ ಜೀವೋತ್ತಮರು—ಅವರೇ ರುದ್ರಾದಿ ಸಕಲದೇವತೆಗಳಿಗಿಂತಲೂ ಶ್ರೇಷ್ಠರೆಂಬುದನ್ನು ಸ್ಥಾಪಿಸುವುದಕ್ಕೆ ಭಾರತದ ಶಾಂತಿಪರ್ವದಲ್ಲಿರುವ 'ಮೋಕ್ಷಧರ್ಮ'ವೆಂಬ ಭಾಗದಲ್ಲಿ ಹೇಳಿರುವ ಶ್ಲೋಕವನ್ನು ಪ್ರಮಾಣವಾಗಿ ಉದಹರಿಸುತ್ತಾರೆ. ಈ ಶ್ಲೋಕವು ತಾತ್ಪರ್ಯನಿರ್ಣಯದಲ್ಲಿ ಎರಡನೇ ಅಧ್ಯಾಯದಲ್ಲಿ ೧೬೩ನೇ ಶ್ಲೋಕವಾಗಿ ಪಠಿತವಾಗಿದೆ. ಇದೇ ಪ್ರಮಾಣವನ್ನೇ ಭಾಗವತ ಏಕಾದಶಸ್ಕಂಧ ತಾತ್ಪರ್ಯದಲ್ಲಿ ೧೧ನೇ ಅಧ್ಯಾಯದ "ವಾಯೌ ಮುಖ್ಯಧಿಯಾ" ಎಂಬ ನಲವತ್ತನಾಲ್ಕನೇ ಶ್ಲೋಕದ ತಾತ್ಪರ್ಯವನ್ನು ನಿರ್ಣಯಿಸುವುದಕ್ಕಾಗಿಯೂ ಉದಹರಿಸಿದ್ದಾರಲ್ಲದೆ ಅಲ್ಲಿ 'ಇತಿ ಮೋಕ್ಷಧರ್ಮೇಷು' ಎಂದು ಆಕರದ ಮೂಲವನ್ನೂ ಉಲ್ಲೇಖಿಸಿದ್ದಾರೆ. ಆ ಶ್ಲೋಕಪಾಠ ಹೀಗಿದೆ—

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ।
ಅನಾವೃತ್ತಿ-(ಥ. ಪಾಠ ನಾಸ್ಯಾವೃತ್ತಿ)-ರ್ದೇಹಿನಾಂ ದೇಹಪಾತೇ
ತಸ್ಮಾದ್ ವಾಯುರ್ದೇವದೇವೋ ವಿಶಿಷ್ಟಃ ॥ ೧ ॥

'ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ । ವಾಯ್ವಾದೀನಾಂ ಕ್ರಮಶ್ಚೈವ ತದ್ವಾಕ್ಯೈರೇವ ಚಿಂತ್ಯತೇ ॥' (ತಾ. ನಿ. ೨/೧೫೩). (ಅರ್ಥ) ಇತ್ಯಾದಿ ವ್ಯಾಸವಾಕ್ಯಗಳಿಂದ ವಿಷ್ಣುಸರ್ವೋತ್ತಮತ್ವವು ಸ್ಥಾಪಿಸಲ್ಪಡುತ್ತದೆ. ಈಗ ಕ್ರಮವಾಗಿ ವಾಯ್ವಾದಿದೇವತೆಗಳ ಹಿರಿಮೆಯೂ ಆ ಭಾರತವಾಕ್ಯಗಳಿಂದಲೇ ವಿಚಾರ ಮಾಡಲ್ಪಡುತ್ತದೆ.

ಪದವಿಭಾಗ—ವಾಯುಃ, ಭೀಮಃ, ಭೀಮನಾದಃ, ಮಹೌಜಾಃ.... ....ಅನಾವೃತ್ತಿಃ (ಪಾಠಾ. ನ, ಅಸ್ಯ, ಆವೃತ್ತಿಃ), ದೇಹಿನಾಂ....ವಾಯುಃ, ದೇವದೇವಃ, ವಿಶಿಷ್ಟಃ

(ವೃತ್ತ, ಛಂದಸ್ಸು) ಈ ಶ್ಲೋಕದ ಪ್ರತಿಯೊಂದು ಪಾದದಲ್ಲೂ ಹನ್ನೊಂದು ಅಕ್ಷರಗಳಿರುವುದರಿಂದ ಇದು ತ್ರಿಷ್ಟುಪ್ ಛಂದಸ್ಸು. ಪ್ರತಿ ಪಾದದಲ್ಲಿ ಮ–ತ–ತಗಣಗಳ ಮುಂದೆ ಎರಡು ಗುರು ಇರುವುದರಿಂದ ಇದು ಶಾಲಿನೀವೃತ್ತ. 'ಮಾತೌ ಗೌ ಚೇಚ್ಛಾಲಿನೀ ವೇದಲೋಕೈಃ' ಎಂಬುದು ಅದರ ಲಕ್ಷಣ. ವೇದಲೋಕೈಃ ಎಂದದ್ದರಿಂದ ನಾಲ್ಕಕ್ಕೆ ಏಳಕ್ಕೆ ಯತಿಗಳು.

ಅನ್ವಯಾರ್ಥ—ಶ್ರೀ ವಾದಿರಾಜರು ತಾತ್ಪರ್ಯನಿರ್ಣಯದ ಭಾವ-ಪ್ರಕಾಶಿಕಾ ಟೀಕೆಯಲ್ಲಿ ಈ ಶ್ಲೋಕಕ್ಕೆ ಮೂರು ಪ್ರಕಾರ ಅರ್ಥ ತೋರಿಸಿ-ಕೊಡುತ್ತಾರೆ. ೧. ಪ್ರಕಾರ ಹೀಗೆ ಅರ್ಥ—ವಾಯುಃ–ಮುಖ್ಯಪ್ರಾಣನು, ಭೀಮಃ–ಅಸುರರಿಗೆ ಭಯಂಕರನು. ಏತಕ್ಕೆಂದರೆ, ಭೀಮ–ಭಯಂಕರವಾದ, ನಾದಃ–ಧ್ವನಿಯುಳ್ಳವನು. ಮಹೌಜಾಃ—ಮಹಾ–ಅತಿ ಹೆಚ್ಚಾದ, ಓಜಾಃ–ಬಲವುಳ್ಳವನು—ಮಹಾಬಲಿಷ್ಠನೆಂದರ್ಥ. ಸರ್ವೇಷಾಂ ಚ ಪ್ರಾಣಿ-ನಾಂ–ಸಕಲ ಪ್ರಾಣಿಗಳಿಗೂ ; ಪ್ರಾಣಭೂತಃ–ಸಕಲ ವಿಧವಾದ ಚಲನ-ವಲನ ಗಳಿಗೂ ಕಾರಣೀಭೂತನಾದವನು ; (ಪ್ರ-ಉಪಸರ್ಗ, ಅನ ಚೇಷ್ಟಾಯಾಂ ಧಾತು. ಪ್ರ–ಅನ–ಅಲ್ಲಾಡು, ಚಲಿಸು, ಉಸಿರಾಡು). ಸಕಲ ಚೇಷ್ಟಾ-ಪ್ರವರ್ತಕನೆಂದರ್ಥ. ದೇಹಿನಾಂ–ಪ್ರಾಣಿಗಳ ; ದೇಹಪಾತೇ–ಶರೀರವು ಬಿದ್ದು ಹೋಗಲು (ಇದು ಸತಿಸಪ್ತಮೀ); ಅಸ್ಯ–ಇವನಿಗೆ (ಈ ಮುಖ್ಯಪ್ರಾಣನಿಗೆ), ಆವೃತ್ತಿಃ ನ–ಹಿಂದಿರುಗುವಿಕೆಯು ಇಲ್ಲ. ಪ್ರಾಣವು (ಉಸಿರು) ಒಂದು ಸರಿ ಹೊರಟುಹೋದ ಬಳಿಕ ಪುನಃ ಬರುವುದಿಲ್ಲ. ಅಥವಾ ಮುಖ್ಯಪ್ರಾಣನು ದೇಹದಲ್ಲಿರುವವರೆಗೂ ದೇಹವು ಬಿದ್ದುಹೋಗುವುದಿಲ್ಲ, ಅವನು ಬಿಟ್ಟು-ಹೋದಕೂಡಲೇ ದೇಹ ಬಿದ್ದುಹೋಗುತ್ತದೆ. ಈ ವಾಕ್ಯಕ್ಕೆ ಇನ್ನೊಂದು ರೀತಿಯಾಗಿಯೂ ಅರ್ಥ ಹೇಳುತ್ತಾರೆ. ದೇಹಿನಾಂ–ಮುಕ್ತಿಯೋಗ್ಯಜೀವರಿಗೆ, ದೇಹಪಾತೇ–ಚರಮದೇಹವು (ಕಟ್ಟಕಡೆಯ ಶರೀರವು) ಬಿದ್ದುಹೋದ ಮೇಲೆ; ಅಸ್ಯ–ಇವನಿಗೆ (ಆ ಮುಕ್ತಿಯೋಗ್ಯಜೀವನಿಗೆ) ; ಆವೃತ್ತಿಃ ನ–ಪುನಃ

ಜನನ-ಮರಣಾದಿಗಳ ಆವೃತ್ತಿಯು ಇರುವುದಿಲ್ಲ. (ಇದು 'ಅಸ್ಯ' ಈ ವಾಯುದೇವರ ಅನುಗ್ರಹದಿಂದಲೇ ಆಗುತ್ತದೆ.) ತಸ್ಮಾತ್-ಆದ್ದರಿಂದ ; ವಾಯುಃ-ವಾಯುದೇವರು (ಮುಖ್ಯಪ್ರಾಣನು) ; ದೇವದೇವಃ-ದೇವೋತ್ತ-ಮರೂ ; ವಿಶಿಷ್ಟಃ-ಸರ್ವೋತ್ಕೃಷ್ಟರೂ ಆಗಿದ್ದಾರೆ.

೬. ರೀತ್ಯಾ ತಾತ್ಪರ್ಯ—ಮೂಲವಾಯುದೇವರ ಹುಂಕಾರ-ನಾದವು ಮಹಾ ಭಯಂಕರವಾಗಿರುತ್ತದೆ. ಅವರ ಸಿಂಹನಾದಕ್ಕೆ ಸಕಲ ದೈತ್ಯರೂ ಥರಥರ ನಡುಗಿ ಭಯಭ್ರಾಂತರಾಗುತ್ತಾರೆ. ಅವರು ಮಹಾ ಬಲಿಷ್ಠರೂ ಆಗಿದ್ದಾರೆ. ಸಕಲ ಪ್ರಾಣಿಗಳಿಗೂ ಅವರೇ ಜೀವನಾಧಾರ. ಅವರು ಇರುವವರೆಗೂ ದೇಹದಲ್ಲಿ ಪ್ರಾಣವಿರುತ್ತದೆ. ಅವರು ಹೊರಟು-ಹೋದಕೂಡಲೇ ದೇಹವು ಬಿದ್ದುಹೋಗುತ್ತದೆ ; ಕಟ್ಟಿಗೆಯಂತಾಗಿ 'ಶವ' ಅಥವಾ 'ಹೆಣ' ಎನಿಸಿಕೊಳ್ಳುತ್ತದೆ. ಒಂದು ಸಲ ಅವರು ದೇಹದಿಂದ ಹೊರಟುಹೋದ ಬಳಿಕ ಪುನಃ ಪ್ರಾಣ ಬರುವ ಸಂಭವವೇ ಇಲ್ಲ. ಇದೇ ರೀತಿ ಮುಕ್ತಿಯೋಗ್ಯರು ಚರಮದೇಹವನ್ನು ಧರಿಸಿ ಸಾಧನೆಗಳನ್ನು ಮುಗಿಸಿ-ಕೊಂಡು ಆ ದೇಹವನ್ನು ಬಿಟ್ಟು ಹೊರಟುಹೋದ ಬಳಿಕ ಅವರಿಗೆ ಪುನಃ ಸಂಸಾರದಲ್ಲಿ ಬೀಳುವ ಎಂದರೆ ಪುನಃ ಹುಟ್ಟುವ-ಸಾಯುವ ಜಂಜಾಟ ತಪ್ಪಿಹೋಗುತ್ತದೆ. ಇದೂ ವಾಯುದೇವರ ಅನುಗ್ರಹದಿಂದಲೇ ಆಗುತ್ತದೆ. ಆದಕಾರಣ ಆ ವಾಯುದೇವರೇ ರುದ್ರಾದಿ ಸಕಲ ದೇವತೆಗಳಿಗಿಂತ ಉತ್ತ-ಮರೂ, ಮತ್ತು ಜೀವೋತ್ತಮರೂ ಆಗಿದ್ದಾರೆ.

362. ವಾದಿರಾಜರ ವಿವರಣೆ—(ಶ್ಲೋಕಾರ್ಥ) ವಾಯುಃ-ಮುಖ್ಯಪ್ರಾಣನು; ಭೀಮಃ-ಭಯಂಕರನು. ಭೀಮನಾದಃ-ಯಮಭಟರಿಗೂ ಭಯಂಕರವಾದ 'ಪ್ರಾಣಘೋಷ'ವೆಂಬ ತೀಕ್ಷ್ಣವಾದ ನಾದವುಳ್ಳವನು. ಮಹೌಜಾಃ-ಮಹಾಬಲವುಳ್ಳವನೂ ಮಹಾಪರಾಕ್ರಮಶಾಲಿಯೂ ಆಗಿದ್ದಾನೆ ಸರ್ವೇಷಾಂ ಚ ಪ್ರಾಣಿನಾಂ-ಸ್ಥಾವರಜಂಗಮಾತ್ಮಕವಾದ ಸಕಲ ಜೀವರಿಗೂ; ಪ್ರಾಣಭೂತಃ-ಪ್ರಾಣಾಧಾರನಾದ ಶ್ವಾಸರೂಪಿಯಾಗಿದ್ದಾನೆ. ದೇಹಿನಾಂ-ಪ್ರಾಣಿಗಳ, ದೇಹಪಾತೇ (ಸತಿ)-ದೇಹವು ಬಿದ್ದುಹೋಗಲು, ಅನಾವೃತ್ತಿಃ—ಅನ-ವಾಯುವಿನ ; ಆವೃತ್ತಿಃ-ಇಲ್ಲದಿರುವಿಕೆಯು (ಮೊದಲು ಗೊತ್ತಾಗು-

ತ್ತದೆ.), ಎಂದರೆ ದೇಹವು ಬಿದ್ದುಹೋದಕೂಡಲೇ (ಮರಣವುಂಟಾದ. ಕೂಡಲೇ) ಶ್ವಾಸೋಚ್ಛ್ವಾಸವು ನಿಂತುಹೋಗುತ್ತದೆ; ಇದರಿಂದ ಪ್ರಾಣ-ದೇವರು ದೇಹದಲ್ಲಿಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರ್ಥ. ತಸ್ಮಾತ್–ಆದ್ದರಿಂದ ; ವಾಯುಃ–ಮುಖ್ಯಪ್ರಾಣನು ; ದೇವದೇವಃ–ರುದ್ರಾದಿಗಳಿಗೂ ಸ್ವಾಮಿಯೂ ; ವಿಶಿಷ್ಟಃ–ರುದ್ರೇಂದ್ರಾದಿ ಸಕಲ ದೇವತೆ-ಗಳಿಗಿಂತಲೂ ಸಕಲ ಜೀವರಿಗಿಂತಲೂ ಉತ್ತಮನೆಂಬುದು ಸಿದ್ಧವಾಗುತ್ತದೆ-ಯೆಂದರ್ಥ.

ಜೀವೋತ್ತಮತ್ವ ಸ್ಥಾಪನೆ—ದೇಹಪಾತವಾಗಲು ಉಸಿರಾಟವೂ ನಿಂತುಹೋಗುತ್ತದೆ. (ದೇಹಪಾತೇ ಅನ-ಅವೃತ್ತಿಃ) ಎಂದು ಹೇಳಿದ್ದರಿಂದ ಎಲ್ಲಿಯುವರೆಗೆ ಪ್ರಾಣನು ದೇಹದಲ್ಲಿರುತ್ತಾನೋ ಅಲ್ಲಿಯುವರೆಗೂ ಪ್ರಾಣಿಯು (ದೇಹಿಯು) ಜೀವಂತವಾಗಿರುತ್ತಾನೆಂಬ ಅನ್ವಯವ್ಯಾಪ್ತಿಯೂ ಪ್ರಾಣನಿಲ್ಲ-ದಿದ್ದರೆ ಜೀವಿಯು ಬದುಕಿರಲಾರನೆಂಬ ವ್ಯತಿರೇಕವ್ಯಾಪ್ತಿಯೂ ಸಿದ್ಧವಾದ-ಹಾಗಾಯಿತು. ಇದೂ ಉಪಲಕ್ಷಣವೆನ್ನುತ್ತಾರೆ. ಕಣ್ಣು, ಕಿವಿ, ಬಾಯಿ ಮೊದಲಾದ ಇಂದ್ರಿಯಗಳ ಅಭಿಮಾನಿಗಳು ದೇಹದಲ್ಲಿ ಇಲ್ಲದಿದ್ದರೂ ಕುರುಡನಾಗಿ, ಕಿವುಡನಾಗಿ, ಮೂಕನಾಗಿ ಇದ್ದರೂ ಕೂಡ ಪ್ರಾಣವು ಮಾತ್ರ ಇದ್ದರೆ ಕುರುಡು ಕಿವುಡು ಮೂಕಾವಸ್ಥೆಯಲ್ಲಿಯೇ ಬದುಕಿರುವುದೂ ಕಂಡುಬರುತ್ತದೆ. ಆದ್ದರಿಂದ ಕಣ್ಣು ಕಿವಿ ಬಾಯಿ ಮೊದಲಾದ ಇತರ ಇಂದ್ರಿಯಾಭಿಮಾನಿಗಳು (ಕರಣಾಭಿಮಾನಿಗಳು) ಇಲ್ಲದಿದ್ದರೆ ಬದುಕುವುದಿಲ್ಲ ಎಂಬ ವ್ಯತಿರೇಕವ್ಯಾಪ್ತಿಯಾಗಲಿ, ಕಣ್ಣು ಕಿವಿ ಬಾಯಿ ಮೊದಲಾದ ಎಲ್ಲ-ಇಂದ್ರಿಯಗಳಿದ್ದ ಮಾತ್ರಕ್ಕೆ ಜೀವವುಂಟು (ಬದುಕಿರುತ್ತಾನೆ) ಎಂಬ ಅನ್ವಯ-ವ್ಯಾಪ್ತಿಯಾಗಲಿ ಇತರ ದೇವತೆಗಳಿಗೆ ಹೊಂದುವುದಿಲ್ಲ. ಇದರಿಂದ ಪ್ರಾಣ-ದೇವರೇ ಎಲ್ಲರಿಗಿಂತ ಉತ್ತಮರೆಂಬುದು ಸಿದ್ಧವಾಗುತ್ತದೆ.

ಈ ವಿಚಾರವನ್ನು ಐತರೇಯೋಪನಿಷತ್ತಿನಲ್ಲಿ (೨ನೇ ಆರಣ್ಯಕ, ೧ನೇ ಅಧ್ಯಾಯ, ೪ನೇ ಖಂಡದಲ್ಲಿ) ಹೇಳಿದ ಆಖ್ಯಾಯಿಕೆಯಿಂದ ಸಮರ್ಥಿಸಿದ್ದಾರೆ. ಆದಕಾರಣ ಕೆಳಗೆ ಆ ಆಖ್ಯಾಯಿಕೆಯನ್ನೇ ಹೇಳುವೆನು.

363. ಐತರೇಯೋಪನಿಷತ್ತಿನಲ್ಲಿ ಹೇಳಿದ ಆಖ್ಯಾಯಿಕೆ— ಕಣ್ಣು-ಕಿವಿ-ಮೂಗು ಮೊದಲಾದ ಸಕಲೇಂದ್ರಿಯಾಭಿಮಾನಿಗಳೂ ಶಿರಸ್ಸಿನಲ್ಲಿ ನೆಲೆಸಿದರು. ಆದ್ದರಿಂದಲೇ ಶಿರಸ್ಸಿಗೆ ಆ ಹೆಸರು (ಶಿರಃ-ಆಶ್ರಯಸ್ಥಾನ ಎಂಬ ಹೆಸರು) ಬಂತು. ಅಲ್ಲಿ ನೆಲೆಸಿದ್ದ ಸಕಲ ಇಂದ್ರಿಯಾಭಿಮಾನಿಗಳೂ ಸ್ವಲ್ಪ ಹೊತ್ತಿನಲ್ಲೇ 'ನಾನು ಶ್ರೇಷ್ಠ, ನಾನು ಶ್ರೇಷ್ಠ' ಎಂದು ಜಗಳವಾಡಿ-ಕೊಂಡರು (ತಾ ಅಹಿಂಸಂತಾऽಹಮುಕ್ಥಮಸ್ಮ್ಯಹಮುಕ್ಥಮಸ್ಮೀತಿ। ಉಕ್ಥ-ಶ್ರೇಷ್ಠ). ಆಗ ಅವರವರೇ ಮಾತಾಡಿಕೊಂಡು 'ಈ ಶರೀರದಿಂದ ನಾವು ಒಬ್ಬೊ-ಬ್ಬರಾಗಿ ಹೊರಗೆ ಹೋಗೋಣ ಯಾರು ಹೋದಕೂಡಲೇ ಈ ಶರೀರವು ಬಿದ್ದು-ಹೋಗುವುದೋ ಅವರೇ ಶ್ರೇಷ್ಠರೆಂದು ನಿರ್ಣಯಿಸೋಣ' ಎಂದು ನಿಶ್ಚಯಿಸಿ-ಕೊಂಡರು. ಅದರಂತೆ ಒಬ್ಬೊಬ್ಬರಾಗಿ ಆ ಶರೀರದಿಂದ ಹೊರಗೆ ಹೋಗ-ಲಾರಂಭಿಸಿದರು—ಮೊದಲು ವಾಗಭಿಮಾನಿಯಾದ ಅಗ್ನಿಯು ಹೊರಟು-ಹೋದನು. ಅದರಿಂದ ದೇಹವು ಮೂಕನಾಗಿಹೋಯಿತು; ಆದರೆ ಮಾತಾಡದಿದ್ದರೂ ತಿನ್ನುತ್ತಾ ನೋಡುತ್ತಾ ಕುಡಿಯುತ್ತಾ ದೇಹವು ಮಾತ್ರ ಇದ್ದೇ ಇತ್ತು. (ವಾಗುದಕ್ರಾಮತ್, ಅವದನ್ ಅಶ್ನನ್ ಪಿಬನ್ನಾಸ್ತೈವ) ಅನಂತರ ಚಕ್ಷುರಭಿಮಾನಿಯಾದ ಸೂರ್ಯನು ಹೊರಟುಹೋದನು. ಆಗ ದೇಹಕ್ಕೆ ಕಣ್ಣು ಕಾಣಿಸದಂತಾಯಿತು. ಆದರೇನು? ಕಣ್ಣು ಕಾಣಿಸದಿದ್ದರೂ ತಿನ್ನುತ್ತಾ ಕುಡಿಯುತ್ತಾ ಇದ್ದೇ ಇತ್ತು. (ಚಕ್ಷುರುದಕ್ರಾಮತ್-ಅಶ್ನನ್ ಪಿಬನ್ನಾಸ್ತೈವ). ಅನಂತರ ಶ್ರೋತ್ರಾಭಿ-(ಕಿವಿಗೆ ಅಭಿ)-ಮಾನಿಗಳಾದ ದಿಗ್ದೇವತೆಗಳು ಹೊರಹೊರಟರು. ಆದರಿಂದ ಕಿವಿ ಕೇಳಿಸದಂತಾ ಯಿತಾದರೂ ತಿನ್ನುತ್ತಾ ಕುಡಿಯುತ್ತಾ ಇದ್ದೇ ಇತ್ತು. ಆ ಬಳಿಕ ಮನೋಭಿ-ಮಾನಿಯಾದ ಚಂದ್ರನು ಹೊರಟುಬಿಟ್ಟನು. ಆಗ ದೇಹವು ಮಂಕು-ಬಡಿದಂತಾದರೂ (ಮೀಲಿತ ಇವ) ತಿನ್ನುತ್ತಾ ಕುಡಿಯುತ್ತಾ ಇದ್ದೇ ಇತ್ತು. ಹೀಗೆ ಮಿಕ್ಕ ಎಲ್ಲ ಇಂದ್ರಿಯಾಭಿಮಾನಿಗಳೂ ದೇಹದಿಂದ ಹೊರಟುಹೋದರೂ ದೇಹವು ಹಾಗೆಯೇ ಬಿದ್ದಿತ್ತು. ಕೊನೆಗೆ ಮುಖ್ಯಪ್ರಾಣನು ಆ ದೇಹದಿಂದ ಹೊರಹೊರಟನು. ಅವನು ಹೊರಡುವುದೇ ತಡ, ದೇಹವು ತೊಪ್ಪನೆ ಕುಸಿದು ಬಿದ್ದಿತಲ್ಲದೆ ಕಟ್ಟಿಗೆಯಂತಾಗಿ ಶಿಥಿಲವಾಗಿಹೋಯಿತು (ಅಶೀರ್ಯತ). ಪ್ರಾಣನು ಹೋದಕೂಡಲೇ ದೇಹವು ಕಟ್ಟಿಗೆಯಂತಾಗಿ ಶಿಥಿಲವಾದ. ಕಾರಣ

ಆದಕ್ಕೆ ಶರೀರ (ಶ್ಯಾ-ಶಿಥಿಲವಾಗು) ಎಂಬ ಹೆಸರು ಬಂತು (ಅಶಾರೀತಿ ತ; ತಚ್ಛರೀರಮಭವತ್). ಇದರಿಂದ ಮಿಕ್ಕ ದೇವತೆಗಳಿಗಿಂತ ಪ್ರಾಣನೇ ಶ್ರೇಷ್ಠ-ನೆಂಬುದು ಸಿದ್ಧವಾಯಿತು. ಆದರೂ ಪುನಃ ಅಗ್ನ್ಯಾದಿ ದೇವತೆಗಳು 'ನಾನು-ಶ್ರೇಷ್ಠ, ನಾನು ಶ್ರೇಷ್ಠ' ಎಂದು ಮನಸ್ತಾಪಮಾಡಿಕೊಂಡರು. ಈಗ ಮತ್ತೊಮ್ಮೆ ಮಾತಾಡಿಕೊಂಡು 'ಈಗ ಒಬ್ಬೊಬ್ಬರಾಗಿ ಈ ಶಿಥಿಲವಾದ ಶರೀರದೊಳಗೆ ಪ್ರವೇಶ ಮಾಡೋಣ. ಯಾರು ಪ್ರವೇಶ ಮಾಡಿದಾಗ ಶರೀರವು ಏಳುವುದೋ ಅವನೇ ಶ್ರೇಷ್ಠನೆಂಬುದರಲ್ಲಿ ಸಂದೇಹವಿಲ್ಲ' ಎಂದು ಪುನಃ ನಿರ್ಧರಿಸಿಕೊಂಡರು.

ಪುನಃಪರೀಕ್ಷೆ—ಅದರಂತೆ ಮೊದಲು ವಾಗಭಿಮಾನಿಯಾದ ಅಗ್ನಿಯು ಶಿಥಿಲವಾಗಿ ಬಿದ್ದಿದ್ದ ದೇಹದೊಳಗೆ ಪ್ರವೇಶಿಸಿದನು. ಆದರೂ ಆ ದೇಹ ಏಳಲಿಲ್ಲ—ಬಿದ್ದೇ ಇತ್ತು. ಚಕ್ಷುರಭಿಮಾನಿಯಾದ ಸೂರ್ಯ ಪ್ರವೇಶಿ-ಸಿದರೂ ಹಾಗೇ ಬಿದ್ದಿತ್ತು. ಕಿವಿಗೆ ಅಭಿಮಾನಿಗಳಾದ ದಿಗ್ದೇವತೆಗಳು ಪ್ರವೇಶಿಸಿದರೂ ಹಾಗೇ ಬಿದ್ದಿತ್ತು. ಮನೋಭಿಮಾನಿಯಾದ ಚಂದ್ರ ಪ್ರವೇಶಿಸಿದರೂ ಹಾಗೆಯೇ ಬಿದ್ದಿತ್ತು. ಹೀಗೆ ಎಲ್ಲಾ ಇಂದ್ರಿಯಾಭಿಮಾನಿ-ಗಳೂ ದೇಹವನ್ನು ಪ್ರವೇಶಿಸಿದರೂ ದೇಹ ಹಾಗೆಯೇ ಬಿದ್ದಿತ್ತು (ವಾಕ್ ಪ್ರಾವಿಶದಶಯುದೇವ, ಚಕ್ಷುಃ ಪ್ರಾವಿಶದಶಯುದೇವ,.... ಮನಃ ಪ್ರಾವಿಶದಶ-ಯುದೇವ ।)., ಕೊನೆಗೆ ಮುಖ್ಯಪ್ರಾಣನು ಪ್ರವೇಶಿಸಿದನು. ಒಡನೆಯೇ ಆ ದೇಹವು ಎದ್ದು ಕೂತಿತು—ಅದರ ಬಣ್ಣವೇ ವ್ಯತ್ಯಾಸವಾಗಿಹೋಯಿತು. ಇದರಿಂದ ಪ್ರಾಣನೇ 'ಉಕ್ಥ' ಅಥವಾ 'ಉತ್ಕೃಷ್ಟ'ವೆಂದು ಸಿದ್ಧವಾಯಿತು. ಆಗ ಎಲ್ಲಾ ದೇವತೆಗಳೂ ಆ ವಾಯುದೇವರಿಗೆ 'ಹೇ ವಾಯುದೇವರೇ, ನೀವೇ ಎಲ್ಲರಿಗಿಂತ ಶ್ರೇಷ್ಠರು. ನೀವು ನಮ್ಮೆಲ್ಲರ ಯಜಮಾನ (ಸ್ವಾಮಿ). ನಾವೆಲ್ಲರೂ ನಿಮ್ಮ ಭೃತ್ಯರು' (ತವ ವಯಂ ಸ್ಮಃ, ತ್ವಮಸ್ಮಾಕಮಸೀತಿ) ಎಂದು ಪ್ರಾರ್ಥಿಸಿಕೊಂಡರು. ಈ ಆಖ್ಯಾಯಿಕೆಯಿಂದ ೧) ಪ್ರಾಣನು ಎಲ್ಲರಿಗಿಂತ ಶ್ರೇಷ್ಠನೆಂದೂ, ೨) ಅವನಿದ್ದರೆ ಮಾತ್ರ ದೇಹವಿರುತ್ತದೆ, ಅವನಿಲ್ಲ ದಿದ್ದರೆ ದೇಹವು ನಿಶ್ಚೇತನವೆಂದೂ, ೩) ಈ ಮಹಿಮೆ ಮಿಕ್ಕ ಯಾವ ದೇವತೆಗೂ ಇಲ್ಲವೆಂಬುದೂ ಸಿದ್ಧವಾಗುತ್ತದೆ (ಈ ವಿಷಯವನ್ನೇ ಶ್ರೀಪಾದ-

ರಾಯರು 'ಮಧ್ವನಾಮ'ದಲ್ಲಿ 'ಕರಣಾಭಿಮಾನಿಗಳು ದೇಹವ ಬಿಡಲು....' ಎಂಬ ನುಡಿಯಲ್ಲಿ ಹೇಳಿದ್ದಾರೆ. ಖಂ. 34। ನೋಡಿ)

364. ಅನಾವೃತ್ತಿಗೆ ಅರ್ಥಾಂತರ– ಶ್ರೀವಾದಿರಾಜಸ್ವಾಮಿಗಳು 'ಅನಾವೃತ್ತಿರ್ದೇಹಿನಾಂ ದೇಹಪಾತೇ' ಎಂಬುದಕ್ಕೆ ಇನ್ನೊಂದು ರೀತಿಯಾಗಿಯೂ ಅರ್ಥ ಹೇಳಿದ್ದಾರೆ. ಅದೇನೆಂದರೆ—ದೇಹಿನಾಂ ದೇಹಪಾತೇ—ಪ್ರಾಣಿಗಳ ದೇಹವು ಬಿದ್ದುಹೋಗಲು ; (ಮುಖ್ಯಪ್ರಾಣನಿಗೆ ಮಾತ್ರ) ಅನಾವೃತ್ತಿಃ–ಮೃತದೇಹದಿಂದ ಹೊರಟು ತಮ್ಮ ಮೂಲರೂಪಕ್ಕೆ ಸೇರಿಕೊಳ್ಳುವ ಪ್ರಸಂಗವಿಲ್ಲ. ಅವರು ಜೀವನ ಜೊತೆಯಲ್ಲೇ ಬಿಂಬರೂಪಿ ಪರಮಾತ್ಮನ ಜೊತೆಯೇ ಇದ್ದು ಮುಂದಿನ ಜನ್ಮ ಬಂದಾಗ ಆ ದೇಹದಲ್ಲೂ ನೆಲಿಸುತ್ತಾರೆ. ಈ ಪ್ರಕಾರ ಬಿಂಬರೂಪಿ ಪರಮಾತ್ಮನಂತೆ ಪ್ರಾಣದೇವರೂ ಸಹ ಜೀವನ ಜೊತೆಯೇ ಇರುತ್ತಾರೆ, ಜೀವನನ್ನು ಬಿಟ್ಟು ಹೋಗುವುದಿಲ್ಲ. ಮಿಕ್ಕ ದೇವತೆಗಳೆಲ್ಲ—ಕಣ್ಣು-ಕಿವಿ-ಮೂಗು ಇತ್ಯಾದಿ ಇಂದ್ರಿಯಾಭಿಮಾನಿಗಳು ದೇಹವು ಬಿದ್ದುಹೋದಕೂಡಲೇ ತಮ್ಮ ತಮ್ಮ ಮೂಲರೂಪಕ್ಕೆ ಸೇರಿಕೊಳ್ಳುತ್ತಾರೆ– ಜೀವನ ಹಿಂದೆಯೇ ಹೋಗುವುದಿಲ್ಲ. ಈ ರೀತಿಯಿಂದಲೂ (ತಸ್ಮಾತ್) ವಾಯುದೇವರು ಮಿಕ್ಕ ಎಲ್ಲ ದೇವತೆಗಳಿಗಿಂತ ಶ್ರೇಷ್ಠ (ವಿಶಿಷ್ಟ) ರೆಂದು ಸಿದ್ಧವಾಗುತ್ತದೆ—ಎಂದು ಅರ್ಥ ಮಾಡಿದ್ದಾರೆ.

೨. ಅವತಾರತ್ರಯ

365. ಅವತಾರಿಕೆ—(ಲೇ) ವಾಯುದೇವರ ಮೂಲರೂಪದ ಮಹಿಮೆಯನ್ನು ಹೇಳಿದ ಬಳಿಕ ಅವರ ಅವತಾರತ್ರಯವನ್ನು ಪ್ರಸ್ತಾಪಿಸುತ್ತಾರೆ. ಈ ಶ್ಲೋಕವೂ ತಾತ್ಪರ್ಯನಿರ್ಣಯದ ಎರಡನೇ ಅಧ್ಯಾಯದಲ್ಲಿ ವಾಯುದೇವರ ವಿಚಾರಕ್ಕೆ ಪ್ರಾರಂಭದಲ್ಲಿ ೧೨ನೇ ಶ್ಲೋಕವಾಗಿ ಪಠಿತವಾಗಿದೆ. ಇದೂ ಯಾವುದೋ ಗ್ರಂಥದಿಂದ ತೆಗೆದ ಪ್ರಮಾಣವಾಕ್ಯವಿರಬೇಕು ; ಅಥವಾ ಮೋಕ್ಷಧರ್ಮದಲ್ಲೇ ಇರಬಹುದು. (ಛ) 'ವಾಯುರ್ಭೀಮೋ ಭೀಮನಾದಃ' ಎಂದು ಸ್ತುತಿಸಲ್ಪಟ್ಟ ಆ ವಾಯುದೇವರು

ಶ್ರೀಹರಿಗೆ ಪ್ರಥಮಾಂಗವಾಗಿ ಪ್ರಥಮ ಸಾಧನವಾಗಿದ್ದಾರೆ. ಇದು ಕೇವಲ ಮೂಲರೂಪದಲ್ಲಿ ಮಾತ್ರವಲ್ಲ, ಅವತಾರತ್ರಯದಲ್ಲೂ ಪ್ರಧಾನಾಂಗವಾಗಿ ಭಗವತ್ಕಾರ್ಯವನ್ನು ಸಾಧಿಸಿದ್ದಾರೆ ಎಂದು ಹೇಳುತ್ತಾರೆ.

ಪ್ರಥಮೋ ಹನುಮಾನ್ ನಾಮ
ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು
ಭಗವತ್ಕಾರ್ಯಸಾಧಕಃ ॥ ೨ ॥

(**ಅನ್ವಯಾರ್ಥ**)—ಪ್ರಥಮಃ-ಮೊದಲನೆಯ ಅವತಾರವು ; ಹನುಮಾನ್-ಹನುಮಂತ ಎಂದು ಪ್ರಸಿದ್ಧವಾದುದು. ದ್ವಿತೀಯಃ ಚ-ಎರಡನೆಯ ಅವತಾರವು ; ಭೀಮಃ ಏವ-ಭೀಮನೆಂಬುವುದು. ತೃತೀಯಃ ತು-ಮೂರನೆಯ ಅವತಾರವಾದರೋ; ಪೂರ್ಣಪ್ರಜ್ಞಃ-ಪೂರ್ಣಪ್ರಜ್ಞರೆಂಬುದು. (ಲೇ) ತು ಎಂಬುದು ಮೊದಲನೆಯ ಎರಡು ಅವತಾರಗಳು ಬಲಕಾರ್ಯಕ್ಕಾಗಿ ಮಾಡಿದವು; ಈ ಮೂರನೆಯ ಅವತಾರವಾದರೋ, ಅವೆರಡಕ್ಕೆ ವಿರುದ್ಧವಾಗಿ, ಜ್ಞಾನಕಾರ್ಯ ಸಾಧಿಸುವುದಕ್ಕಾಗಿ ಆಯಿತು ಎಂಬ 'ವಿಶೇಷ' (ವೈಶಿಷ್ಟ್ಯ) ವನ್ನು ಸೂಚಿಸುತ್ತದೆ. ಈ ಅವತಾರಗಳ ಪ್ರಯೋಜನವೇನು? ಅಥವಾ ಇವು ಏನು ಮಹತ್ಕಾರ್ಯ ಸಾಧಿಸಿದುವು? ಎಂದರೆ ಹೇಳುತ್ತಾರೆ—ಭಗ....ಧಕಃ—ಭಗವತ್-ಭಗವಂತನಾದ ಶ್ರೀಹರಿಯ, ಕಾರ್ಯ-ಕೆಲಸವನ್ನು (ಮೊದಲ ಎರಡು ಅವತಾರಗಳಲ್ಲಿ ಭೂಭಾರಹರಣರೂಪ ಬಲಕಾರ್ಯವನ್ನೂ, ಮೂರನೇ ಅವತಾರದಲ್ಲಿ ಜ್ಞಾನಕಾರ್ಯವನ್ನೂ), ಸಾಧಕಃ-ಸಾಧನೆಮಾಡಿಕೊಟ್ಟಿತು.

ತಾತ್ಪರ್ಯ—ಆ ವಾಯುದೇವರು ಭಗವಂತ ಶ್ರೀಹರಿಗೆ ಪ್ರಧಾನಾಂಗವಾಗಿ ಮೂಲರೂಪದಲ್ಲೂ ಶ್ರೀಹರಿಯ ಸಕಲಕಾರ್ಯಗಳನ್ನೂ ನಡೆಸಿಕೊಡುತ್ತಾರಲ್ಲದೆ ಭೂಮಿಯಲ್ಲಿ ರಾಮ-ಕೃಷ್ಣಾದಿರೂಪಗಳಿಂದ ಅವತಾರ ಮಾಡಿದಾಗಲೂ ತಾವೂ ಬೇರೆಬೇರೆ ರೂಪಗಳಿಂದ ಅವತಾರ ಮಾಡಿ ರಾಮ-ಕೃಷ್ಣಾದಿ ಶ್ರೀಹರಿಯ ರೂಪಗಳ ಕಾರ್ಯವನ್ನೂ ಸಾಧಿಸಿಕೊಡುತ್ತಾರೆ. ತ್ರೇತಾಯುಗದಲ್ಲಿ ಶ್ರೀಹರಿಯು ಶ್ರೀರಾಮನಾಗಿ ಅವತಾರಮಾಡಲು ವಾಯುದೇವರು ಹನುಮಂತನೆಂಬ ಹೆಸರಿನಿಂದ ವಾನರನಾಗಿ ಅವತಾರ

ಮಾಡಿ ಅವನ ಕಾರ್ಯವನ್ನು ನಡೆಯಿಸಿಕೊಟ್ಟರೆ, ದ್ವಾಪರಯುಗದಲ್ಲಿ ಶ್ರೀಹರಿಯು ಭೂಭಾರಹರಣಕ್ಕಾಗಿ ಶ್ರೀಕೃಷ್ಣನಾಗಿ ಅವತಾರ ಮಾಡಲು ವಾಯುವು ಭೀಮನಾಗಿ ಜನಿಸಿ ದೈತ್ಯಸಂಹಾರಕಾರ್ಯದಲ್ಲಿ ಅವನಿಗೆ ಬಲಗೈಯಾಗಿ ನೆರವಾದನು. ಕಲಿಯುಗದಲ್ಲಿ ಅನೇಕ ದೈತ್ಯರು ಅವತರಿಸಿ ಬ್ರಹ್ಮಸೂತ್ರಗಳಿಗೂ ಉಪನಿಷದಾದಿಗ್ರಂಥಗಳಿಗೂ ದುರ್ಭಾಷ್ಯಗಳನ್ನು ರಚಿಸಿ ಶ್ರೀಹರಿಯ ಅನಂತ ಕಲ್ಯಾಣಗುಣಗಳನ್ನೇ ಮುಚ್ಚಿಹಾಕಿದ್ದರಿಂದ ವಾಯುದೇವರು 'ಪೂರ್ಣಪ್ರಜ್ಞ'ರೆಂಬ ಹೆಸರಿನಿಂದ ಅವತಾರ ಮಾಡಿ ಗೀತಾಭಾಷ್ಯ, ಸೂತ್ರಭಾಷ್ಯಾದಿ ಗ್ರಂಥಗಳನ್ನು ರಚಿಸಿ, ಕಾಣಿಸದಂತೆ ಮರೆಯಾಗಿಹೋಗಿದ್ದ ಶ್ರೀವಿಷ್ಣುಸರ್ವೋತ್ತಮತ್ವಾದಿ ಅನಾದಿಪರಂಪರಾಪ್ರಾಪ್ತವಾದ ಶ್ರೀಮತ್-ವೈಷ್ಣವಸಿದ್ಧಾಂತವನ್ನು ಪ್ರಚಾರ ಮಾಡಿ ಉಜ್ವಲಗೊಳಿಸಿದರು. ಹೀಗೆ ಅವತಾರತ್ರಯದಲ್ಲೂ ವಾಯುದೇವರು ಭಗವತ್ಕಾರ್ಯವನ್ನೇ ಸಾಧಿಸಿಕೊಟ್ಟರು.

ಈ ಮೂರು ಅವತಾರಗಳ ಚರಿತ್ರೆಯೂ ಬಳಿತ್ಥಾಸೂಕ್ತದಲ್ಲಿ (ಖಂಡ 370-76) ಸಂಕ್ಷೇಪವಾಗಿ ಬಂದಿದೆ. ಈ ಅವತಾರತ್ರಯದ ಸ್ಮರಣೆಯೇ ಮಹಾಫಲಪ್ರದವೆಂಬುದನ್ನು ಉಪನಿಷದ್ಭಾಷ್ಯಗಳಲ್ಲಿ ಉದಾಹೃತವಾದ ಈ ಸ್ಮೃತಿವಾಕ್ಯ ಹೇಳುತ್ತದೆ.—

ಇತಿ ಸೂಕ್ತಗತಂ ರೂಪತ್ರಯಮೇತನ್ಮಹಾತ್ಮನಃ |
ಯೋ ವೇದ ವೇದವಿತ್ ಸ ಸ್ಯಾತ್ ತತ್ತ್ವವಿತ್ ತತ್ಪ್ರಸಾದತಃ ||

(ಅರ್ಥ) ಬಳಿತ್ಥಾಸೂಕ್ತದಲ್ಲಿ ಹೇಳಿದ ಮಹಾತ್ಮರಾದ ವಾಯುದೇವರ ಈ ರೂಪತ್ರಯವನ್ನು ಯಾರು ತಿಳಿದುಕೊಳ್ಳುತ್ತಾರೋ (ಮತ್ತು ಅವುಗಳನ್ನು ಧ್ಯಾನಿಸುತ್ತಾರೋ) ಅವರು ಆ ವಾಯುದೇವರ ಅನುಗ್ರಹದಿಂದ ವೇದಶಾಸ್ತ್ರಜ್ಞರೂ ತತ್ತ್ವರಹಸ್ಯವನ್ನು ಬಲ್ಲವರೂ ಆಗುತ್ತಾರೆ.

೪. ಸದ್ವೈಷ್ಣವಾಭಿಲಾಷೆ

366. ಅವತಾರಿಕೆ (ಲೇ)ವಾಯುದೇವರು ಅವತಾರ ಮಾಡಲಿ; ಅದರಿಂದ ನಮಗೇನಾಗಬೇಕೆಂದರೆ ಜನ್ಮಜನ್ಮಾಂತರಗಳಲ್ಲೂ ಅವರೇ ನಮಗೆ

ಗುರುಗಳಾಗಲಿ ಎಂದು ಅಹೋರಾತ್ರಿಯೂ ಚಿಂತನೆಮಾಡುವುದೇ ಸಕಲ ವೈಷ್ಣವರ ಮುಖ್ಯಧ್ಯೇಯವಾಗಿರಬೇಕೆಂಬ ಉದ್ದೇಶದಿಂದ ಆ ಧ್ಯೇಯ-ವನ್ನೇ ಶ್ಲೋಕರೂಪವಾಗಿ ಪಠಿಸುತ್ತಾರೆ—'ಬ್ರಹ್ಮಾಂತಾಃ' ಎಂದು. ಈ ಶ್ಲೋಕವನ್ನು ಯಾರೋ ಮಹನೀಯರು ಹೇಳಿರಬೇಕು, ಅದನ್ನೇ ಇಲ್ಲಿ ಸಂಗ್ರಹಿಸಿದ್ದಾರೆ—

ಬ್ರಹ್ಮಾಂತಾ ಗುರವಃ ಸಾಕ್ಷಾತ್
ಇಷ್ಟಂ ದೈವಂ ಶ್ರಿಯಃಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ
ಸಂತು ಮೇ ಜನ್ಮಜನ್ಮನಿ ॥ ೩ ॥

(ಅನ್ವಯಾರ್ಥ)—ಬ್ರಹ್ಮಾಂತಾಃ-ನಮ್ಮ ಸಾಕ್ಷಾತ್ ಗುರುಗಳಿಂದ ಹಿಡಿದು ಬ್ರಹ್ಮದೇವರ ಪರ್ಯಂತ ಜ್ಞಾನವೃದ್ಧರೆಲ್ಲರೂ ; ಗುರವಃ-ನಮಗೆ ಗುರುಗಳು. ಶ್ರಿಯಃಪತಿಃ-ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನೇ ; ಸಾಕ್ಷಾತ್ ಇಷ್ಟಂ ದೈವಂ-ನೇರವಾಗಿ ಅತ್ಯಂತ ಇಷ್ಟನಾದ ದೇವತೆ. ಮೇ-ನನ್ನ ; ಜನ್ಮಜನ್ಮನಿ-ಜನ್ಮಜನ್ಮಾಂತರಗಳಲ್ಲೂ ; ಶ್ರೀಮದಾಚಾರ್ಯಾಃ-ಶ್ರೀಮನ್ಮಧ್ವಾಚಾರ್ಯರೇ ; ಆಚಾರ್ಯಾಃ ಸಂತು-ಪರಂಪರಾಪ್ರಾಪ್ತವಾದ ಸನ್ಮಾರ್ಗವನ್ನು ತೋರಿಸತಕ್ಕ ಗುರುಗಳೆಂಬ ಮಾರ್ಗದರ್ಶಕರಾಗಲಿ.

ತಾತ್ಪರ್ಯ—ನನಗೆ ಜನ್ಮಜನ್ಮಾಂತರಗಳಲ್ಲೂ ವೈಷ್ಣವಜನ್ಮವೇ ದೊರಕಲಿ. ನನ್ನ ವಿದ್ಯಾಗುರುಗಳಿಂದ ಆರಂಭಿಸಿ ಸತ್ಸಂಪ್ರದಾಯಪ್ರವರ್ತಕ-ರಾದ ಸಕಲರೂ ನನಗೆ ಗುರುಗಳಾಗಲಿ; ಎಲ್ಲರಿಗಿಂತ ಹಿರಿಯರಾದ ಬ್ರಹ್ಮ-ದೇವರು ಮುಖ್ಯಗುರುಗಳಾಗಲಿ. ಅವರಂತೆಯೇ ನಮಗೆ ಪ್ರತ್ಯಕ್ಷವಾಗಿ ಪ್ರಾಣರೂಪದಿಂದ ಕಾಣುವ ಪ್ರಾಣದೇವರೇ ಮುಖ್ಯಗುರುಗಳು ; ಅವರೇ ಭಾವಿಬ್ರಹ್ಮರು. ಲಕ್ಷ್ಮೀಪತಿಯಾದ ಶ್ರೀಹರಿಯೇ ನಮಗೆ ಸಾಕ್ಷಾತ್ ಇಷ್ಟ-ದೇವತೆಯಾಗಲಿ. ವೈಷ್ಣವಸಿದ್ಧಾಂತಪ್ರತಿಷ್ಠಾಪಕರಾದ ಶ್ರೀಮದಾಚಾರ್ಯರೇ (ಮಧ್ವಾಚಾರ್ಯರೇ) ನಮಗೆ ಧರ್ಮಮಾರ್ಗಪ್ರದರ್ಶಕರಾಗಲಿ— ಎಂದು ಸದಾ ನಾವೆಲ್ಲರೂ ಚಿಂತಿಸುತ್ತಿರಬೇಕು.

ವಿಶೇಷ ಕ)—ಶ್ರೀಕೃಷ್ಣ ಭಗವದ್ಗೀತೆಯಲ್ಲಿ* 'ನೀನು ಯಾವ ವಿಚಾರವನ್ನು ನೆನೆಸುತ್ತಾ ಮರಣಿಸುವಿಯೋ ಆ ರೀತಿಯಾಗಿಯೇ ಪುನಃ ಹುಟ್ಟುವಿ' ಎಂದು ಹೇಳಿರುವುದರಿಂದ ನಮಗೆ ಮರಣಕಾಲದಲ್ಲಿ ಈ ಶ್ಲೋಕ ನೆನಪಿಗೆ ಬಂದರೆ ನಾವು ಪುನಃ ವೈಷ್ಣವರಾಗಿಯೇ ಹುಟ್ಟುತ್ತೇವೆ ; ಇದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಮರಣಕಾಲದಲ್ಲಿ ನೆನಪು ಬರಬೇಕಾದರೆ ಸದಾ ಇದನ್ನೇ ನಾವು ನೆನೆಯುತ್ತಿರಬೇಕೆಂಬ ಉದ್ದೇಶದಿಂದ ಇದನ್ನು ಹೇಳಿದ್ದಾರೆ.

ಖ) ಬ್ರಹ್ಮಾಂತಾ ಗುರವಃ—ಎಂಬಲ್ಲಿ 'ಬ್ರಹ್ಮ' ಶಬ್ದಕ್ಕೆ ಅನೇಕಾರ್ಥಗಳಿವೆ. ಅದನ್ನು ಮಂತ್ರಾಲಯದ ರಾಯರು ತೈತ್ತಿರೀಯ ಖಂಡಾರ್ಥದ ಶಾಂತಿಪಾಠದಲ್ಲಿ ತೋರಿಸಿಕೊಟ್ಟಿದ್ದಾರೆ. 'ನಮಸ್ತೇ ವಾಯೋ! ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ' ಎಂದು ಹೇಳಿರುವುದರಿಂದ ಬ್ರಹ್ಮಶಬ್ದದಿಂದ ಚತುರ್ಮುಖಬ್ರಹ್ಮನ್ನಲ್ಲದೆ ವಾಯುದೇವರನ್ನೂ ಗ್ರಹಣಮಾಡಬೇಕು. ಬ್ರಹ್ಮದೇವರು ಹೇಗೆ ಜ್ಞಾನಭಕ್ತ್ಯಾದಿ ಸಕಲಸಾಧನಸಂಪೂರ್ಣರೋ ಹಾಗೆ ವಾಯುದೇವರೂ ಸಾಧನಸಂ ಪೂರ್ಣರಾದ್ದರಿಂದ ಅವರಿಗೆ 'ಬ್ರಹ್ಮ' ಎಂಬ ಹೆಸರು ಕೂಡುತ್ತದೆ. ಚತುರ್ಮುಖಬ್ರಹ್ಮರು ನಮಗೆ ಪ್ರತ್ಯಕ್ಷ ಕಾಣಿಸುವುದಿಲ್ಲ ವಾಯುದೇವರಾದರೋ ಶ್ವಾಸರೂಪದಿಂದ 'ಸಾಕ್ಷಾತ್' (ಪ್ರತ್ಯಕ್ಷವಾಗಿ) ಕಾಣಿಸುತ್ತಾರೆ. ಆದ್ದರಿಂದ ಅವರು 'ಸಾಕ್ಷಾತ್ ಗುರವಃ' ಆಗುತ್ತಾರೆ.

ıı) ಬೃಹದಾರಣ್ಯಕೋಪನಿಷತ್ತಿನಲ್ಲಿ (೩ ಅಧ್ಯಾ. ೩ ಬ್ರಾ. ೨೧ ಖಂ.) 'ವಾಗ್ವೈ ಬ್ರಹ್ಮ' ಎಂದು ಹೇಳಿದೆ ; ಸರಸ್ವತೀ-ಭಾರತಿಯರು (ವಾಕ್) ವೇದಾಭಿಮಾನಿಗಳಾದ್ದರಿಂದ ಅವರಿಗೆ ಬ್ರಹ್ಮ ಎಂಬ ಹೆಸರಿದೆ. ಅದರಂತೆ 'ಬ್ರಹ್ಮಾಂತಾಃ' ಎಂದರೆ ಭಾರತೀ-ಸರಸ್ವತಿಯರೂ ಅವರ ಪತಿಗಳಾದ ವಾಯು-ಬ್ರಹ್ಮರೂ ಕೊನೆಯಾಗಿ ಉಳ್ಳ ಎಂದೂ ಅರ್ಥವಾಗುತ್ತದೆ. ಇದರಂತೆ ವೇದಾಭಿಮಾನಿಯಾದ್ದರಿಂದ ಲಕ್ಷ್ಮೀದೇವಿಗೂ ಬ್ರಹ್ಮ ಎಂಬ ಹೆಸರು ಅನ್ವಯಿಸೇ ಅನ್ವಯಿಸುತ್ತದೆ. ನಾರಾಯಣನಿಗೆ ಅನ್ವಯಿಸುವುದೆಂದು ಹೇಳುವುದೇನಿದೆ ? ಹೀಗೆ 'ಬ್ರಹ್ಮಾಂತಾಃ' ಎಂಬುದಕ್ಕೆ ಸರಸ್ವತೀ-

* ಯಂ ಯಂ ವಾಪಿ ಸ್ಮರನ್ ಭಾವಂ ಇತ್ಯಾದಿ (ಅಧ್ಯಾ. ೮, ಶ್ಲೋ. ೬)

ಭಾರತಿಯರು, ಬ್ರಹ್ಮ-ವಾಯುಗಳು, ಲಕ್ಷ್ಮೀ-ನಾರಾಯಣರು' ಇವರವರೆಗೆ ಇರುವವರೆಲ್ಲ ಹಿರಿಯರೂ ಗುರುಗಳೆಂದು ಅರ್ಥವಾಯಿತು. ಮೇಲೆ ಹೇಳಿದ ಆರು ಜನರಿಗೂ 'ಮೂಲಗುರು'ಗಳೆಂಧು ಹೆಸರೆಂದು ಪಂಚರಾತ್ರದಲ್ಲಿ ಹೇಳಿದೆ (ಖಂಡ 191 ನೋಡಿ). ಇವರೆಲ್ಲರೂ 'ಸಾಕ್ಷಾತ್ ಗುರು'ಗಳು—ರುದ್ರಾದಿಗಳಿಗೂ ಸಹ ಗುರುಗಳೆಂದು ಭಾವ.

iii) ತಂತ್ರಸಾರದಲ್ಲಿ (೪ ಅಧ್ಯಾ. ೭೯-೮೧ ಶ್ಲೋ.) 'ಇಷ್ಟಂ ದೈವಂ ಹರಿಃ ಸಾಕ್ಷಾ-ಲ್ಲಕ್ಷ್ಮೀರ್ಭಾಗ್ಯಸ್ಯ ದೇವತಾ| ಗುರುರ್ಬ್ರಹ್ಮಾಥ ವಾಯುರ್ವಾ ವಿದ್ಯಾದೇವ್ಯೌ ಪ್ರಕೀರ್ತಿತೇ || ತಸ್ಮಾದೇತೇ ಪ್ರಿಯಾ ವಿಷ್ಣೋ—ರಂತರಂಗತಯಾ ಸದಾ | ಜ್ಞೇಯಾಶ್ಚೈವ ಪ್ರಪೂಜ್ಯಾಶ್ಚ ವಿಷ್ಣೋಃ ಪ್ರೀತಿಮಭೀಪ್ಸತಾ ||' ಎಂದು ಹೇಳಿದಂತೆ 'ಶ್ರೀಹರಿಯು ಸಾಕ್ಷಾತ್ ಇಷ್ಟದೇವತೆ, ಲಕ್ಷ್ಮೀದೇವಿ ಭಾಗ್ಯದೇವತೆ. ಬ್ರಹ್ಮ-ವಾಯುಗಳು ಮೂಲಗುರುಗಳು. ಸರಸ್ವತೀ-ಭಾರತಿಯರು ವಿದ್ಯಾಭಿಮಾನಿದೇವತೆಗಳು. ಆದ್ದರಿಂದ ಇವರೆಲ್ಲರೂ ವಿಷ್ಣುವಿಗೆ ಅಂತರಂಗಭಕ್ತರೂ ಅತ್ಯಂತ ಪ್ರಿಯರೂ ಆಗಿದ್ದಾರೆ. ಆದಕಾರಣ ಶ್ರೀವಿಷ್ಣುವಿನ ಅನುಗ್ರಹವನ್ನು ಅಪೇಕ್ಷಿಸುವವರೆಲ್ಲರೂ ಇವಿಷ್ಟುಮಂದಿಯನ್ನೂ ಅರಿತುಕೊಂಡು ಅವರನ್ನು ಪೂಜಿಸಲೂ ಬೇಕು' ಎಂದು ಹೇಳಿರುವುದನ್ನು ಇಲ್ಲಿ ನೆನೆಸಿಕೊಳ್ಳಬೇಕು.

೪. ನಾನ್ಯೋ ಹನುಮತ್ಸಮಾನಃ

367. ಅವತಾರಿಕೆ—(ಲೇ.) ವಾಯುದೇವರ ಜೀವೋತ್ತಮತ್ವವನ್ನು ಹನುಮದುತ್ಕರ್ಷದಿಂದ ಸ್ಥಾಪಿಸುವುದಕ್ಕಾಗಿ ಸ್ಮೃತಿಪ್ರಮಾಣವನ್ನು ಉದಹರಿಸುತ್ತಾರೆ—ಜ್ಞಾನೇ ವಿರಾಗೇ ಇತ್ಯಾದಿ. ಈ ಶ್ಲೋಕವನ್ನೂ ತಾತ್ಪರ್ಯನಿರ್ಣಯದ ದ್ವಿತೀಯಾಧ್ಯಾಯದಲ್ಲಿ (ಶ್ಲೋ. ೧೫೫) ಉದಹರಿಸಿದ್ದಾರೆ.

ಜ್ಞಾನೇ ವಿರಾಗೇ ಹರಿಭಕ್ತಿಭಾವೇ
ಧೃತಿಸ್ಥಿತಿಪ್ರಾಣಬಲೇಷು ಯೋಗೇ |

ಬುದ್ಧೌ ಚ ನಾನ್ಯೋ ಹನುಮತ್ಸಮಾನಃ
ಪುಮಾನ್ ಕದಾಚಿತ್ ಕ್ವಚ ಕಶ್ಚ ನೈವ ॥ ೪ ॥

ಇದು ೧೧ ಅಕ್ಷರದ ತ್ರಿಷ್ಟುಪ್ ಛಂದಸ್ಸು. ಉಪಜಾತಿ ವೃತ್ತ.

(ಛ. ರೀತ್ಯಾ ಅನ್ವಯಾರ್ಥ)(ಲೇ) ಜ್ಞಾನೇ ವಿರಾಗೇ ಮೊದಲಾದ ಎಲ್ಲ ಕಡೆಯೂ ವಿಷಯಸಪ್ತಮೀ. ಜ್ಞಾನವಿಷಯದಲ್ಲೂ ವೈರಾಗ್ಯವಿಷಯದಲ್ಲೂ ಇತ್ಯಾದಿ ಅರ್ಥ ಹೇಳಬೇಕು. (ಛ) ಜ್ಞಾನೇ-ಹೆಚ್ಚಿನ ಜ್ಞಾನದ ವಿಷಯದಲ್ಲಿ ; ವಿರಾಗೇ–ವೈರಾಗ್ಯದಲ್ಲೂ ; ಹರಿಭಕ್ತಿಭಾವೇ–ಹರಿಭಕ್ತಿಯ ದಾರ್ಢ್ಯದ ವಿಷಯದಲ್ಲೂ; ಧೃತಿ....ಬಲೇಷು—ಧೃತಿ–ಧೈರ್ಯದಲ್ಲೂ, ಸ್ಥಿತಿ—ವಿಕಾರಹೊಂದದೇ ಒಂದೇ ರೀತಿ ಇರುವಿಕೆಯಲ್ಲೂ, ಪ್ರಾಣ–ಅಡ್ಡಾಡುವ ಶಕ್ತಿಯಲ್ಲೂ (ಅನ ಚೇಷ್ಟಾಯಾಂ ಧಾತು. ಸಮುದ್ರ ಲಂಘಿಸುವುದು, ರಾಕ್ಷಸರನ್ನು ಧ್ವಂಸಮಾಡುವುದೇ ಮೊದಲಾದ ವ್ಯಾಪಾರಗಳಲ್ಲೂ ಎಂದರ್ಥ), ಬಲೇಷು–ಬಲದಲ್ಲಿಯೂ ; ಯೋಗೇ–(ಛ.) ಉಪಾಯದಲ್ಲೂ (ಲೇ.) 'ಯೋಗಃ ಸನ್ನಹನೋಪಾಯ–ಧ್ಯಾನ–ಸಂಗತಿ–ಯುಕ್ತಿಷು' ಎಂದು ಅಮರವಿರುವುದರಿಂದ ಯುದ್ಧಸನ್ನಾಹದಲ್ಲೂ, ಧ್ಯಾನದಲ್ಲೂ, ಭಕ್ತ್ಯಾದಿಯೋಗದಲ್ಲೂ ; ಬುದ್ಧೌ ಚ ಬುದ್ಧಿಶಕ್ತಿಯಲ್ಲೂ (ಬುದ್ಧಿ ಚಾತುರ್ಯದಲ್ಲೂ) (ಛ.) 'ಇತ್ಯಾದಿ ನಾನಾಗುಣವಿಷಯೇ'–ಇವೇ ಮೊದಲಾದ ವಿವಿಧಗುಣಗಳ ವಿಷಯದಲ್ಲಿ; ಹನುಮತ್ಸಮಾನಃ ಪುಮಾನ್–ಹನುಮಂತನಿಗೆ ಸರಿಸಮಾನನಾದ ಮನುಷ್ಯನು; ನ ಅನ್ಯಃ–ಬೇರೆ ಯಾರೂ ಇಲ್ಲ. ಕದಾಚಿತ್–ಯಾವ ಕಾಲದಲ್ಲೂ, ಕ್ವ ಚ–ಎಲ್ಲೂ (ಯಾವ ಲೋಕದಲ್ಲೂ); ಕಶ್ಚ–ಯಾವನೊಬ್ಬನೂ, ನೈವ–ಇಲ್ಲವೇ ಇಲ್ಲ.

ಭಾವಾರ್ಥ—ಅಪಾರವಾದ ಜ್ಞಾನಭಂಡಾರದಲ್ಲಾಗಲಿ, ವಿರಕ್ತಿಯಲ್ಲಾಗಲಿ, ನಿಶ್ಚಲವಾದ ನಿರ್ವ್ಯಾಜವಾದ ಏಕಾಂತ ಭಕ್ತಿಯಲ್ಲಾಗಲಿ, ಧೈರ್ಯ–ಸ್ಥೈರ್ಯ, ಸಾಹಸ–ಬಲ–ಹುಮ್ಮಸ್ಸು (ಉತ್ಸಾಹ) ಮೊದಲಾದ ಗುಣಗಳಲ್ಲಾಗಲಿ ಯುದ್ಧಸನ್ನಾಹ ಭಕ್ತಿಯೋಗ-ಧ್ಯಾನಯೋಗಗಳಲ್ಲಾಗಲಿ ತೀಕ್ಷ್ಣಬುದ್ಧಿಯಲ್ಲಾಗಲಿ ಯಾವ ಗುಣ ತೆಗೆದುಕೊಂಡರೂ ಹನುಮಂತನಿಗೆ ಸಮಾನನಾದ ವೀರಾಗ್ರೇಸರನು ಯಾವ ಕಾಲಕ್ಕೂ ಯಾವ ಲೋಕದಲ್ಲೂ

ಸಿಗುವುದು ಸರ್ವಥಾ ಅಸಾಧ್ಯ. ಹೀಗೆ ವಾಯುಕುಮಾರನೆಂದು ಪ್ರಸಿದ್ಧ-ನಾದ ಹನುಮಂತನ ಮಹಿಮೆಯೇ ಹೀಗಿರುವಾಗ ಇನ್ನು ಮೂಲರೂಪಿ-ಮುಖ್ಯಪ್ರಾಣನ ಮಹಿಮೆಯನ್ನು ಹೇಳತಕ್ಕದೇನಿದೆ ಎಂದು ಭಾವ.

೫. ಭೀಮಮಹಿಮೋತ್ಕರ್ಷ

368. ಅವತಾರಿಕೆ—(ಲೇ.) ಹನುಮಂತನ ಮಹಿಮೆಯನ್ನು ಹೇಳಿದ ಬಳಿಕ ಭೀಮಾವತಾರದ ಮಹಿಮಾದ್ಯೋತಕ ಶ್ಲೋಕವನ್ನೂ ಹೇಳುತ್ತಾರೆ—'ವಾತೇನ ಕುಂತ್ಯಾಂ' ಇತ್ಯಾದಿ. ಈ ಶ್ಲೋಕವು ಮಹಾ-ಭಾರತದ ವನಪರ್ವದಲ್ಲಿ ಸೌಗಂಧಿಕಾಹರಣಪ್ರಸಂಗದಲ್ಲಿ (೫೫ನೇ ಅಧ್ಯಾಯದ ೨೦ನೇ ಶ್ಲೋಕವಾಗಿ ಪಠಿತವಾಗಿದೆ. ಇದನ್ನೇ ಶ್ರೀಮದಾಚಾರ್ಯರೂ ಆ ಸೌಗಂಧಿಕಾಹರಣಪ್ರಸಂಗದಲ್ಲೇ ತಾತ್ಪರ್ಯನಿರ್ಣಯದ ೨೨ನೇ ಅಧ್ಯಾಯ-ದಲ್ಲಿ (ಶ್ಲೋ. ೩೦೫) ಉದಹರಿಸಿದ್ದಾರೆ.

ವಾತೇನ ಕುಂತ್ಯಾಂ ಬಲವಾನ್ ಸ (ಸು-ಪ್ರ) ಜಾತಃ
ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ
ಪರಾಕ್ರಮೇ ಶತ್ರುಭಿರಪ್ರಧೃಷ್ಯಃ ॥ ೫ ॥

ಈ ಶ್ಲೋಕವೂ ಉಪಜಾತಿವೃತ್ತದಲ್ಲಿದೆ.

ಅನ್ವಯಾರ್ಥ (ಛ) ವಾತೇನ-ವಾಯುದೇವರಿಂದ ; ಕುಂತ್ಯಾಂ ಪಾಂಡುರಾಜನ ಪತ್ನಿಯಾದ ಕುಂತೀದೇವಿಯಲ್ಲಿ ; ಬಲವಾನ್—ಅಪರಿಮಿತ-ಬಲವುಳ್ಳವನಾಗಿ, ಸಃ—ಆ ಭೀಮನು ; ಸು(ಪ್ರ)ಜಾತಃ—ಹುಟ್ಟಿದನು. ಇವನು—ಶೂರಃ-ಶೂರಾಗ್ರಣಿಯೂ; ತಪಸ್ವೀ—ತಪೋನಿರತನೂ ; ದ್ವಿಷತಾಂ ನಿಹಂತಾ—ಬಕ-ಹಿಡಿಂಬ-ಜರಾಸಂಧಾದಿ ಸಕಲ ಶತ್ರುಗಳನ್ನೂ ಸಂಹಾರ-ಮಾಡಿದವನು. ಸತ್ಯೇ ಚ—ಸತ್ಯದಲ್ಲಿಯೂ (ವೇದೋಕ್ತ ಧರ್ಮಾಚರಣೆ-ಯಲ್ಲಿಯೂ), ಧರ್ಮೇ ಚ—ಪರಿಶುದ್ಧ ವಿಷ್ಣುಧರ್ಮದ ದೀಕ್ಷೆಯಲ್ಲೂ ; ಸದೈವ—ಯಾವಾಗಲೂ (ಒಂದು ಸರಿಯೂ ತಪ್ಪದಂತೆ); ನಿರತ—ಆಸಕ್ತನಾಗಿ-ದ್ದಾನೆ. ಪರಾಕ್ರಮೇ—ಬಾಹು ಪರಾಕ್ರಮದಲ್ಲಿ ; ಶತ್ರುಭಿಃ—ಶತ್ರುಗಳಿಂದ ; ಅಪ್ರಧೃಷ್ಯಃ—ಎದೆಗುಂದದವನು (ಎಳ್ಳಷ್ಟೂ ಅಂಜುವವನಲ್ಲ ಎಂದು ಭಾವ).

ವಿಶೇಷ—i) ಬಲವಾನ್ ಸ (ಸು-ಪ್ರ) ಜಾತಃ ಎಂದದ್ದರಿಂದ ಭಾರತದ ಒಂದು ಪ್ರಸಂಗವನ್ನು ಸೂಚಿಸಿದ್ದಾರೆ. ಭೀಮ ಇನ್ನೂ ಎಳೆ ಮಗುವಾಗಿದ್ದಾಗ ಕುಂತೀ ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿದ್ದಳು. ಆಗ ಇದ್ದಕ್ಕಿದ್ದಹಾಗೆ ಉಂಟಾದ ಸಿಂಹಗರ್ಜನೆಯನ್ನು ಕೇಳಿ ಕುಂತಿಯು ಬೆಚ್ಚಿದಳು. ಅದರಿಂದ ತೊಡೆಯ ಮೇಲಿದ್ದ ಮಗು ಭೀಮಸೇನ ನೆಲಕ್ಕೆ ಉರುಳಿಕೊಂಡನು. ಅವನು ಬಿದ್ದಿದ್ದರಿಂದ ಆ ಬೆಟ್ಟವೇ ಚೂರಾಗಿ ಹೋಯಿತು ; ಅದಕ್ಕೆ 'ಶತ-ಶೃಂಗ' ಎಂಬ ಹೆಸರು ಪ್ರಸಿದ್ಧಿಗೆ ಬಂತು. 'ಬಲವಾನ್' ಎಂದು ಹೇಳಿದ್ದರಿಂದ ಈ ಕಥೆ ಸೂಚಿತವಾಯಿತು. ಶ್ರೀಪಾದ-ರಾಯರು 'ಮಧ್ವನಾಮ'ದಲ್ಲೂ ಈ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ—

ಕರದಿಂದ ಶಿಶುಭಾವನಾದ ಭೀಮನ ಬಿಡಲು
ಗಿರಿಯೊಡೆದು ಶತಶೃಂಗವೆಂದೆನಿಸಿತು.
(ಶಿಶುಭಾವನಾದ-ಇನ್ನೂ ಎಳೆ ಮಗುವಾಗಿದ್ದ)

ii) **ಶೂರಃ** ಎಂಬ ಪದದಿಂದ ಭೀಮನ ಅಸಾಧಾರಣ ಪರಾಕ್ರಮವು ಸಂಗ್ರಹೀತವಾಗಿದೆ. ಇದರ ಸಾಕಷ್ಟು ವಿವರಣೆ ಖಂಡ 274ರಲ್ಲಿ ಬಂದಿದೆ. iii) **ದ್ವಿಷತಾಂ ನಿಹಂತಾ** ಎಂಬುದಕ್ಕೆ ಬಕಾಸರನ ವಧೆ (ಖಂಡ 257), ಕಿರ್ಮೀರನ ವಧೆ (ಖಂಡ 258) ಜರಾಸಂಧನ ವಧೆ (ಖಂಡ 266ಆ) ಮೊದಲಾದ ನಿದರ್ಶನಗಳನ್ನು ಕೊಡಬಹುದು. iv) **ಸತ್ಯೇ ಚ ಧರ್ಮೇ ಚ ರತಃ ಸದೈವ** ಎಂಬುದರ ವಿವರಣೆ ಖಂಡ 316 ಗ, ಘ, ಜ-ಗಳಲ್ಲಿ ಸಿಗುತ್ತದೆ. v) **ಪರಾಕ್ರಮೋ ಶತ್ರುಭಿರಪ್ರಧೃಷ್ಯಃ** ಎಂಬುದು ಖಂಡ 274, 257-8, 266ಗಳನ್ನು ಓದಿದರೆ ಮನದಟ್ಟಾಗುತ್ತದೆ.

ಶ್ಲೋಕದ ಭಾವಾರ್ಥ—ಭೀಮಸೇನನು ವಾಯುದೇವರಿಂದ ಕುಂತಿ-ಯಲ್ಲಿ ಮಗನಾಗಿ ಅವತರಿಸಿದನು. ಅವನು ಹುಟ್ಟುವಾಗಲೇ ಅಪರಿಮಿತ ಬಲವುಳ್ಳವನಾಗಿದ್ದನು. ಆದ್ದರಿಂದಲೇ ಅವನು ಎಳೆಮಗುವಾಗಿದ್ದಾಗ ತನ್ನ ತಾಯಿಯ ತೊಡೆಯಿಂದ ಜಾರಿ ಬಂಡೆಯ ಮೇಲೆ ಬಿದ್ದಾಗ ಆ ಬೆಟ್ಟವೇ ಒಡೆದುಹೋಯಿತೇ ವಿನಾ ಮಗುವಿಗೆ ಏನೂ ಪೆಟ್ಟಾಗಲಿಲ್ಲ. ದೊಡ್ಡವನಾದ ಮೇಲಂತೂ ಅವನು ನಾಗಾಯುತ (ಹತ್ತು ಸಾವಿರ ಆನೆಗಳ) ಬಲವುಳ್ಳವ-

ನಾಗಿದ್ದನೆಂಬುದು ಪ್ರಸಿದ್ಧವಾಗಿದೆ. ಅವನು ತಪೋನಿರತನೂ ಸಕಲ ಶತ್ರು-ಸಂಹಾರಕನೂ ಆಗಿದ್ದು ಲೋಕಕಂಟಕರಾಗಿದ್ದ ಬಕಾಸುರ, ಹಿಡಿಂಬ, ಕಿರ್ಮೀರ, ಕೀಚಕರು, ಜರಾಸಂಧಾದಿಗಳನ್ನೇ ಅಲ್ಲದೆ ಕೌರವರನ್ನೂ ಧ್ವಂಸ-ಮಾಡಿಬಿಟ್ಟನು. ಶುದ್ಧ ವೈಷ್ಣವಧರ್ಮದಲ್ಲಿ ನಿರತನಾಗಿದ್ದುದರಿಂದ ಮನಸ್ಸಿ-ನಲ್ಲಾಗಲಿ ಮಾತಿನಲ್ಲಾಗಲಿ ಶ್ರೀಹರಿಯನ್ನಲ್ಲದೆ ಬೇರೆ ಯಾರನ್ನೂ ನೆನೆಯು-ವುದೂ ಇಲ್ಲ—ಆಶ್ರಯಿಸುವುದು ಮೊದಲೇ ಇಲ್ಲ. ಶ್ರೀಪಾದರಾಯರು ಹೇಳಿದಂತೆ 'ಹರಿಯನಲ್ಲದೆ ಬಗೆಯನನ್ಯರನು ಲೋಕದೊಳು.' ಅಷ್ಟೇ ಅಲ್ಲ ; ಹರಿಗೆ ಅಪ್ರಿಯವಾದ ಒಂದು ಕಾರ್ಯವನ್ನೂ ಯಾವ ಕಾಲಕ್ಕೂ ಮನಸಾ ಸಹ ಮಾಡಿಯೂ ಇಲ್ಲ—ಚಿಂತಿಸಿಯೂ ಸಹ ಇಲ್ಲ. ಪರಾಕ್ರಮದಲ್ಲೋ ಯಾರಿಗೂ ಅಂಜದ ಧೀರಾಧಿಧೀರ. ಅವನ ಯುದ್ಧದ ವೈಖರಿಯೇ ಬೇರೆ—ಅವನ ಸಾಹಸದ ರೀತಿಯೇ ಬೇರೆ. ಅವನ ಮುಖ್ಯಾಯುಧ ಗದೆಯಾಗಿದ್ದರೂ ಅವನ ಬಾಹುಬಲವೇ ಅವನಿಗೆ ದೊಡ್ಡ ಬಲವಾಗಿತ್ತು. ಬಕಾಸುರ, ಹಿಡಿಂಬ, ಕಿರ್ಮೀರ, ಕೀಚಕ, ಜರಾಸಂಧ ಮೊದಲಾದ ಅನೇಕ ದೈತ್ಯರನ್ನು ತನ್ನ ಬಾಹುಬಲದಿಂದಲೇ ಗೆದ್ದನು. ಈ ಪ್ರಕಾರ ಭೀಮಸೇನನೂ ಅಸಾಧಾರಣ ಮಹಾ ಪರಾಕ್ರಮಿಯಾಗಿದ್ದನೆಂಬುದು ಸಿದ್ಧವಾಯಿತು.

೬. ಅವತಾರತ್ರಯದ ಸೇವೆ

369. ಅವತಾರಿಕೆ—(ಲೇ.) ಈಗ ಪ್ರಸ್ತುತವಾದ ಶ್ಲೋಕವು ಶ್ರೀಮದಾಚಾರ್ಯರ ಅನೇಕ ಗ್ರಂಥಗಳಲ್ಲಿ (ಅನುವ್ಯಾಖ್ಯಾನ, ನ್ಯಾಯ-ವಿವರಣ, ತಂತ್ರಸಾರ, ಕೃಷ್ಣಾಮೃತಮಹಾರ್ಣವ, ವಿಷ್ಣುತತ್ವನಿರ್ಣಯಃ, ಗೀತಾತಾತ್ಪರ್ಯ ಮತ್ತು ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯಗಳಲ್ಲಿ) ಹೀಗೆಯೇ ಪಠಿತವಾಗಿದೆ. ಕೆಲವು ಗ್ರಂಥಗಳಲ್ಲಿ ಇದರ ಕಡೆಯ ಚರಣದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸಮಾಡಿ ಹೇಳಿದ್ದಾರೆ (ಅದನ್ನೂ ಕೆಳಗೆ ವ್ಯಕ್ತಪಡಿಸಿ-ದ್ದೇವೆ). ಈ ಶ್ಲೋಕದ ಮಹತ್ವವೇನೆಂಬುದನ್ನು ಸಾಕ್ಷಾತ್ ಶ್ರೀಮಜ್ಜಯ-ತೀರ್ಥರೇ ಸುಧಾಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಆದಕಾರಣ ಅವರ ಮಾತನ್ನೇ ಹೇಳಿ ಅದರ ಅರ್ಥವನ್ನೂ ಹೇಳುವೆನು.

ಕ) ಶ್ರೀಮಜ್ಜಯತೀರ್ಥರ ಹೇಳಿಕೆ—ಶ್ರೀಮಟ್ಟೀಕಾಕೃತ್ಪಾದರು ಈ ಶ್ಲೋಕಕ್ಕೆ ಅವತಾರಿಕೆಯನ್ನು ಹೇಳುತ್ತಾ ಶ್ರೀಮನ್ನ್ಯಾಯಸುಧಾಗ್ರಂಥದಲ್ಲಿ ಹೀಗೆ ಹೇಳುತ್ತಾರೆ—ಯಥಾ ಭಗವತ್‌ಸ್ವರೂಪವಿಜ್ಞಾನಂ ಸಮಸ್ತಪುರುಷಾರ್ಥಸಾಧನಂ, ತಥಾ ಸ್ವಸ್ವರೂಪವಿಜ್ಞಾನಮಪೀತ್ಯತಃ ತದಾವಿಷ್ಕುರ್ವನ್ನಾಹ—ಯಸ್ಯೇತಿ ॥ (ಅರ್ಥ) ಭಗವಂತನ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳುವುದು ಹೇಗೆ ಸಮಸ್ತಪುರುಷಾರ್ಥ (ಧರ್ಮ-ಅರ್ಥ-ಕಾಮ-ಮೋಕ್ಷ)ಗಳನ್ನು ಪಡೆಯುವುದಕ್ಕೂ ಸಾಧನವಾಗಿದೆಯೋ ಹಾಗೆಯೇ ತಮ್ಮ (ಶ್ರೀಮದಾಚಾರ್ಯರ) ಸ್ವರೂಪವನ್ನು ಅರಿತುಕೊಳ್ಳುವುದೂ ಸಕಲ ಪುರುಷಾರ್ಥಗಳನ್ನು ಪಡೆಯುವುದಕ್ಕೂ ಸಾಧನವಾಗಿದೆಯಾದ್ದರಿಂದ ಆ ತಮ್ಮ ಸ್ವರೂಪವನ್ನು ಪ್ರಕಟಪಡಿಸುತ್ತಾ 'ಯಸ್ಯ ತ್ರೀಣಿ' ಎಂದು ಹೇಳುತ್ತಾರೆ.

ಖ) ಛಾಂದೋಗ್ಯ ಭಾಷ್ಯದಲ್ಲಿ ವೇದೇಶತೀರ್ಥರು ಹೀಗೆ ಹೇಳಿದ್ದಾರೆ—(ಕನ್ನಡಾನುವಾದ): ಶ್ರೀಮದಾಚಾರ್ಯರು ತಾವು ಮಾಡಿದ ಭಾಷ್ಯಕ್ಕೆ ಆಪ್ತಿಮೂಲತ್ವವನ್ನು ಸಮರ್ಥಿಸುವುದಕ್ಕಾಗಿ ಶ್ರುತಿಸಿದ್ಧವಾದ ತಮ್ಮ ಸ್ವರೂಪವನ್ನು 'ಯಸ್ಯ....' ಎಂಬ ಶ್ಲೋಕದಿಂದ ಹೇಳಿಕೊಂಡಿದ್ದಾರೆ. (ಬೃಹದ್ಭಾಷ್ಯದಲ್ಲಿ ಭಾವಬೋಧಕಾರರಾದ ಶ್ರೀ ರಘೂತ್ತಮಸ್ವಾಮಿಗಳೂ ತೈತ್ತಿರೀಯಭಾಷ್ಯಟೀಕೆಯಲ್ಲಿ ಶ್ರೀನಿವಾಸತೀರ್ಥರೂ ಪ್ರಾಯಶಃ ಹೀಗೆಯೇ ಹೇಳಿದ್ದಾರೆ.) ಐತರೇಯಭಾಷ್ಯಟೀಕೆಯಲ್ಲಿ ತಾಮ್ರಪರ್ಣೀಯರು ಹೀಗೆ ಹೇಳುತ್ತಾರೆ—(ಕನ್ನಡಾನುವಾದ) ತಮಗೆ ಆಪ್ತತ್ವವು ಸಿದ್ಧವಾದರೆ ತಮ್ಮ ಗ್ರಂಥಕ್ಕೆ ಪ್ರಾಮಾಣ್ಯ ಸಿದ್ಧಿಸುವುದೆಂದು ತಿಳಿದು, ತಮ್ಮ ಸ್ವರೂಪಜ್ಞಾನವೂ ಭಗವಂತನ ಜ್ಞಾನದಂತೆಯೇ ಮೋಕ್ಷಜ್ಞಾನಕ್ಕೆ ಅಂಗವಾದ್ದರಿಂದ ತಮ್ಮ ಸ್ವರೂಪವನ್ನು ನಿರೂಪಣೆ ಮಾಡುತ್ತಾ ಗ್ರಂಥವನ್ನು ಶ್ರೀಹರಿಯಲ್ಲಿ ಸಮರ್ಪಿಸುತ್ತಾರೆ—ಯಸ್ಯೇತಿ ॥

ಯಸ್ಯ ತ್ರೀಣ್ಯುದಿತಾನಿ ವೇದವಚನೇ,
　　　　ರೂಪಾಣಿ ದಿವ್ಯಾನ್ಯಲಂ
ಬಟ್ ತದ್ದರ್ಶತಮಿತ್ಥಮೇವ ನಿಹಿತಂ,
　　　　ದೇವಸ್ಯ ಭರ್ಗೋ ಮಹತ್ ।

ವಾಯೋಃ ರಾಮವಚೋನಯಂ ಪ್ರಥಮಕಂ,
ಪೃಕ್ಷೋ ದ್ವಿತೀಯಂ ವಪುರ್
ಮಧ್ವೋ ಯತ್ತು ತೃತೀಯಮೇತದಮುನಾ,
ಗ್ರಂಥಃ ಕೃತಃ ಕೇಶವೇ ‖ ೬ ‖

ಗ) ಛಂದಸ್ಸು-ವೃತ್ತ—ಈ ಶ್ಲೋಕದ ಪ್ರತಿಯೊಂದು ಪಾದದಲ್ಲೂ ೧೨+೭ ಹೀಗೆ ೧೯ ಅಕ್ಷರಗಳಿರುವುದರಿಂದ ಇದು ಅತಿಧೃತಿ ಛಂದಸ್ಸು. ಶಾರ್ದೂಲವಿಕ್ರೀಡಿತವೃತ್ತ.

ಘ) ಪದವಿಭಾಗ—(ಪೂರ್ವಾರ್ಧ) ಯಸ್ಯ, ತ್ರೀಣಿ, ಉದಿತಾನಿ, ವೇದವಚನೇ, ರೂಪಾಣಿ, ದಿವ್ಯಾನಿ, ಅಲಂ, ಬಟ್, ತತ್, ದರ್ಶತಂ, ಇತ್ಥಂ, ಏವ, ನಿಹಿತಂ, ದೇವಸ್ಯ, ಭರ್ಗಃ, ಮಹತ್ ; (ಉತ್ತರಾರ್ಧ) ವಾಯೋಃ, ರಾಮವಚೋನಯಂ, ಪ್ರಥಮಕಂ, ಪೃಕ್ಷಃ, ದ್ವಿತೀಯಂ, ವಪುಃ, ಮಧ್ವಃ ಯತ್, ತು, ತೃತೀಯಂ, ಏತತ್, ಅಮುನಾ ಗ್ರಂಥಃ, ಕೃತಃ, ಕೇಶವೇ ‖

ಙ) ಚತುರ್ಥಚರಣದ ಪಾಠಾಂತರಗಳು—ಸೂತ್ರಭಾಷ್ಯದಲ್ಲಿ ಮೊದಲ ಮೂರು ಚರಣಗಳು ಮೇಲಿನಂತೆಯೇ ಇವೆ; ಚತುರ್ಥಚರಣದ ಪಾಠವು—'ಮಧ್ವೋ ಯತ್ತು ತೃತೀಯಕಂ ಕೃತಮಿದಂ, ಭಾಷ್ಯಂ ಹರೌ ತೇನ ಹಿ' ಎಂದಿದೆ. ಛಾಂದೋಗ್ಯಭಾಷ್ಯದ ಪಾಠವೂ ಹೀಗೆಯೇ ಇದೆ. ಸೂತ್ರಭಾಷ್ಯದ ಒಂದು ಪಾಠಾಂತರವು 'ತೃತೀಯಮೇತದಮುನಾ, ಭಾಷ್ಯಂ ಕೃತಂ ಕೇಶವೇ' ಎಂದಿದೆ. ತೈತ್ತಿರೀಯ, ಐತರೇಯ ಮತ್ತು ಬೃಹದಾರಣ್ಯಕ ಭಾಷ್ಯಗಳಲ್ಲಿ ಚತುರ್ಥಚರಣವು 'ಮಧ್ವೋ ಯತ್ತು ತೃತೀಯಕಂ ಕೃತಮಿದಂ, ಭಾಷ್ಯಂ ಹಿ ತೇನ ಪ್ರಭೌ' ಎಂದಿದೆ. ಮಿಕ್ಕ ಉಪನಿಷದ್ಭಾಷ್ಯಗಳಲ್ಲೂ, ಗೀತಾಭಾಷ್ಯದಲ್ಲೂ, ಪ್ರಕರಣಾದಿ ಮಿಕ್ಕ ಗ್ರಂಥಗಳಲ್ಲೂ ಅವತಾರತ್ರಯನಿರೂಪಣೆ ಮಾಡುವ ಈ ಶ್ಲೋಕ ಇಲ್ಲ.

ಚ) ಶ್ಲೋಕದ ವಿಶ್ಲೇಷಣೆ—ಈ ಶ್ಲೋಕದ ಇಡೀ ಪೂರ್ವಾರ್ಧವು ವಾಯುದೇವರ ಮೂಲರೂಪದ ಮಹಿಮೆಯನ್ನು ವರ್ಣಿಸಿ ಅವರ ಮೂರು ರೂಪಗಳ ಪ್ರಸ್ತಾಪ ಮಾಡಿ ಮುಗಿಸುತ್ತದೆ. ಉತ್ತರಾರ್ಧವು ಆ ಮೂರು ರೂಪಗಳನ್ನು ಪ್ರಸ್ತಾಪಿಸುತ್ತದೆ. ಚತುರ್ಥ (ಕಡೆಯ) ಚರಣದಲ್ಲಿ 'ಆ ಮಧ್ವ

ಎಂಬ ಯಾವ ಮೂರನೆಯ ಅವತಾರವಿದೆಯೋ ಆ ನಾನೇ ಈ ಗ್ರಂಥವನ್ನು (ಅಥವಾ ಭಾಷ್ಯವನ್ನು) ಶ್ರೀಹರಿಪ್ರೀತ್ಯರ್ಥವಾಗಿ ರಚಿಸಿದ್ದು' ಎಂದು ಸಮಾಪ್ತಿಮಾಡುತ್ತಾರೆ.

ಈ ಶ್ಲೋಕದ ಒಂದು ವಿಶೇಷವೇನೆಂದರೆ ಈ ಶ್ಲೋಕದ ಮೊದಲ ಮೂರು ಚರಣಗಳಲ್ಲಿ ಹೇಳಿದ ವಿಷಯಗಳಲ್ಲದೆ ಪದಾವಳಿಯೂ ಸಹ ಋಗ್ವೇದದಲ್ಲಿರುವ (ಪ್ರಥಮ ಮಂಡಲ, ೧೪೧ನೇ ಸೂಕ್ತ) ಬಳಿತ್ಥಾ-ಸೂಕ್ತದ ಮೊದಲ ಮೂರು ಮಂತ್ರಗಳಲ್ಲಿ ಹೇಳಿದ್ದನ್ನೇ ಹೋಲುತ್ತವೆ. ಹೀಗೆ ಈ ಶ್ಲೋಕವು ಬಳಿತ್ಥಾಸೂಕ್ತದ ಸಾರಸಂಗ್ರಹದಂತಿದೆ. ಅಷ್ಟೇ ಅಲ್ಲದೆ ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಈ ನಾಲ್ಕು ಭಾಷ್ಯಗಳ ಕಡೆಯಲ್ಲೂ ಬಳಿತ್ಥಾಸೂಕ್ತದ ವಾಕ್ಯಗಳಿಗೆ ವ್ಯಾಖ್ಯಾನ ರೂಪವಾದ ಸ್ಮೃತಿವಾಕ್ಯಗಳನ್ನು ಸ್ವಯಂ ಆಚಾರ್ಯರೇ ಉದಹರಿಸಿದ್ದಾರೆ. ಈ ಸ್ಮೃತಿವಾಕ್ಯಗಳ ಸಹಾಯದಿಂದ 'ಯಸ್ಯ' ಎಂಬ ಶ್ಲೋಕದ ಅರ್ಥ ಮಾತ್ರವಲ್ಲದೆ ಬಳಿತ್ಥಾಸೂಕ್ತದ ಅರ್ಥವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದಕಾರಣ ನಾಲ್ಕು ಜನ ಉಪನಿಷದ್ಭಾಷ್ಯಕಾರರೂ* ಈ ಶ್ಲೋಕಕ್ಕೆ ಅರ್ಥ ಹೇಳಿದ ಬಳಿಕ ಬಳಿತ್ಥಾಸೂಕ್ತದ ಐದು ಮಂತ್ರಗಳಿಗೂ ಅರ್ಥ ಹೇಳಿದ್ದಾರೆ. ಜೊತೆಗೆ ಬಳಿತ್ಥಾಸೂಕ್ತವನ್ನು (ಐದು ಮಂತ್ರಗಳನ್ನು) ಶ್ರೀಮದಾಚಾರ್ಯರೇ ಮಹಾಭಾರತ ತಾತ್ಪರ್ಯನಿರ್ಣಯದಲ್ಲೂ (೨೪. ೧೫೬-೬೦ ಶ್ಲೋ.) ಉದಹರಿಸಿದ್ದಾರೆ. ಅದಕ್ಕೆ ಶ್ರೀ ವಾದಿರಾಜರು ತಮ್ಮ 'ಭಾವಪ್ರಕಾಶಿಕಾ' ಟೀಕೆಯಲ್ಲೂ 'ಯುಕ್ತಿಮಲ್ಲಿಕಾ'ದಲ್ಲೂ ಅರ್ಥಹೇಳಿದ್ದಾರೆ. ಆ

---

*ಶ್ರೀ. ತೈತ್ತಿರೀಯ ಭಾಷ್ಯ—ಶ್ರೀನಿವಾಸತೀರ್ಥೀಯಟೀಕಾ; 'ತಾಮ್ರ' ಐತರೇಯ ಭಾಷ್ಯಟೀಕಾ—ತಾಮ್ರಪರ್ಣೀಯಾ; ವೇ. ಛಾಂದೋಗ್ಯಭಾಷ್ಯಟೀಕಾ—ವೇದೇಶೀಯಾ ಭಾ. ಬೋ.—ಬೃಹದ್ಭಾಷ್ಯಟೀಕಾ ಭಾವಬೋಧ ರಘೂತ್ತಮಸ್ವಾಮಿಗಳದ್ದು. ತಾ. ನಿ. ವಾದಿರಾಜರ ತಾತ್ಪರ್ಯನಿರ್ಣಯದ 'ಭಾವಪ್ರಕಾಶಿಕಾ'ಟೀಕೆ. ಯು. ಮ.-ಯುಕ್ತಿ-ಮಲ್ಲಿಕಾದಲ್ಲಿ ಹೇಳಿದ ಪ್ರಮೇಯಗಳು, ಸು.-ನ್ಯಾಯಸುಧಾ, ಸುಪ.-ನ್ಯಾಯಸುಧಾಕ್ಕೆ ಮಂತ್ರಾಲಯ ಸ್ವಾಮಿಗಳ ಪರಿಮಳ ಟಿಪ್ಪಣೀ ಎಂಬ ಸಂಕೇತಗಳನ್ನು ಮುಂದೆ ಬಳಸಲಾಗಿದೆ.

ಮಹರ್ನೀಯರೆಲ್ಲ ಹಾಕಿಕೊಟ್ಟ ಮಾರ್ಗವನ್ನೇ ಅನುಸರಿಸಿ ನಾನೂ ಸಹ ಈ ಶ್ಲೋಕಕ್ಕೆ ಅರ್ಥ-ವಿವರಣೆ ಬರೆದ ಮೇಲೆ ಬಳಿತ್ಥಾಸೂಕ್ತದ ಐದು ಮಂತ್ರ-ಗಳನ್ನೂ ಕೊಟ್ಟು ಅವುಗಳ ಅರ್ಥವನ್ನೂ ವಿವರಿಸುವೆನು. ಪ್ರಕೃತ 'ಯಸ್ಯ' ಎಂಬ ಶ್ಲೋಕದ ಅನ್ವಯಾರ್ಥ ಹೇಳುವುದಕ್ಕೆ ಮುಂಚೆ ಈ ಶ್ಲೋಕ-ದಲ್ಲಿರುವ ಮುಖ್ಯ ಶಬ್ದಗಳ ಅರ್ಥವಿವರಣೆ ಮಾಡುತ್ತೇನೆ.

ಛ) **ಕಠಿನಶಬ್ದ ವಿವರಣೆ**—i) **ಯಸ್ಯ** ಎಂಬುದು ತೃತೀಯ-ಚರಣದ ಪ್ರಾರಂಭದಲ್ಲಿರುವ **ವಾಯೋಃ** ಎಂಬುದರೊಡನೆ ಅನ್ವಯವಾಗು-ತ್ತದೆ. ಯಸ್ಯ ವಾ.ಯೋಃ-ಯಾವ ವಾಯುವಿಗೆ (ಸು.) ii) **ವೇದ-ವಚನೇ**—'ಬಳಿತ್ಥಾತದ್ವಪುಷೇ' ಇತ್ಯಾದಿ ಋಗ್ವೇದಮಂತ್ರಗಳಲ್ಲಿ (ಋ. ೧/೧೪೧/೧-೩ ಮಂತ್ರ) (ಉಪ. ಭಾಷ್ಯಟೀಕೆಗಳು) iii) **ಅಲಂ** ಎಂಬುದನ್ನು ದಿವ್ಯಾನಿ ಜೊತೆಯಾಗಲಿ (ತಾ.ನಿ.) ಬಟ್ ಜೊತೆಯಾಗಲಿ (ಶ್ರೀ.) ಅನ್ವಯಿಸ ಬಹುದು. 'ಅಲಂ ಶಕ್ತೌ ಚ ನಿರ್ದಿಷ್ಟಂ' ಎಂದು ವಿಶ್ವಕೋಶವಿರುವುದರಿಂದ ಅಲಂ-ಅತಿಯಾಗಿ, ಹೆಚ್ಚಾಗಿ ಎಂದರ್ಥ (ಲೇ.) **ದಿವ್ಯಾನಿ**-ಅದ್ಭುತವಾದ (ಸು.) ಕ್ರೀಡಾದಿ ಗುಣವಿಶಿಷ್ಟವಾದ (ವೇ. ಭಾಬೋ. ಶ್ರೀ.) **ಅಲಂ ಬಟ್**-ಬಹಳ ಬಲಿಷ್ಠವಾದುದು (ಶ್ರೀ.) iv) ಬಟ್ ಎಂಬುದು ವೈದಿಕ ಪ್ರಯೋಗ ಮತ್ತು ಅವ್ಯಯ. ಇದಕ್ಕೆ ಬಲಾತ್ಮಕವಾದುದು (ಸು.) ಎಂದರ್ಥ. ಅಲ್ಲದೆ ಇದು ವಾಯುಪದದಲ್ಲಿರುವ **ವಕಾರದ** ಅರ್ಥ. (ವ-ಬಯೋರಭೇದಾತ್) ಎಂದು ಸುಧಾದಲ್ಲಿ ಹೇಳಿದ್ದಾರೆ. (v) **ದರ್ಶತಂ**-ಜ್ಞಾನರೂಪಂ ಚ (ಸು.) ಜ್ಞಾನರೂಪವೂ ಆಗಿದೆ. ಇದರ ವ್ಯುತ್ಪತ್ತಿಯನ್ನು ಸುಧಾದಲ್ಲಿ ಹೀಗೆ ತೋರಿಸಿದ್ದಾರೆ— 'ದೃಶೇರೌಣಾದಿಕೋಽತಚ್ಪ್ರತ್ಯಯಃ । (ತಾಮ್ರ)' 'ಭೃಮೃದೃಶಿಯಜಿ....ಹರ್ಯೇಭ್ಯೋಽತಚ್' ಇತ್ಯುಣಾದಿಸೂತ್ರೇ (೩/೧೧೦) ದೃಶೇರತಚ್ವಿಧಾನಾತ್ । ದೃಶಿರ್ ಪ್ರೇಕ್ಷಣೇ 'ದೃಶ್ (ಪಶ್ಯ) ನೋಡು ಎಂಬ ಧಾತುವಿನ ಮೇಲೆ ಉಣಾದಿ ಅತಚ್ಪ್ರತ್ಯಯ ಬರಲು ದೃಶ್+ಅತಚ್ ಎಂದಿರಲು, 'ಪುಗಂತಲಘೂಪಧಸ್ಯ ಚ' (ಪಾ. ೭/೩/೮೬) ಎಂಬ ಸೂತ್ರದಂತೆ ಉಪಧಾಋಕಾರಕ್ಕೆ ಗುಣಬರಲು (ಸುಪ.) ದರ್ಶ್+ಅತಚ್=ದರ್ಶತ ಎಂದಾಗುತ್ತದೆ. ವಾದಿರಾಜರು ಋಗ್ಭಾಷ್ಯಟೀಕೆಯಲ್ಲಿ

ಹೇಳಿದ ವ್ಯುತ್ಪತ್ತಿಯಂತೆ 'ದರ್ಶೇನ-ಜ್ಞಾನೇನ, ತಂ-ವಿಸ್ತೃತಂ' ಜ್ಞಾನದಿಂದ ವಿಸ್ತಾರವಾದ ಅಥವಾ ತುಂಬಿದ ಅರ್ಥಾತ್ ಜ್ಞಾನಮಯವಾದ ಎಂದು ಅರ್ಥ ಹೇಳಿದ್ದಾರೆ (ತಾ.ನಿ.) ಋಗ್ಭಾಷ್ಯಟೀಕೆಯಲ್ಲಿ (೧ಮಂ, ೨ಸೂ. ೧ ಮಂತ್ರ) 'ದೃಶೇರ್ಭಾವೇ ಘಞ್ । ತನೋತೇರ್ಡಃ । ದರ್ಶೋ ದರ್ಶನಂ, ತೇನ ತಃ-ತತಃ' ಎಂದು ಹೇಳಿದ್ದಾರೆ. ದೃಶ್ (ಪಶ್ಯ) ಧಾತುವಿಗೆ ಭಾವಾರ್ಥದಲ್ಲಿ ಘಞ್ ಪ್ರತ್ಯಯ ಬಂದು ದೃಶ್+ಅ=ದರ್ ಶ್+ಅ=ದರ್ಶ ಎಂದಾಗುತ್ತದೆ; ಅದಕ್ಕೆ ದರ್ಶನ-ಜ್ಞಾನ ಎಂದೇ ಅರ್ಥ. ತನು ವಿಸ್ತಾರೇ ಧಾತುವಿನ ಮೇಲೆ ಡ (ಅ) ಪ್ರತ್ಯಯ ಬರಲು ತಃ ಎಂದಾಗುತ್ತದೆ; ಇದಕ್ಕೆ ವ್ಯಾಪ್ತ, ತತ ಎಂದರ್ಥ. ದರ್ಶೇನ-ಜ್ಞಾನೇನ, ತಃ-ತತಃ, ವ್ಯಾಪ್ತಃ-ದರ್ಶತಃ-ಜ್ಞಾನವ್ಯಾಪ್ತ ಅರ್ಥಾತ್ ಜ್ಞಾನಸ್ವರೂಪೀ ಎಂದೇ ಅರ್ಥವಾಗುತ್ತದೆ. ಪ್ರಕೃತ **ದರ್ಶತಂ** ಎಂಬುದು ವಾಯುಶಬ್ದದಲ್ಲಿರುವ ಆಯು ಶಬ್ದದ ಅರ್ಥವೇ ಆಗಿದೆ (ಸು.) ಹೀಗೆ ಬಟ್ ದರ್ಶತಂ ಎಂಬ ಎರಡು ಪದಗಳು ವಾಯುಶಬ್ದದ ಅರ್ಥವನ್ನೇ ಹೇಳುತ್ತವೆ ಎಂದು ಸುಧಾಕಾರರು ವಾಯು ಶಬ್ದದ ಅರ್ಥವನ್ನೇ ಬಿಡಿಸಿ ತೋರಿಸುತ್ತಾರೆ—'ಅನೇನ ವಾಯುಶಬ್ದೋ ನಿರುಕ್ತಃ । ವ ಶಬ್ದೋ ಬಲವಾಚೀ । ಅಯ್ ಗತ್ಯರ್ಥಃ । ಗತ್ಯರ್ಥಾಶ್ಚಾವಗತ್ಯರ್ಥಾಃ । ತತ ಉಣ್ । ವಶ್ಚಾಸಾ ವಾಯುಶ್ಚೇತಿ ವಾಯುರಿತಿ (ಸು.) । (ವಿವರಣೆ) ವ-ಬಯೋರಭೇದಾತ್ ಎಂದಿರುವುದರಿಂದ **ವಕಾರವು** ಬಲವಾಚೀ । ಅಯ ಪಯ ಗತೌ ಎಂದು ಧಾತುಪಾಠವಿರುವುದರಿಂದ ಆಯ್ ಎಂದರೆ ಹೋಗು ಎಂದರ್ಥ. ಗತ್ಯರ್ಥಧಾತುಗಳೆಲ್ಲಾ ಜ್ಞಾನಾರ್ಥವೂ (ಅವಗತಿ-ತಿಳಿವಳಿಕೆ, ಜ್ಞಾನ) ಆಗಿರುವುದರಿಂದ ಅಯ್ ಎಂದರೆ ತಿಳಿ ಎಂದರ್ಥವೂ ಆಗುತ್ತದೆ. ಅದರ ಮೇಲೆ ತಾಚ್ಛೀಲ್ಯಾರ್ಥದಲ್ಲಿ ಉಣ್ ಪ್ರತ್ಯಯ ಬರಲು 'ಅತ ಉಪಧಾಯಾಃ' (ಪಾ. ೭/೨/೧೧೬) ಎಂಬ ಸೂತ್ರದಂತೆ ಅಯ್ ಧಾತುವಿನ ಅಕಾರಕ್ಕೆ ವೃದ್ಧಿ ಬರಲು (ಸುಪ.) ಆಯು ಎಂದಾಗುತ್ತದೆ; ಇದಕ್ಕೆ ಜ್ಞಾನವುಳ್ಳವನು ಎಂದರ್ಥ. ಈಗ ವಾಯು ಶಬ್ದದ ವಿಗ್ರಹಕ್ರಮ ತೋರಿಸುತ್ತಾರೆ. ವಶ್ಚಾಸೌ ಆಯುಶ್ಚ=ವಾಯುಃ; ಇದಕ್ಕೆ ಬಲರೂಪನೂ ಜ್ಞಾನರೂಪನೂ ಆದವನೇ ವಾಯು ಎಂದರ್ಥ. ಹೀಗೆ ಬಟ್ ದರ್ಶತಂ ಎಂಬ ಶಬ್ದಗಳು ವಾಯುಶಬ್ದದ ನಿರುಕ್ತಿಯನ್ನೇ ಬಿಡಿಸಿ ತೋರಿಸಿದುವು.

vi) ಇತ್ಥಮೇವ—ಹೀಗೆಯೇ ಎಂದರೆ ಮೂಲರೂಪದಂತೆಯೇ ಅರ್ಥಾತ್ ಮೂಲರೂಪವು ಹೇಗೆ ಬಲಾತ್ಮಕವೂ ಜ್ಞಾನಾತ್ಮಕವೂ ಆಗಿದೆಯೋ ಹಾಗೆಯೇ ಎಂದರ್ಥ. ಇತ್ಥಮೇವ ಎಂಬುದು ಬಳಿತ್ಥಾಸೂಕ್ತದ 'ಇತ್ಥಾ ಶಬ್ದಕ್ಕೆ ವ್ಯಾಖ್ಯಾನರೂಪವಾಗಿದೆ. ನಿಹಿತಂ ಎಂಬ ಪದವು ನಿ-ಉಪಸರ್ಗ-ಸಹಿತವಾದ 'ಡುಧಾಞ್ ಧಾರಣಪೋಷಣಯೋಃ' (ಜುಹೋ.ಉ.) ಎಂಬ ಧಾತುವಿನ ಮೇಲೆ ಭೂತಕೃದಂತ ಕ್ತ(ತ)ಪ್ರತ್ಯಯವು ಬರಲು 'ದಧಾತೇ-ರ್ಹಿಃ' (ಪಾ. ೭/೪/೪೨) ಎಂಬ ಸೂತ್ರದಂತೆ ಹಿ ಆದೇಶ ಬರುವುದರಿಂದ (ನಖಸ್ತುತಿ ಪುಟ ೩೧೩ ನೋಡಿ) ನಿ+ಧಾ+ಕ್ತ=ನಿಹಿತಂ ಎಂದಾಗಿದೆ; ಇದಕ್ಕೆ 'ಇಡಲ್ಪಟ್ಟಿತು' ಧರಿಸಲ್ಪಟ್ಟಿತು ಅಥವಾ ಭಾ.ಬೋ. ಹೇಳುವಂತೆ ಪ್ರೇರಿತವೂ ಆಯಿತು ಮತ್ತು ಅವತಾರವನ್ನೂ ಮಾಡಿತು (ಪ್ರೇರಿತಂ ಅವತೀರ್ಣಂ ಚ) ಎಂದರ್ಥ. ಈ ನಿಹಿತಂ ಎಂಬುದು ಸೂಕ್ತದಲ್ಲಿರುವ ವಪುಷೇ ಧಾಯಿ ಅಥವಾ ಅಧಾಯಿ ಎಂಬುದಕ್ಕೆ ವ್ಯಾಖ್ಯಾನರೂಪವಾಗಿದೆ. ಮತ್ತು ಈ ಶ್ಲೋಕದ 'ಇತ್ಥಮೇವ ನಿಹಿತಂ' ಎಂಬುದು, ಸೂಕ್ತ-ದಲ್ಲಿರುವ 'ಇತ್ಥಾತದ್ ವಪುಷೇಽಧಾಯಿ' ಎಂಬ ಭಾಗಕ್ಕೆ ವ್ಯಾಖ್ಯಾನ. (ಮುಂಧೆ ಖಂಡ 370-ಥದಲ್ಲಿ 'ಬಳಿತ್ಥಾ....' ಎಂಬ ಮಂತ್ರಾರ್ಥ ನೋಡಿ-ದಾಗ ಈ ಮಾತು ಸ್ಪಷ್ಟವಾಗುತ್ತದೆ.) vii) ದೇವಸ್ಯ ಎಂಬುದು ಸೂಕ್ತ-ದಲ್ಲಿ ಬಂದಿರುವ ಶಬ್ದದ ಅನುಕರಣ—'ದೇವಸ್ಯ ಭರ್ಗಃ ಸಹಸೋ ಯತೋ ಽಜನಿ'. ದೇವ-ಶಬ್ದದ ವ್ಯುತ್ಪತ್ತಿಯನ್ನೂ ಅನೇಕಾರ್ಥವನ್ನೂ ನಖಸ್ತುತಿಯ ೨೯೭-೮ನೇ ಪುಟಗಳಲ್ಲಿ ಹೇಳಿದ್ದೇವೆ. ಆ ಅರ್ಥಗಳು ಭಗವಂತನಲ್ಲಿ ನಿರು-ಪಾಧಿಕವಾಗಿ (ಅನಂತವಾಗಿ) ಅನ್ವಯಿಸಿದರೆ ಪ್ರಾಣದೇವರಿಗೆ ಜೀವಕೋಟಿ-ಯಲ್ಲೇ ಅತ್ಯಧಿಕವಾಗಿ ಅನ್ವಯಿಸುತ್ತವೆ. ದೇವಸ್ಯ-ಕ್ರೀಡಾದಿಗುಣ ವಿಶಿಷ್ಟ-ನಾದ ಅಥವಾ ರುದ್ರಾದಿ ಸಕಲ ದೇವೋತ್ತಮನಾದ ಎಂದರ್ಥ.

viii) ಭರ್ಗಃ ಎಂಬುದು ಮನಸ್, ವಚಸ್, ಯಶಸ್ ಶಬ್ದ-ಗಳಂತೆ ಸಕಾರಾಂತ ನಪುಂ. ಶಬ್ದ (ನಖಸ್ತುತಿ ಪು ೨೯೭ ನೋಡಿ). ಇದಕ್ಕೆ ಸುಧಾದಲ್ಲಿ 'ಭರಣ-ಗಮನಯೋಃ ಕರ್ತೃ' ಎಂದು ಅರ್ಥಹೇಳಿದ್ದಾರೆ; ಸಕಲ ಜಗತ್ತನ್ನೂ ಧರಿಸಿ ಅವರವರಿಗೆ ವಾಯುಸ್ತುತಿಯ ೧೬ನೇ ಶ್ಲೋಕದಲ್ಲಿ

(ತತ್ತ್ವಜ್ಞಾನ್) ಹೇಳಿದಂತೆ ಅವರವರ ಯೋಗ್ಯತಾನುಸಾರ ಸಾಧನಮಾಡಿಸುವವರು ಎಂದರ್ಥ ಹೇಳಬಹುದು. ಈ ಅರ್ಥಕ್ಕೆ 'ಸ ಏನಾನ್ ಬ್ರಹ್ಮ ಗಮಯತಿ'=ಆ ಮುಖ್ಯಪ್ರಾಣನು ಈ ಮುಕ್ತಿಯೋಗ್ಯರೆಲ್ಲರಿಗೂ ಮೋಕ್ಷ ಕೊಡಿಸಿ ವಿಷ್ಣುಲೋಕಕ್ಕೆ ಕಳುಹಿಸುತ್ತಾನೆ' ಎಂಬ ಶ್ರುತಿ ಆಧಾರವಾಗಿದೆ (ತಾ.ನಿ.) ವಾದಿರಾಜರು 'ಸಕಲಜೀವಭರಣಾಯ ತೇಷಾಂ ಹೃದಿ ಗತಃ ಮಿತ್ಯರ್ಥಃ' (ತಾ.ನಿ.)=ಸಕಲ ಪ್ರಾಣಿಗಳನ್ನೂ ಶ್ವಾಸಧಾರಣೆಯಿಂದ ಧರಿಸಿ ಪೋಷಿಸುವುದಕ್ಕಾಗಿ ಅದರ ಹೃದಯದಲ್ಲಿ ನೆಲೆಸಿರುವ ಎಂದರ್ಥಮಾಡುತ್ತಾರೆ. 'ಡುಭೃಞ್ ಭರಣೇ ಗಮ್ಲೃ ಗತೌ ಆಭ್ಯಾಮಸುನ್‌ಪ್ರತ್ಯಯೋ ಡಿಚ್ಚ (ಸು.)| ಭೃ (ದಿ.ವಾದಿ:ಉ.) ಭರಣಮಾಡು, ಧರಿಸು ಮತ್ತು ಗಮ್ (ಗಚ್ಛ) ಎಂಬ ಎರಡು ಧಾತುಗಳ ಮೇಲೆ 'ಸರ್ವಧಾತುಭ್ಯೋಽಸುನ್' (ಉ. ೪/೧೮೮) ಎಂಬ ಸೂತ್ರದಂತೆ ಅಸುನ್‌ಪ್ರತ್ಯಯ ಬರಲು ಡುಭೃಞ್ ಎಂಬ ಧಾತು ಡಿತ್ ಆದ್ದರಿಂದ 'ಗಮೇಷ್ಟಿಲೋಪಃ, ಭೃಞೋಽಕಾರೋಽಂತಾದೇಶಃ' (ಸು.ಪ.) ಭೃಗೆ ಅಕಾರವು ಅಂತಾದೇಶವಾಗಿ ಬಂದು ಗುಣವಾಗಿ ಭರ್ ಎಂದೂ ಗಮ್‌ಗೆ ಟಿ ಲೋಪವಾಗಿ (ಎಂದರೆ ಕಡೆಯ ಅಮ್ ಲೋಪವಾಗಿ) ಗ್ ಎಂದೂ ಇರಲು ಮುಂದೆ ಅಸ್(ಅಸುನ್) ಸೇರಿ ಭರ್ಗಸ್–ಭರ್ಗಃ ಎಂದಾಗುತ್ತದೆ. ಇದಮಪಿ ವಾಯುಶಬ್ದ ವ್ಯಾಖ್ಯಾನಮ್ (ಸು.)–ಭರ್ಗಃ ಎಂಬ ಪದವೂ ವಾಯುಶಬ್ದದ ವ್ಯಾಖ್ಯಾನವೇ ಆಗಿದೆ. ಹೇಗೆಂದರೆ—'ವಾ ಗತಿಗಂಧನಯೋಃ' ರಿತ್ಯತಃ 'ಕೃವಾಪಾಜಿಮಿಸ್ವದಿಸಾಧ್ಯಶೂಭ್ಯ ಉಣ್'' (ಉ. ೧/೧) ಇತ್ಯುಣ್ | ಅನೇಕಾರ್ಥತ್ವಾದ್ಧಾತೂನಾಂ ವಾತಿರ್ಭರಣೇಽಪಿ ವರ್ತತೇ (ಸು.) (ವಿವರಣೆ) 'ವಾ' (ಅದಾದಿ ಪ.) ಎಂಬ ಧಾತುವಿನ ಮೇಲೆ 'ಕೃ-ವಾ—' ಎಂಬ ಉಣಾದಿ ಸೂತ್ರದಂತೆ ಉಣ್-ಪ್ರತ್ಯಯ ಬರಲು ವಾ+ಉಣ್ ಎಂದಿರಲು 'ಆತೋ ಯುಕ್‌ಚಿಣ್‌ಕೃತೋಃ' (ಪಾ. ೭/೩/೩೩ ಎಂಬ ಸೂತ್ರದಂತೆ ಆಕಾರಾಂತ ಧಾತುವಾದ್ದರಿಂದ ಯುಗಾಗಮ (ಯಕಾರಾಗಮ), ಬರಲು (ಸುಪ.) ವಾ+ಯ್+ಉ ಎಂದಾಗಿ ಒಟ್ಟಿಗೆ ಸೇರಿ ವಾಯು ಎಂದಾಗುತ್ತದೆ. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ವಾ ಧಾತು ಭರಣಾರ್ಥದಲ್ಲೇ ಬಂದಿದೆ. ಈ ಅರ್ಥವನ್ನೇ ಭರ್ಗಃ ಶಬ್ದ ಹೇಳಿತೆಂದು ತಿಳಿಯಬೇಕು.

xi) ಮಹತ್ ಶಬ್ದವೂ ಬಟ್-ದರ್ಶತ ಮತ್ತು ಭರ್ಗಃ ಶಬ್ದಗಳಂತೆಯೇ ವಾಯುಶಬ್ದದ ವ್ಯಾಖ್ಯಾನವೆನ್ನುತ್ತಾರೆ ಸುಧಾಕಾರರು—ಅಪಿ ಚ ಮಹಚ್ಛ್ರೇಷ್ಠಂ, 'ವಯಃ ಶ್ರೇಷ್ಠತ್ವೆ' ಇತ್ಯಸ್ಮಾದುಣ್ (ಸು.) ಮಹತ್ ಎಂಬುದು 'ಮಹಪೂಜಾಯಾಂ' ಎಂಬ ಧಾತುವಿನ ರೂಪವಾದ್ದರಿಂದ ಸಕಲಜಗತ್ಪೂಜ್ಯವಾದುದು ಅರ್ಥಾತ್ ಶ್ರೇಷ್ಠ ಎಂದರ್ಥ. 'ವಯಃ ಶ್ರೇಷ್ಠತ್ವೇ' ಎಂಬ ಧಾತುವಿನ ಮೇಲೆ ಉಣ್‌ಪ್ರತ್ಯಯ ಬರಲು ವಯ+ಉಣ್ ಎಂದಿರಲು 'ಅಚೋ ಞ್ಣಿತಿ' (ಪಾ. ೭/೨/೧೧೫) ಎಂಬ ಸೂತ್ರದಂತೆ ಉಣ್‌ಪ್ರತ್ಯಯಣಿತ್ತಾದ್ದರಿಂದ ಉಪಧಾಕ್ಕೆ ವೃದ್ಧಿಬರಲು (ಸು.ಪ.) ವಾಯ್+ಉ ಆಗಿ ವಾಯು ಎಂದಾಗುತ್ತದೆ. ಹೀಗೆ ಈ ವ್ಯುತ್ಪತ್ತಿಯಿಂದ ವಾಯು ಎಂದರೆ ಶ್ರೇಷ್ಠನೆಂದರ್ಥ. ಈ ಅರ್ಥವನ್ನೇ ಮಹಚ್ಛಬ್ದ ಹೇಳುತ್ತದೆ. x) ರಾಮವಚೋನಯಂ ಎಂಬುದಕ್ಕೆ ಮೂರುವಿಧವಾಗಿ ಅರ್ಥ ಹೇಳಬಹುದೆಂದು ಉಪನಿಷದ್ಭಾಷ್ಯಟೀಕಾಕಾರರೂ ವಾದಿರಾಜರೂ ಹೇಳುತ್ತಾರೆ—ಎ) ರಾಮಸ್ಯ ವಚಾಂಸಿ ಸೀತಾಂ ಪ್ರತಿ ನೀತವತ್-ಶ್ರೀರಾಮನ ಸಂದೇಶವನ್ನು ಸೀತೆಗೆ ಒಯ್ದು ಮುಟ್ಟಿಸಿತು (ವೇ., ತಾ.ನಿ.) ಬಿ) ರಾಮವಿಷಯವಚಾಂಸಿ ಮೂಲರಾಮಾಯಣರೂಪಾಣಿ ಶಿಷ್ಯೇಷು ನೀತವದ್ವಾ (ಸು., ವೇ., ತಾ.ನಿ.)—ರಾಮ ವಿಷಯವಾದ ಮೂಲರಾಮಾಯಣದ ವಾಕ್ಯಗಳನ್ನು ಶಿಷ್ಯರಿಗೆ ಒಯ್ದಿತು ಎಂದರೆ ದೇವಗಂಧರ್ವಾದಿ ಶ್ರೋತೃಗಳಿಗೆಲ್ಲಾ ವಿವರಿಸಿ ತಿಳಿಸಿತು ಎಂದರ್ಥ. ಅಥವಾ (ಸಿ) ರಾಮವಚಸಿ ಯೋ ನಯೋ ನ್ಯಾಯ ಆಜ್ಞಾರೂಪಸ್ತದ್ವ್ಯಕ್ತಂ ವಾ (ವೇ., ಭಾ.ಬೋ., ಶ್ರೀ) ಶ್ರೀರಾಮನ ಮಾತಿನಲ್ಲಿ ಆಜ್ಞಾರೂಪವಾದ ಯಾವ ನಯ ಅಥವಾ ನ್ಯಾಯವು ಇರುವುದೋ ಅದನ್ನು ಒಯ್ದಿತು ಎಂದರೆ ಶ್ರೀರಾಮನ ಆಜ್ಞೆಯನ್ನು ಶಿರಸಾ ಮಾನ್ಯತೆ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದಿತು ಎಂದರ್ಥ—ವಚೋನಯಂ ಎಂಬಲ್ಲಿ ನೀ (ನಯ್) (ಭ್ವಾ.ಉ.) ಧಾತು ಈಕಾರಾಂತವಾದ್ದರಿಂದ ಅದರ ಮೇಲೆ 'ಏರಚ್' (ಪಾ. ೩/೩/೫೬) ಎಂಬ ಸೂತ್ರದಂತೆ ಅಚ್‌ಪ್ರತ್ಯಯ ಬರಲು (ಸು.ತಾವ್ರ.) ನೀ+ಅಚ್ ಎಂದಿರಲು, 'ಸಾರ್ವಧಾತುಕಾರ್ಧಧಾತುಕಯೋಃ' (ಪಾ. ೭/೩/೮೪) ಎಂಬ ಸೂತ್ರದಂತೆ ನೀ ಧಾತುವಿನ ಈಕಾರಕ್ಕೆ ಗುಣವಾಗಲು

ನೇ+ಅಚ್ ಎಂದಾಗಿ (ಸುಪ.) 'ಏಚೋಽಯವಾಯಾವಃ' (ಪಾ. ೬/೧/೭೮) ಎಂಬ ಸೂತ್ರದಂತೆ ಏಕಾರಕ್ಕೆ ಅಯಾದೇಶ ಬರಲು ನಯ್+ಅ=ನಯಂ ಎಂಬ ರೂಪ ಸಿದ್ಧಿಸುತ್ತದೆ.

xi) ಪೃಕ್ಷಃ ಶಬ್ದಕ್ಕೆ ಸುಧಾಕಾರರು ಎರಡು ರೀತಿಯಿಂದ ವ್ಯುತ್ಪತ್ತಿ ತೋರಿಸಿಕೊಡುತ್ತಾರೆ. (ಎ) ಪೃಚ್ಛಬ್ದಃ ಪೃತನಾವಾಚೀ ಪ್ರಸಿದ್ಧಃ। ತಸ್ಮಿನ್ ಕರ್ಮಣ್ಯುಪಪದೇ 'ಕ್ಷೈ ಕ್ಷಯು' ಇತ್ಯಸ್ಮಾತ್ 'ಆತೋಽನುಪಸರ್ಗೇ ಕಃ' (ಪಾ. ೩/೨/೩) ಇತಿ ಕಃ। ಉಪಪದತಕಾರ ಲೋಪಶ್ಛಾಂದಸಃ। ಪುಲ್ಲಿಂ(ಗಂ)ಗಃ ಶ್ರುತ್ಯನುಸಾರೇಣ (ಸು) (ವಿವರಣೆ) ಪೃಕ್ಷಃ ಎಂಬಲ್ಲಿ ಪೃ–ಕ್ಷ ಎಂದು ಎರಡು ಭಾಗ ಇದೆ. ಪೃತ್‌ಶಬ್ದವು ಪೃತನಾ (ಸೈನ್ಯ) ವಾಚೀ ಎಂದು ಪ್ರಸಿದ್ಧವಾಗಿದೆ. 'ಧ್ವಜಿನೀ ವಾಹಿನೀ ಸೇನಾ ಪೃತನಾ ಽನೀಕಿನೀ ಚಮೂಃ' ಎಂದು ಅಮರ. ಆದ್ದರಿಂದ ಪೃತ್ ಎಂದರೆ ಪೃತನಾ ಅಥವಾ ಸೇನೆ ಎಂದರ್ಥ. ಇದರ ಜೊತೆ ಕರ್ಮಣಿ ಕ್ಷೈ ಧಾತು ಸೇರಿದಾಗ ಪೃತ್+ಕ್ಷೈ ಎಂದಿರಲು (ಲೇ.) 'ಆದೇಚ ಉಪದೇಶೇಽಶಿತಿ' (ಪಾ. ೬/೧/೪೫) ಎಂಬ ಸೂತ್ರದಂತೆ ಧಾತುವಿನ ಐಕಾರಕ್ಕೆ ಆಕಾರಾದೇಶ ಬರಲು ಪೃತ್+ಕ್ಷಾ ಎಂದಾಗಲು, ಧಾತು ಆಕಾರಾಂತವೂ ಆಗಿದ್ದು ಯಾವ ಉಪಸರ್ಗವೂ ಸೇರಿಲ್ಲವಾದ್ದರಿಂದ 'ಆತೋಽನುಪಸರ್ಗೇ ಕಃ' ಎಂಬ ಸೂತ್ರದಂತೆ ಕ–ಪ್ರತ್ಯಯ ಬರಲು, ಪೃತ್‌ನ ತಕಾರ ಲೋಪವಾಗಿ (ವೈದಿಕ ಪ್ರಯೋಗವಾದ್ದರಿಂದ ಲೋಪವಾಗುತ್ತದೆ.) ಪೃ+ಕ್ಷಾ+ಅ=ಪೃಕ್ಷಃ ಎಂದಾಗುತ್ತದೆ. ಹೀಗೆ ಪೃಕ್ಷಃ ಎಂದರೆ ಶತ್ರುಗಳ ಸೈನ್ಯಗಳನ್ನು ನಾಶಮಾಡುವಂಥಾದ್ದು ಎಂದರ್ಥವಾಗುತ್ತದೆ (ರಿಪುಪೃತನಾಕ್ಷಯಕಾರೀತ್ಯರ್ಥಃ।). ಇಲ್ಲಿ ಇನ್ನೊಂದು ವ್ಯಾಕರಣ ವಿಚಾರ. ಪೃಕ್ಷಃ ಎಂಬುದು 'ದ್ವಿತೀಯಂ ವಪುಃ'ಗೆ ವಿಶೇಷಣವಷ್ಟೆ; ವಪುಃ ಶಬ್ದ ನಪುಂಸಕಲಿಂಗವಾದ್ದರಿಂದ ಇದೂ ನಪುಂಸಕದಲ್ಲೇ 'ಪೃಕ್ಷಂ' ಎಂದಿರಬೇಕಲ್ಲವೇ ? ಪೃಕ್ಷಃ ಎಂದು ಪುಲ್ಲಿಂಗ ಹೇಗಾಯಿತೆಂದರೆ ಪುಲ್ಲಿಂಗವು ವೇದಕ್ಕೆ (ಶ್ರುತಿಗೆ) ಅನುಗುಣವಾಗಿ ಬಂದಿದೆ ಎಂಬುದೇ ಸಮಾಧಾನ. (ಬಿ) ಅಸುನ್‌ವಾ ಕಿದಿತಿ ನಪುಂಸಕಮೇವೇದಮ್ । (ಸು.) ಕ್ಷೈ ಧಾತುವಿನ ಮೇಲೆ ಅಸುನ್ ಪ್ರತ್ಯಯ ಬಂದು ಪೃಕ್ಷಸ್–ಪೃಕ್ಷಃ (ಮನಸ್, ಶಿರಸ್

ಶಬ್ದಗಳಂತೆ) ಎಂದಾಗಿದೆ ಎಂಬ ಪಕ್ಷವೂ ಉಂಟು. ಇದು ನಪುಂಸಕರೂಪವೇ ಆದ್ದರಿಂದ ಯಾವ ದೋಷವೂ ಇಲ್ಲ. ವಾದಿರಾಜರು ತಕಾರ ಲೋಪವಾದುದಕ್ಕೂ ವಿಶೇಷಾರ್ಥ ತೋರಿಸುತ್ತಾರೆ—ಧರ್ಮದ್ರೋಹಹತೋ ನಷ್ಟಪ್ರಾಯತ್ವದ್ಯೋತನಾಯ ಪೃದಿತ್ಯತ್ರ ತಕಾರಲೋಪಃ (ತಾ.ನಿ.) ಕೌರವಾದಿಗಳ ಸೈನ್ಯಗಳು ಧರ್ಮದ್ರೋಹದಿಂದಲೇ ನಷ್ಟಪ್ರಾಯವಾಗಿದ್ದವು ಎಂಬುದನ್ನು ಸೂಚಿಸುವುದಕ್ಕಾಗಿ ಪೃತ್ ಎಂಬಲ್ಲಿಯ ತಕಾರಕ್ಕೆ ಲೋಪ ಬಂದಿದೆ. xii) ವಪುಃ ಶಬ್ದ ಸಕಾರಾಂತ ನಪುಂಸಕಲಿಂಗ. ಸಾಮಾನ್ಯವಾಗಿ 'ದೇಹ, ಶರೀರ' ಎಂದರ್ಥವಾದರೂ ಇಲ್ಲಿ 'ರೂಪ' ಅಥವಾ 'ಅವತಾರ' ಎಂಬ ಅರ್ಥದಲ್ಲಿ ಬಂದಿದೆ. xiii) ಮಧ್ವ ಶಬ್ದಾರ್ಥವನ್ನು ಬಳಿತ್ಥಾಸೂಕ್ತದ ಮೂರನೇ ಮಂತ್ರದ ಅರ್ಥ ಹೇಳುವಾಗ ಖಂಡ 374–ಚ–viiiರಲ್ಲಿ ವಿವರಿಸಲಾಗುವುದು. xiv) **ಕೇಶವೇ** ಎಂಬಲ್ಲಿ ವಿಷಯಸಪ್ತಮೀ ; **ಕೇಶವೇ** ವಿಷಯೇ (ಸು.)–ಕೇಶವನ ವಿಷಯದಲ್ಲಿ ಎಂದರ್ಥ. ಕ–ಬ್ರಹ್ಮ, ಈಶ–ರುದ್ರದೇವರು, ಇವರೇ ಮೊದಲಾದ ಸಕಲದೇವತೆಗಳನ್ನೂ; ವ (ವರ್ತಯತಿ)–ನಿಯಮನ ಮಾಡುವವನು ಎಂಬುದು ಗೀತಾಭಾಷ್ಯೋಕ್ತಾರ್ಥ. **ಕೇಶವೇ** ಪಾಠಕ್ಕೆ 'ಪ್ರಭೌ ಹರೌ' ಎಂದು ಬೇರೆ ಗ್ರಂಥಗಳಲ್ಲಿ ಪಾಠಾಂತರಗಳಿವೆ. ಅವಕ್ಕೂ ಹೀಗೆಯೇ ಸ್ವಾಮಿಯ ಮತ್ತು ಹರಿಯ ವಿಷಯದಲ್ಲಿ ಎಂದೇ ಅರ್ಥ ಹೇಳಬೇಕು.

(ಜ) **ಅನ್ವಯಾರ್ಥ**—(ಯಸ್ಯ ಎಂಬುದನ್ನು ಆವೃತ್ತಿಮಾಡಿಕೊಂಡು ಅನ್ವಯಿಸಬೇಕು.) (**ಪೂರ್ವಾರ್ಧ–ಪ್ರಥಮಚರಣ**) ಯಸ್ಯ ವಾಯೋಃ ದೇವಸ್ಯ–ಕ್ರೀಡಾದಿ ಗುಣವಿಶಿಷ್ಟರಾದ ಯಾವ ವಾಯುದೇವರಿಗೆ ; ವೇದವಚನೇ–'ಬಳಿತ್ಥಾ....' ಇತ್ಯಾದಿ ವೇದವಾಕ್ಯದಲ್ಲಿ ; ಅಲಂ ದಿವ್ಯಾನಿ–ಅತಿಶ್ರೇಷ್ಠವಾದ; ತ್ರೀಣಿ ರೂಪಾಣಿ–ಹನುಮ ಭೀಮ ಮಧ್ವ ಎಂಬ ಮೂರು ರೂಪಗಳು ; ಉದಿತಾನಿ–ಹೇಳಲ್ಪಟ್ಟವೆಯೋ ; (**ದ್ವಿತೀಯ ಚರಣ**) ತತ್–ಆ ವಾಯುದೇವರ ಮೂಲರೂಪವು ; ಬಟ್–ಬಲಾತ್ಮಕವೂ (ಶ್ರೀ. ಪ್ರಕಾರ ಅಲಂ–ಚೆನ್ನಾಗಿ, ಬಟ್–ಬಲಾತ್ಮಕವೂ); ದರ್ಶತಂ–ಜ್ಞಾನಾತ್ಮಕವೂ ಆಗಿದೆ; ಆದ್ದರಿಂದಲೇ .ವಾಯು-ಶಬ್ದವಾಚ್ಯವಾಗಿದೆ. ಹಾಗೆಯೇ, ಭರ್ಗಃ–ಭರಣ-

ಗಮನ ಮಾಡುವುದರಿಂದಲೂ ; ಮಹತ್-ಶ್ರೇಷ್ಠವಾದ್ದರಿಂದಲೂ (ಬೇರೆ ಬೇರೆ ವ್ಯುತ್ಪತ್ತಿಯಿಂದ) ವಾಯುಶಬ್ದವಾಚ್ಯವಾಗಿದೆ. ಯಸ್ಯ-ಯಾವ ವಾಯುದೇವರ, ನಿಹಿತಂ-ಭಗವಂತನಿಂದ ಪ್ರೇರಿತವಾಗಿ ಅವತಾರ ಮಾಡಿದ ಅವತಾರರೂಪವೂ, ಇತ್ಥಮೇವ-ಹೀಗೆಯೇ ಎಂದರೆ ಮೂಲರೂಪದಂತೆಯೇ ಬಲಾತ್ಮಕವೂ ಜ್ಞಾನಾತ್ಮಕವೂ ಭರಣ-ಗಮನರೂಪವೂ ಶ್ರೇಷ್ಠವೂ ಆಗಿರುತ್ತದೆ. (ಉತ್ತರಾರ್ಧ-ತೃತೀಯ ಚರಣ) ವಾಯೋಃ-ಅಂಥಾ ವಾಯುದೇವರ ; ಪ್ರಥಮಕಂ ವಪುಃ-ಮೊದಲನೆಯ ಅವತಾರವಾದ ಹನುಮತ್-ರೂಪವು ; ರಾಮವಚೋನಯಂ-(ಎ) ರಾಮನ ಸಂದೇಶವನ್ನು ಸೀತೆಗೆ ಮುಟ್ಟಿಸಿತು, ಉಪಲಕ್ಷಣಯಾ ಸೀತೆಯ ಮಾತನ್ನು ರಾಮನಿಗೂ ಮುಟ್ಟಿಸಿತು. (ಬಿ) ರಾಮವಿಷಯವಾದ (ಎಂದರೆ ಆ ಶ್ರೀರಾಮನ ಮಹಿಮಾದ್ಯೋತಕಗಳಾದ) ಮೂಲರಾಮಾಯಣಾದಿ ವಾಕ್ಯಗಳನ್ನು ಶಿಷ್ಯರೂಪಶ್ರೋತೃಗಳಿಗೂ ಉಪದೇಶಿಸಿತು ಮತ್ತು (ಸಿ) ರಾಮನ ಮಾತುಗಳಲ್ಲಿರುವ ನಯವನ್ನು (ಆಜ್ಞೆಯನ್ನು) ಶಿರಸಾವಹಿಸಿ ನಿರ್ವಹಿಸಿತು. ದ್ವಿತೀಯಂ ವಪುಃ-ಎರಡನೆಯ ರೂಪವು ; ಪೃಕ್ಷಃ-ಕೌರವಾದಿ ಶತ್ರುಸೈನ್ಯವನ್ನು ನಾಶಮಾಡಿತು. (ಚತುರ್ಥ ಚರಣ) ಯತ್‌ತು ಏತತ್-ಯಾವ ಈ (ತು-ಏತತ್ ಶಬ್ದಗಳಿಂದ ಪ್ರತ್ಯಕ್ಷವಾಗಿ ಕಾಣಿಸುತ್ತಿರುವ ಎಂದರ್ಥ) ; ಮಧ್ವಃ-ಮಧ್ವ ಅಥವಾ ಆನಂದತೀರ್ಥವೆಂಬ ; ತೃತೀಯಂ (ತೃತೀಯಕಂ) ವಪುಃ-ಮೂರನೆಯ ಅವತಾರವಿದೆಯೋ; ಅಮುನಾ-ಇವನಿಂದಲೇ (ಈ ನನ್ನಿಂದಲೇ); ಗ್ರಂಥಃ-ಈ ಗ್ರಂಥವು (ಭಾಷ್ಯಂ ಎಂಬ ಪಾಠದಲ್ಲಿ ಭಾಷ್ಯವು); ಕೇಶವೇ-ಕೇಶವನ ವಿಷಯದಲ್ಲಿ ; ಕೃತಃ-ಮಾಡಲ್ಪಟ್ಟಿತು (ರಚಿಸಲ್ಪಟ್ಟಿತು).

ಝ) ಶ್ಲೋಕದ ಭಾವಾರ್ಥ—(ಪೂರ್ವಾರ್ಧ) ಋಗ್ವೇದ ಸಂಹಿತೆಯ ಪ್ರಥಮಮಂಡಲದ 'ಬಳಿತ್ಥಾ' ಎಂಬ ೧೪೧ನೇ ಸೂಕ್ತದ ಪ್ರಾರಂಭದ ಐದು ಮಂತ್ರಗಳಲ್ಲಿ ಮಾತರಿಶ್ವನಾಮಕನಾದ ವಾಯುದೇವರ ವಿಶೇಷ ಮಹಿಮೆಯನ್ನು ಹೇಳುತ್ತಾ ವಾಯುಶಬ್ದದ ನಿರುಕ್ತಿಯನ್ನೇ ಬಿಡಿಸಿ ತೋರಿಸಿದೆಯಲ್ಲದೆ ಆ ವಾಯುದೇವರ ಅತ್ಯದ್ಭುತವಾದ ಮೂರು ಅವತಾರಗಳ ಮಹಿಮೆಯನ್ನೂ ಹೇಳಿದೆ. ಹೇಗೆಂದರೆ—(ಎ) ವಾಯುಶಬ್ದದ

ವಕಾರವು ಬಲವಾಚಕವೂ ಆಯುಃಶಬ್ದವು ಜ್ಞಾನವಾಚಕವೂ ಆಗಿದ್ದು ಅವೆರಡರ ಮೇಲೆ ತಾಚ್ಛೀಲ್ಯದಲ್ಲಿ ಉಣಾದಿ ಪ್ರತ್ಯಯ ಬಂದಿದೆ ಎಂಬುದನ್ನು ಶ್ರುತಿಯಲ್ಲಿರುವ ಬಟ್ ಮತ್ತು ದರ್ಶತ ಶಬ್ದಗಳು ತೋರಿಸುತ್ತವೆ. (ಬಿ) ವಾ ಧಾತು ಗತ್ಯರ್ಥಕವಾದರೂ ಧಾತುಗಳಿಗೆ ಅನೇಕಾರ್ಥವಿರುವುದರಿಂದ ಭರಣಾರ್ಥದಲ್ಲಿ ಉಣ್ ಪ್ರತ್ಯಯದೊಡನೆ ಸೇರಿದಾಗ ಮಧ್ಯೆ ಯುಗಾಗಮ (ಯಕಾರಾಗಮ) ಬರುವುದರಿಂದ ವಾಯು ಎಂದಾಗುವುದರಿಂದ ಆ ದೇವನು ಸಕಲ ಜಗತ್ತುಗಳನ್ನೂ ಧರಿಸಿ ಶ್ವಾಸೋಚ್ಛ್ವಾಸಗಳನ್ನು ನಿಯಮನ-ಮಾಡುತ್ತಾ ಆಯಾಯಾ ಜೀವರಿಗೆ ಅವರವರ ಸ್ವರೂಪಾನುಸಾರ ಸಾಧನಗಳನ್ನು ಮಾಡಿಸಿ ಅವರವರಿಗೆ ಕೊಡಬೇಕಾದ ಗತಿಗಳನ್ನೂ ಕೊಡಿಸುವುದಕ್ಕಾಗಿ ಅವರ ಹೃದಯದಲ್ಲೇ ನೆಲೆಸಿದ್ದಾರೆ ಎಂಬ ಅರ್ಥವನ್ನು ತಿಳಿಸುತ್ತದೆ. ಇದನ್ನೇ ಶ್ರುತಿಯಲ್ಲಿರುವ ಭರ್ಗಃ ಶಬ್ದವು ಹೇಳುತ್ತದೆ. ಸಿ) ವಯಃ ಶ್ರೇಷ್ಠತ್ವೇ' ಎಂಬ ಧಾತುವಿನಿಂದಲೂ ವಾಯುಶಬ್ದವು ನಿಷ್ಪನ್ನವಾಗುತ್ತದೆ. ಈ ಅರ್ಥ-ವನ್ನು 'ಮಹತ್' ಶಬ್ದದಿಂದ ಹೇಳಿ ವಾಯು ಶಬ್ದವು ಶ್ರೇಷ್ಠವಾಚಕವಾದ್ದ-ರಿಂದ ಆ ವಾಯು ಸರ್ವಜೀವೋತ್ತಮನೆಂದೂ ಆದ್ದರಿಂದಲೇ ರುದ್ರಾದಿ ಸಕಲ ದೇವತೆಗಳಿಗಿಂತಲೂ ವಂದ್ಯನೂ ಶ್ರೇಷ್ಠನೂ ಎಂಬುದನ್ನು ಸಮರ್ಥಿಸುತ್ತದೆ.

ಆ ವಾಯುದೇವರಿಗೆ ಹನುಮ ಭೀಮ ಮಧ್ವ ಎಂಬ ದಿವ್ಯವಾದ ಮೂರು ರೂಪಗಳಿವೆಯಲ್ಲದೆ ಅವನ್ನು ಭಗವದಾಜ್ಞೆಯಿಂದಲೇ ಧರಿಸಿದ್ದಾಗಿದೆ. ಅವೂ ಸಹ ಮೂಲರೂಪದಂತೆಯೇ ಬಲಸ್ವರೂಪವು ಜ್ಞಾನಸ್ವರೂಪವುಳ್ಳವೂ ಆಗಿವೆ. ಆ ರೂಪಗಳು ಯಾವುವು ? ಅವು ಏನೇನು ಕಾರ್ಯ ಸಾಧಿಸಿದುವು ? ಎಂಬ ಆಕಾಂಕ್ಷೆಯನ್ನು ಉತ್ತರಾರ್ಧದಿಂದ ವರ್ಣಿಸುತ್ತಾರೆ.

(ಉತ್ತರಾರ್ಧ) ಆ ವಾಯುವಿನ ಪ್ರಥಮರೂಪನಾದ ಹನುಮಂತನು ಶ್ರೀರಾಮನ ಸಂದೇಶವನ್ನು ಸೀತೆಗೆ ಮುಟ್ಟಿಸಿದನಲ್ಲದೆ ಶ್ರೀರಾಮಚಂದ್ರನ ಅದ್ಭುತಮಹಿಮಾಪ್ರತಿಪಾದಕಗಳಾದ ಮೂಲರಾಮಾಯಣದ ವಾಕ್ಯಗಳನ್ನು ಶಿಷ್ಯರಾದ ದೇವಗಂಧರ್ವಾದಿಶ್ರೋತೃಗಣಕ್ಕೆ ಒಯ್ದು ಉಪದೇಶಿಸಿದನು. ಶ್ರೀರಾಮನ ಆಜ್ಞಾರೂಪವಾದ ಸಕಲ ವಚನಗಳನ್ನೂ ನಮ್ರತೆಯಿಂದ ಶಿರಸಾವಹಿಸಿ ಈಡೇರಿಸಿದನು. ದ್ವಿತೀಯರೂಪನಾದ ಭೀಮನು ಭೂಮಿಗೆ

ಭಾರಭೂತರಾಗಿದ್ದ ಕೌರವಾದಿ ಸಕಲ ದೈತ್ಯರ ಸೈನ್ಯವನ್ನೂ ಧ್ವಂಸಮಾಡಿ-ಬಿಟ್ಟನು (ಪೃ-ಕ್ಷಃ). ಆ ವಾಯುವಿನ ಮೂರನೇ ರೂಪವೇ ಮಧ್ವ ಎಂಬ ಅಪರಪರ್ಯಾಯನಾಮವುಳ್ಳ ಆನಂದತೀರ್ಥನೆಂಬ ಈ ನಾನೇ ಆಗಿದ್ದೇನೆ. ಈ ರೂಪದಿಂದ ಬ್ರಹ್ಮರುದ್ರೇಂದ್ರಾದಿಗಳಿಗೂ ನಿಯಾಮಕನಾದ ಆದ್ದರಿಂದಲೇ ಕೇಶವನಾಮಕನಾದ ಶ್ರೀಹರಿಯು ವಿಷಯಕವಾದ ಈ ಗ್ರಂಥವನ್ನು ಆ ಕೇಶವನ ಪ್ರೇರಣೆಯಿಂದಲೇ ಅವನ ಪ್ರೀತ್ಯರ್ಥವಾಗಿಯೇ ಮಾಡಿದ್ದೇನೆ. (ಇದರೊಡನೆ ವೇ. ಟೀಕೆಯ ಮಾತುಗಳನ್ನೂ ಸೇರಿಸಿದರೆ ಶ್ಲೋಕದ ಮಹತ್ವ ಎದ್ದು ಕಾಣುತ್ತದೆ.) ಆದಕಾರಣ ಈ ಗ್ರಂಥವನ್ನು ರಚಿಸಿದವರು ಸರ್ವಜ್ಞರೂ ಸಮರ್ಥರೂ ಆದ್ದರಿಂದ ಇದರ ಪ್ರಾಮಾಣ್ಯವಿಷಯದಲ್ಲಿ ಕಿಂಚಿತ್ತೂ ಅನುಮಾನಿಸದೆ ಸಕಲ ಸುಜನರೂ ಇದನ್ನು ಪಠಿಸಿ ಕೃತಾರ್ಥರಾಗತಕ್ಕದ್ದೆಂದು ಭಾವ.

ಬಳಿತ್ಥಾ ಸೂಕ್ತ

370. ಅವತಾರಿಕೆ—ಹಿಂದೆ (369–ಚ.ದಲ್ಲಿ) ಹೇಳಿದಂತೆ ಈ 'ಯಸ್ಯ' ಎಂಬ ಶ್ಲೋಕದಲ್ಲಿ ಹೇಳಿದ ಅನೇಕ ವಿಚಾರಗಳು ಬಳಿತ್ಥಾ ಸೂಕ್ತ-ದಲ್ಲಿ ಹೇಳಿದ ವಿಷಯಗಳಿಗೆ ವ್ಯಾಖ್ಯಾನದಂತಿರುವುದರಿಂದ ನಾಲ್ಕೂ ಉಪನಿಷ-ದ್ಭಾಷ್ಯಟೀಕಾಕಾರರೂ ಆ ಸೂಕ್ತದ ಮಂತ್ರಗಳಿಗೂ ಅರ್ಥ ಹೇಳಿದ್ದಾರೆ. ಈ ಸೂಕ್ತದ ಐದು ಮಂತ್ರಗಳನ್ನೂ ಶ್ರೀಮದಾಚಾರ್ಯರೇ ತಾತ್ಪರ್ಯ-ನಿರ್ಣಯದಲ್ಲಿ (೨/೧೫೬–೬೦) ಉದಹರಿಸಿದ್ದಾರೆ. ಆದಕಾರಣ ಕೆಳಗೆ ಈ ಐದು ಮಂತ್ರಗಳನ್ನೂ ಕೊಟ್ಟು ಅವುಗಳ ಅರ್ಥವನ್ನೂ ವಿವರಿಸಿದೆ. ಈ ಮಂತ್ರಗಳ ಅರ್ಥವನ್ನು ಬರೆಯುವಾಗ ಶ್ರೀವಾದಿರಾಜರು ತಾತ್ಪರ್ಯ ನಿರ್ಣಯದ ಭಾವಪ್ರಕಾಶಿಕೆಯಲ್ಲಿ ಹೇಳಿದ ಅನ್ವಯಕ್ರಮವನ್ನೇ ಮುಖ್ಯ-ವಾಗಿಟ್ಟುಕೊಂಡು ಯುಕ್ತಿಮಲ್ಲಿಕಾದಲ್ಲೂ ಉಪನಿಷದ್ಭಾಷ್ಯಟೀಕೆಗಳಲ್ಲೂ ಹೇಳಿದ ಮುಖ್ಯ ಪ್ರಮೇಯಗಳನ್ನೂ ಅಳವಡಿಸಿಕೊಂಡಿದ್ದೇನೆ. ಇದಕ್ಕೂ ಹೆಚ್ಚಿನ ಅನೇಕಾರ್ಥಗಳನ್ನು ಯುಕ್ತಿಮಲ್ಲಿಕಾದಲ್ಲಿ ಹೇಳಿದ್ದಾರಾದರೂ ಪ್ರಾರಂಭದಲ್ಲೇ ಅವನ್ನೆಲ್ಲ ಗ್ರಹಿಸುವುದು ಕಷ್ಟವಾದ್ದರಿಂದ ನಾವು

ಹೇಳಲಿಲ್ಲ. ಹೆಚ್ಚಿನ ವಿಚಾರ ತಿಳಿಯಲಪೇಕ್ಷಿಸುವವರು ಯುಕ್ತಿಮಲ್ಲಿಕಾವನ್ನೇ (ಪತ್ರ ೬೬೩–೭೨, ಶ್ಲೋ. ೬೮೨–೭೧೨) ನೋಡಬಹುದು.

ಬಳಿತ್ಥಾಸೂಕ್ತವು ಋಗ್ವೇದ ಪ್ರಥಮ ಮಂಡಲದಲ್ಲಿ ೧೪೧ನೇ ಸೂಕ್ತದ ಮೊದಲ ಐದು ಮಂತ್ರಗಳು ಅಥವಾ ದ್ವಿತೀಯಾಷ್ಟಕದ ದ್ವಿತೀಯಾ-ಧ್ಯಾಯದಲ್ಲಿ ಎಂಟನೇ ವರ್ಗ.

ಮೊದಲನೇ ಮಂತ್ರ

ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ

ದೇವಸ್ಯ ಭರ್ಗಃ ಸಹಸೋ ಯತೋ ಜನಿ ।

ಯದೀಮುಪ ಹ್ವರತೇ ಸಾಧತೇ ಮತಿರ್

ಋತಸ್ಯ ಧೇನಾ ಅನಯಂತ ಸಸ್ರುತಃ ॥ ೧ ॥

ಕ) ಋಷ್ಯಾದಿಗಳ ವಿವರಣೆ—ಈ ಸೂಕ್ತದ ಮೊದಲ ಐದು ಮಂತ್ರಗಳು ಜಗತೀ ಛಂದಸ್ಸಿನಲ್ಲಿವೆ ; ಎಂದರೆ ಪ್ರತಿಯೊಂದು ಪಾದದಲ್ಲೂ ಹನ್ನೆರಡು ಅಕ್ಷರಗಳಿವೆ. ಅನುಕ್ರಮಣಿಕೆಯಲ್ಲಿ ಈ ಮಂತ್ರಗಳಿಗೆ ಔಚಥ್ಯೋ ದೀರ್ಘತಮಾಃ ಎಂಬುವರೇ ಋಷಿಗಳೆಂದು ಹೇಳಿದ್ದಾರಾದರೂ 'ಬಳಾದ್ಯಂ ಭೃಗುಣಾ ದೃಷ್ಟಂ' ಎಂದು ತಂತ್ರಸಾರದಲ್ಲಿ (೪ ಅ. ೭೩ ಶ್ಲೋ.) ಹೇಳಿರು-ವುದರಿಂದ ಭೃಗು ಋಷಿಗಳೇ ಮುಖ್ಯದ್ರಷ್ಟೃಗಳು–ಪ್ರಾಣಾದಿ ಪಂಚರೂಪೀ ಪ್ರಾಣಾಗ್ನಿನಾಮಕ ಮುಖ್ಯಪ್ರಾಣನೇ ದೇವತೆ. ತದಂತರ್ಗತ ಅನಿರುದ್ಧಾದಿ-ಪಂಚರೂಪೀ ಶ್ರೀವಿಷ್ಣುವೇ ಪ್ರಧಾನದೇವತೆ.

ಖ) ಮಂತ್ರದ ಪದಪಾಠ—ಬಟ್ । ಇತ್ಥಾ । ತತ್ । ವಪುಷೇ । ಧಾಯಿ । ದರ್ಶತಮ್ । ದೇವಸ್ಯ । ಭರ್ಗಃ । ಸಹಸಃ । ಯತಃ । ಜನಿ ॥ ಯತ್ । ಈಮ್ । ಉಪ । ಹ್ವರತೇ । ಸಾಧತೇ । ಮತಿಃ । ಋತಸ್ಯ । ಧೇನಾಃ । ಅನಯಂತ । ಸಸ್ರುತಃ ॥ ೧ ॥

ಗ) ಅನ್ವಯ ಕ್ರಮ—ಪೂರ್ವಾರ್ಧಕ್ಕೆ ಎರಡು ರೀತಿ ಅನ್ವಯ ಹೇಳಬಹುದು—(೧ನೇ ಕ್ರಮ-ತಾ.ನಿ.) ಯತಃ ಅಜನಿ (ತಸ್ಯ) ದೇವಸ್ಯ (ಪ್ರೀತ್ಯರ್ಥಂ ಆಜ್ಞಯಾ ಚ) ಸಹಸಃ ದೇವಸ್ಯ ತತ್ ಬಟ್ ದರ್ಶತಂ, ಭರ್ಗಃ (ಚ) । ತತ್ ಇತ್ಥಾ ವಪುಷೇ ಧಾಯಿ ॥ (೨ನೇ ಕ್ರಮ ಉಪ-ಭಾಷ್ಯಟೀಕೆಗಳು) ಸಹಸೋ ದೇವಸ್ಯ ತತ್ ಬಟ್ ದರ್ಶತಂ, ಭರ್ಗಃ (ಚ) । ತತ್ ಯತಃ ಅಜನಿ (ಯತಃ) ಇತ್ಥಾ ವಪುಷೇ ಧಾಯಿ ॥ (ಉತ್ತರಾರ್ಧ) ಯತ್ ಈಂ (ಪ್ರಥಮಂ ವಪುಃ) ಮತಿಃ ಋತಸ್ಯ ಉಪ ಹ್ವರತೇ, ಈಂ ಸಾಧತೇ । ಋತಸ್ಯ ಸಸ್ರುತಃ ಧೇನಾಃ ಈಂ ಅನಯಂತ ॥ (ಈಂ ಎಂಬುದನ್ನು ಆವೃತ್ತಿಮಾಡಿಕೊಂಡು ಅನ್ವಯಮಾಡಿದೆ)

ಘ) ಅನ್ವಯಾರ್ಥ—(ಪೂರ್ವಾರ್ಧ) (೧ನೇ ಕ್ರಮ) ಯತಃ—ಯಾವ ಕಾರಣದಿಂದ ಅಥವಾ ಯಾವ ಶ್ರೀಮನ್ನಾರಾಯಣನಿಂದ; ಅಜನಿ—ಹುಟ್ಟಿತೋ; (ತಸ್ಯ) ದೇವಸ್ಯ—ಆ ಕ್ರೀಡಾದಿಗುಣವಿಶಿಷ್ಟನಾದ ಶ್ರೀಹರಿಯ ಆಜ್ಞೆಯಿಂದಲೂ ಅವನ ಪ್ರೀತ್ಯರ್ಥವಾಗಿಯೂ ; ಸಹಸಃ—ಬಲರೂಪನಾದ ಅಥವಾ (ಸಹ = ಸಹಿಸು ಧಾತುವಿನಿಂದ) ಕಲ್ಯಾದಿ ದೈತ್ಯರು ಮಾಡುವ ಉಪ-ದ್ರವಗಳನ್ನೆಲ್ಲಾ ಸಹಿಸಿಕೊಳ್ಳಬಲ್ಲ ಸಹನಶೀಲನಾದ (ತಾ.ನಿ.) ಅಥವಾ ಶೀಘ್ರಗತಿಯುಳ್ಳವನಾದ್ದರಿಂದ ವೇಗವುಳ್ಳ (ತಾ.ನಿ.) ಅರಿವೇಗವನ್ನು ಸಹಿಸ-

ಬಲ್ಲ (ತಾಮ್ರ.) ; ದೇವಸ್ಯ—ವಾಯುದೇವರ ; ತತ್—ಮೂಲರೂಪವು ; ಬಟ್—ಬಲಾತ್ಮಕವೂ, ದರ್ಶತಂ—ಜ್ಞಾನಾತ್ಮಕವೂ ಆಗಿರುವುದರಿಂದ ವಾಯು-ಶಬ್ದವಾಚ್ಯವಾಗಿದೆ. ಹೀಗೆಯೇ-ಭರ್ಗಃ-ಭರಣ-ಗಮನವುಳ್ಳದ್ದಾದ್ದರಿಂದಲೂ ಎಂದರೆ ಸಕಲ ಜಗತ್ತನ್ನೂ ಶ್ವಾಸರೂಪದಿಂದ ಧರಿಸುವುದಕ್ಕಾಗಿ ಆಯಾ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವುದರಿಂದಲೂ ವಾಯುಶಬ್ದವಾಚ್ಯ-ವಾಗಿದೆ. ತತ್—ಅದು ; ಇತ್ಥಾ—ಹೀಗೆಯೇ (ಮೂಲರೂಪದಂತೆ ಬಲಾ-ತ್ಮಕವೂ ಜ್ಞಾನಾತ್ಮಕವೂ ಆಗಿಯೇ), ವಪುಷೇ—ಅವತಾರಕ್ಕಾಗಿ ; ಧಾಯಿ—ಧರಿಸಲ್ಪಟ್ಟಿತು. (ಎನೇ ಕ್ರಮ) ಸಹಸಃ ದೇವಸ್ಯ—ಬಲಸ್ವರೂಪನೂ; ಅರಿವೇಗವನ್ನು ಸಹಿಸಬಲ್ಲವನೂ ಆದ ವಾಯುದೇವರ ; ತತ್—ಮೂಲರೂಪವು ; ಬಟ್—ಬಲಾತ್ಮಕವೂ, ದರ್ಶತಂ—ಜ್ಞಾನಾತ್ಮಕವೂ ಆಗಿರುವುದರಿಂದಲೂ, ಭರ್ಗಃ—ಭರಣಗಮನಸ್ವರೂಪವುಳ್ಳದ್ದಾದ್ದರಿಂಧಲೂ ವಾಯುಶಬ್ದವಾಚ್ಯವಾಗಿದೆ. ತತ್—ಅದು, ಯತಃ—ಯಾವ ಶ್ರೀಮ-ನ್ನಾರಾಯಣನಿಂದ, ಅಜನಿ—ಹುಟ್ಟಿತೋ, ಯತಃ—ಆ ಭಗವಂತನ ಆಜ್ಞೆ-ಯಿಂದಲೇ ಅವನ ಪ್ರೀತ್ಯರ್ಥವಾಗಿಯೇ ; ಇತ್ಥಾ—ಹೀಗೆಯೇ (ಮೂಲ-ರೂಪದಂತೆಯೇ),. ವಪುಷೇ—ಅವತಾರಕ್ಕಾಗಿ ; ಧಾಯಿ—ಆಜ್ಞೆಮಾಡಲ್ಪಟ್ಟು ಅವತಾರವನ್ನೂ ಮಾಡಿತು. (ಉತ್ತರಾರ್ಧ) ಯತ್ ಈಂ—ಆ ವಾಯುವಿನ ಯಾವ ಪ್ರಥಮರೂಪವಿದೆಯೋ ; ಮತಿಃ—ಜ್ಞಾನಸ್ವರೂಪವುಳ್ಳದ್ದಾದ್ದರಿಂದ ಮತಿಶಬ್ದವಾಚ್ಯವಾದ ಆ ಹನುಮದ್ರೂಪವು ; ಋತಸ್ಯ—ಯಥಾರ್ಥಜ್ಞಾನ-ಸ್ವರೂಪನಾದ್ದರಿಂದಲೂ, ಶಶ್ವದೇಕಪ್ರಕಾರವಾಗಿರುವುದರಿಂದಲೂ ನಿತ್ಯವೂ ಒಂದೇ ರೀತಿಯಾಗಿರುವವನೆಂದು ತಿಳಿಯಲ್ಪಡುವವನಾದ್ದರಿಂದಲೂ ಋತ-ಶಬ್ದವಾಚ್ಯನಾದ ಶ್ರೀರಾಮನ ; ಉಪ-ಸಮೀಪದಲ್ಲೇ ; ಹ್ವರತೇ—ಕ್ರೀಡಿಸು-ತ್ತದೆ (ತಾ.ನಿ.) ಇರುತ್ತದೆ (ತಾಮ್ರ. ವೇ. ಭಾ.ಬೋ. ಶ್ರೀ.) ಅಥವಾ (ಹ್ವರ ಕೌಟಿಲ್ಯೇ ಎಂಬ ಧಾತುವಿನಿಂದ) ವಿನಯದಿಂದ ನಮ್ರವಾಗಿ ವರ್ತಿಸು-ತ್ತದೆ (ತಾ.ನಿ.) ಈಂ—ಹೀಗೆಯೇ (ಎಂದರೆ ಸಮೀಪದಲ್ಲಿದ್ದು ಸೇವೆ ಸಲ್ಲಿಸಿ-ದಂತೆಯೇ) (ತಾ.ನಿ) ; ಸಾಧತೇ—(ದೂರದಲ್ಲಿದ್ದೂ ಸಹ) ಶ್ರೀರಾಮನ ಕಾರ್ಯಗಳನ್ನು ಸಾಧಿಸುತ್ತದೆ. ಸಾಧಿಸಿದ ಕಾರ್ಯವೇನೆಂದರೆ— ಋತಸ್ಯ—

ಶ್ರೀರಾಮನ ; ಸಸ್ರುತಃ-ಅಮೃತವನ್ನು ಸುರಿಸುವ ; ಧೇನಾಃ-ಮಾತುಗಳು; ಈಂ-ಲಕ್ಷ್ಮೀರೂಪಳಾದ ಸೀತಾದೇವಿಗೆ, ಅನಯಂತ-ಒಯ್ಯಲ್ಪಟ್ಟವು ; ಅಥವಾ ಋತಸ್ಯ-ಶ್ರೀರಾಮನ ಮಹಿಮಾಪ್ರತಿಪಾದಕವಾದ ; ಸಸ್ರುತಃ-ಅಮೃತಾಖ್ಯಮೋಕ್ಷವನ್ನು ಸುರಿಸುವ ; ಧೇನಾಃ-ಮೂಲರಾಮಾಯಣ-ವಾಕ್ಯಗಳು ; ಅನಯಂತ-ದೇವರ್ಷಿಗಂಧರ್ವಾದಿಶ್ರೋತೃಗಳಾದ ಶಿಷ್ಯವರ್ಗಕ್ಕೆ ಒಯ್ಯಲ್ಪಟ್ಟವು.

371. ವಿಶೇಷ ವಿಚಾರಗಳು—ಬಟ್, ದರ್ಶತಂ, ಭರ್ಗಃ ಶಬ್ದ-ಗಳ ವಿವರಣೆಯನ್ನು ಈ ಮೊದಲೇ ಖಂಡ 369 ಥ iv, v, viii-ರಲ್ಲಿ ಕೊಟ್ಟಿದೆ. i) ಸಹಸಃ ಎಂಬುದು ಸಹಸ್ ಎಂಬ ಸಕಾರಾಂತ ನಪುಂಸಕ-ಲಿಂಗಶಬ್ದದ ಷಷ್ಠೀ ಏಕವಚನರೂಪ. ದೇವಸ್ಯ (ವಾಯೋಃ) ಎಂಬುದಕ್ಕೆ ವಿಶೇಷಣವಾದ್ದರಿಂದ ಪುಲ್ಲಿಂಗವಾಗಿದೆ ; ವೈದಿಕಪ್ರಯೋಗವಾದ್ದರಿಂದ ಪುಲ್ಲಿಂಗ ಬಂದಿದೆ ; ವೇಧಸ್ ಶಬ್ದದಂತೆ ರೂಪಗಳು (ಲೇ.) ಎ) ಭಾಗವತದಲ್ಲಿ 'ಪ್ರಾಣಃ ಸಹೋ ಬಲಮೋಜಶ್ಚ ವಾಯುಃ' ಎಂದು ಹೇಳಿರುವುದರಿಂದ ಸಹಃ ಬಲಂ ಮೊದಲಾದ ಶಬ್ದಗಳು ವಾಯುದೇವರಿಗೆ ನೇರವಾಗಿ ಅನ್ವಯಿಸು-ತ್ತವೆ (ಯು.ಮ) ಬಿ) 'ದ್ರವಿಣಂ ತರಃ ಸಹೋ ಬಲಂ ಶೌರ್ಯಾಣಿ' ಎಂದು ಅಭಿಧಾನ(ಕೋಶ)ವಿರುವುದರಿಂದ ಸಹಸಃ ಎಂದರೆ ಬಲರೂಪನಾದ ವಾಯು-ವಿನ ಎಂದರ್ಥ (ತಾ.ನಿ.) ಸಿ) ಅಥವಾ 'ಸಹ ಮರ್ಷಣೇ' ಅರಿವೇಗಸಹ-ನವತೋ ವಾಯೋಃ (ತಾಮ್ರ.,ಐತ.ಭಾ.ಟೀಕಾ) ಸಹ ಧಾತುವಿಗೆ ಸಹಿಸು, ಸಹಿಸಿಕೋ ಎಂದರ್ಥವಾಗುವುದರಿಂದ ಸಹಸಃ ಎಂದರೆ ಶತ್ರುಗಳ ವೇಗವನ್ನು ಸಹಿಸಬಲ್ಲ ಎಂದರ್ಥವಾಗುತ್ತದೆ. (ಉದಾಹರಣೆಗೆ ಹನುಮದವತಾರದಲ್ಲಿ ಅಶೋಕವನ ಭಂಗಮಾಡಿದಾಗ ಒಬ್ಬನೇ ಅನೇಕ ಲಕ್ಷಜನ ರಾಕ್ಷಸರ ಸೈನ್ಯ-ವನ್ನು ನಾಶಮಾಡಿದನು, ಬಾಲಕ್ಕೆ ಬೆಂಕಿ ಹಚ್ಚುವವರೆಗೂ ಸುಮ್ಮನೆ ಸಹಿಸಿ-ಕೊಂಡಿದ್ದು ಆ ಬೆಂಕಿಯಿಂದಲೇ ಲಂಕಾಪಟ್ಟಣವನ್ನು ದಹಿಸಿಬಿಟ್ಟನು. ಭೀಮಾವತಾರದಲ್ಲಿ ಒಬ್ಬನೇ ಲಾಕ್ಷಾಗೃಹಕ್ಕೆ ಬೆಂಕಿಹಚ್ಚಿ ಅಣ್ಣತಮ್ಮಂದಿರ-ನ್ನೆಲ್ಲಾ ಸ್ಥಳಾಂತರಕ್ಕೆ ಒಯ್ದದ್ದು, ಬಕ-ಹಿಡಿಂಬ-ಕಿರ್ಮೀರ-ಕೀಚಕ-ಜರಾಸಂಧಾದಿಗಳನ್ನೂ ಮಣಿಮಂತನೇ ಮೊದಲಾದ ಮುನ್ನೂರು ಕೋಟಿ

ದೈತ್ಯರನ್ನು ಸಂಹಾರ ಮಾಡಿದನು.) ಡಿ) ಸಹ ಮರ್ಷಣೇ ಎಂಬುದರಿಂದ ಸಹನಶೀಲನಾದ ಎಂಬುದಕ್ಕೆ ವಾದಿರಾಜರು ಬೇರೆ ವಿವರಣೆ ಕೊಡುತ್ತಾರೆ. ಛಾಂದೋಗ್ಯ ಬೃಹದಾರಣ್ಯಕಾದಿ ಉಪನಿಷತ್ತುಗಳಲ್ಲಿ ಕಲ್ಯಾದಿ ದೈತ್ಯರು ಮುಖ್ಯಪ್ರಾಣನನ್ನು ಘಾಸಿಮಾಡಬೇಕೆಂದು ಅವನ ಮೈಮೇಲೆ ಬಿದ್ದಾಗ, ಬಂಡೆಗಲ್ಲಿಗೆ ಡಿಕ್ಕಿಹೊಡೆದ ಮಣ್ಣು ಹೆಂಟೆಗಳಂತೆ ತಾವೇ ಭಗ್ನರಾಗಿ ಹೋದರು (ಛಾಂ.ಉಪ. ೧ಅ., ಖಂಡ, ೧- ಮಂತ್ರಗಳು. ಬೃಹ.ಉಪ. ೩ಅ. ೩ಬ್ರಾ. ೧-೭ ಖಂಡಗಳು ಇತ್ಯಾದಿ) ಎಂದು ವರ್ಣಿಸಿದೆ. ಅದರಂತೆ 'ಕಲ್ಯಾದ್ಯಸುರ-ಕೃತೋಪದ್ರವಸಹನಶೀಲಸ್ಯ' (ತಾ.ನಿ.)—ಕಲಿಯೇ ಮೊದಲಾದ ದೈತ್ಯರು ಮಾಡಿದ ಉಪದ್ರವವನ್ನು ಸಹಿಸಬಲ್ಲ ಎಂದರ್ಥ. ಇ) ಆಶುಗತ್ವಾತ್ ವೇಗವತೋವಾ (ತಾ.ನಿ.) 'ವಾಯುವೇಗ'ಎಂದು ಪ್ರಸಿದ್ಧಿ ಇರುವುದರಿಂದ ಶೀಘ್ರವಾಗಿ ಚಲಿಸುವ, ಅತಿ ಶೀಘ್ರಗತಿಯುಳ್ಳ ಎಂದೂ ಅರ್ಥವಾಗುತ್ತದೆ

ii) ಮತಿ ಶಬ್ದಾರ್ಥವು ದುರೂಹವಾದುದರಿಂದ ಅದರ ಅರ್ಥವನ್ನು ಶ್ರೀಮದಾಚಾರ್ಯರೇ 'ಸದ್ಭಾವ'ವೆಂಬ ಸ್ಮೃತಿಯ ವಾಕ್ಯದಿಂದಲೇ ವಿವರಿಸುತ್ತಾರೆ—ಹನು(ನ)ಶಬ್ದೋ ಜ್ಞಾನವಾಚೀ ಹನೂಮಾನ್ ಮತಿಶಬ್ದಿತಃ ॥ (ವಿವರಣೆ) ಹನ ಹಿಂಸಾಗತ್ಯೋಃ ಎಂದು ಧಾತುಪಾಠವಿರುವುದರಿಂದ ಹನ್ ಧಾತುವಿಗೆ ಗತ್ಯರ್ಥವೂ ಇರುವುದರಿಂದ ಜ್ಞಾನಾರ್ಥವೂ ಆಗುತ್ತದೆ. ಅದಕ್ಕೆ ಉಣ್ ಪ್ರತ್ಯಯ ಸೇರಿದರೆ ಹನು ಎಂದರೆ ಜ್ಞಾನ ಎಂದೇ ಆಗುತ್ತದೆ. ಕೆಲವರು ಹನು ಶಬ್ದಕ್ಕೇ ಜ್ಞಾನಾರ್ಥ ಹೇಳುತ್ತಾರೆ. ಹನುಃ—ಜ್ಞಾನಂ, ಅಸ್ಯಾಸ್ತೀತಿ ಹನುಮಾನ್ ಎಂಬ ವ್ಯುತ್ಪತ್ತಿಯಿಂದ ಹನುಮಾನ್ ಎಂದರೆ ಜ್ಞಾನವುಳ್ಳವನು ಎಂದರ್ಥವಾಗುತ್ತದೆ. ಹನ—ಜ್ಞಾನ ಎಂಬ ಪಕ್ಷದಲ್ಲಿ ಅದು ಅಕಾರಾಂತವಾದ್ದರಿಂದ 'ಹನವಾನ್' ಎಂದಾಗುತ್ತದೆ. 'ಹನವಾನಿತಿ ವಕ್ತವ್ಯೇ ಸರ್ವದಾ ಜ್ಞಾನಶೀಲತ್ವದ್ಯೋತನಾಯ ಉದ್ವಯೋಃ ಕೃತೇ ಹನೂಮಾನಿತಿ ಭವತಿ' (ತಾ.ನಿ.) ಆ ಹನುಮಂತ ಸರ್ವದಾ ಜ್ಞಾನಶೀಲನಾಗಿದ್ದಾನೆ ಎಂಬುದನ್ನು ತೋರಿಸುವುದಕ್ಕಾಗಿ ಎರಡು ಉಕಾರಗಳನ್ನು ಸೇರಿಸಿ ಹನೂಮಾನ್ ಎಂದು ಹೇಳುತ್ತಾರೆ. ಹನು ಎಂದಿದ್ದರೂ ಹನೂ ಎಂದಾಗುತ್ತದೆ. ಮತಿ ಎಂದರೆ ಬುದ್ಧಿ ಅರ್ಥಾತ್ ಜ್ಞಾನ. ಹನೂಮಂತ ಮಹಾಜ್ಞಾನಿ ಎಂಬ ಅರ್ಥ-

ವನ್ನು ತೋರಿಸುವುದಕ್ಕಾಗಿಯೇ ಶ್ರುತಿಯು ಹನುಮಂತನನ್ನು 'ಮತಿ' ಶಬ್ದದಿಂದ ಹೇಳಿತೆಂದು ಸ್ಮೃತಿ ಹೇಳುತ್ತದೆ. 'ಅತ್ರ ಯದ್ಯಪಿ ಮತಿಮಾನಿತಿ ವಕ್ತವ್ಯಂ, ತಥಾಪಿ ಮತಿಮತೋಽಪಿ ಮತಿಸ್ವರೂಪತಾಜ್ಞಾಪನಾಯ ಮತಿ-ರಿತ್ಯೇವೋಕ್ತಮಿತಿ ಜ್ಞಾತವ್ಯಮ್'(ವೇ.) ಹನುಮಾನ್ ಎಂದು ಹೇಳಿದಂತೆ ಮತಿಮಾನ್ ಎಂದೇ ಹೇಳಬೇಕಾಗಿದ್ದರೂ, ಮತಿಯುಳ್ಳವನಿಗೆ (ಜ್ಞಾನಿಗೆ) ಮತಿಯೇ (ಜ್ಞಾನವೇ) ಅವರ ಸ್ವರೂಪಭೂತವಾಗಿದೆಯೆಂದು ತೋರಿಸುವುದ-ಕ್ಕಾಗಿ 'ಮತಿಃ' ಎಂದೇ ಶ್ರುತಿಯು ಹೇಳಿತು (ವೇ.) ಈ ಅಂಶವನ್ನು ವಾದಿರಾಜರು ಹೀಗೆ ಹೇಳಿದ್ದಾರೆ—ಪ್ರಥಮರೂಪವು ಅತಿಶಯವಾಗಿ ಜ್ಞಾನ-ವುಳ್ಳದ್ದಾದ್ದರಿಂದ 'ಮತಿರೇವ ರೂಪವತೀ' ಎಂದು ಕವಿಗಳು ವರ್ಣಿಸಿರು ವಂತೆ ಹನೂಮಂತನನ್ನು ಶ್ರುತಿಯು ಮತಿಃ ಅರ್ಥಾತ್ ನಿತ್ಯವೂ ಪರಿ-ಪೂರ್ಣವೂ ಪರಿಶುದ್ಧವೂ ಆದ ಜ್ಞಾನಸ್ವರೂಪವುಳ್ಳವನೆಂದು ಹೇಳಿತು (ಯು.ಮ.)

iii) ಋತಸ್ಯ (ತಾ.ನಿ.) 'ಋ ಗತೌ' ಎಂಬ ಧಾತುವಿನ ರೂಪ-ವಾದ್ದರಿಂದ ಋತಸ್ಯ ಎಂದರೆ ಜ್ಞಾನಾತ್ಮಕನಾದ ಶ್ರೀರಾಮನ ಎಂದರ್ಥ. (ಬಿ)(ವೇ.) ಋತಸ್ಯ ಎಂಬುದರ ಅರ್ಥವನ್ನು ಸ್ಮೃತಿಯು 'ಸ್ವೃತರೂಪಸ್ಯ' ಎಂದು ವಿವರಿಸುತ್ತದೆ. ಸು ಎಂದರೆ ಸುಷ್ಠು ಎಂದರ್ಥ; ಆದರಿಂದ ಸರ್ವದಾ-ಮತ್ತು ಸರ್ವತ್ರ ಎಂಬ ಭಾವ; ಋತಸ್ಯ ಎಂದರೆ ಸತ್ಯರೂಪನಾದ ಎಂದರ್ಥ. ಅಥವಾ ಪೂರ್ವಾವಗತವತ್ ಸದಾ ಸ್ಥಿತಸ್ಯೇತ್ಯರ್ಥಃ = ಹಿಂದೆ ತಿಳಿದುಕೊಂಡಿದ್ದಂತೆಯೇ ಸದಾ ಇರುವ ಎಂದರ್ಥ (ನಿತ್ಯದಲ್ಲೂ ಯೌವನಾ-ವಸ್ಥೆಯಲ್ಲೇ ಇರುವ) ಎಂದರ್ಥ (ವೇ.) 'ಋ ಗತಾವಿತಿ ಧಾತೋಸ್ತು ಪೂರ್ವಾವಗತವತ್ ಸದಾ। ಸ್ಥಿತೇರ್ಬ್ರಹ್ಮರ್ತಮಿತ್ಯುಕ್ತಮ್ = ಋ ಧಾತು-ವಿಗೆ ತಿಳಿ ಎಂದರ್ಥವಿರುವುದರಿಂದ ಋತ ಎಂದರೆ ಪರಬ್ರಹ್ಮವು 'ವಿಷ್ಣುವು' ಹಿಂದೆ ತಿಳಿದುಕೊಂಡಂತೆಯೇ ನಿತ್ಯದಲ್ಲೂ ಇರುತ್ತದೆ ಎಂದರ್ಥ. (ತಾಮ್ರ) ಋತಸ್ಯ–ಯಥಾರ್ಥಜ್ಞಾನಸ್ವರೂಪಸ್ಯ—ಯಥಾರ್ಥಜ್ಞಾನಸ್ವರೂಪನಾದ ; ಅಥವಾ ಏಕಪ್ರಕಾರೇಣ ಶಶ್ವದವಗತಸ್ಯ–ಯಾವಾಗಲೂ ಒಂದೇ ಪ್ರಕಾರ-ವಾಗಿಯೇ (ವ್ಯತ್ಯಾಸವಿಲ್ಲದೆ) ಕಂಡುಬರುವ ರಾಮನ– ಎಂದೂ ಅರ್ಥ-ವಾಗುತ್ತದೆ.

iv) **ಧೇನಾ** ಶಬ್ದವು ಆಕಾರಾಂತಸ್ತ್ರೀಲಿಂಗ. ನಿರುಕ್ತದಲ್ಲಿ ಇದನ್ನು ವಾಕ್‌ಶಬ್ದದ ಪರ್ಯಾಯವಾಗಿ ಪಠಿಸಿರುವುದರಿಂದ ಧೇನಾಃ ಎಂದರೆ ವಾಚಃ-ಮಾತುಗಳು ಎಂದರ್ಥ. (ಎ) (ತಾ.ನಿ.) ಇದರ ವ್ಯುತ್ಪತ್ತಿಯನ್ನು ಹೀಗೆ ತೋರಿಸುತ್ತಾರೆ—ಧಿಜ್ ಪ್ರುಷ್ಟೌ ಎಂಬ ಧಾತುವಿನ ರೂಪವಾದ್ದರಿಂಡ ದೇವತೆಗಳ ಕಾರ್ಯವನ್ನು ಪುಷ್ಟೀಕರಿಸುವ ಮಾತುಗಳಾದ್ದರಿಂದ ಧೇನಾಃ ಎಂದಿತು. (ಬಿ) ಯು.ಮ.ದಲ್ಲಿ ಧಿನು ಪುಷ್ಟೌ ಎಂಬ ಧಾತುಪಾಠವಿರುವುದರಿಂದ ಕಾಮಧೇನುವಿನಂತೆ ಸಜ್ಜನರನ್ನು ಬೆಳೆಸಿ ಪೋಷಿಸಿ ಸಂರಕ್ಷಿಸತಕ್ಕವಾದ್ದರಿಂದ ರಾಮನ ಮಾತುಗಳಿಗೆ ಧೇನಾಃ ಎಂದು ಹೆಸರು. (ಸಿ) (ತಾಮ್ರ.) ಧೇಟ್ ಪಾನೇ । ಧಯಂತೇ–ಪಿಬಂತಿ ಆಸು ಮುಮುಕ್ಷವೋ ರಾಮಕಥಾಮೃತಮಿತಿ ಧೇನಾಃ–ಮೂಲರಾಮಾಯಣಾದಿ ವಾಚಃ । ಧೇಟ್ ಪಾನೇ ಎಂಬ ಧಾತುವಿನ ರೂಪವಾದ್ದರಿಂದ ಯಾವ ಮೂಲರಾಮಾಯಣಾದಿ ವಾಕ್ಯಗಳಲ್ಲಿ ಮುಮುಕ್ಷುಗಳು ರಾಮಕಥಾಮೃತವನ್ನು ಪಾನಮಾಡುತ್ತಾರೋ ಅಂಥಾ ವಾಕ್ಯಗಳು ಎಂದೂ ಅರ್ಥ. ಯದ್ವಾ ಅಪಶಬ್ದಾದಿದೋಷರಹಿತಾಃ ಸಂದೇಶರೂಪಾ ವಾಚಃ (ತಾಮ್ರ.) ಅಥವಾ ಅಪಶಬ್ದಾದಿದೋಷರಹಿತವಾದ ಶ್ರೀರಾಮನ ಸಂದೇಶದ ಮಾತುಗಳು ಎಂದೂ ಅರ್ಥ.

v) **ಅನಯಂತ** ಎಂದರೆ ಆನೀಯಂತ ಎಂಬಂತೆ ಕರ್ಮಣಿ ಪ್ರಯೋಗದಲ್ಲಿದ್ದರೂ 'ವ್ಯತ್ಯಯೋ ಬಹುಲಮ್' (ಪಾ. ೩/೧/೮೫) ಎಂಬ ಸೂತ್ರದಂತೆ ವೇದಗಳಲ್ಲಿ ಪ್ರಯೋಗವ್ಯತ್ಯಾಸಗಳು ಬಹಳ ಬರುತ್ತವೆಯೆಂದು ಹೇಳಿರುವುದರಿಂದ—ಮತಿಃ ಧೇನಾಃ ಅನಯಂತ–ಹನುಮಂತನು ಮಾತುಗಳನ್ನು ಒಯ್ದನು ಎಂದು ಕ್ರಿಯೆಗೇ ಕರ್ತರಿ ಅರ್ಥ ಹೇಳಬಹುದು. ಅಥವಾ . ಕ್ರಿಯೆ ಕರ್ಮಣಿಯಾದ್ದರಿಂದ ಅದೇ ಸೂತ್ರದಂತೆ ಪ್ರಥಮಾ ವಿಭಕ್ತಿಗೇ (ಮತಿಃಗೆ) ತೃತೀಯಾರ್ಥವಾದರೂ (ಹನುಮಂತನಿಂದ ಒಯ್ಯಲ್ಪಟ್ಟವು) ಹೇಳಬಹುದು (ತಾ.ನಿ.) (vi) **ಸಸ್ರುತಃ** (ಸ್ತ್ರೀ ಪ್ರಥಮಾ ಬಹುವಚನರೂಪ) ಎಂಬುದು 'ಧೇನಾಃ'ಗೆ ವಿಶೇಷಣ. ಸ್ರು ಧಾತುವಿಗೆ ಸ್ರವಿಸು, ಮೆಲ್ಲಗೆ ಜಿನುಗು, ಸಣ್ಣಗೆ ಸೋರು ಎಂದರ್ಥ ಆದರಿಂದ ಸ್ರುತ್ ಎಂದರೆ ಅಮೃತವನ್ನು ಸ್ರವಿಸುವ ಎಂದರ್ಥ. ಆದರಿಂದ ಕೂಡಿದ್ದು ಸ-ಸ್ರುತಃ–

ಅಮೃತಸ್ರವಣಸಹಿತಾಃ ಅಥವಾ ಅಮೃತರಸವನ್ನು ಸ್ರವಿಸುವಂಥಾ ಎಂದು ಮಾತುಗಳಿಗೆ (ಧೇನಾಃ) ವಿಶೇಷಣ.

vii) ಈ ಸೂಕ್ತವು ಪ್ರಾಣಾಗ್ನಿಪರವಾಗಿದ್ದರೂ ಮುಖ್ಯತಃ ವಾಯು-ಪರವಾಗಿಯೂ ಇದೆಯೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ವಾಯು-ಶಬ್ದಾರ್ಥಪ್ರತಿಪಾದಕವಾದ **ಬಟ್, ದರ್ಶತಂ, ಭರ್ಗಃ** ಎಂಬ ವಿಶೇಷಣ-ಗಳನ್ನು ಪ್ರಾರಂಭದಲ್ಲೇ ಮಂತ್ರವು ಪಠಿಸುತ್ತದೆ. ಮುಂದೆ ಮೂರನೇ ಮಂತ್ರದಲ್ಲಿ ಸ್ಪಷ್ಟವಾಗಿ ವಾಯುವಾಚಕವಾದ **ಮಾತರಿಶ್ವಾ** ಪದವನ್ನು ಪಠಿಸುವುದರಿಂದ ಈ ಮಂತ್ರಗಳು ಮುಖ್ಯಪ್ರಾಣನಿಗೂ ಅನ್ವಯಿಸುತ್ತ-ವೆಂಬುದು ನಿಸ್ಸಂದಿಗ್ಧವಾಗಿ ನಿರ್ಣಯವಾದಹಾಗಾಯಿತು. (ಯು ಮು., ಉಪ. ಭಾ. ಟೀ.) (viii) ಮೊದಲ ಎರಡು ರೂಪಗಳಲ್ಲಿ (ಹನುಮ-ಭೀಮ-ರೂಪಗಳಲ್ಲಿ) ವಿಶೇಷವಾಗಿ ಬಲಕಾರ್ಯವನ್ನು ನಿರ್ವಹಿಸುವುದಕ್ಕೂ ಮೂರ-ನೆಯ ಮಧ್ವರೂಪದಲ್ಲಿ ಜ್ಞಾನಪ್ರಚಾರಕಾರ್ಯವನ್ನು ಕೈಗೊಳ್ಳುವುದಕ್ಕೂ ಆವಶ್ಯಕವಾದ ಬಲವೂ ಜ್ಞಾನವೂ ಆ ವಾಯುವಿಗೆ ಇತ್ತು ಎಂದು ಪ್ರತಿಪಾದಿ-ಸುವುದಕ್ಕೆ ಕ್ರಮವಾಗಿ ಬಟ್ ದರ್ಶತಂ ಎಂಬ ಎರಡು ವಿಶೇಷಣಗಳನ್ನು ಮೊದಲೇ ಹೇಳಿತು. (ಯು. ಮು.) (ix) ನಿರಂತರವಾಗಿ ಆ ಭಗವಂತನನ್ನು ತಮ್ಮ ಹೃದಯದಲ್ಲಿ ಧರಿಸಿರುವುದರಿಂದಲೂ (ಭರ್), ಅವನ ವಿಚಾರವನ್ನು ಚೆನ್ನಾಗಿ ಶಾಸ್ತ್ರಾಧ್ಯಯನದಿಂದ ತಿಳಿದುಕೊಂಡು (ಗ-ಅವಗಮ್-ತಿಳಿ-ದುಕೋ) ಆ ಪರಮಾತ್ಮನನ್ನು ಸದಾ ಧ್ಯಾನಿಸುತ್ತಿರು (ಗ)ವುದರಿಂದಲೂ, ಅವರಿಗೆ ಈ ಉಭಯವಿಧ ಶಕ್ತಿ (ಬಟ್ ದರ್ಶತಂ) ಉಂಟಾಯಿತೆಂಬುದನ್ನು **ಭರ್ಗಃ** ಎಂಬ ಮೂರನೇ ವಿಶೇಷಣ ತಿಳಿಸುತ್ತದೆ. (ಯು. ಮು.) (x) ಅಥವಾ **ದರ್ಶತ** ಪದವು ಜ್ಞಾನವಾಚಕವಾದುದರಿಂದ ಶ್ರೀಮದಾಚಾರ್ಯರಿಗೂ ವಾಯುದೇವರಿಗೂ ಸಕಲವೇದೇತಿಹಾಸಪುರಾಣಾದಿಸಕಲಶಾಸ್ತ್ರದ ಸುಸ್ಪಷ್ಟ-ವಾದ ಸಮೀಚೀನಜ್ಞಾನವಿದೆಯೆಂಬುದನ್ನೂ ಅವರ ಜ್ಞಾನವು ಭಗವದಿತರತ್ರ ಆಲೋಚನೇ (ಆಲೋಚನೆಮಾಡಿದ ಪಕ್ಷದಲ್ಲಿ) ಸರ್ವಪದಾರ್ಥವಿಷಯಕ-ವಾದುದೆಂಬುದನ್ನೂ ತೋರಿಸುತ್ತದೆ. 'ಋತಂ ವದಿಷ್ಯಾಮಿ' 'ಸತ್ಯಂ ವದಿಷ್ಯಾಮಿ' ಎಂದು ಶಾಂತಿಪಾಠದಲ್ಲಿ ಹೇಳಿದಂತೆ ಆ ವಾಯುದೇವರು

ಸಕಲಶಾಸ್ತ್ರಾರ್ಥವನ್ನು ತಿಳಿದುಕೊಂಡವರು (ಋತಂ) ಮಾತ್ರವಲ್ಲ, ಅದರಂತೆ (ಶಾಸ್ತ್ರ ಹೇಳಿದಂತೆಯೇ ಚ-ತು ಸಹ ತಪ್ಪದೆ) ಅನುಷ್ಠಾನಮಾಡುವವರೂ (ಸತ್ಯಂ) ಆಗಿದ್ದಾರೆ ಎಂಬುದನ್ನು ಪ್ರಕಟಪಡಿಸುತ್ತಾ **ಭರ್ಗಃ**ಶಬ್ದವು ಆ ವಾಯುದೇವರ (ಹಾಗೂ ಶ್ರೀಮದಾಚಾರ್ಯರ) 'ಧ್ಯಾನೋಪಾಸನಾದಿ-ಕೌಶಲ್ಯ'ವನ್ನು ಪ್ರದರ್ಶಿಸುತ್ತದೆ. ಈ ರೀತಿ ಸಮೀಚೀನಜ್ಞಾನದಿಂದಲೂ ಅಸ್ಖಲಿತಧರ್ಮಾನುಷ್ಠಾನದಿಂದಲೂ ಅವರಿಗೆ ಭಗವಂತನ ನಿತ್ಯಾಪರೋಕ್ಷ-ಜ್ಞಾನವುಂಟಾಗಿ ಅವರಿಗೆ ಸೂರ್ಯನಂತೆ ಸುಸ್ಪಷ್ಟವಾಗಿ ಪ್ರಕಾಶಿಸುತ್ತಿರುವ ಭಗವಂತನು ಸರ್ವದಾ ಪ್ರತ್ಯಕ್ಷವಾಗಿ ಗೋಚರಿಸುತ್ತಿರುತ್ತಾನೆ ಎಂಬ ಪ್ರಮೇಯವನ್ನೂ **ದರ್ಶತ** ಶಬ್ದವು ಸಾರಿಹೇಳುತ್ತದೆ. ಏಕೆಂದರೆ 'ದೃಶಿರ್ ಪ್ರೇಕ್ಷಣೇ' ಇತಿ ಧಾತೋಃ ದರ್ಶಪದಸ್ಯ ಪ್ರಾಯಶಃ 'ಅಪರೋಕ್ಷಜ್ಞಾನ-ವಾಚಕತ್ವಾತ್' = ದೃಶ್-ನೋಡು ಎಂಬ ಧಾತುವಿನ ರೂಪವಾದ 'ದರ್ಶ' ಪದವು ಪ್ರಾಯಶಃ 'ಪ್ರತ್ಯಕ್ಷವಾಗಿನೋಡು' ಎಂಬ ಅರ್ಥವನ್ನೇ ಕೊಡು-ವುದರಿಂದ ಅಪರೋಕ್ಷಜ್ಞಾನಸೂಚಕವಾಗಿದೆ. (ಯು.ಮ.)

xi) **ಉಪ ಹ್ವರತೇ ಸಾಧತೇ** ಎಂಬ ಶ್ರುತಿಗೆ ಶ್ರೀಮದಾಚಾರ್ಯರು ಸ್ಮೃತಿಯಿಂದಲೇ ಅರ್ಥ ಹೇಳುತ್ತಾರೆ—ಸಾಧಕೋ ರಾಮವಾಕ್ಯಾನಾಂ ತತ್ಸಮೀಪಗತಃ ಸದಾ । **ಹನೂಮಾನ್ ಪ್ರಥಮೋ ಜ್ಞೇಯಃ**....॥' ಪ್ರಥಮಾವತಾರವಾದ ಹನೂಮಂತ ಶ್ರೀರಾಮನ ವಾಕ್ಯವನ್ನು ಸಾಧಿಸಿದ-ನಲ್ಲದೆ ಸದಾ ಆ ಶ್ರೀರಾಮನ ಸನ್ನಿಧಿಯಲ್ಲೇ ಇರುತ್ತಾನೆ. (ಸಮೀಪ-ದಲ್ಲಿರುತ್ತಾನೆ ಎಂಬುದಕ್ಕೆ ಸದಾ ರಾಮನನ್ನು ಧ್ಯಾನಿಸುತ್ತಿರುತ್ತಾನೆ ಎಂದೂ ಅರ್ಥ) xii) **ಋತಸ್ಯ ಧೇನಾ ಅನಯಂತ ಸಸ್ರುತಃ** ಎಂಬುದರ ಅರ್ಥವನ್ನು ಸ್ಮೃತಿ ಹೀಗೆ ಹೇಳುತ್ತದೆ—ರಾಮಸ್ಯ ಸ್ವೃತರೂಪಸ್ಯ ವಾಚ-ಸ್ತೇನಾನಯಂತ ಹಿ ॥ (ಸು+ಋತ=ಸ್ವೃತ-ಯಣ್ ಸಂಧಿ)—ಸರ್ವತ್ರ ಸರ್ವದಾ ನಿರ್ದುಷ್ಟಜ್ಞಾನರೂಪಿಯಾದ (ವೇ.) ಶ್ರೀರಾಮನ ಮಾತುಗಳು ಆ ಹನುಮಂತನಿಂದ ಒಯ್ಯಲ್ಪಟ್ಟವು. ಮತಿಶಬ್ದಕ್ಕೆ ತೃತೀಯಾರ್ಥ ಹೇಳ-ಬೇಕೆಂದು ಸೂಚಿಸಲು 'ತೇನ' ಎಂದು ಸ್ಮೃತಿ ಹೇಳಿದೆ. (ಉಪನಿಷದ್ಭಾಷ್ಯ-ಗಳಿಂದ ಸಂಗ್ರಹ.)

372. ಮಂತ್ರದ ಭಾವಾರ್ಥ—ಭಗವಂತನಿಗೆ ವಿಷ್ಣು ಕೇಶವ ನಾರಾಯಣಾದಿ ನಾಮಗಳು ಸಂಕೇತಮಾತ್ರವಾಗಿರದೆ ಹೇಗೆ ಅರ್ಥವತ್ತಾಗಿಯೇ ಅನ್ವಯಿಸುತ್ತಾ ಅವನ ಅನಂತಗುಣಗಳನ್ನು ಹೇಳುತ್ತವೆಯೋ ಹಾಗೆಯೇ ವಾಯುದೇವರಿಗೂ ಅವರ ಎಲ್ಲ ಹೆಸರುಗಳೂ ಅವರಿಗೆ ಅನ್ವರ್ಥವಾಗಿದ್ದು ಅವರ ಮಹಿಮಾದ್ಯೋತಕವೂ ಆಗಿವೆ. ಪ್ರಸ್ತುತ ವಾಯು ಎಂಬ ನಾಮವನ್ನೇ ತೆಗೆದುಕೊಳ್ಳೋಣ. ಇದರಲ್ಲಿರುವ ವಕಾರವು ಬಲವಾಚಕವೂ ಅಯ ಎಂಬ ಪದ ಜ್ಞಾನವಾಚಕವೂ ಆಗಿದ್ದು ಇವುಗಳ ಮೇಲೆ ತಾಚ್ಛೀಲ್ಯದಲ್ಲಿ ಉಣ್ (ಉ) ಪ್ರತ್ಯಯ ಬಂದು ವಾಯು ಎಂದಾಗಿದೆ. ಆದಕಾರಣ ಅವರು ಅಪರಿಮಿತಬಲವುಳ್ಳವರೆಂದೂ (ಬಟ್) ಪರಿಶುದ್ಧವಾದ ಮತ್ತು ಪರಿಪೂರ್ಣವಾದ ವೇದಾದಿಸಕಲಶಾಸ್ತ್ರಜನ್ಯಯಥಾರ್ಥಜ್ಞಾನವುಳ್ಳವರೆಂದೂ ಅವರ ಜ್ಞಾನವು ಭಗವದಿತರತ್ರ ಆಲೋಚನೇ ಸರ್ವವಿಷಯಕವಾದುದೆಂದೂ (ದರ್ಶತ) ಅವರ ಈ ನಾಮವೇ ಹೇಳುತ್ತದೆ. ಅವರು ಸಕಲಶಾಸ್ತ್ರಗಳನ್ನೂ ಚೆನ್ನಾಗಿ ನಿಸ್ಸಂದಿಗ್ಧವಾಗಿ ಯಥಾರ್ಥವಾಗಿ ಅರಿತುಕೊಂಡಿರುವುದು ಮಾತ್ರವಲ್ಲದೆ ಅವುಗಳಲ್ಲಿ ಹೇಳಿದಂತೆಯೇ ಒಂದನ್ನೂ ಬಿಡದೆ ಸಕಲ ಧರ್ಮಗಳನ್ನೂ ಸ್ವಲ್ಪವೂ ಕೊರತೆಯಿಲ್ಲದೆ ಅನುಷ್ಠಾನಮಾಡುವವರೂ ಆಗಿದ್ದಾರೆ (ಭರ್ಗಃ). ಈ ಪ್ರಕಾರ ಸದಾಚಾರನಿರತರಾಗಿ ಶುದ್ಧವೈಷ್ಣವ ಧರ್ಮವನ್ನೇ ಆಚರಿಸುತ್ತಾ ಸರ್ವಕಾಲದಲ್ಲೂ ಧ್ಯಾನಿಸುತ್ತಿರುವುದರಿಂದ ಆ ಭಗವಂತನು ಅವರಿಗೆ ಸದಾ ಸೂರ್ಯನಂತೆ ಪ್ರಕಾಶಿಸುತ್ತಾ ನಿತ್ಯದಲ್ಲೂ ಪ್ರತ್ಯಕ್ಷವಾಗಿಯೇ ಗೋಚರವಾಗಿದ್ದಾನೆ—ಅವರು ನಿತ್ಯಾಪರೋಕ್ಷಿಗಳು (ದರ್ಶತ).

ಈ ವಾಯುದೇವರು ಆ ಭಗವಂತನಿಂದ ಜನಿಸಿ (ಯತೋಽಜನಿ) ಅವನ ಪ್ರೀತ್ಯರ್ಥ ಅವನ ಸೇವೆಯಲ್ಲೇ ನಿರತರಾಗಿ ಅವನ ಆಜ್ಞಾಪರಿಪಾಲನೆಮಾಡುತ್ತಿರುತ್ತಾರೆ. ಭಗವದಾಜ್ಞೆಯಿಂದ ಪ್ರಾಣರೂಪದಿಂದ ಸಕಲ ಜಗತ್ತನ್ನೂ ಧರಿಸಿದವರಾಗಿ ಸಕಲಪ್ರಾಣಿಗಳಿಗೂ ಚೈತನ್ಯವನ್ನು ಕೊಡುವುದಕ್ಕಾಗಿ (ಭರ.) ಅವರ ಹೃದಯದಲ್ಲೇ ನೆಲೆಸಿದ್ದಾರೆ (ಗ–ಭರ್ಗಃ). ಇದು ಒಂದು ವಿಧ ಸೇವೆ. ಆ ಭಗವಂತ ರಾಮಕೃಷ್ಣಾದಿರೂಪಗಳಿಂದ ಭೂಮಿ-

ಯಲ್ಲಿ ಅವತಾರ ಮಾಡಿ ಬರಲು ಇವರೂ ಸಹ ಅವನ ಸೇವೆಗಾಗಿ ಅವನ ಅಜ್ಞೆಯಿಂದಲೇ ಹನುಮ-ಭೀಮ-ಮಧ್ವ ಎಂಬ ರೂಪಗಳನ್ನು ಧರಿಸುತ್ತಾರೆ. ಮೂಲರೂಪವು ಹೇಗೆ ಬಲಾತ್ಮಕವೂ ಜ್ಞಾನಾತ್ಮಕವೂ ಆಗಿರುವುದಲ್ಲದೆ ಜಗದ್ಧರಣ-ಗಮನದಲ್ಲಿ ಆಸಕ್ತವಾಗಿದೆಯೋ ಹಾಗೆಯೇ ಈ ಅವತಾರರೂಪ-ಗಳೂ ಬಲಾತ್ಮಕವೂ ಜ್ಞಾನಾತ್ಮಕವೂ ಆಗಿರುವುದರ ಜೊತೆಗೆ ಜಗತ್ತಿಗೆ ವಿನಾಶಕರವಾದ ದುಷ್ಟಶಕ್ತಿಗಳನ್ನು ದಮನ ಮಾಡಿ ಜಗತ್ತಿಗೆ ಕಲ್ಯಾಣ-ವನ್ನುಂಟುಮಾಡುತ್ತವೆ. ಮೊದಲ ಎರಡು ರೂಪಗಳಲ್ಲಿ ಎಂದರೆ ಹನುಮ-ಭೀಮರೂಪಗಳಲ್ಲಿ ದೈತ್ಯಸಂಹಾರರೂಪ ಬಲಕಾರ್ಯವೇ ಪ್ರಧಾನ, ಮೂರನೇ ಮಧ್ವರೂಪದಲ್ಲಿ ಜ್ಞಾನಕಾರ್ಯವೇ ಪ್ರಧಾನ ಎಂದೂ ತಿಳಿಯಬೇಕು.

ಆ ವಾಯುವಿನ ಪ್ರಥಮಾವತಾರಕ್ಕೆ ಹನೂಮಂತ ಎಂದು ಹೆಸರು. ಹನು ಶಬ್ದವು ಜ್ಞಾನವಾಚಿಯಾದ್ದರಿಂದ ಹನೂಮಾನ್ ಎಂದರೆ ವಿಶೇಷ ಜ್ಞಾನವುಳ್ಳವನೆಂದರ್ಥ. ಅಷ್ಟೇ ಅಲ್ಲ, ಜ್ಞಾನಸ್ವರೂಪಿಯೂ ಆಗಿದ್ದಾನೆ ಎಂಬುದನ್ನು ಸೂಚಿಸುವುದಕ್ಕಾಗಿ ಶ್ರುತಿಯು ಹನೂಮಂತನನ್ನು ಮತಿಃ ಎಂದು ಉಲ್ಲೇಖಿಸಿತು. ಇದರಿಂದ ಈ ಹನುಮಂತ ಮಹಾವ್ಯಾಕರಣ-ಪಂಡಿತನೆಂದೂ ಚತುರ್ವೇದಪಾರಂಗತನೆಂದೂ ಅವನ ಮಾತಿನಲ್ಲಿ ಕಿಂಚಿದಪ-ಶಬ್ದವೂ ಬರುತ್ತಿರಲಿಲ್ಲವೆಂದೂ ಅವನ ಮಾತು ಗಂಭೀರವಾಗಿ ಅತಿಮೆತ್ತಗೂ ಅತಿವೇಗವೂ ಅತಿಗಟ್ಟಿಯೂ ಆಗಿರದೆ ಅಳತೆಯಾಗಿರುತ್ತೆಂದೂ ರಾಮದೇವರು ಶ್ಲಾಘಿಸಿದ್ದನ್ನು (ಖಂಡ 201 ನೋಡಿ) ನೆನಪುಮಾಡಿಕೊಟ್ಟಂತಾಯಿತು. ಇವನು ಸದಾ ಶ್ರೀರಾಮನ ಸಮೀಪದಲ್ಲಿಯೇ ಇದ್ದುಕೊಂಡು ಆ ರಾಮನಿಗೆ ಏಕಾಂತದ ಅವಿಚ್ಛಿನ್ನ ಭಕ್ತನಾಗಿದ್ದಾನೆ. ರಾಮನ ಸಕಲಕಾರ್ಯಗಳನ್ನೂ ಸಾಧಿಸಿಕೊಟ್ಟನಲ್ಲದೆ ಶ್ರೀರಾಮನ ಸಂದೇಶವನ್ನು ಶಿರಸಾವಹಿಸಿ ನಡೆಸಿ ಅದನ್ನು ಸೀತೆಗೂ ಆಕೆಯ ಸಂದೇಶವನ್ನು ರಾಮನಿಗೂ ಮುಟ್ಟಿಸಿದನು. ಅದಕ್ಕೂ ಹೆಚ್ಚಾಗಿ ಶ್ರೀರಾಮನ ಅದ್ಭುತಮಹಿಮಾಪ್ರತಿಪಾದಕಗಳಾದ ಮೂಲ ರಾಮಾಯಣಾದಿ ಗ್ರಂಥಗಳ ವಾಕ್ಯಗಳನ್ನು ದೇವರ್ಷಿಗಂಧರ್ವಾದಿ ಶ್ರೋತೃ-ಕೋಟಿಗಳಿಗೆ ಉಪದೇಶಿಸಿ ಅವರೆಲ್ಲರೂ ಶ್ರೀರಾಮನನ್ನು ಧ್ಯಾನಿಸುತ್ತಾ ಅವನ ಮಹಿಮೆಯನ್ನು ಕೊಂಡಾಡುವಂತೆಯೂ ಬೋಧಿಸಿದನೆಂಬುದೇ ಪ್ರಥಮಮಂತ್ರದ ಭಾವಾರ್ಥ.

ಎರಡನೇ ಮಂತ್ರ

373. ಅವತಾರಿಕೆ—(ಲೇ.) ಎರಡನೇ ಮಂತ್ರದ ಪೂರ್ವಾರ್ಧದಲ್ಲಿ ಭೀಮಾವತಾರವನ್ನೂ ಉತ್ತರಾರ್ಧದಲ್ಲಿ ಮಧ್ವಾವತಾರ ಮಾಡಿದ್ದನ್ನೂ ಪ್ರಸ್ತಾಪಿಸುತ್ತದೆ.

ಪೃಕ್ಷೋ ವಪುಃ ಪಿತುಮಾನ್ ನಿತ್ಯ ಆ ಶಯೇ

ದ್ವಿತೀಯಮಾ ಸಪ್ತಶಿವಾಸು ಮಾತೃಷು ।

ತೃತೀಯಮಸ್ಯ ವೃಷಭಸ್ಯ ದೋಹಸೇ

ದಶಪ್ರಮತಿಂ ಜನಯಂತ ಯೋಷಣಃ ॥ ೨॥

ii) ಪದಪಾಠ—ಪೃಕ್ಷಃ । ವಪುಃ । ಪಿತುऽಮಾನ್ । ನಿತ್ಯಃ ।
ಆ । ಶಯೇ । ದ್ವಿತೀಯಮ್ । ಆ । ಸಪ್ತऽಶಿವಾಸು । ಮಾತೃಷು ॥

ತೃತೀಯಮ್ । ಅಸ್ಯ । ವೃಷಭಸ್ಯ । ದೋಹಸೇ ।

ದಶऽಪ್ರಮತಿಮ್ । ಜನಯಂತ । ಯೋಷಣಃ ॥ ೨ ॥

iii) ಅನ್ವಯಕ್ರಮ—(ಪೂರ್ವಾರ್ಧ) ಅಸ್ಯ (ಉತ್ತರಾರ್ಧದಿಂದ ಆವೃತ್ತಿಮಾಡಿಕೊಳ್ಳಬೇಕು) ದ್ವಿತೀಯಂ ವಪುಃ ಪೃಕ್ಷಃ, ಪಿತುಮಾನ್

ನಿತ್ಯಃ । (ತತ್) ಆ ಸಪ್ತಶಿವಾಸು ಮಾತೃಷು (ನಿತ್ಯಃ) ಆಶಯೇ ॥ (ಉತ್ತರಾರ್ಧ) ಯೋಷಣಃ ವೃಷಭಸ್ಯ ಅಸ್ಯ ತೃತೀಯಂ (ವಪುಃ) ದಶ-ಪ್ರಮತಿಂ ದೋಹಸೇ ಜನಯಂತ ॥

iv) **ಅನ್ವಯಾರ್ಥ (ಪೂರ್ವಾರ್ಧ)**—ಅಸ್ಯ–ಈ ವಾಯುವಿನ ; ದ್ವಿತೀಯಂ ವಪುಃ–ಎರಡನೇ ಅವತಾರವಾದ ಭೀಮರೂಪವು ; ಪೃಕ್ಷ–ಕೌರ-ವಾದಿ ಶತ್ರುಸೈನ್ಯವನ್ನು ನಾಶಮಾಡಿತು; ಪಿತುಮಾನ್ 'ಪಿತುರಿತ್ಯನ್ನನಾಮ' ಎಂದು (ತೈತ್ತಿರೀಯ) ಬ್ರಾಹ್ಮಣದಲ್ಲಿ ಹೇಳಿರುವುದರಿಂದ ಬಹಳ ಅನ್ನವನ್ನು ಭಕ್ಷಿಸಿತು. ನಿತ್ಯಃ–ಸ್ವಚ್ಛಂದಮೃತ್ಯುವುಳ್ಳದ್ದಾದ್ದರಿಂದ ನಿತ್ಯವೂ ಆಗಿದೆ. ಈ ರೂಪವು,ಆ (ಸಮಂತಾತ್)–ಚೆನ್ನಾಗಿ— ಸಪ್ತಶಿವಾಸು—ಸಪ್ತ–ಏಳುಸಂಖ್ಯೆ-ಯುಳ್ಳದ್ದೂ, ಶಿವಾಸು–ಮಂಗಳಕರವೂ ಆದ (ಅಥವಾ ಆ ಶಿವಾಸು–ಪರಮ-ಮಂಗಳಕರವಾದ (ತಾಮ್ರ.) ; ಮಾತೃಷು–(ಮಾಪಯಂತೀತಿ) ಪರಮಾತ್ಮ-ನನ್ನು ತಿಳಿಸಿಕೊಡುವುದರಿಂದ ಮಾತೃಗಳೆಂಬ ವಿದ್ಯೆಗಳಲ್ಲಿ ; (ನಿತ್ಯಃ–ನಿತ್ಯಂ–ನಿತ್ಯವಾಗಿ ಅಥವಾ ನಿತ್ಯವೂ, ವೇ.,ಭಾ.ಬೋ.,ಶ್ರೀ-ತಾ.) ; ಆ ಶಯೇ–(ಆ-ಸಮಂತಾತ್ ಸಮ್ಯಕ್ ಚ—ತಾ.ನಿ.) ಸಮಗ್ರವಾಗಿಯೂ ಚೆನ್ನಾಗಿಯೂ ಮಲಗುತ್ತಾನೆ (ತಾ.ನಿ) ಎಂದರೆ ಚೆನ್ನಾಗಿ ನಿದ್ದೆ ಬಂದ ಮನುಷ್ಯನಿಗೆ ಹೊರಗಿನ ಯಾವ ವಿಚಾರವೂ ಹೇಗೆ ಗೊತ್ತಾಗುವುದಿಲ್ಲವೋ ಅದೇ ರೀತಿ ಆ ಸಪ್ತವಿದ್ಯೆಗಳ ಅರ್ಥವಿಚಾರದಲ್ಲಿ ಮಗ್ನವಾದ ಮನಸ್ಸುಳ್ಳವನಾದ್ದರಿಂದ ಹೊರಗಿನ ಯಾವ ವಿಷಯವನ್ನೂ ಗಮನಿಸದೆ ಅವುಗಳ ಅರ್ಥವಿಚಾರದಲ್ಲೇ ಮಗ್ನನಾಗಿರುತ್ತಾನೆಂದು ಭಾವ (ತಾ.ನಿ.). **(ಉತ್ತರಾರ್ಧ)** ಯೋಷಣಃ–ವೇದಾಭಿಮಾನಿಗಳಾದ ಶ್ರೀಭೂದುರ್ಗಾನಾಮಕ ಲಕ್ಷ್ಮೀರೂಪಗಳು (ತಾ.ನಿ.,ಯ.ಮ.) ; ಮಧ್ಯಗೇಹಭಟ್ಟರ ಪತ್ನಿಯು (ಗುರುಗಳ ತಾಯಿ-ಯಾದ್ದರಿಂದ ಬಹುವಚನ ಪ್ರಯೋಗ ಮಾಡಿದೆ.) (ವೇ.ಭಾಬೋ.ಶ್ರೀ) ; ವೃಷಭಸ್ಯ–ದೇವಶ್ರೇಷ್ಠರಾದ (ತಾ.ನಿ., ವೇ.) ಅಥವಾ (ವರ್ಷಿತುಃ) ಸಕಲಾಭೀಷ್ಟಗಳನ್ನು ಸುರಿಸುವ (ತಾಮ್ರ.) ; ಅಸ್ಯ–ಈ ವಾಯುವಿನ ; ತೃತೀಯಂ (ವಪುಃ)–ಮೂರನೆಯ ಅವತಾರವಾದ ; ದಶಪ್ರಮತಿಂ–ಪೂರ್ಣ-ಪ್ರಜ್ಞರನ್ನು (ವಿವರಣೆಗೆ ಮುಂದೆ ಈ ಖಂಡದ 'v–ಚ' ಭಾಗ ನೋಡಿ) ;

ದೋಹಸೇ-(ದುಹ ಪ್ರಪೂರಣೇ ಇತಿ ಧಾತೋಃ ಸರ್ವಜ್ಞಾನಪೂರಣಾಯ— ತಾ.ನಿ.) ದುಹ್ ಎಂದರೆ ಹಾಲು ಕರೆಯುವುದು ಎಂದರ್ಥ, ಅವರಿಂದ ದೋಹಸೇ ಎಂದರೆ ಜ್ಞಾನವೆಂಬ ಹಾಲನ್ನು ಕರೆದು ತುಂಬುವುದಕ್ಕಾಗಿ (ತಾ.ನಿ.) ಜ್ಞಾನದೋಹನಕ್ಕಾಗಿ (ವೇ.ತಾವ್ರ) ; ಜನಯಂತ-ಹಡೆದರು ಅಥವಾ ಪ್ರಸವಿಸಿದರು.

v) **ವಿಶೇಷ ವಿಚಾರಗಳು—ಪೃಕ್ಷಃ** ಶಬ್ದದ ವಿವರಣೆ ಹಿಂದೆಯೇ ಖಂಡ 369-ಛ-xiರಲ್ಲಿ ಬಂದಿದೆ. (ಕ) **ಪಿತುಮಾನ್**—'ಅನ್ನಂ ವೈ ಪಿತುಃ' ಎಂದೂ (ಶ್ರೀ.) 'ಪಿತುರಿತ್ಯನ್ನನಾಮ' ಎಂದೂ (ತೈತ್ತಿರೀಯ) ಬ್ರಾಹ್ಮಣ ವಚನವಿರುವುದರಿಂದ (ತಾ.ನಿ.) ಪಿತುಃ ಎಂದರೆ ಅನ್ನ ಎಂದರ್ಥ. ಅದರ ಮೇಲೆ 'ತದಸ್ಯಾಸ್ತಿ' ಎಂಬ ಅರ್ಥದಲ್ಲಿ ಮತುಪ್ ಪ್ರತ್ಯಯ ಬಂದಿದೆ— ಪಿತುಃ ಅನ್ನಂ ಅಸ್ಯಾಸ್ತೀತಿ ಪಿತುಮಾನ್-ಅನ್ನವುಳ್ಳವನು ಎಂದರ್ಥ. ಆದರೆ 'ಭೂಮನಿಂದಾಪ್ರಶಂಸಾಸು ನಿತ್ಯಯೋಗೇತಿಶಾಯನೇ....ಭವಂತಿ ಮತುಬಾದಯಃ' ಎಂಬ ವ್ಯಾಕರಣನಿಯಮದಂತೆ 'ಮತುಪಃ ಪ್ರಾಶಸ್ತ್ಯ-ಕಥನಾತ್ ಬಹ್ವನ್ನಭೋಕ್ತೇತ್ಯರ್ಥಃ' (ತಾ.ನಿ.) ಮತುಬಾದಿ ಪ್ರತ್ಯಯ-ಗಳು ಅತಿಶಯವನ್ನು ತೋರಿಸುವ ಅರ್ಥದಲ್ಲಿಯೇ ಬರುವುದರಿಂದ ಇಲ್ಲಿ ಅನ್ನವುಳ್ಳವನೆಂದರೆ ಬಹಳ ಅನ್ನವುಳ್ಳವನು ಅರ್ಥಾತ್ 'ಬಂಡಿ ಅನ್ನ ಉಂಡವ'ನೆಂದೇ ಅರ್ಥ. [ಈ ವಿಚಾರ ವಾಯುಸ್ತುತಿಯ ೨ನೇ ಶ್ಲೋಕಕ್ಕೆ (ಜಘ್ನೆನಿಘ್ನೇ-ಗೆ) ಅರ್ಥಹೇಳುವಾಗ(ಬಕಾಸುರನ ವಧಾಪ್ರಸಂಗದಲ್ಲಿ)ಬಂದಿದೆ (ಖ) **ನಿತ್ಯಃ** ಶಬ್ದವನ್ನು ಎಲ್ಲಾ ಉಪನಿಷದ್ವ್ಯಾಖ್ಯಟೀಕಾಕಾರರೂ 'ನಿತ್ಯಂ' ಎಂದು ಮಾಡಿಕೊಂಡು ಆಶಯೇ-ಗೆ ಕ್ರಿಯಾವಿಶೇಷಣವಾಗಿ ಅನ್ವಯ-ನಿತ್ಯ ಮಾಡಿದ್ದಾರೆ—ನಿತ್ಯಂ ಆಶಯೇ-ನಿರಂತರವಾಗಿ ನಿತ್ಯವೂ ಮಲಗಿದೆ ಎಂದರೆ ತದ್ವಿಚಾರಮಾಡುತ್ತಲೇ ಇರುತ್ತದೆ ಎಂದು ಅರ್ಥ ಹೇಳುತ್ತಾರೆ. ಆದರೆ ವಾದಿರಾಜರು ಭೀಮನಿಗೆ ವಿಶೇಷಣ ಮಾಡಿ ಸ್ವೇಚ್ಛಾಮರಣವುಳ್ಳವನಾದ್ದ-ರಿಂದ ನಿತ್ಯಶಬ್ದವಾಚ್ಯ ಎಂದು ಅರ್ಥ ಮಾಡಿದ್ದಾರೆ (ತಾ.ನಿ.)

ಗ) **ಸಪ್ತ (ಅ) ಶಿವಾಸು ಮಾತೃಷು**—ಮಾಙ್ ಮಾನೇ ಶಬ್ದೇ ಚ(ಜುಹೋ. ಆ.) ಎಂದು ಧಾತುಪಾಠವಿರುವುದರಿಂದ ಮಾ ಧಾತುವಿಗೆ ತಿಳಿ

ಅರಿತುಕೋ (ಮಿಮೀತೇ–ತಿಳಿದುಕೊಳ್ಳುತ್ತಾನೆ) ಎಂದು ಅರ್ಥ. ಇದರ ಪ್ರೇರಣಾರ್ಥಕ ರೂಪ ಮಾಪಯತಿ–ತಿಳಿಸಿಕೊಡುತ್ತದೆ. ಆದರಿಂದ ಮಾಪಯಂತೀತಿ ಮಾತರಃ, ವೈದಿಕವಿದ್ಯೆಗಳು ಭಗವಂತನ ಸ್ವರೂಪವನ್ನು ತಿಳಿಸಿಕೊಡುವುದರಿಂದ ಅವಕ್ಕೆ ಮಾತೃಗಳೆಂದು ಹೆಸರು. ಮಾಙ್ ಧಾತುವಿನ ಮೇಲೆ ಣಿಚಿ 'ಣ್ವುಲ್‌ತೃಚೌ' (ಪಾ. ೩/೧/೧೩೩) ಎಂಬ ಸೂತ್ರದಂತೆ ಕರ್ತರಿ ತೃ(ಚ್) ಪ್ರತ್ಯಯ ಬಂದಿದೆ. ಆ ವಿದ್ಯೆಗಳು ಮುಖ್ಯವಾಗಿ ಏಳು (ಸಪ್ತ.) ಎಂದು ಶ್ರುತಿಯೇ ಹೇಳುತ್ತದೆ. ಆ ಏಳು ಯಾವುವು ಎಂದರೆ ಉಪನಿಷದ್ಭಾಷ್ಯೋದಾಹೃತಸ್ಮೃತಿ (ಸದ್ಭಾವ) ಹೇಳುತ್ತದೆ—ಋಗಾದ್ಯಾ ಇತಿಹಾಸಂ ಚ ಪುರಾಣಂ ಪಂಚರಾತ್ರಕಮ್ । ಪ್ರೋಕ್ತಾಃ ಸಪ್ತಶಿವಾಃ—' ೧–೪. ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕು ವೇದಗಳು, ೫. ಮಹಾಭಾರತ ಮತ್ತು ಮೂಲರಾಮಾಯಣಗಳೆಂಬ ಇತಿಹಾಸ, ೬. ಭಾಗವತಾದಿ ಮಹಾಪುರಾಣಗಳು ಮತ್ತು ಉಪಪುರಾಣಗಳು, ೭. ಪಂಚರಾತ್ರಗಳು—ಈ ಏಳಕ್ಕೆ ಸಪ್ತಮಾತೃಗಳೆಂದು ಹೆಸರು. ಇವುಗಳೆಲ್ಲ ಪರಮಮಂಗಳಕರವಾದುವೆಂಬುದನ್ನು ಶಿವಾಸು (ಅಥವಾ ಕೆಲವರ ಅಭಿಪ್ರಾಯದಂತೆ ಅ–ಶಿವಾಸು) ಎಂಬ ವಿಶೇಷಣ ಸೂಚಿಸುತ್ತದೆ. ಭೀಮಸೇನನು ಈ ವಿದ್ಯೆಗಳಲ್ಲೂ ಒಳಹೊಕ್ಕು ಚೆನ್ನಾಗಿ ಅಧ್ಯಯನ ಮಾಡಿ ಅವುಗಳ ವಿಚಾರದಲ್ಲೇ ಮಗ್ನನಾಗಿರುತ್ತಾನೆ ಎಂದು ಹೇಳುವ ಅಭಿಪ್ರಾಯದಿಂದ ಶ್ರುತಿಯು 'ಸಪ್ತಶಿವಾಸು ಮಾತೃಷು ನಿತ್ಯಃ ಆಶಯೇ'—ಅವುಗಳಲ್ಲಿ ಸದಾ ಮಲಗಿಕೊಂಡೇ ಇರುತ್ತದೆ ಎಂದು ಹೇಳುತ್ತದೆ. ಚೆನ್ನಾಗಿ ನಿದ್ದೆ ಬಂದ ಮನುಷ್ಯನಿಗೆ ಹೇಗೆ ಹೊರಗಿನ ವಿಚಾರದ ಮೇಲೆ ಗಮನವಿರದೆ ನಿದ್ದೆಯಲ್ಲೇ ಮಗ್ನನಾಗಿರುವನೋ ಆದರಂತೆ ಭೀಮನೂ ಬಾಹ್ಯವಿಚಾರಗಳ ಮೇಲೆ ಗಮನಕೊಡದೆ ಈ ಸಪ್ತವಿದ್ಯೆಗಳ ವಿಚಾರದಲ್ಲೇ ಮಗ್ನನಾಗಿರುತ್ತಾನೆಂದು ಭಾವ. ಈ ಅಭಿಪ್ರಾಯದಿಂದಲೇ ಆ ಸ್ಮೃತಿಯು ಭೀಮ ಶಬ್ದಾರ್ಥವನ್ನು 'ಭೃತಮೋ ಭೀಮ ಇತ್ಯುಕ್ತೋ ವಾಚೋ ಮಾ ಮಾತರಃ ಸ್ಮೃತಾಃ' ಎಂದು ಹೇಳಿತು. ಮಾಪಯಂತೀತಿ ಮಾಃ, ಮಾತರೋ ವಾ । ಭಗವತ್ಸ್ವರೂಪಬೋಧಕಗಳಾದ್ದರಿಂದ ವಿದ್ಯೆಗಳಿಗೆ (ವಾಚಃ) ಮಾ ಅಥವಾ ಮಾತೃಗಳೆಂದು ಹೆಸರು. ಮೇಲೆ ಹೇಳಿದಂತೆ

ಮಾಙ್ ಧಾತುವಿನ ಮೇಲೆ ತೃಚ್ ಬಂದರೆ ಮಾತೃ ಎಂದೂ, ಕ್ವಿಪ್ ಅಥವಾ ಕ ಬಂದರೆ ಮಾ ಎಂಬರೂಪವೂ ಆಗುತ್ತದೆ. ಭೃತಾಃ–ನಿಭೃತಾ ಮಾಃ–ಪ್ರಮಾಣಾನಿ ಯಸ್ಮಿನ್ ಸಃ ಭೀಮಃ (ತಾವ್ರ). ಪ್ರಮಾಣರೂಪ 'ಮಾ'-ಗಳನ್ನು, ವಿದ್ಯೆಗಳನ್ನು ಭೃ–ಭೀ ಧರಿಸಿದವನು ಭೀಮಃ. 'ಭೃಞ್ ಭರಣ ಇತ್ಯಸ್ಮಾದೌಣಾದಿಕ ಈಕಾರಪ್ರತ್ಯಯೇ... ಭೀಮ ಇತಿ ಭವತೀತಿ ಭಾವಃ' (ಆಲ್ಲೇ.) ಭೃ ಧಾತುವಿನ ಮೇಲೆ ಔಣಾದಿಕ ಈಕಾರವು (೩/೧೫೮ ಬಾಹು-ಲಕಾತ್) ಬಂದು ಭೀಮ ಎಂದಾಗುತ್ತದೆ.

ಘ) ಆಶಯೇ—'ಶೀಙ್ ಸ್ವಪ್ನೇ' (ಅದಾದಿ. ಆ.) ಶೀ–ಮಲಗು ಎಂಬ ಧಾತು ಆತ್ಮನೇಪದವಾದ್ದರಿಂದ ಪ್ರ.ಪು ಏ. ವಚನದಲ್ಲಿ ತೇ ಪ್ರತ್ಯಯ ಬರಲು 'ಶೀಙಃ ಸಾರ್ವಧಾತುಕೇ ಗುಣಃ' (ಪಾ. ೭/೪/೨೧) ಎಂಬ ಸೂತ್ರದಂತೆ ಗುಣ ಬರಲು ಶೇತೇ ಎಂದು ರೂಪವಾಗುತ್ತದೆ. ಆದರೆ ವೇದದಲ್ಲಿ 'ಲೋಪಸ್ತ ಆತ್ಮನೇಪದೇಷು' (ಪಾ. ೭/೧/೪೧) ಎಂಬ ಸೂತ್ರದಂತೆ ಆತ್ಮನೇಪದ-ಪ್ರತ್ಯಯಗಳ ತಕಾರಕ್ಕೆ ಲೋಪ ಬಂದು ಶೇ+ತೇ ಎಂಬುದು ಶೇ+ಏ ಎಂದಾಗಲು, ಏಕಾರಕ್ಕೆ ಅಯಾದೇಶ ಬರಲು ಶಯ್+ಏ ಎಂದಾಗಿ ಸೇರಿದಾಗ ಶಯೇ ಎಂಬ ರೂಪಸಿದ್ಧಿಯಾಗುತ್ತದೆ (ತಾವ.). ಆ (ಸಮ್ಯಕ್ ಸುಷ್ಠು ಚ —ತಾ.ನಿ.) ಶಯೇ ಎಂದರೆ ಮಲಗುತ್ತಾನೆ ಎಂಬುದರ ಅಭಿಪ್ರಾಯ ಮೇಲೆಯೇ ವಿವರಿಸಿದ್ದಾಗಿದೆ. 'ಮುಹುರ್ಮುಹುರ್ವಿಚಾರಯತೀತ್ಯರ್ಥಃ' (ವೇ.) ಅದನ್ನು ಪುನಃಪುನಃ ವಿಚಾರಮಾಡುತ್ತದೆ ಎಂದು ಅಭಿಪ್ರಾಯ.

ಙ) **ವೃಷಭಸ್ಯ** ಎಂಬುದಕ್ಕೆ ಅನೇಕ ರೀತಿ ಅರ್ಥ ಮಾಡಿದ್ದಾರೆ. (ಎ) ವೃಷಭಶಬ್ದವು 'ಪುಂಗರ್ಷಭಕುಂಜರಾಃ' ಎಂದು ಶ್ರೇಷ್ಠಾರ್ಥವಾಚಕ-ಶಬ್ದದಲ್ಲಿ ಸೇರಿರುವುದರಿಂದ ಭಗವದ್ಭಕ್ತರಲ್ಲಿ ಶ್ರೇಷ್ಠರಾದ (ತಾವ್ರ.) ಎಂಬುದು ಒಂದರ್ಥ. ದೇವಶ್ರೇಷ್ಠರಾದ (ತಾ.ನಿ.) ಶ್ರೇಷ್ಠರಾದ (ವೇ.) (ಬಿ) ವೃಷ ಸೇಚನೇ ಭಕ್ತಾನಾಂ ಸರ್ವಾಭಿಲಷಿತವರ್ಷಿತಃ (ತಾವ್ರ.) ಭಕ್ತರ ಸಕಲೇಷ್ಟಾರ್ಥಗಳನ್ನೂ ಸುರಿಸುವ. ವೃಷ್–ನೆನೆಸು, ತಣಿಸು, (ಸಿ) ಯದ್ವಾ ವೃಷ ಸ್ನೇಹೇ ಭಕ್ತಾನುರಾಗಿಣಃ, ವೃಷ್–ಸ್ನೇಹಮಾಡು, ಪ್ರೀತಿಸು. ಭಕ್ತರಲ್ಲಿ ಪ್ರೇಮ ಮಾಡುವ(ತಾವ್ರ.) ಭಗವದ್ಭಕ್ತಪ್ರವರಸ್ಯ

ವಾ ಭಗವದ್ಭಕ್ತರಲ್ಲಿ ಅಗ್ರಣಿಗಳಾದ. (ಡಿ) ಯದ್ವಾ ವೃಷ ಶಕ್ತ್ಯತಿಶಯೇ ಇತಿ ಧಾತೋರ್ಬಹುಶಕ್ತಿಸಂಪನ್ನಸ್ಯ ವಾಯೋಃ (ತಾಪ್ರ.) ವೃಷ್ ಎಂದರೆ ಬಹಳಶಕ್ತಿಯನ್ನು ಹೊಂದಿರು ಎಂದೂ ಅರ್ಥವಿರುವುದರಿಂದ ವೃಷಭಸ್ಯ ಎಂದರೆ ಬಹುಶಕ್ತಿಸಂಪನ್ನರಾದ ಎಂದೂ ಅರ್ಥವಾಗುತ್ತದೆ. ೭) **ದೋಹಸೇ**—ಸಕಾರಾಂತ ನಪುಂಸಕಲಿಂಗ ದೋಹಸ್ ಶಬ್ದದ ಚ.ವಿ. ಏ.ವ.ರೂಪ. ದುಹ್ (ಅದಾ.ಪ.) ಎಂದರೆ ಹಾಲು ಕರಿ ಎಂದರ್ಥ. ಅದಕ್ಕೆ 'ಸರ್ವಧಾತುಭ್ಯೋಽಸುನ್' (ಉ. ೪/೧೯೦) ಎಂಬ ಉಣಾದಿ-ಸೂತ್ರದಂತೆ ಅಸುನ್ ಪ್ರತ್ಯಯ ಬರಲು ಧಾತುವಿನ ಉಕಾರಕ್ಕೆ ಗುಣವಾಗಿ ದುಹ್+ಅಸುನ್=ದೋಹ+ಅಸ್=ದೋಹಸ್=ದೋಹಃ ಎಂದಾಗು-ತ್ತದೆ. (ಸಹಸ್ ಶಬ್ದವೂ ಹೀಗೆಯೇ ಆಗಿದೆ. ಸಹಃ-ಬಲಂ, ಸಹಸೋ-ಯತೋಽಜನಿ) ದಹ್ ಧಾತುವಿನ ಮೇಲೆ ಕ ಪ್ರತ್ಯಯ (ಇಗುಪಧಜ್ಞಾ-ಪ್ರೀಕಿರಃ ಕಃ ೩/೧/೧೩೫) ಬಂದರೆ ದೋಹಃ ಎಂದಾಗುತ್ತದೆ. ಆದ್ದರಿಂದ ದೋಹಸೇ ಎಂದರೆ 'ಜ್ಞಾನದೋಹಾಯ' (ವೇ.ಭಾಬೋ. ತಾಪ್ರ.)ಜ್ಞಾನ-ವೆಂಬ ಹಾಲನ್ನು ಕರೆಯುವುದಕ್ಕೆ ಅಥವಾ ಸರ್ವಜ್ಞಾನಪೂರಣಾಯ (ತಾ.ನಿ.) ಸಮಸ್ತಜ್ಞಾನಭಂಡಾರವನ್ನೂ ತುಂಬುವುದಕ್ಕಾಗಿ ಎಂದರ್ಥ. **ದಶಪ್ರಮತಿಂ** ಎಂಬುದರ ಅರ್ಥ ಕ್ಲಿಷ್ಟವಾದ್ದರಿಂದ ಅದನ್ನು ಸ್ಮೃತಿವಾಕ್ಯದಿಂದಲೇ ಹೇಳು-ತ್ತಾರೆ—'ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ । ಪ್ರಜ್ಞಾ ಪ್ರಮತಿರುದ್ದಿಷ್ಟಾ ಪೂರ್ಣಪ್ರಜ್ಞಸ್ತತಃ ಸ್ಮೃತಃ ॥' ಈ ಪೂರ್ಣ-ಪ್ರಜ್ಞರು ಯಾರೆಂದರೆ—ತೃತೀಯಕಃ । 'ಪೂರ್ಣಪ್ರಜ್ಞಸ್ತಥಾಽಽನಂದ-ತೀರ್ಥನಾಮಾ ಪ್ರಕೀರ್ತಿತಃ ॥' (ವಿವರಣೆ) ದಶ ಎಂದರೆ ಸರ್ವ ಎಂದರ್ಥ, ಮತ್ತು ಸರ್ವ ಎಂದರೆ ಪೂರ್ಣ ಎಂದೇ ಅರ್ಥ. ಪ್ರಜ್ಞಾ ಎಂದರೂ ಪ್ರಮತಿ ಎಂದರೂ ಜ್ಞಾನ ಎಂದೇ ಅರ್ಥ; ಆದ್ದರಿಂದ ಅವೆರಡೂ ಪರ್ಯಾಯ ಪದಗಳು. ಪ್ರ ಉಪಸರ್ಗ, ಜ್ಞಾ(ಕ್ರ್ಯಾ.ಪ.) ಧಾತುವಿನ ಮೇಲೆ ಅಙ್ ಪ್ರತ್ಯಯ ಬಂದು ಪ್ರಜ್ಞಾ ಎಂದಾಗಿದೆ. ಪ್ರ ಉಪಸರ್ಗ, ಮನ್ (ತನಾ.ಆ.) ಧಾತುವಿಗೆ ಕ್ತಿನ್(ತಿ)ಪ್ರತ್ಯಯ ಸೇರಿ ಪ್ರಮತಿಃ ಆಗಿದೆ. 'ಧೀಃ ಪ್ರಜ್ಞಾ ಶೇಮುಷೀ ಮತಿಃ' ಎಂದು ಅಮರ ಆದ್ದರಿಂದ ದಶಪ್ರಮತಿ ಎಂದರೆ

ಪೂರ್ಣಪ್ರಜ್ಞ ಎಂದೇ ಅರ್ಥ. ಇದು ಮಧ್ವಾಚಾರ್ಯರಿಗೆ ಆಶ್ರಮವಾದ (ಸನ್ಯಾಸವಾದ) ಕೂಡಲೇ ಇಟ್ಟ ಹೆಸರು. ಹೀಗೆ ಪೂರ್ಣಪ್ರಜ್ಞ ಎಂಬುದೂ ವಾಯುವಿನ ಮೂರನೇ ಅವತಾರ ಎಂಬುದನ್ನು 'ತೃತೀಯಕಃ....' ಇತ್ಯಾದಿ ಸ್ಮೃತಿವಾಕ್ಯ ತೋರಿಸುತ್ತದೆ. ಮೂರನೆಯ ಅವತಾರದ ಹೆಸರು ಪೂರ್ಣಪ್ರಜ್ಞ ಅಥವಾ ಆನಂದತೀರ್ಥ. ಆನಂದತೀರ್ಥ ಎಂದರೂ ಮಧ್ವ ಎಂದರೂ ಒಂದೇ ಎಂಬುದನ್ನು ಇನೇ ಮಂತ್ರಕ್ಕೆ ವ್ಯಾಖ್ಯಾನ ಮಾಡುವಾಗ ವಿಶದಪಡಿಸಲಾಗುವುದು (ಖಂಡ 374–ಚ viii ನೋಡಿ).

ಛ) ಯೋಷಣಃ ಎಂಬುದು ಪ್ರ.ವಿ., ಬ.ವ. ರೂಪವಾದ್ದರಿಂದ ಇದಕ್ಕೆ ನಾರಿಯರು, ಹೆಂಗಸರು ಎಂದರ್ಥ. ಬಹುವಚನವನ್ನು ಲಕ್ಷಿಸಿಯೇ ವಾದಿರಾಜರು ಇದಕ್ಕೆ—ಶ್ರೀಭೂದುರ್ಗಾನಾಮಕ ವೇದಾಭಿಮಾನಿ ಸ್ತ್ರೀಯರು ಎಂದು ಅರ್ಥ ಹೇಳಿದ್ದಾರೆ (ತಾ ನಿ.). ಆದರೆ ಉಪನಿಷದ್ಭಾಷ್ಯಟೀಕಾಕಾರರೆಲ್ಲರೂ ಮಧ್ಯಗೇಹಭಟ್ಟರ ಪತ್ನೀ ಎಂಬ ಸ್ತ್ರೀಯರು ಎಂದರ್ಥ ಹೇಳಿ ಗುರುಗಳ ಮಾತೃಗಳಾದ್ದರಿಂದ ಗೌರವದಿಂದ ಬಹುವಚನ ಪ್ರಯೋಗ ಮಾಡಿದೆ ಎನ್ನುತ್ತಾರೆ ಕೋಶಗಳಲ್ಲಿ ಯೋಷಾ ಶಬ್ದವು ಸ್ತ್ರೀಯರ ನಾಮಗಳೊಂದಿಗೆ (ಉದಾ. ಸ್ತ್ರೀ ಯೋಷಿ ದಬಲಾ ಯೋಷಾ—ಅಮರ, ಯೋಷಾ ಯೋಷಿದ್ ವಾಸಿತಾ—ಹಲಾಯುಧ, ಸ್ತ್ರೀಯೋಷಿಲ್ಲಲನಾ ಯೋಷಾ) ಪಠಿತವಾಗಿದ್ದರೂ, ಆ ಶಬ್ದ ಆಕಾರಾಂತವಾದ್ದರಿಂದ ರಮಾಃ ಎಂಬಂತೆ ಬಹುವಚನದಲ್ಲಿ ಯೋಷಾಃ ಎಂದೇ ಆಗುತ್ತದೆ. ಯೋಷಣಃ ಎಂಬ ರೂಪ ಹೇಗೆ ಬರುತ್ತದೆ ಎಂದು ಆಶಂಕೆ ಮಾಡಿಕೊಂಡು ವಾದಿರಾಜರು ಸಮಾಧಾನ ಹೇಳಿದ್ದಾರೆ—ಪುಲ್ಲಿಂಗದಲ್ಲಿ ನಕಾರಾಂತವಾದ ಪೂಷನ್ (ಸೂರ್ಯ) ಶಬ್ದ ಇರುವಂತೆಯೇ ಸ್ತ್ರೀಲಿಂಗದಲ್ಲಿ ನಕಾರಾಂತವಾದ ಯೋಷನ್ ಶಬ್ದವೂ ಇದೆ. ಆದ್ದರಿಂದ ಯೋಷಣಃ ಎಂಬ ರೂಪವು ಸಾಧು. (ತಾ.ನಿ.) ಪೂಷಾ । ಪೂಷಣೌ, ಪೂಷಣಃ ಎಂಬಂತೆ ಯೋಷಾ । ಯೋಷಣೌ । ಯೋಷಣಃ ಎಂದು ರೂಪಗಳಾಗುತ್ತವೆ.

ಜ) ಪೃಕ್ಷೋ ವಪುಃ ಪಿತುಮಾನ್ ಎಂಬ ಶ್ರುತಿವಾಕ್ಯಕ್ಕೆ ಆಚಾರ್ಯರು ಸ್ಮೃತಿವಾಕ್ಯಗಳಿಂದಲೇ ವ್ಯಾಖ್ಯಾನ ಮಾಡುತ್ತಾರೆ—'ಹನೂ-

ಮಾನ್ ಪ್ರಥಮೋ ಜ್ಞೇಯೋ ಭೀಮಸ್ತು ಬಹುಭುಕ್ ಪಿತೋಃ । ಪೃತ-ನಾಕ್ಷಯಕಾರೀ ಚ ದ್ವಿತೀಯಸ್ತು, ತೃತೀಯಕಃ' ಇತ್ಯಾದಿ ॥ ಬಹುಭುಕ್ = ಬಹಳವನ್ನು ತಿನ್ನುವವನು, ಭುಜ್–ಭೋಜನಮಾಡು, ಪಿತೋಃ–ಅನ್ನದ (ಅನ್ನವನ್ನು ಎಂದರ್ಥ), 'ಅನ್ನಂ ವೈ ಪಿತುಃ' ಎಂದು ಶ್ರುತಿವಾಕ್ಯವಿದೆ (ಶ್ರೀ) (ಅರ್ಥ) ಪ್ರಥಮಾವತಾರವು ಹನೂಮಾನ್, ದ್ವಿತೀಯಾವತಾರವು ಭೀಮ ಎಂದು ಹೆಸರುಳ್ಳದ್ದು. ಅದು ಬಹಳ ಅನ್ನವನ್ನು ತಿಂದದ್ದು ಇದು 'ಪಿತುಮಾನ್' ಎಂಬುದರ ವಿವರಣೆ. ಮತ್ತು ಶತ್ರುಸೈನ್ಯವನ್ನು ನಾಶಮಾಡಿತು. ಇದು ಪೃಕ್ಷಃ ಎಂಬುದರ ವಿವರಣೆ. (ಝು) **ಆಶಯೋ ಸಪ್ತ ಶಿವಾಸು ಮಾತೃಷು** ಎಂಬ ವಾಕ್ಯಕ್ಕೆ ಸ್ಮೃತ್ಯಂತರ ವಾಕ್ಯದಿಂದ ಅರ್ಥ ಹೇಳುತ್ತಾರೆ—ಭೃತಮೋ ಭೀಮ ಇತ್ಯುಕ್ತೋ ವಾಚೋ ಮಾ ಮಾತರಃ ಸ್ಮೃತಾಃ ॥ ಋಗಾದ್ಯಾ ಇತಿಹಾಸಶ್ಚ ಪುರಾಣಂ ಪಂಚರಾತ್ರಕಮ್ । ಪ್ರೋಕ್ತಾಃ ಸಪ್ತಶಿವಾಸ್ತತ್ರ ಶಯೋ ಭೀಮಸ್ತತಃ ಸ್ಮೃತಃ॥—ಈ ಶ್ಲೋಕ-ಗಳ ವಿವರಣೆ, ಮೇಲೆ ಗ–ವಿಭಾಗದಲ್ಲೇ ಬಂದಿದೆ. ಆದರೆ ವಾಕ್ಯಗಳು ಹಿಂದು ಮುಂದಾಗಿವೆ—ಅಷ್ಟೆ.

vi) **ಮಂತ್ರದ ಭಾವಾರ್ಥ**—[ಸೂಚನೆ—ಮಂತ್ರದ ಪೂರ್ಣಾರ್ಥವು ಮನಸ್ಸಿಗೆ ಚೆನ್ನಾಗಿ ನಾಟಲೆಂಬ ಉದ್ದೇಶದಿಂದ ವಿವರಣೆಯಲ್ಲಿ ಹೇಳಿದ ಅನೇಕ ವಿಚಾರಗಳನ್ನು ಭಾವಾರ್ಥದಲ್ಲೂ ಅಳವಡಿಸಿದ್ದೇನೆ. ಆದಕಾರಣ ವಿವರಣೆಯನ್ನೂ ಅರ್ಥವನ್ನೂ ಓದಿಕೊಂಡವರಿಗೆ ಇದು ಪುನರುಕ್ತಿಯಂತೆ ಕಾಣುವುದು ಸಹಜವಾಗಿದೆ. ಆದರೂ 'ಬಹುವಾರಸ್ಮೃತೇಃ ಫಲಬಾಹುಲ್ಯ ಕಾರಣಾತ್ ।' ಹೇಳಿದ್ದನ್ನೇ ಹೇಳಿದರೆ ಫಲಬಾಹುಳ್ಯವುಂಟು ಎಂಬಂತೆ ಓದಿದ್ದನ್ನೇ ಪುನಃ ಆವೃತ್ತಿ ಮಾಡಿಕೊಳ್ಳುವುದು ತಪ್ಪಲ್ಲ ಎಂಬ ಭಾವನೆ-ಯಿಂದ ಬರೆದಿದ್ದೇನೆ. ವಿವರಣೆ ಓದದವರಿಗೆ ಇದು ಹೊಸದಾಗಿಯೇ ಕಾಣ-ಬಹುದು.—ಲೇ.]

ಆ ವಾಯುದೇವರ ಎರಡನೇ ರೂಪಕ್ಕೆ ಭೀಮ ಎಂದು ಹೆಸರು. ಈ ರೂಪಕ್ಕೆ ಈ ಹೆಸರು ಬರುವುದಕ್ಕೆ ಒಂದು ವಿಶೇಷ ಕಾರಣವಿದೆ. ಅದೇನೆಂದರೆ ವ್ಯೈಮರೆತು ನಿದ್ದೆಮಾಡುತ್ತಿರುವ ಮನುಷ್ಯ ನಿದ್ದೆಯಲ್ಲೇ ವ್ಯೈಮರೆತು

ಲೀನನಾಗಿರುವುದರಿಂದ ಅವನಿಗೆ ಹೊರಗಿನ ಯಾವ ಸಮಾಚಾರವೂ ಗೊತ್ತಾ-ಗಲು ಹೇಗೆ ಶಕ್ಯವಿಲ್ಲವೋ ಹಾಗೆಯೇ ಈ ಭೀಮ ಸಪ್ತಮಾತೃಗಳೆಂದು ಪ್ರಸಿದ್ಧವಾದ ಪರಮ ಮಂಗಳಕರವಾದ ಏಳು ಬ್ರಹ್ಮವಿದ್ಯೆಗಳಲ್ಲಿಯೇ ಸದಾ ನಿರತನಾಗಿದ್ದು ಬೇರೆಕಡೆ ಮನಸ್ಸನ್ನು ಹೋಗಗೊಡದೆ ಅವುಗಳನ್ನೇ ಮೆಲುಕುಹಾಕುತ್ತಾ ಅವುಗಳ ವಿಚಾರವನ್ನೇ ಚಿಂತನೆ ಮಾಡುತ್ತಿರುತ್ತಾನೆ. ಹೀಗೆ ಮಾತೃಶಬ್ದವಾಚ್ಯಗಳಾದ ಆ ವಿದ್ಯೆಗಳಲ್ಲಿ (ಮಾ-ಗಳಲ್ಲಿ) ಸದಾ ನಿರತ-ನಾಗಿದ್ದು ಸದಾ ಅವನ್ನು ಮನಸ್ಸಿನಲ್ಲೇ ಭರಣ (ಧಾರಣ) ಮಾಡುತ್ತಿರು-ವುದರಿಂದ ಭೃತಾಃ ಮಾಃ-ವಿದ್ಯಾಃ ಯೇನ ಸಃ ಎಂಬ ವ್ಯುತ್ಪತ್ತಿಯಿಂದ ಅವನಿಗೆ ಭೀ-ಮ ಹೆಸರು ಬಂದಿದೆ. ಭೃ ಧಾತುವಿನ ಋಕಾರಕ್ಕೆ ನಿರುಕ್ತ-ನಿಯಮದಂತೆ ಈಕಾರಾದೇಶ ಬಂದಿದೆ (ತಾ.ನಿ.) ಎಂದಾದರೂ ಹೇಳಬಹುದು ಅಥವಾ (ತಾಮ್ರ. ಟೀಕೆಯಂತೆ) ಭೃ ಧಾತುವಿಗೆ ಔಣಾದಿಕ ಈ ಪ್ರತ್ಯಯ ಬಂದದ್ದರಿಂದ ಭೀ ಎಂದಾಯಿತು ಎಂದಾದರೂ ಹೇಳಬಹುದು. ಇರಲಿ.

ಆ ಸಪ್ತವಿದ್ಯೆಗಳು ಯಾವುವೆಂದರೆ ಋಗ್ವೇದ, ಯಜುರ್ವೇದ, ನಾಲ್ಕೂ ಸಾಮ ವೇದ, ಅಥರ್ವಣ ವೇದ ಎಂಬ ನಾಲ್ಕು ವೇದಗಳು— ಇವು ಅಪೌರುಷೇಯ ಗ್ರಂಥಗಳು. ಇತಿಹಾಸವೆಂದು ಪ್ರಖ್ಯಾತವಾದ ಮಹಾಭಾರತ, ಮೂಲರಾಮಾಯಣಗಳೆಂಬ ಎರಡು ಗ್ರಂಥಗಳು ಸೇರಿ ಐದನೇ ವಿದ್ಯೆ. ಅಷ್ಟಾದಶ ಮಹಾಪುರಾಣಗಳೆಂದು ಪ್ರಸಿದ್ಧವಾದ ಭಾಗವತಾದಿ ಹದಿನೆಂಟು* ಮಹಾಪುರಾಣಗಳಲ್ಲದೆ ಉಪಪುರಾಣಗಳೆಂಬ

---

* ೧. ಭಾಗವತ, ೨. ವಿಷ್ಣು, ೩. ಕಲ್ಕಿ, ೪. ಮತ್ಸ್ಯ, ೫. ವರಾಹ, ೬. ಪಾದ್ಮ, ೭. ವಾಮನ, ೮. ಮಾರ್ಕಂಡೇಯ, ೯. ಬೃಹನ್ನಾರದೀಯ, ೧೦. ಬ್ರಾಹ್ಮ, ೧೧. ಬ್ರಹ್ಮಾಂಡ, ೧೨. ಬ್ರಹ್ಮವೈವರ್ತ, ೧೩. ಗರುಡ, ೧೪. ಆಗ್ನಿ, ೧೫. ಭವಿಷ್ಯ, ೧೬. ಶೈವ (ಶಿವ), ೧೭. ಲಿಂಗ, ೧೮. ಸ್ಕಾಂದ, ಎಂದು ಹದಿನೆಂಟು ಮಹಾಪುರಾಣಗಳು. ೧. ವಾಯು, ೨. ನರಸಿಂಹ, ೩. ಸೌರ, ೪. ಉಪನಾರದೀಯ, ೫. ಉಪಕೂರ್ಮ, ೬. ಸನತ್ಕುಮಾರ, ೭. ಕಾಪಿಲ, ೮. ವಾರುಣ, ೯. ಗಣೇಶ, ೧೦. ಉಪಬ್ರಹ್ಮಾಂಡ, ೧೧. ಮಾನವ, ೧೨ ಶಿವ-ಧರ್ಮ, ಇವು ಹನ್ನೆರಡು ಉಪಪುರಾಣಗಳು. (ಕೆಲವರು ಉಪಪುರಾಣಗಳೂ ಹದಿನೆಂಟವೆ ಎನ್ನುವರು.)

ಹನ್ನೆರಡೂ ಸೇರಿ ಒಟ್ಟು ಮೂವತ್ತು ಪುರಾಣಗಳು ಆರನೆಯ ವಿದ್ಯೆ. ಪಾಂಚರಾತ್ರವೇ ಏಳನೇ ವಿದ್ಯೆ. ಈ ಏಳರ ಅರ್ಥವಿಮರ್ಶೆಯಲ್ಲೇ ಆ ಭೀಮ ನಿರತನಾಗಿರುತ್ತಾನೆ. ಇಂಥಾ ಭೀಮನು ತನ್ನ ಎರಡು ಮಹತ್ಕಾರ್ಯಗಳಿ-ಗಾಗಿ ಜಗತ್ಪ್ರಸಿದ್ಧನಾಗಿದ್ದಾನೆ. ಅವನಿಗೆ ಅಪರಿಮಿತ ಬಲವಿದ್ದುದರಿಂದ ಜಗತ್ತಿಗೇ ಕಂಟಕಪ್ರಾಯರಾಗಿಯೂ ಭೂಮಿಗೆ ಭಾರಭೂತರಾಗಿಯೂ ಇದ್ದ ಕೌರವಾದಿ ಅಸಂಖ್ಯ ದುಷ್ಟರ ಸೈನ್ಯಗಳೆನ್ನೆಲ್ಲಾ ನಿರ್ನಾಮ ಮಾಡಿಬಿಟ್ಟನು. ಎರಡನೆಯದಾಗಿ ಅವನ ಹೊಟ್ಟೆಯಲ್ಲಿ ಬಹುತೀಕ್ಷ್ಣವಾದ ವೃಕ ಎಂಬ ಜಠರಾಗ್ನಿಯು ಇತ್ತು ; 'ವೃಕೋ ನಾಮ ಮಹಾವಹ್ನಿಃ ಕಾಯೇನ ದಶ-ಯೋಜನಃ' ಎಂಬ ಯುಕ್ತಿಮಲ್ಲಿಕೆಯಲ್ಲಿ ಉದ್ಧರಣ ಮಾಡಿದ ಪ್ರಮಾಣವೂ ಇದನ್ನೇ ಹೇಳುತ್ತದೆ. ಅದರಿಂದ ಭೀಮನ ಜೀರ್ಣಶಕ್ತಿ ಅಪಾರವಾಗಿತ್ತು. ಆದ್ದರಿಂದಲೇ ಅವನು ವೃಕೋದರನೆಂದೂ ಪ್ರಸಿದ್ಧನಾಗಿದ್ದಾನೆ. ಈ ತೀಕ್ಷ್ಣ ಜಠರಾಗ್ನಿಯ ಬಲದಿಂದ ಅವನು ಬಂಡಿಗಟ್ಲೆ ಅನ್ನವನ್ನು ಉಂಡರೂ ವಿಷಾನ್ನ-ವನ್ನು ತಿಂದರೂ ಎಲ್ಲವೂ ಜೀರ್ಣವಾಗಿ ಹೋಗುತ್ತಿತ್ತು. ಈ ಕಾರಣ-ದಿಂದಲೇ ಏಕಚಕ್ರಾನಗರಿಯ ಜನರು ಬಕಾಸುರನಿಗಾಗಿ ಕಳುಹಿಸಿದ್ದ ಬಂಡಿ ಅನ್ನವನ್ನು ತಾನೇ ಭಕ್ಷಿಸಿ ತನ್ನ ಮೇಲೆ ಯುದ್ಧಕ್ಕೆ ಬಂದ ಬಕಾಸುರನನ್ನು ಕೊಂದ ಕಥೆಯು ಅವನು 'ಬಹುಭುಕ್ ಪಿತೋಃ' ಎಂಬುದಕ್ಕೆ ಸಾಕ್ಷೀಭೂತ-ವಾಗಿದೆ. ಇಲ್ಲಿಗೆ ಭೀಮಾವತಾರದ ವಿಚಾರ ಮುಗಿಯಿತು.

ಇನ್ನು ಶ್ರುತಿಯು ಮೂರನೆಯ ಅವತಾರದ ಪ್ರಸ್ತಾಪ ಮಾಡುತ್ತದೆ. ಭಕ್ತರ ಸಕಲಾಭೀಷ್ಟಗಳನ್ನು ನಡೆಸಿಕೊಡುವವನೂ ಭಕ್ತಾನುರಾಗಿಯೂ ಮಹಾಶಕ್ತಿಸಂಪನ್ನನೂ ದೇವಶ್ರೇಷ್ಠನೂ ಆದ (ವೃಷಭಸ್ಯ) ಈ ವಾಯು-ದೇವರ ಮೂರನೆಯ ಅವತಾರವು ಪೂರ್ಣಪ್ರಜ್ಞನೆಂಬ ಹೆಸರಿನಿಂದಲೂ ಆನಂದತೀರ್ಥನೆಂಬ ಹೆಸರಿನಿಂದಲೂ ಪ್ರಖ್ಯಾತವಾಗಿದೆ. ಅವರ ಈ 'ಪೂರ್ಣ-ಪ್ರಜ್ಞ' ಎಂಬ ಹೆಸರು ಕೇವಲ ಕರೆಯುವುದಕ್ಕಾಗಿ (ಹೆಸರು ಹೇಳುವುದ-ಕ್ಕಾಗಿ) ಮಾತ್ರ ಇಟ್ಟ ಹೆಸರಲ್ಲ, ಅದಕ್ಕೆ ಪ್ರತಿಯಾಗಿ ಅವರಿಗೆ ಅನ್ವರ್ಥವಾದ ಯೋಗರೂಢವಾದ ಹೆಸರೆಂಬುದನ್ನು ಸೂಚಿಸುವುದಕ್ಕಾಗಿ ಶ್ರುತಿಯು ಅವರ ಹೆಸರನ್ನು **ದಶಪ್ರಮತಿ** ಎಂದು ಹೇಳಿತು. ದಶ ಎಂದರೆ ಪರ್ವವೆಂದೂ

ಸರ್ವವೆಂದರೆ ಪೂರ್ಣವೆಂದೂ (ಐತರೇಯ) ಶ್ರುತಿ ಹೇಳುತ್ತದೆ. ಪ್ರಜ್ಞಾ ಎಂದರೆ ಪೂರ್ಣಜ್ಞಾನ ಎಂದು ಹೇಗೆ ಅರ್ಥವಾಗುತ್ತದೋ ಪ್ರಮತಿ ಎಂದರೂ ಅದೇ ಅರ್ಥವಾಗುತ್ತದೆ. ಏಕೆಂದರೆ ಪ್ರಜ್ಞಾ ಶಬ್ದ 'ಜ್ಞಾ'ತಿಳಿ ಎಂಬ ಧಾತು ನಿಷ್ಪನ್ನವಾದಂತೆ ಪ್ರಮತಿ ಶಬ್ದ 'ಮನ್'ತಿಳಿ, ಅರಿತುಕೊ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಏವಂ ಚ ಪ್ರಜ್ಞಾ–ಪ್ರಮತಿ ಎರಡೂ ಪರ್ಯಾಯಪದಗಳು. ಹೀಗೆ ದಶಪ್ರಮತಿ ಎಂದರೆ ಪೂರ್ಣಪ್ರಜ್ಞ ಎಂದೇ ಅರ್ಥವಾಗುವುದಲ್ಲದೆ ಅವರು ಪರಿಪೂರ್ಣವಾದ ಪರಿಶುದ್ಧವಾದ ಜ್ಞಾನವುಳ್ಳ ಸರ್ವಜ್ಞಶಿಖಾಮಣಿಗಳು ಎಂಬ ವಿಶೇಷತಾತ್ಪರ್ಯವನ್ನೂ ಸೂಚಿಸುತ್ತದೆ.

ಇಂಥಾ ಪೂರ್ಣಪ್ರಜ್ಞರೆಂಬ ತೃತೀಯಾವತಾರವನ್ನು ಕಲಿಯುಗದಲ್ಲಿ ಜ್ಞಾನದೋಹನ ಮಾಡುವುದಕ್ಕಾಗಿ ಎಂದರೆ ವೇದಾದಿ ಸಪ್ತವಿದ್ಯೆಗಳನ್ನು ಮಥನಮಾಡಿ ಅದರಿಂದ ಸಾರಭೂತವಾದ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಭಾಷ್ಯಾದಿ ಗ್ರಂಥರಚನೆ ಮಾಡುವ ಸಲುವಾಗಿ (ಎಂದರ್ಥ) ವೇದಾಭಿಮಾನಿಸ್ತ್ರೀಯರಾದ ಶ್ರೀಭೂದುರ್ಗಾದೇವಿಯರು ಇವರಿಗೆ ಗರ್ಭವಾಸದುಃಖವಿಲ್ಲದಂತೆ ಮಾಡಿ ಮಧ್ಯಗೇಹಭಟ್ಟರ ಪತ್ನಿಯಲ್ಲಿ ಪ್ರಾದುರ್ಭವಿಸುವಂತೆ ಮಾಡಿದರು. ಹೀಗೆ ಪೂರ್ಣಪ್ರಜ್ಞರು ಭೂಮಿಯಲ್ಲಿ ಅವತಾರವೆತ್ತಿದರೂ ಅವರಿಗೆ ಮಿಕ್ಕ ಎಲ್ಲರಂತೆ ಗರ್ಭವಾಸವಾಗಲಿ, ಗರ್ಭವಾಸದುಃಖವಾಗಲಿ ಈಷತ್ತೂ ಇಲ್ಲ ಎಂಬುದನ್ನು 'ಜನಯಂತ ಯೋಷಣಃ' ಎಂಬ ಶ್ರುತಿ ಹೇಳುತ್ತದೆ. ವಾದಿರಾಜರು ತಾ.ನಿ.ದಲ್ಲಿ ತೋರಿಸಿರುವಂತೆ ವ್ಯಾಕರಣರೀತ್ಯಾ ಅಜನಯಂತ ಎಂದಿರಬೇಕಾದ ರೂಪ 'ಬಹುಲಂ ಛಂದಸ್ಯಮಾಜ್‌ಯೋಗೇಪಿ' (ಪಾ. ೬/೪/೭೫) ಎಂಬ ಸೂತ್ರದಂತೆ ಅಡಾಗಮವಿಲ್ಲದೆ 'ಜನಯಂತ' ಎಂದೇ ಪ್ರಯುಕ್ತವಾಗಿದೆ. ಇದರಿಂದಲೇ ಮಧ್ವಾಚಾರ್ಯರು ತಾಯಿಯ ಗರ್ಭವಾಸವೇ ಇಲ್ಲದೆ ಅವತರಿಸಿದವರು ಎಂಬ ಪ್ರಮೇಯ ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂಬಲ್ಲಿಗೆ ಎರಡನೇ ಮಂತ್ರದ ಭಾವಾರ್ಥ ಮುಗಿಯಿತು.

ಮೂರನೇ ಮಂತ್ರ

374. ಅವತಾರಿಕೆ—(ಲೇ.) ಎರಡನೇ ಮಂತ್ರದ ಉತ್ತರಾರ್ಧ-ದಲ್ಲಿ ವಾಯುದೇವರ ಮೂರನೆಯ ರೂಪವು ಜ್ಞಾನದೋಹನಕ್ಕಾಗಿ ಆಯಿ-ತೆಂದು ಹೇಳಿತು. ಈ ಮಂತ್ರದಲ್ಲಿ ಆ ದೋಹನಪ್ರಕಾರವನ್ನೇ ವರ್ಣಿಸುತ್ತದೆ. ನಿರ್ಯದೀಂ.... ಇತಿ । (ಮುಂದೆ ಛ-ಖಂಡದಲ್ಲಿ ಭಾವಾರ್ಥದ ಪ್ರಾರಂಭ-ದಲ್ಲಿರುವ ಅಂಶವನ್ನೂ ಓದಿಕೊಳ್ಳಿ.)

ನಿರ್ ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ

ಈಶಾನಾಸಃ ಶವಸಾ ಕ್ರಂತ ಸೂರಯಃ ।

ಯದೀಮನು ಪ್ರದಿವೋ ಮಧ್ವ ಆಧವೇ

ಗುಹಾಸಂತಂ ಮಾತರಿಶ್ವಾ ಮಥಾಯತಿ ॥ ೩ ॥

ಪದಪಾಠ—ನಿಃ । ಯತ್ । ಈಮ್ । ಬುಧ್ನಾತ್ । ಮಹಿಷಸ್ಯ

ವರ್ಪಸಃ । ಈಶಾನಾಸಃ । ಶವಸಾ । ಕ್ರಂತ । ಸೂರಯಃ ॥

ಯತ್ । ಈಮ್ । ಅನು । ಪ್ರಽದಿವಃ । ಮಧ್ವಃ । ಆಽಧವೇ ।

ಗುಹಾ । ಸಂತಮ್ । ಮಾತರಿಶ್ವಾ । ಮಥಾಯತಿ ॥ ೩ ॥

೫) ಅನ್ವಯಭೇದ—ಈ ಮಂತ್ರದಲ್ಲಿರುವ ಮೂರು-ನಾಲ್ಕು ಪದಗಳನ್ನು ವಿಭಕ್ತಿವ್ಯತ್ಯಾಸದಿಂದಲೂ ಅರ್ಥವ್ಯತ್ಯಾಸದಿಂದಲೂ ಬೇರೆಬೇರೆ ರೀತಿ ಅನ್ವಯಿಸುವುದಕ್ಕೆ ಸಾಧ್ಯವಿರುವುದರಿಂದ ವಾದಿರಾಜರು ಒಂದು ರೀತಿ ಅನ್ವಯ ಮಾಡಿದರೆ ಭಾಷ್ಯಟೀಕಾಕಾರರೇ ಇನ್ನೊಂದು ರೀತಿ ಅನ್ವಯ ಮಾಡಿದ್ದಾರೆ. ಅದಕ್ಕೆ ಕಾರಣವನ್ನು ತಿಳಿದುಕೊಂಡರೆ ಅನ್ವಯಕ್ರಮವು ಸುಲಭವಾಗಿ ಅರ್ಥವಾಗುವುದು. i) ಮಹಿಷಸ್ಯ ಷಷ್ಠೀ ಏಕವಚನ; ಇದನ್ನು ವಾದಿರಾಜರು ವಾಯುವಿಗೆ ಅನ್ವಯಿಸುತ್ತಾರೆ, ಇತರ ಟೀಕಾಕಾರರು ವಿಷ್ಣುವಿಗೆ ಅನ್ವಯಿಸುತ್ತಾರೆ. ii) ವರ್ಪಸಃ ಎಂಬುದು ಸಹಸಃ (೧ನೇ ಮಂತ್ರ) ಎಂಬಂತೆ ಸಕಾರಾಂತ ಶಬ್ದ ಪಂಚಮೀ ಏಕವಚನದಲ್ಲೂ ದ್ವಿತೀಯಾ ಬಹುವಚನದಲ್ಲೂ ಈ ರೂಪವೇ ಬರುವುದರಿಂದ ವಾದಿರಾಜರು ಪಂಚಮೀ ಎಂದು ಗ್ರಹಣಮಾಡಿ ಯತ್ ಎಂಬುದಕ್ಕೆ ವಿಶೇಷಣವೆಂದು ಅನ್ವಯ ಮಾಡಿ ಮಧ್ವಾಚಾರ್ಯರ ಪರವಾಗಿ ಅರ್ಥ ಹೇಳುತ್ತಾರೆ. ಉಪನಿಷತ್ ಟೀಕಾಕಾರರು ಈ ಪದವನ್ನು ದ್ವಿತೀಯಾ ಬಹುವಚನವೆಂದು ಗ್ರಹಣಮಾಡಿ ವಿಷ್ಣುವಿನ ಗುಣಗಳೆಂದು ಅರ್ಥ ಹೇಳುತ್ತಾರೆ. iii) ಪ್ರದಿವಃ ಶಬ್ದ ಅಕಾರಾಂತವೆಂದು ಗ್ರಹಣಮಾಡಿ ಅದನ್ನು ಉಪನಿಷದ್ಭಾಷ್ಯಟೀಕಾಕಾರರು ಮಧ್ವರಿಗೆ ವಿಶೇಷಣವಾಗಿ ಅನ್ವಯಿಸುತ್ತಾರೆ. ವಾದಿರಾಜರು ಈ ಪದ ವಕಾರಾಂತ (ಪ್ರ-ದಿವ್)ವೆಂದೂ ದ್ವಿತೀಯಾ ಬಹುವಚನರೂಪವೆಂದೂ 'ಈಶಾನಾಸಃ' ಪದದ್ಯೋತಕವೆಂದೂ ಗ್ರಹಣಮಾಡಿ 'ರುದ್ರಾದಿ ದೇವತೆಗಳನ್ನು ಉದ್ದೇಶಿಸಿ' ಎಂದು ಅರ್ಥ ಹೇಳಿದ್ದಾರೆ. iv) ಹಾಗೆಯೇ ಸಿರ್ಷ್ರದೀಂ ಎಂಬಲ್ಲಿರುವ ಈಂ ಮತ್ತು ಸೂರಯಃ ಪದಗಳ ಅನ್ವಯವೂ ಬೇರೆ ಬೇರೆ ರೀತಿ ಇದೆ. ಯದ್ಯಪಿ ಹೀಗೆ ಅನ್ವಯಕ್ರಮದಲ್ಲಿ ವ್ಯತ್ಯಾಸವಿದ್ದರೂ ಒಟ್ಟು ಮಂತ್ರದ ಭಾವಾರ್ಥ ಮಾತ್ರ ಇಬ್ಬರದೂ ಒಂದೇ ಆಗಿದೆ. ಒಂದು ಅನುಕೂಲವೇನೆಂದರೆ ಪೂರ್ವಾರ್ಧವೇ ಬೇರೆ ವಾಕ್ಯವಾದರೆ ಉತ್ತರಾರ್ಧವೇ ಬೇರೆ ವಾಕ್ಯ. ಪೂರ್ವಾರ್ಧಕ್ಕೇ ಆಗಲಿ ಉತ್ತರಾರ್ಧಕ್ಕೇ ಆಗಲಿ ಇಬ್ಬರ ಅರ್ಥಗಳನ್ನೂ ಒಟ್ಟಿಗೆ ಹೇಳಿದರೆ ಅರ್ಥಗ್ರಹಣಮಾಡುವುದು ಕಷ್ಟವಾಗಬಹುದೆಂದು ತಿಳಿದು ಇಬ್ಬರ ಅರ್ಥಗಳನ್ನೂ ಬೇರೆ ಬೇರೆಯಾಗಿಯೇ ಕೊಟ್ಟಿದ್ದೇನಲ್ಲದೆ ಪೂರ್ವಾರ್ಧ ಉತ್ತರಾರ್ಧಗಳನ್ನೂ ಬಿಡಿಸಿ ತೋರಿಸಿದ್ದೇನೆ.

ಖ) ವಾದಿರಾಜರ ಅನ್ವಯ—(ಪೂರ್ವಾರ್ಧ) ಮಹಿಷಸ್ಯ ಬುಧ್ನಾತ್ ವರ್ಪಸಃ ಯತ್ ಈಂ ಈಶಾನಾಸಃ ನಿಃ(ನಿರ್) ಸೂರಯಃ ಶವಸಾ(ಅ) ಕ್ರಂತ। (ಉತ್ತರಾರ್ಧ) ಪ್ರದಿವಃ ಮಧ್ವಃ ಮಾತರಿಶ್ವಾ (ಪ್ರದಿವಃ) ಅನು ಗುಹಾಸಂತಂ ಈಂ ಆಥವೇ ಯತ್ ಮಥಾಯತಿ॥

ಗ) ಅನ್ವಯಾರ್ಥ—ಮಹಿಷಸ್ಯ-ದೇವಶ್ರೇಷ್ಠರಾದ ವಾಯು-ದೇವರ ; ಬುಧ್ನಾತ್-(ಎ) ಜ್ಞಾನರೂಪವಾದ ಅಥವಾ (ಬಿ) ಬುಧ್-ಪಂಡಿತರನ್ನು, ನಾತ್-ಸನ್ಮಾರ್ಗದಲ್ಲಿ ಒಯ್ಯುವಂಥಾ ; ವರ್ಪಸಃ-ವರಣ-ಪಾಲನಶೀಲರಾದ (ಎಂದರೆ ವರಿಸುವುದಕ್ಕೆ ಅಥವಾ ಆಶ್ರಯಿಸುವುದಕ್ಕೆ ಅರ್ಹರಾದವರೂ, ಆಶ್ರಯಿಸಿದವರನ್ನು ರಕ್ಷಿಸತಕ್ಕವರೂ ಆದ ಎಂದರ್ಥ) ; ಯತ್-ಯಾವ ಮೂರನೆಯ ರೂಪದಿಂದ ; ಈಂ-(ಎ) ಹೀಗೆಯೇ ಎಂದರೆ ಜ್ಞಾನದೋಹನದಿಂದಲೇ ಅಥವಾ (ಬಿ) ಈಗ ಕಾಣಿಸುವಂತೆ ; ಈಶಾನಾಸಃ-ರುದ್ರಾದಿ ದೇವತೆಗಳು ; ನಿಃ-(ನಿತರಾಂ) ಅತ್ಯಂತವಾಗಿ (ವಿಶೇಷವಾಗಿ) ; ಸೂರಯಃ-ಪಂಡಿತರಾಗಿ ; ಶವಸಾ-ಸುಖವಾಗಿ (ನಿರಾಯಾಸವಾಗಿ) ; (ಅ)-ಕ್ರಂತ-ಮಾಡಲ್ಪಟ್ಟರು. (ಈ ವಾಕ್ಯದ ಅಭಿಪ್ರಾಯವನ್ನು ತಾವೇ ಸಂಗ್ರಹಿಸಿ ಹೇಳುತ್ತಾರೆ—) ಜ್ಞಾನರೂಪಾತ್ ಭಕ್ತಾನುಗ್ರಹಕಾರಿತ್ವಾತ್ ಭಕ್ತರಕ್ಷಕ-ತ್ವಾಚ್ಚ ಪೂರ್ಣಪ್ರಜ್ಞಾಖ್ಯೋಽವತಾರಃ ಈಶಾನಾದಿದೇವಾನ್ ಸುಖೇನ ಸೂರೀನಕೃತೇತಿ ಫಲಿತೋಽಭಿಪ್ರಾಯಃ। (ಅರ್ಥ) ಜ್ಞಾನರೂಪಿಗಳೂ (ಬುಧ್ನಾತ್) ಭಕ್ತರಿಗೆ ಅನುಗ್ರಹಮಾಡಲಿಚ್ಛೆಯುಳ್ಳವರೂ ಭಕ್ತರಕ್ಷಕರೂ ಆದ (ಇವೆರಡೂ ವರ್ಪಸ ಎಂಬುದರ ಅರ್ಥ) ಪೂರ್ಣಪ್ರಜ್ಞರೆಂಬ ಮೂರನೇ ಅವತಾರವು ರುದ್ರಾದಿ ದೇವತೆಗಳನ್ನು, ಸುಖವಾಗಿ ಜ್ಞಾನಿಗಳನ್ನಾಗಿ ಮಾಡಿತು ಎಂಬುದೇ ಪಿಂಡಿತಾರ್ಥ. (ಈ ವಾಕ್ಯ ಏಕೆ ಬಂತೆಂದರೆ ಅದರ ಪ್ರಯೋಜನ-ವನ್ನೂ ತೋರಿಸುತ್ತಾರೆ—) ಪ್ರಾಗುಕ್ತಜ್ಞಾನದೋಹಃ ಕೇಷಾಮಿತಿ ಶಂಕಾ-ಪರಿಹಾರಾಯ ಉತ್ತರೇಯಂ ಶ್ರುತಿರಿತಿ ಭಾವಃ। (ಅರ್ಥ) ಎರಡನೇ ಮಂತ್ರ ದಲ್ಲಿ ಜ್ಞಾನದೋಹನಕ್ಕಾಗಿ ಅವತಾರ ಮಾಡಿತು ಎಂದು ಹೇಳಿತಷ್ಟೆ. ಆ ಜ್ಞಾನದೋಹ ಯಾರ ಸಲುವಾಗಿ ? ಎಂಬ ಶಂಕೆ ಬಂದರೆ ಅದಕ್ಕೆ ಉತ್ತರ-ವಾಗಿ ಈ ಶ್ರುತಿ ಹೊರಟಿತು ಎಂದು ತಿಳಿಯಬೇಕು.

(ಉತ್ತರಾರ್ಧ) ಅವತಾರಿಕೆ—ಆ ಪೂರ್ಣಪ್ರಜ್ಞರ ನಾಮಾಂತರವನ್ನು ಹೇಳುತ್ತಾ ಶ್ರುತಿಯು ಆ ಜ್ಞಾನ ಎಂಥಾದ್ದು ಎಂಬ ಆಕಾಂಕ್ಷೆಯನ್ನು ಪರಿಹರಿಸುತ್ತಾ ಹೇಳುತ್ತದೆ. ಪ್ರದಿವಃ-ಪ್ರಕೃಷ್ಟಜ್ಞಾನವುಳ್ಳ; ಮಧ್ವಃ—ಮಧ್ವಾಚಾರ್ಯರೆಂಬ; ಮಾತರಿಶ್ವಾ-ವಾಯುವು; ಅನು-(ಎ) ಭಾರತ-ಪಂಚರಾತ್ರಾದಿ ಗ್ರಂಥಗಳನ್ನು ಅನುಸರಿಸಿ; (ಬಿ) ಪ್ರದಿವಃ ಅನು-ಪ್ರಕೃಷ್ಟ ಬುದ್ಧಿಪ್ರಕಾಶವುಳ್ಳ ಹಿಂದೆ ಹೇಳಿದ ರುದ್ರಾದಿ ದೇವತೆಗಳನ್ನು ಉದ್ದೇಶಿಸಿ; ಗುಹಾಸಂತಂ—(ಎ) ಹೃದಯ ಗುಹೆಯಲ್ಲಿರುವ ಅಥವಾ (ಬಿ) ಅಯೋಗ್ಯರ ಅಪಪ್ರಚಾರದಿಂದ ಗೂಹಿತವಾಗಿ (ಪ್ರಕಾಶಕ್ಕೆ ಬರದೆ) ಇದ್ದಂಥಾ-ನಾರಾಯಣನನ್ನು; ಈಂ—ಹೀಗೆ ಎಂದರೆ ಮತ್ಸ್ಯಾದ್ಯವತಾರಗಳಲ್ಲಿ ಕಾಣಿಸುವ ರೀತಿಯಲ್ಲಿ; ಆ ಧವೇ-ಭಾವಪ್ರಧಾನ ನಿರ್ದೇಶ)-ಆ—ಸಮಂತಾತ್-ಅತ್ಯಧಿಕವಾಗಿ, ಧವೇ-ಸ್ವಾಮಿ ಎಂಬ ವಿಷಯದಲ್ಲಿ ಎಂದರೆ ಸರ್ವೋತ್ತಮನೆಂಬ ವಿಷಯದಲ್ಲಿ; ಯತ್-ಮಥಾಯತಿ ಏನು ವೇದಶಾಸ್ತ್ರಾದಿಗಳ ಮಥನ ಮಾಡುತ್ತಾರೋ ಎಂದರೆ ವೇದಶಾಸ್ತ್ರಾದಿಗಳನ್ನು ಮಥನ ಮಾಡಿ ವಿಷ್ಣುವೇ ಸರ್ವೋತ್ತಮ-ನೆಂಬ ಸಿದ್ಧಾಂತವನ್ನು ಸ್ಥಾಪನೆ ಮಾಡುತ್ತಾರೋ ಅದರಿಂದ ರುದ್ರಾದಿ ದೇವತೆಗಳೆಲ್ಲ ಪಂಡಿತರಾಗಿ ಮಾಡಲ್ಪಟ್ಟರು ಎಂದು ಪೂರ್ವಾರ್ಧದೊಡನೆ ಅನ್ವಯಿಸಬೇಕು. ಆ ಪೂರ್ವಾರ್ಧವು ಪುನಃ ಯಾರಿಂದ ರುದ್ರಾದಿಗಳು ಪಂಡಿತರಾಗಿ ಮಾಡಲ್ಪಟ್ಟರೋ ಅಂಥಾ ದಶಪ್ರಮತಿಯನ್ನು ಸ್ತ್ರೀಯರು ಹಡೆದರು ಎಂದು ಎರಡನೇ ಮಂತ್ರದ ಉತ್ತರಾರ್ಧದೊಡನೆ ಅನ್ವಯ-ವಾಗುತ್ತದೆ.

(ಫ) ಉಪನಿಷಟ್ಟೀಕಾಕಾರರಂತೆ ಅನ್ವಯ—(ಪೂರ್ವಾರ್ಧ) ಬುಧ್ನಾತ್ ಯದೀಂ ಮಹಿಷಸ್ಯ ವರ್ಪಸಃ ಈಶಾನಾಸಃ ಸೂರಯಃ (ಚ) ಶವಸಾ ನಿರ್ ಆಕ್ರಂತ। (ಉತ್ತರಾರ್ಧ) ಯದೀಂ ಪ್ರದಿವಃ ಮಧ್ವಃ ಮಾತರಿಶ್ವಾ ಗುಹಾಸಂತಂ ಆಧವೇ ಅನು ಮಥಾಯತಿ ||

(ಐ) ಅನ್ವಯಾರ್ಥ—(ಪೂರ್ವಾರ್ಧ) ಬುಧ್ನಾತ್-ಜ್ಞಾನಸ್ವರೂಪರಾದ (ವೇ.) ಜ್ಞಾನೋಪದೇಶಕರಾದ ಅಥವಾ ಭಗವದ್ಭಕ್ತಾಗ್ರೇಸರರಾದ ಅಥವಾ ಭಕ್ತಿರೂಪಜ್ಞಾನಸಂಪನ್ನರಾದ (ತಾವು); ಯದೀಂ—ಯಾವ ಮೂರನೆಯ ರೂಪದಿಂದಲೇ; ಮಹಿಷಸ್ಯ—ಮಹಿತಷಡ್ಗುಣನಾದ (ವೇ.

ತಾಮ್ರ-) ಎಂದರೆ ಮಹಿ-ಮಹಿತ-ಪೂಜ್ಯವಾದ, ಸ್ಯ-ಷಡ್ಗುಣವುಳ್ಳ ಶ್ರೀಹರಿಯ; ವರ್ಪಸಃ-(ವರಣೀಯತ್ವಾತ್ ಪಾಲಕತ್ವಾತ್ ವರ್ಪಾಖ್ಯಾನ್ ಗುಣಾನ್ (ವೇ.)-ವರಿಸುವುದಕ್ಕೆ ಯೋಗ್ಯವೂ ಪಾಲನೆ ಮಾಡತಕ್ಕವೂ ಆದ ಗುಣಗಳನ್ನು ಮತ್ತು (ಭಾ.ಬೋ.) ಅವತಾರಗಳನ್ನು ಈಶಾನಾಸಃ-ರುದ್ರಾದಿ ದೇವತೆಗಳೂ, ಸೂರಯಃ (ಚ)-ಬೇರೆ ಜ್ಞಾನಿಗಳೂ; ಶವಸಾ-ಸುಖವಾಗಿ; ನಿರ್ ಅಕ್ರಂತ-ತಿಳಿದುಕೊಂಡರೋ (ಅಂಥಾ ತೃತೀಯಂ ವಪು ಜನಯಂತ ಎಂದು ಹಿಂದಿನ ಮಂತ್ರದೊಡನೆ ಅನ್ವಯವಾಗುತ್ತದೆ.) (ಉತ್ತರಾರ್ಧ) ಯತ್ ಈಂ-ಮತ್ತು ಯಾವ ಮೂರನೇ ಅವತಾರವಾದ, ಪ್ರದಿವಃ-ಪ್ರಕೃಷ್ಟ (ಅತಿಶಯವಾದ) ಪ್ರಕಾಶರೂಪವುಳ್ಳ (ವೇ.) ಮಧ್ವಃ-ಮಧ್ವಾಖ್ಯರಾದ; ಮಾತರಿಶ್ವಾ-ವಾಯುದೇವರು; ಗುಹಾಸಂತಂ-ಜೀವೇಶ್ವರೈಕ್ಯವನ್ನು ಹೇಳುವ ಜನಗಳಿಂದ ಮರೆಯಾಗಿ ಹೋಗಿದ್ದ ಶ್ರೀಹರಿಯನ್ನು; ಆಥವೇ (ಭಾವಪ್ರಧಾನಪ್ರಯೋಗ). ಆ-ಸಮಂತಾತ್-ಸರ್ವರೀತಿಯಿಂದಲೂ, ಥವೇ-ಪತಿತ್ವೇ ವಿಷಯೇ, ಸ್ವಾಮಿ ಎಂಬ ವಿಷಯದಲ್ಲಿ; ಅನು-ವೇದಾದಿಶಾಸ್ತ್ರಗಳನ್ನನುಸರಿಸಿ; ಮಥಾಯತಿ-ಕಡೆಯುತ್ತಾರೋ, ಮಥನಮಾಡುತ್ತಾರೋ ಎಂದರೆ ಶಾಸ್ತ್ರದಿಂದ ವಿಚಾರಮಾಡಿ ನಿರ್ಧರಿಸುತ್ತಾರೋ (ಅಂಥಾ ಬುಧ್ನಾತ್ ವರ್ಪಸಃ ನಿರಾಕ್ರಂತ ಎಂದು ಪೂರ್ವಾರ್ಧದೊಡನೆ ಅನ್ವಯಿಸಬೇಕು.)

ಈ ಮಂತ್ರದ ಭಾವಾರ್ಥವನ್ನು ನಿರೂಪಣೆ ಮಾಡುವುದಕ್ಕೆ ಮೊದಲು ಈ ಮಂತ್ರದಲ್ಲಿ ಬಂದಿರುವ ಪದಗಳ ವಿವರಣೆಯನ್ನೂ ವಿಶೇಷ ವಿಚಾರಗಳನ್ನೂ ತಿಳಿಸುವುದು ಉಚಿತವಾಗಿದೆ.

ಚ) ವಿಶೇಷ ವಿಚಾರಗಳು i) ಬುಧ್ನಾತ್ ಎಂಬುದಕ್ಕೆ ವಾದಿರಾಜರು ಎರಡು ರೀತಿ ಅರ್ಥ ಹೇಳುತ್ತಾರೆ—(ಎ) ಬುಧ ಅವಗಮನೇ (ಭ್ವಾ.ಪ.) ಬುಧ್ (ಬೋಧ್) ತಿಳಿ, ಅರಿತುಕೋ ಎಂಬ ಧಾತುವಿನಿಂದ ಈ ಪದ ಬಂದಿರುವುದರಿಂದ ಇದಕ್ಕೆ ಜ್ಞಾನರೂಪರಾದ ಎಂಬುದು ಒಂದರ್ಥ (ತಾ.ನಿ.) (ಬಿ) ಅದೇ ಧಾತುವಿನಿಂದ ಬುತ್ । ಬುಧೌ । ಬುಧಃ ಎಂಬ ದಶಾಂತರರೂಪವೂ ಆಗುತ್ತದೆ; ಅದಕ್ಕೆ ಜ್ಞಾನಿಗಳು ಅಥವಾ ಪಂಡಿತರು

ಎಂದೇ ಅರ್ಥ ನೀ (ನಯ್)-ಒಯ್ಯು ಎಂಬ ಧಾತುವಿನಿಂದ ನ-ರೂಪ ಬರುತ್ತದೆ. ಹೀಗೆ ಬುಧ್-ಜ್ಞಾನಿಗಳನ್ನು, ನ-ಸನ್ಮಾರ್ಗದಲ್ಲಿ ಒಯ್ಯುವವರು ಎಂದೂ ಅರ್ಥವಾಗುತ್ತದೆ. ಬುಧ್ನಾತ್-ಪಂಡಿತರನ್ನು ಸನ್ಮಾರ್ಗದಲ್ಲಿ ಒಯ್ಯುವಂಥಾ, ಮುಂದೆ ಬರುವ ಹತ್ತನೇ ಶ್ಲೋಕದ ಅರ್ಥವನ್ನು ಓದಿ-ಕೊಂಡರೆ ಈ ಅರ್ಥ ಮಂದಟ್ಟಾಗುವುದು. (ಸಿ) ತಾಮ್ರಪರ್ಣಿಆಚಾರ್ಯರು ಹೆಚ್ಚಿನ ವಿವರಣೆ ಕೊಟ್ಟಿದ್ದಾರೆ. ಅದನ್ನು ಸಂಗ್ರಹಿಸಿ ಹೀಗೆ ಹೇಳಬಹುದು. ಪಾಣಿನಿಯ ರೀತ್ಯಾ 'ಬಂಧೇರ್ಬ್ರಧಿಬುಧೀ ಚ' ಎಂಬ ಉಣಾದಿಸೂತ್ರ (೩/೫) ದಂತೆ ಬಂಧ್ ಧಾತುವಿಗೆ ನಕ್ ಪ್ರತ್ಯಯ ಸೇರಿದಾಗ ಬುಧ್ ಆದೇಶ ಬಂಧು ಬುಧ್ನ ಎಂಬ ರೂಪವಾಗುತ್ತದೆ, ಬುಧ್ ಧಾತುವಿನ ಮೇಲೆ ನಕ್ ಸೇರಿ ಆಗುವುದಿಲ್ಲ. ಆದರೆ ಶ್ರೀಮಜ್ಜಯತೀರ್ಥರು ಋಗ್ಭಾಷ್ಯಟೀಕೆಯಲ್ಲಿ 'ಅಬುಧ್ನೇ ರಾಜಾ' (೨೩, ೨೪ಸೂ. ೭ ಋಕ್, ೧೪ನೇ ವರ್ಗ) ಎಂಬು-ದಕ್ಕೆ ವಿವರಣೆ ಕೊಡುವಾಗ 'ಬುಧ ಅವಗಮನೇ' ಎಂಬ ಧಾತುವಿನಿಂದಲೇ ಈ ರೂಪ ಸಿದ್ಧಿಯಾಗುವುದೆಂದು ಹೇಳಿದ್ದಾರಾದ ಕಾರಣ ಮೇ. ಹೇಳುವಂತೆ 'ಜ್ಞಾನ ಸ್ವರೂಪಾತ್' ಎಂಬರ್ಥ ತಪ್ಪಲ್ಲ, ಆದರೂ ಪ್ರಕೃತಸಂದರ್ಭದಲ್ಲಿ ಬಂಧ್ ಧಾತುವಿನಿಂದಲೂ ಅರ್ಥ ಹೇಳಬಹುದು. ಹೇಗೆಂದರೆ ಧಾತ್ವರ್ಥ-ವಾದ ಬಂಧನವು ಭಕ್ತಿರೂಪಬಂಧನವೆಂದು ಇಟ್ಟುಕೊಳ್ಳಬೇಕು; ಏಕೆಂದರೆ 'ಅನುಬಂಧಶ್ಚ ಭಕ್ತಿಃ ಸ್ಯಾತ್' ಎಂಬ ವಚನವಿದೆ. ಈ ಅರ್ಥದಲ್ಲಿ ಬುಧ್ನಾತ್ ಎಂದರೆ ಭಕ್ತಾಗ್ರೇಸರರಾದ ಎಂದರ್ಥವಾಗುತ್ತದೆ. ಅಥವಾ ಭಕ್ತಿಯೂ ಜ್ಞಾನರೂಪವಾದ್ದರಿಂದ ಜ್ಞಾನಸ್ವರೂಪರಾದ ಎಂಬ ಅರ್ಥವೂ ಹೊಂದು-ತ್ತದೆ. (ಡಿ) ಯುಕ್ತಿಮಲ್ಲಿಕಾದಲ್ಲೇ ಬೇರೆ ಅರ್ಥ ಹೇಳಿದ್ದಾರೆ—'ಮೂಲಂ ಬುಧ್ನೋಂಘ್ರಿನಾಮಕಃ' ಎಂದು ಕೋಶವಿರುವುದರಿಂದ ಬುಧ್ನ ಎಂದರೆ ಮೂಲ ಅಥವಾ ಮರದ ಬೇರು-ಬುಡ ಎಂದೂ ಅರ್ಥ ಅದರಂತೆ ಬುಧ್ನಾತ್ ಎಂಬುದನ್ನು ವಾಯುದೇವರಿಗೆ ಅನ್ವಯಿಸಿದರೆ 'ಸಕಲ ವೈಷ್ಣವ-ರಿಗೆ ಮೂಲಾಧಾರರಾದ' ಎಂದರ್ಥವಾಗುತ್ತದೆ.

ii) ಮಹಿಷಸ್ಯ. ಮಹಿಷೀ ಎಂದರೆ ಎಮ್ಮೆ ಎಂಬ ಅರ್ಥ ಪ್ರಸಿದ್ಧ-ವಾಗಿದೆ. ಅದರ ಪುಲ್ಲಿಂಗ ರೂಪವೇ ಮಹಿಷ—ಇದಕ್ಕೆ 'ಕೋಣ' ಎಂದರ್ಥ-

ವಾಗುತ್ತದೆ. ಸಿಂಹ–ನಾಗ–ವೃಷಭ ಮೊದಲಾದ ಶಬ್ದಗಳು ಶ್ರೇಷ್ಠಾರ್ಥ-ವಾಗಿರುವಂತೆ ಇದೂ ಶ್ರೇಷ್ಠಾರ್ಥವಾಚಕ. ಆದ್ದರಿಂದಲೇ ಇದಕ್ಕೆ ವಾಯು-ಪರವಾಗಿ ಅರ್ಥಹೇಳುವಾಗ ವಾದಿರಾಜರು 'ದೇವಶ್ರೇಷ್ಠರಾದ' ಎಂದು ಅರ್ಥ ಹೇಳಿದರು. ವಿಷ್ಣುವಿಗೆ ಅನ್ವಯಿಸುವಾಗ ಈ ಪದವನ್ನು ಮಹಿ–ಷಸ್ಯ ಎಂದು ಒಡೆದುಕೊಳ್ಳಬೇಕು. ಮಹ ಪೂಜಾಯಾಂ ಎಂಬ ಧಾತುವಿನಿಂದ 'ಮಹಿತ' ರೂಪ ಬರುತ್ತದೆ ; ಅದಕ್ಕೆ ಪೂಜಿಸಲ್ಪಡುವ ಪೂಜ್ಯವಾದ ಎಂದರ್ಥವಾಗು-ತ್ತದೆ. ಪುರುಷಶಬ್ದಕ್ಕೆ ಒಂದು ಕಡೆ ಆಚಾರ್ಯರು ಪೂರ್ಣಷಡ್ಗುಣನಾದ ಭಗವಂತ ಎಂದು ಅರ್ಥ ಹೇಳಿದ್ದಾರೆ. ಅಲ್ಲಿ ಪುರು–ಪೂರ್ಣವಾದ, ಷ–ಷಡ್ಗುಣವುಳ್ಳ ಎಂದರ್ಥ. ಅದನ್ನು ಅನುಸರಿಸಿ ಪ್ರಕೃತಸಂದರ್ಭದಲ್ಲೂ ಷ-ಷಡ್ಗುಣನಾದ ಎಂದು ವೇದೇಶೀಯರು ಅರ್ಥ ಹೇಳಿದ್ದಾರೆ. 'ಐಶ್ವರ್ಯಸ್ಯ ಸಮಗ್ರಸ್ಯ—' ಎಂಬ ಶ್ಲೋಕದಂತೆ ೧. ಐಶ್ವರ್ಯ, ೨. ವೀರ್ಯ, ೩. ಯಶಸ್ಸು, ೪. ಕಾಂತಿ, ೫. ಜ್ಞಾನ, ೬. ವಿಜ್ಞಾನ ಈ ಆರೇ ಷಡ್ಗುಣಗಳು. ಆದಕಾರಣ 'ಮಹಿಷಸ್ಯ' ಎಂದರೆ 'ಮಹಿತಷಡ್ಗುಣ' ನಾದ (ವೇ.) ಎಂದರೆ ಪೂಜ್ಯವಾದ ಐಶ್ವರ್ಯ ಮೊದಲಾದ ಗುಣಗಳುಳ್ಳವನು ಎಂದಾಗಲಿ ಐಶ್ವರ್ಯಾದಿ ಗುಣಗಳಿಂದ ಪೂಜಿತನಾದವನು ಎಂದಾಗಲಿ ಅರ್ಥವಾಗುತ್ತದೆ.

iii) **ವರ್ಪಸಃ** ಎಂಬುದು ಈ ಮೊದಲು ಕ-ವಿಭಾಗದಲ್ಲಿ ತಿಳಿಸಿದಂತೆ ಸಕಾರಾಂತ ಶಬ್ದ ; ಇದಕ್ಕೆ ಸ್ಮೃತಿಯು 'ವರ್ಪಾಖ್ಯಾನ್ ಗುಣಾನ್' ಎಂದು ವ್ಯಾಖ್ಯಾನ ಮಾಡಿರುವುದರಿಂದ ಇದು ಪುಲ್ಲಿಂಗವೆಂದು ಸ್ಪಷ್ಟವಾಗುತ್ತದೆ. ಆದಕಾರಣ ಇದರ ರೂಪಗಳು ವೇಧಸ್ ಶಬ್ದದಂತೆ ವರ್ಪಾಃ । ವರ್ಪಸೌ । ವರ್ಪಸಃ । ಎಂದಾಗುತ್ತದೆ. ಅದನ್ನು ಲಕ್ಷಿಸಿಯೇ ವಾದಿರಾಜರು ಇದನ್ನು ಪಂಚಮ್ಯಂತವೆಂದು (ವರ್ಪಸಃ । ವರ್ಪೋಭ್ಯಾಂ । ವರ್ಪೋಭ್ಯಃ) ಗ್ರಹಣ-ಮಾಡಿ ಬುಧ್ನಾತ್‌ಗೆ ವಿಶೇಷಣವಾಗಿ ಅನ್ವಯಿಸಿದರು ; ವೇದೇಶೀಯಾದಿಗಳು ದ್ವಿತೀಯಾ ಬಹುವಚನವೆಂದು (ವರ್ಪಸಂ । ವರ್ಪಸೌ । ವರ್ಪಸಃ) ಗ್ರಹಣ-ಮಾಡಿ ಗುಣಾನ್ ಎಂದು ಅರ್ಥ ಹೇಳಿದರು. ಈ ಪದದಲ್ಲಿ ವರ್+ಪ+ಅಸ್ ಎಂದು ಮೂರು ಅವಯವಗಳಿವೆ. ವರ್ ಎಂಬುದು ವೃಞ್ ವರಣೇ–ವರಿಸು,

ಆರಿಸು, ಆಶ್ರಯಿಸು ಎಂಬ ಧಾತುವಿನ ರೂಪ ; ಇದಕ್ಕೆ ವರಿಸಲು ಅಥವಾ ಆರಿಸಲು ಯೋಗ್ಯರಾದ ಎಂದರ್ಥ. ಪ ಎಂಬುದು 'ಪಾ ರಕ್ಷಣೇ' ಎಂಬ ಧಾತುವಿನ ರೂಪ (ನೃಪ, ಭೂಪ ಶಬ್ದಗಳನ್ನು ಹೋಲಿಸಿ)ನಾದ್ದರಿಂದ ರಕ್ಷಕ ಎಂದರ್ಥ. ವೃ ಮತ್ತು ಪಾ ಎರಡು ಧಾತುಗಳ ಮೇಲೆ ಅಸನ್ ಪ್ರತ್ಯಯ ಬಂದು ವರ್-ಪ-ಅಸ್ ಸೇರಿ ವರ್ಪಸ್ (ಪ್ರ.ವಿ. ರೂಪ ವರ್ಪಾಃ) ಎಂದಾಗಿದೆ. ವಾಯುದೇವರಿಗೆ ಅನ್ವಯಿಸಿದರೆ 'ಶರಣ-ಪಾಲನಶೀಲಾತ್' ಆಶ್ರಿತಸಂರಕ್ಷಕ-ರಾದ ಎಂದೂ, ವಿಷ್ಣುವಿಗೆ ಅನ್ವಯಿಸಿದರೆ 'ವರಣೀಯತ್ವಾತ್ ಪಾಲಕತ್ವಾತ್ ವರ್ಪಾಖ್ಯಾನ್ ಗುಣಾನ್' (ವೇ.) ಎಂದರ್ಥವಾಗುತ್ತದೆ. (ಅನ್ವಯಾರ್ಥ-ದಲ್ಲಿ ನೋಡಿ.)

iv) **ಈಶಾನಾಸಃ** ಎಂಬುದು ಛಾಂದಸರೂಪ. 'ಈಶ್ವರಃ ಶರ್ವ ಈಶಾನಃ' ಎಂದು ಅಮರವಿರುವುದರಿಂದ ಈಶಾನ-ಶಬ್ದವು ಈಶ್ವರನಲ್ಲಿ ಪ್ರಸಿದ್ಧವಾಗಿದೆ. 'ಬಹುವಚನಮಾದ್ಯರ್ಥೇ' ಎಂದಿರುವುದರಿಂದ 'ಮೊದಲಾದ' ಎಂಬ ಅರ್ಥದಲ್ಲಿ ಬಹುವಚನ ಬಂದಿದೆ. ಈಶಾನಾಸಃ-ರುದ್ರಾದಿ ದೇವತೆಗಳು. v) **ಸೂರಯಃ** ಪ್ರಥಮಾ ಬಹುವಚನರೂಪ. 'ವಿದ್ವಾನ್ ಸೂರಿಃ ಕೃತೀ ಕೃಷ್ಟಿಃ' ಅಮರ. 'ಸೂರಿಃ ಪ್ರಾಜ್ಞಃ ಪಂಡಿತಃ' ಹಲಾಯುಧ. ಸೂತೇ ಸದ್ವಾಕ್ಯಾನೀತಿ ಸೂರಿಃ-ಒಳ್ಳೆಯ ಮಾತುಗಳನ್ನು ಅಥವಾ ವಿಚಾರಗಳನ್ನು ಪ್ರಸವಿಸುವವನು—ಪಂಡಿತ ಎಂಬ ಅರ್ಥದಲ್ಲಿ ಸೂ (ಅದಾ.ಆ.) ಧಾತುವಿನ ಮೇಲೆ ರಿ (ಕ್ರಿ) ಎಂಬ ಉಣಾದಿಪ್ರತ್ಯಯ (೪/೬೪) ಬಂದಿದೆ ವಾದಿರಾಜರು 'ರುದ್ರಾದಿದೇವತೆಗಳು ಪಂಡಿತರಾಗಿ ಮಾಡಲ್ಪಟ್ಟರು' ಎಂದು ಅನ್ವಯ ಮಾಡಿದರೆ ವೇ. ಪ್ರಭೃತಿಗಳು ರುದ್ರಾದಿದೇವತೆಗಳಲ್ಲದೆ ಋಷಿಗಳು ಮನು-ಷ್ಯೋತ್ತಮರೇ ಮೊದಲಾದ ಇತರ ಜ್ಞಾನಿಗಳೂ ಅರಿತುಕೊಂಡರು ಅಥವಾ ತಿಳಿದುಕೊಂಡರು ಎಂದು ಅರ್ಥಮಾಡುತ್ತಾರೆ. vi) **ನಿರ್** ಉಪಸರ್ಗ, **ಅ(ಆ)ಕ್ರಂತ** ಎಂಬುದಕ್ಕೆ ವಾದಿರಾಜರು ತಾ.ನಿ.ದಲ್ಲಿ 'ಅಕ್ರಿಯಂತ'-ಮಾಡಲ್ಪಟ್ಟರು ಎಂದು ಅರ್ಥ ಹೇಳಿದರೆ ಯು.ಮ.ದಲ್ಲಿ 'ನಿರಜಾನಂತ'-ತಿಳಿದು-ಕೊಂಡರು ಎಂದು ಅರ್ಥಹೇಳಿ ಕ್ರಂದಿರ್ಗತಿಶೋಷಣಯೋಃ ಎಂಬ ಧಾತು-ವಿಗೆ ಹೋದನು ಎಂಬರ್ಥವಿರುವುದರಿಂದ ತಿಳಿದುಕೊಂಡರು ಎಂಬ ಅರ್ಥಬಂದಿದೆ

ಎನ್ನುತ್ತಾರೆ. ಶ್ರೀನಿವಾಸತೀರ್ಥರು ತೈತ್ತಿ. ಭಾಷ್ಯಟೀಕೆಯಲ್ಲಿ ಧಾತುಗಳಿಗೆ ಅನೇಕಾರ್ಥವಿರುವುದರಿಂದ ಕ್ರಮ್ ಧಾತುವಿಗೆ 'ತಿಳಿದರು' ಎಂಬ ಅರ್ಥ-ಕೊಡುತ್ತದೆ ಎನ್ನುತ್ತಾರೆ.

vii) **ಪ್ರದಿವಃ** ಎಂಬುದಕ್ಕೆ ಯು.ಮ.ದಲ್ಲಿ ಪ್ರಕೃಷ್ಟಾ ದ್ಯೌಃ ಯಸ್ಯೇತಿ ಪ್ರದಿವಃ ಎಂದು ವಿಗ್ರಹ ತೋರಿಸಿ ಪ್ರಕೃಷ್ಟಜ್ಞಾನಪ್ರಕಾಶವುಳ್ಳವರು ಎಂದು ಮಧ್ವಾಚಾರ್ಯರಿಗೇ ವಿಶೇಷಣ ಮಾಡಿದ್ದಾರೆ. ಉಪ-ಭಾಷ್ಯಟೀಕಾಕಾರರೂ ಹೀಗೆಯೇ ಅರ್ಥ ಹೇಳಿದ್ದಾರೆ. ದಿವು ಕ್ರೀಡಾಯಾಂ ಎಂಬ ಧಾತುವಿಗೆ ಭಾವಾರ್ಥದಲ್ಲಿ ಕ ಪ್ರತ್ಯಯ ಬಂದು ಪ್ರದಿವಃ ಎಂದಾಗುತ್ತದೆ (ಯು.ಮ.); ಇದು ಅಕಾರಾಂತ. ತಾ.ನಿ ದಲ್ಲಿ ಈ ಶಬ್ದವನ್ನು ವಕಾರಾಂತವೆಂದು ಗ್ರಹಿಸಿ ದ್ವಿ.ಬ. ರೂಪವೂ ಪ್ರದಿವಃ (ದಿವಂ । ದಿವೌ । ದಿವಃ) ಎಂದಾಗುವುದರಿಂದ 'ಪ್ರಕೃಷ್ಟಬುದ್ಧಿಪ್ರಕಾಶವುಳ್ಳ ರುದ್ರಾದಿ ದೇವತೆಗಳನ್ನುದ್ದೇಶಿಸಿ' ಎಂದು ಅರ್ಥ ಹೇಳಿದ್ದಾರೆ.

viii) **ಮಧ್ವ** ಶಬ್ದಾರ್ಥವನ್ನು ಸ್ಮೃತಿಯಿಂದಲೇ ಹೇಳುತ್ತಾರೆ— ಮಧ್ವಿತ್ಯಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಮ್ । ಮಧ್ವ ಆನಂದತೀರ್ಥಃ ಸ್ಯಾತ್ ತೃತೀಯಾ ಮಾರುತೀತನುಃ ॥' (ಅರ್ಥ) ಮಧು ಶಬ್ದವು ಆನಂದವಾಚಕ. 'ಮಧು ದ್ಯೌರಸ್ತು ನಃ ಪಿತಾ' ಎಂಬ ಶ್ರುತಿಗೆ 'ದ್ಯುಲೋಕಾಭಿಮಾನಿಯು ನಮ್ಮ ತಂದೆ, ಅವನು ನಮಗೆ ಆನಂದವನ್ನುಂಟು ಮಾಡಲಿ' ಎಂದು ಅರ್ಥವಾಗುವುದರಿಂದ (ಸು.ಪ.) ಮಧು ಎಂದರೆ ಆನಂದ. ವ ಶಬ್ದಾರ್ಥವನ್ನು ಸುಧಾದಲ್ಲಿ ತೋರಿಸಿದ್ದಾರೆ—ವ-ಶಬ್ದಃ ಶಾಸ್ತ್ರಪರ-ಪರ್ಯಾಯತೀರ್ಥವಾಚೀ । ವಾತೇರವಗತ್ಯರ್ಥಾತ್ ಕರಣೇ ಘಞರ್ಥೇ ಕವಿಧಾನ ಮಿತಿ ಕಃ (ಸುಧಾ) ಕ ಪ್ರತ್ಯಯೇ ಆತೋ ಲೋಪೇ 'ವೇ'ತಿ ರೂಪಸಿದ್ಧೇಃ (ಸುಪ.). ವ ಎಂದರೆ ಶಾಸ್ತ್ರದ ಅಪರನಾಮವಾದ ತೀರ್ಥ ಎಂದೇ ಅರ್ಥ. ಗತ್ಯರ್ಥಕ ವಾ ಧಾತುವಿನ ಮೇಲೆ (ವಾ ಗತಿಗಂಧನಯೋಃ) ಕರಣಾರ್ಥದಲ್ಲಿ ಕ ಪ್ರತ್ಯಯ ಬರಲು ಆಕಾರಲೋಪವಾಗಿ ವ ಎಂಬ ರೂಪ ಸಿದ್ಧಿಯಾಗುತ್ತದೆ; ಜ್ಞಾನಸಾಧನವಾದ ಶಾಸ್ತ್ರಕ್ಕೆ ವ ಅಥವಾ ತೀರ್ಥ ಎಂದು ಹೆಸರು. ಕೋಶವೂ ಇದನ್ನೇ ಹೇಳುತ್ತದೆ—'ತೀರ್ಥಂ ಶಾಸ್ತ್ರಾಧ್ವರ-ಕ್ಷೇತ್ರೋ-

ಪಾಯೋಪಾಧ್ಯಾಯಮಂತ್ರಿಷು' ಎಂದು ವಿಶ್ವಕೋಶ (ತಾಮ್ರ.). ಈಗ ಮಧ್ವಶಬ್ದಾರ್ಥ ತೋರಿಸುತ್ತಾರೆ—ಸುಖಸಾಧನಂ ತೀರ್ಥಮಸ್ಯೇತಿ ಮಧ್ವ ಆನಂದತೀರ್ಥೋ ವಾ। ಸ್ವರಿತ್ಯತ್ರೇವೋಕಾರಲೋಪಃ (ಸುಧಾ)। ಮಧು-ಆನಂದಕರಂ, ವಂ-ತೀರ್ಥಂ-ಶಾಸ್ತ್ರಂ ಯಸ್ಮಾತ್ ಸಃ ಮಧುವಃ, ಉಕಾರ-ಲೋಪೇನ ಮಧ್ವಃ, ಆನಂದತೀರ್ಥೋ ವಾ (ತಾಮ್ರ.) ಮಧು ಎಂದರೂ ಆನಂದಃ ಎಂದರೂ ಆನಂದಕರವಾದ ಎಂದೇ ಅರ್ಥ ; ಅದೇ ರೀತಿ ವಂ ಎಂದರೂ ತೀರ್ಥಂ ಎಂದರೂ ಶಾಸ್ತ್ರ ಎಂದೇ ಅರ್ಥ. ಆದಕಾರಣ ಆನಂದಪ್ರದ-ವಾದ ಶಾಸ್ತ್ರವು ಯಾರಿಂದ ಬಂತೋ (ರಚಿಸಲ್ಪಟ್ಟಿತೋ) ಅವರು ಆನಂದ ತೀರ್ಥರು ಅಥವಾ 'ಮಧುವ'ರು ; ಸುವಃ ಎಂಬುದು ಉಕಾರ ಲೋಪದಿಂದ ಹೇಗೆ ಸ್ವಃ ಎಂದಾಗಿದೆಯೋ (ನಖಸ್ತುತಿ, ಪುಟ ೨೮೧ ನೋಡಿ) ಹಾಗೆ ಮಧು-ಶಬ್ದದ ಉಕಾರವು ಲೋಪವಾದರೆ (ಸುಧಾ) ಮಧ್ವಃ ಎಂದೇ ಆಗಿದೆ. ಹೀಗೆ ಮಧ್ವ ಎಂದರೂ ಆನಂದತೀರ್ಥ ಎಂದೇ ಅರ್ಥ. ಈ ಮಧ್ವ ಯಾರು ಎಂದರೆ ಶ್ರುತಿಯು 'ಮಧ್ವಃ....ಮಾತರಿಶ್ವಾ' ಎಂದು ಹೇಳಿತು ; ಅದನ್ನೇ ಸ್ಮೃತಿಯೂ ಇನ್ನೂ ಸ್ಪಷ್ಟವಾಗಿ 'ಮಧ್ವ ಆನಂದತೀರ್ಥಃ ಸ್ಯಾತ್ ತೃತೀಯಾ ಮಾರುತೀತನುಃ', ಮಾರುತೀ-ತನುಃ ಎಂದು ಹೇಳಿದ್ದರಿಂದ ಶ್ರುತಿಯಲ್ಲಿ ಎರಡನೇ ಮಂತ್ರದಲ್ಲಿರುವ 'ತೃತೀಯಂ' (ತೃತೀಯಮಸ್ಯ) ಶಬ್ದವನ್ನೂ ಮೂರನೇ ಮಂತ್ರದಲ್ಲಿರುವ 'ಮಾತರಿಶ್ವಾ' ಶಬ್ದವನ್ನೂ ಒಟ್ಟಿಗೆ ಸೇರಿಸಿ ವ್ಯಾಖ್ಯಾನ ಮಾಡಿತು. ಎರಡನೇ ಮಂತ್ರದಲ್ಲಿ 'ದಶಪ್ರಮತಿಂ' ಎಂದು ಹೇಳಿದ ಮೂರನೇ ಅವತಾರವೂ, ಮೂರನೇ ಮಂತ್ರದಲ್ಲಿ ಹೇಳಿದ 'ಮಧ್ವಃ ಮಾತರಿಶ್ವಾ' ಎಂಬುವರೂ ಆನಂದತೀರ್ಥ ಎಂಬುವರೂ ಒಂದೇ, ಬೇರೆಯಲ್ಲ ಎಂದು ಸ್ಮೃತಿ ಸ್ಪಷ್ಟವಾಗಿ ಹೇಳಿತು ಒಟ್ಟಿನಲ್ಲಿ ದಶಪ್ರಮತಿ, ಪೂರ್ಣಪ್ರಮತಿ ಪೂರ್ಣಪ್ರಜ್ಞ, ಮಧ್ವ (ಮಧುವ) ಮತ್ತು ಆನಂದತೀರ್ಥ ಎಂಬುದೆಲ್ಲವೂ ಶ್ರೀಮದಾಚಾರ್ಯರ ಹೆಸರುಗಳೇ ಎಂದು ತಿಳಿಯಬೇಕು. ಆನಂದತೀರ್ಥರೇ ಬೇರೆ, ಪೂರ್ಣಪ್ರಜ್ಞರೇ ಬೇರೆ ಎಂಬ ಸಂದೇಹಕ್ಕೆ ಎಳ್ಳಷ್ಟೂ ಅವಕಾಶವಿಲ್ಲ-ದಂತೆ ಶ್ರೀಮದಾಚಾರ್ಯರೇ ತಾವೇ ಛಾಂದೋಗ್ಯಭಾಷ್ಯದ ಕಡೆಯಲ್ಲಿ 'ಆನಂದತೀರ್ಥ ಇತಿ ತು ಯಸ್ಯ ನಾಮ ತೃತೀಯಕಮ್ । ಪೂರ್ಣಪ್ರಜ್ಞೇನ

ತೇನೇದಂ ಕೃತಂ ಭಾಷ್ಯಂ ಹರೇಃ ಪ್ರಿಯಮ್ ॥' ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. (ಅದರ ಅರ್ಥ) ಆನಂದತೀರ್ಥ (ಅಥವಾ ಮಧ್ವ) ಎಂಬ ಹೆಸರುಳ್ಳ ವಾಯುದೇವರ ಯಾವ ಮೂರನೆಯ ಅವತಾರವಿದೆಯೋ ಅದಕ್ಕೇ ಪೂರ್ಣಪ್ರಜ್ಞ ಎಂಬ ಹೆಸರೂ ಇದೆ. ಹೀಗೆ ಪೂರ್ಣಪ್ರಜ್ಞ, ಆನಂದತೀರ್ಥ ಮತ್ತು ಮಧ್ವ ಎಂಬ ಅನೇಕ ಹೆಸರುಗಳುಳ್ಳ ವಾಯುದೇವರ ಮೂರನೆಯ ಯಾವ ಅವತಾರವಿದೆಯೋ ಅವನಿಂದಲೇ (ತೇನ) ಶ್ರೀಹರಿಗೆ ಬಹಳ ಪ್ರಿಯವಾದ ಈ ಭಾಷ್ಯವು ರಚಿಸಲ್ಪಟ್ಟಿದೆ. ಇದಕ್ಕಿಂತಲೂ ಹೆಚ್ಚಿನ ವಿವರಣೆ ಏನು ಬೇಕು ?

ಇನ್ನು ಪ್ರಸಂಗವಶಾತ್ 'ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ' ಎಂಬುದರ ವಿವರಣೆಯನ್ನೂ ಹೇಳಿಬಿಡೋಣ. ಭಗವಾನ್ ಎಂದರೆ ಐಶ್ವರ್ಯಾದಿಷಡ್ಗುಣಗಳೆಂದರ್ಥ (ಪೀಠಿಕೆ ಚ-ii ನೋಡಿ). ಆ ಆರು ಗುಣಗಳೂ ಉಳ್ಳವರಾದ್ದರಿಂದ (ರುದ್ರಾದಿ ಸಕಲರಿಗಿಂತಲೂ ಅಧಿಕವಾಗಿ ಉಳ್ಳವರಾದ್ದರಿಂದ ಎಂದರ್ಥ) ನಮ್ಮ ಆಚಾರ್ಯರಿಗೂ ಭಗವತ್ ಶಬ್ದ ಅನ್ವಯಿಸುತ್ತದೆ. 'ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ' = ಉತ್ತಮರ ಸ್ವರೂಪವನ್ನು ಪಾದ (ಅಥವಾ ಚರಣ) ಶಬ್ದದಿಂದ ಹೇಳುವುದು ವಿದ್ವದ್ರೂಢಿ. ಸ್ವಾಮಿಗಳು ಎಂಬುದಕ್ಕೆ 'ಶ್ರೀಪಾದಂಗಳವರು' ಅಥವಾ 'ಶ್ರೀಪಾದಾಃ' ಅಥವಾ ಶ್ರೀಚರಣಾಃ ಎಂದು ಹೇಳುವುದು ಪ್ರಸಿದ್ಧವಾಗಿದೆ. ಹಾಗೆಯೇ ಟೀಕಾಚಾರ್ಯರು ಎಂಬುದನ್ನು ತಿಳಿದವರು 'ಟೀಕಾಕೃತ್ಪಾದಾಃ' ಎಂದೇ ಹೇಳುತ್ತಾರೆ. ಆದಕಾರಣ 'ಭಗವತ್' ಜೊತೆ 'ಪಾದ'ವೂ ಸೇರಿ 'ಭಗವತ್ಪಾದ' ಎಂದಾಯಿತು. ಗೌರವ ತೋರಿಸಲು ನಮ್ಮಂತಹ ಪಾಮರಜನಗಳಿಗೂ ಸಹ 'ಶ್ರೀಮಾನ್' ಶ್ರೀಯುತ, ಶ್ರೀಮತಿ (ಹೆಂಗಸರಿಗೆ) ಸೇರಿಸುವಾಗ ಇನ್ನು ಮಧ್ವಾಚಾರ್ಯರ ಹೆಸರಿನೊಂದಿಗೆ 'ಶ್ರೀಮತ್' ಸೇರಿಸುವುದು ಏನಾಶ್ಚರ್ಯ? ಹೀಗೆ ನಮ್ಮ ಆಚಾರ್ಯರ ಹೆಸರು—ಶ್ರೀಮತ್-ಆನಂದ ತೀರ್ಥ-ಭಗವತ್-ಪಾದ-ಆಚಾರ್ಯ' ಎಂದಾಯಿತು ; ಇನ್ನು ಹೆಸರು ಹೇಳದೆ ಬರೀ ಆಚಾರ್ಯರು ಎಂದು ಹೇಳಬೇಕಾದರೆ 'ಶ್ರೀಮತ್-ಆಚಾರ್ಯ' (ಶ್ರೀಮದಾಚಾರ್ಯರು) ಎನ್ನುತ್ತೇವೆ. (ಖಿಲವಾಯುಸ್ತುತಿಯ ೩ನೇ ಶ್ಲೋಕದಲ್ಲಿ

ಹೇಳಿರುವ 'ಆಚಾರ್ಯಾಃ ಶ್ರೀಮದಾಚಾರ್ಯಾಃ' ಎಂಬುದನ್ನು ಗಮನಿಸಿ.) ಅಥವಾ 'ಭಗವಾನ್ ಆಚಾರ್ಯಃ' ಅಥವಾ ಕೇವಲ 'ಭಗವತ್ಪಾದಾಃ' ಮಧ್ವಾಚಾರ್ಯರ ಹೆಸರು ಹೇಳುವ ಈ ಪದ್ಧತಿಯನ್ನು ನಮಗೆ ಹಾಕಿಕೊಟ್ಟವರು ಸಾಕ್ಷಾತ್ ಶ್ರೀ ಟೀಕಾಕೃತ್ಪಾದರೇ. ಗೀತಾಭಾಷ್ಯಕ್ಕೆ ಟೀಕೆ ಬರೆಯುವಾಗ ಅವರು 'ಆನಂದತೀರ್ಥ ಭಗವತ್–ಪಾದಾಚಾರ್ಯ ವಿನಿರ್ಮಿತಮ್' ಎಂದು ಹೇಳಿದ್ದಾರೆ. 'ಭಗವಾನಾಚಾರ್ಯಃ' 'ಭಗವತ್ಪಾದ' 'ಭಗವಾನ್ ಭಾಷ್ಯಕಾರಃ' 'ಶ್ರೀಮತ್ಪೂರ್ಣಪ್ರಮತಿ' ಮೊದಲಾದುವೆಲ್ಲ ಟೀಕಾರಾಯರ ಪ್ರಯೋಗಗಳೇ. ಇಷ್ಟು ಹೇಳಿ ಈ ವಿಚಾರವನ್ನು ಮುಗಿಸುವೆನು.

ix) **ಮಾತರಿಶ್ವಾ** ಎಂಬುದು ನಕಾರಾಂತ ಪುಲ್ಲಿಂಗ ಶಬ್ದ ; ಇದು ವಾಯುದೇವರ ಹೆಸರೆಂಬುದು ಪ್ರಸಿದ್ಧವಾಗಿದೆ. 'ಶ್ವಸನಃ ಸ್ಪರ್ಶನೋ ವಾಯು–ರ್ಮಾತರಿಶ್ವಾ ಸದಾಗತಿಃ' ಅಮರ. 'ನಭಸ್ವಾನ್ ಮಾತರಿಶ್ವಾ ಚ' ಹಲಾಯುಧ. 'ಮಾತರಿಶ್ವಾ ಸಮೀರಣಃ' ವೈಜಯಂತೀ ಇತ್ಯಾದಿ. ತಾವ್ರ. ಟೀಕೆಯಲ್ಲಿ ಇದರ ವ್ಯುತ್ಪತ್ತಿಯನ್ನು ಹೀಗೆ ತೋರಿಸಿದ್ದಾರೆ— ಮಾತರಿ-ಪ್ರಮಾಣಭೂತೇ ಋಗಾದೌ, ಶ್ವಯತಿ–ಗಚ್ಛತೀತಿ ವಾಯುಃ | ಮಾತರಿ–ಪ್ರಮಾಣಭೂತವಾದ ಏಳು ವಿದ್ಯೆಗಳಲ್ಲಿ, 'ಟುಓಶ್ವಿ ಗತಿವೃದ್ಧ್ಯೋಃ' (ಭ್ವಾ.ಪ.), ಶ್ವಯತಿ-ಸಂಚರಿಸುವವನು, ವಿಹಾರ ಮಾಡುವವನು ಎಂಬ ವ್ಯುತ್ಪತ್ತಿಯಿಂದ ಮಾತರಿಶ್ವಾ ಎಂದರೆ ವಾಯು ಎಂದರ್ಥ (ಲೇ.) ಉಣಾದಿ (೧/೧೫೭) ಸೂತ್ರದಲ್ಲಿ 'ಶ್ವನ್ನುಕ್ಷನ್... ಮಾತರಿಶ್ವನ್ ಮಘವನ್ನಿತಿ' ಈ ಪದದಲ್ಲಿ ಸಪ್ತಮಿಯು ಲೋಪವಾಗದೆ ಉಳಿಯುವುದು ನಿಪಾತಿತವಾಗಿದೆಯಲ್ಲದೆ ಕನಿನ್ ಪ್ರತ್ಯಯ ಸೇರಿ ನಕಾರಾಂತವಾಗಿರುವುದನ್ನೂ ಹೇಳಿದೆ. ಈ ಮಂತ್ರದಲ್ಲಿ ಪ್ರಥಮಾಂತ ಮಧ್ವಶಬ್ದದೊಡನೆಯೇ ಪ್ರಥಮಾಂತ ಮಾತರಿಶ್ವಾ ಶಬ್ದವೂ ಬಂದಿರುವುದರಿಂದಲೂ, ಸ್ಮೃತಿಯು 'ಮಧ್ವ ಆನಂದತೀರ್ಥಃ ಸ್ಯಾತ್ ತೃತೀಯಾ ಮಾರುತೀತನುಃ' ಎಂದು ಹೇಳುವುದರಿಂದಲೂ. ಮಧ್ವಾಚಾರ್ಯರು ವಾಯುವಿನ ಮೂರನೇ ಅವತಾರವೇ ಹೌದು ಎಂಬುದನ್ನು ಸ್ಪಷ್ಟೀಕರಿಸಿದಂತಾಯಿತು (ಯು.ಮ.) ಇನ್ನೂ ಕೆಲವು ವಿಚಾರಗಳನ್ನು ಭಾವಾರ್ಥದಲ್ಲಿ ನಿವೇದಿಸಿಕೊಂಡಿದ್ದೇನೆ.

x) ಗುಹಾಸಂತಂ 'ಗುಹೂ ಸಂವರಣೇ' ಗುಹ್-ಬಚ್ಚಿಡು, ಕಾಣಿಸದಂತೆ ಇಡು ಎಂಬ ಧಾತುವಿನಿಂದ 'ಷಿದ್ಭಿದಾದಿಭ್ಯೋಽಙ್' (ಪಾ. ೩/೩/೧೦೪) ಎಂಬ ಸೂತ್ರದಂತೆ ಅಙ್ ಪ್ರತ್ಯಯ ಬಂದು ಗುಹಾ ಎಂದಾಗುವುದರಿಂದ ಇದಕ್ಕೆ—ಗೂಹಿತ ಮರೆಮಾಡಲ್ಪಟ್ಟ ಎಂದೇ ಅರ್ಥ (ತಾವ್ರ.). ಹಾಗೆ ಮರೆಯಾಗಲು ಕಾರಣವನ್ನು ಸ್ಮೃತಿ ವರ್ಣಿಸುತ್ತದೆ—'ಅಸತ್ಯಮಪ್ರತಿಷ್ಠಂ ಚ ಜಗದೇತದನೀಶ್ವರಮ್ | ವದದ್ಭಿರ್ಗೂಹಿತಂ ಸಂತಂ....' .ಈ ಜಗತ್ತು ಅಸತ್ಯವೆಂದೂ, ಮರುಮರೀಚಿಕೆಯಲ್ಲಿನ ನೀರಿನಂತೆ ಕೇವಲ ತೋರಿಕೆಯೆಂದೂ (ಅಪ್ರತಿಷ್ಠಂ) ಮಿಥ್ಯಾ ಆದ ಈ ಜಗತ್ತಿಗೆ ಒಡೆಯನೆಂಬುದೂ ಇಲ್ಲ ಎಂದು ವಾದಿಸುವ ದುರ್ವಾದಿಗಳಿಂದ ಮರೆಯಾಗಿ ಹೋಗಿದ್ದ ಎಂದರ್ಥ. (xi) ಅಥನೇ –'ಧವಃ ಪ್ರಿಯಃ ಪತಿರ್ಭರ್ತಾ' ಎಂದು ಕೋಶವಿರುವುದರಿಂದ ಧವ ಎಂದರೆ ಸ್ವಾಮಿ; ಒಡೆಯ, ಪತಿ ಎಂದರ್ಥ, ಭಾವಪ್ರಧಾನವಾದ ನಿರ್ದೇಶ (ಹೇಳಿಕೆ). ಆದಕಾರಣ ಆ-ಸಮಂತಾತ್-ಸರ್ವರೀತಿಯಿಂದಲೂ, ಧನೇ-ಧವತ್ವೇ-ಸರ್ವೋತ್ತಮತ್ವ ವಿಷಯೇ-ಸ್ವಾಮಿತ್ವ ಅಥವಾ ಒಡೆತನ ಎಂಬ ವಿಷಯದಲ್ಲಿ ಅಥವಾ ಶ್ರೀವಿಷ್ಣುಸರ್ವೋತ್ತಮತ್ವ-ಸ್ಥಾಪನಾ ವಿಷಯದಲ್ಲಿ ಎಂದರ್ಥ (ತಾ ನಿ). (xii) ಮಥಾಯತಿ. 'ಮಂಥ ವಿಲೋಡನೇ' (ಭ್ವಾ.ಪ.) ಧಾತುವಿಗೆ .ಕಡೆಯುವುದು, ಮಥನ ಮಾಡು ಎಂದರ್ಥ. ಇದರ ಪ್ರೇರಣಾರ್ಥಕರೂಪ. ಮಥಯತಿ ಎಂದಾಗುತ್ತದೆ; ಆದರೆ ಶ್ರುತಿಯಲ್ಲಿ ಮಥಾಯತಿ—ಕಡೆಯುತ್ತದೆ ಎಂದು ದೀರ್ಘವಾಗಿ ಪ್ರಯೋಗಿಸಲ್ಪಟ್ಟಿದೆ. ಏಕೆಂದರೆ ವಾದಿರಾಜರು ವಿವರಿಸುತ್ತಾರೆ— ಈ ರೀತಿ ಮಥನ ಮಾಡುವುದು (ಕಡೆಯುವುದು) ವೇದಾದಿ ಅನಂತ ಶಾಸ್ತ್ರಗಳಿಗೆ ಸಂಬಂಧಿಸಿದ್ದಾದ್ದರಿಂದ ಮಹತ್ತರವಾದುದೆಂಬುದನ್ನು ದೀರ್ಘವು ತೋರಿಸುತ್ತದೆ. ಆದಕಾರಣ ಮಥಾಯತಿ ಎಂದರೆ ಅನಂತವೂ ಅಪಾರವೂ ಆದ ವೇದಾದಿ ಶಾಸ್ತ್ರಗಳನ್ನು ವಿಚಾರಮಾಡಿ ಶ್ರೀಹರಿಯ ಸರ್ವೋತ್ತಮತ್ವವನ್ನು ಸ್ಥಾಪಿಸುತ್ತಾರೆ ಎಂದರ್ಥ (ತಾ. ನಿ.); ಮಥಾಯತಿ—ಮಥ್ನಾತಿ-ಶಾಸ್ತ್ರೇಣ ವಿಚಾರ್ಯ ನಿಶ್ಚಾಯತೀತಿ ಭಾವಃ (ವೇ.) ಬೆಣ್ಣೆಯನ್ನು ಕಡೆದು ತೆಗೆಯುವಂತೆ ಅನೇಕ ಶಾಸ್ತ್ರಗಳಿಂದ ವಿಚಾರಮಾಡಿ ನಿಶ್ಚಯಮಾಡಿ (ನಿರ್ಣಯಮಾಡಿ)

ತೋರಿಸಿಕೊಡುತ್ತಾರೆಂದು ಭಾವ. (xiii) ಯದೀಂ ಎಂಬುದು ಪೂರ್ವಾರ್ಧದಲ್ಲೂ ಬಂದಿದೆ, ಉತ್ತರಾರ್ಧದಲ್ಲೂ ಬಂದಿದೆ. ಪೂರ್ವಾರ್ಧದ ಯತ್ ಮುಂದಿರುವ ಬುಧ್ನಾತ್ ಜೊತೆ ಸೇರುವುದರಿಂದ ಪಂಚಮ್ಯರ್ಥದಲ್ಲಿ ಬಂದಿದೆ. ಇದರ ಅನ್ವಯವು ಯಾವ ಜ್ಞಾನರೂಪವಾದ ಮೂರನೇ ರೂಪದಿಂದ ರುದ್ರಾದಿಗಳು ವಿಷ್ಣುವಿನ ಗುಣಗಳನ್ನು (ವರ್ಪಸಃ) ಅರಿತುಕೊಂಡರೋ ಅಂಥಾ (ತತ್) ತೃತೀಯಂ ದಶಪ್ರಮತಿಂ ಯೋಷಣಃ ಜನಯಂತ–ಮೂರನೇ ರೂಪವಾದ ಪೂರ್ಣಪ್ರಜ್ಞರನ್ನು ಸ್ತ್ರೀಯರು ಪ್ರಸವಿಸಿದರು ಎಂದು ಎರಡನೇ ಮಂತ್ರದ ಉತ್ತರಾರ್ಧದೊಡನೆ ಅನ್ವಯಿಸಬೇಕು. ಯದೀ ಮನು ಎಂದು ಉತ್ತರಾರ್ಧದಲ್ಲಿರುವ ಯತ್ ಈಂ ಎಂಬುದಕ್ಕೆ ಯತ್ ಏವ (ಪ್ರ.ವಿ.)–ಯಾವ ರೂಪವು ಎಂದೂ, ಯಸ್ಮಾತ್ ಏವ–ಎಂದರೆ ಯಾವ ಕಾರಣದಿಂದ ಎಂದೂ (ಪಂಚಮಿ) ಅರ್ಥ ಹೇಳಬೇಕು. ಯಾವ ಮೂರನೇ ರೂಪವು ಶಾಸ್ತ್ರಗಳನ್ನು ಮಥನಮಾಡಿ ಯಾವ ಕಾರಣದಿಂದ ಮರೆಯಾಗಿದ್ದ ಶ್ರೀಹರಿಯನ್ನು ನಿರ್ಣಯಿಸಿ ತೆಗೆದರೋ ಆ ಕಾರಣದಿಂದ ರುದ್ರಾದಿಗಳೆಲ್ಲರೂ ವಿಷ್ಣುವಿನ ವರ್ಪಾಖ್ಯಗುಣಗಳನ್ನು ಅರಿತುಕೊಂಡರು ಎಂದು ಅನ್ವಯ ಮಾಡಬೇಕು. ಹೀಗೆ ಮೂರನೇ ಮಂತ್ರದ ಉತ್ತರಾರ್ಧವು ಪೂರ್ವಾರ್ಧದೊಡನೆಯೂ ಅದು (ಪೂರ್ವಾರ್ಧವು) ಎರಡನೇ ಮಂತ್ರದ ಉತ್ತರಾರ್ಧದೊಡನೆಯೂ ಅನ್ವಯವಾಗುತ್ತದೆಯೆಂದು ತಿಳಿಯಬೇಕು.

xiv) **ಶ್ರುತ್ಯರ್ಥಕ್ಕೆ ಸ್ಮೃತಿಯ ವಿವರಣೆ**—ಉಪನಿಷದ್ಭಾಷ್ಯಗಳಲ್ಲಿ (ತೈತ್ತಿರೀಯ, ಐತರೇಯ, ಬೃಹದಾರಣ್ಯಕ) ಉದಾಹೃತವಾದ ಸ್ಮೃತಿ ವಾಕ್ಯಗಳು ಈ ಮಂತ್ರದ ಅರ್ಥವನ್ನೂ ವಿವರಿಸುವವಲ್ಲದೆ ಅನ್ವಯಕ್ರಮವನ್ನೂ ಸೂಚಿಸುತ್ತವೆ. ಆದಕಾರಣ ಅವನ್ನು ಕೊಟ್ಟು ಈ ವಿವರಣೆ ಮುಗಿಸುವೆನು (ಈ ವಾಕ್ಯಗಳ ಅರ್ಥ ಸ್ವಯಂ ಸುಲಭವಾಗಿರುವುದಲ್ಲದೆ ಮೇಲಿನ ವಿವರಣೆಯಲ್ಲೂ ಅಲ್ಲಲ್ಲೇ ಬಂದಿರುವುದರಿಂದ ಇದರ ಅರ್ಥ ಪುನಃ ಕೊಟ್ಟಿಲ್ಲ)-(ಉತ್ತರಾರ್ಧದ ಅರ್ಥ)—

ಆ ಸಮಂತಾತ್ ಪತಿತ್ವೇ ತು ಗೂಢಂ ಕಲಿಯುಗೇ ಹರಿಮ್ ।
ಅಸತ್ಯಮಪ್ರತಿಷ್ಠಂ ಚ ಜಗದೇತದನೀಶ್ವರಮ್ ॥

ವದದ್ಭಿರ್ಗರ್ಹಿತಂ ಸಂತಂ ತೃತೀಯೋಽಸುರ್ವರ್ಥಾಯತಿ ।

(ಪೂರ್ವಾರ್ಧದ ಅರ್ಥ)

ಯೇನ ವಿಷ್ಣೋರ್ಹಿ ವರ್ಸಾಖ್ಯಾನ್ ಗುಣಾನಜ್ಞಾಸಿಷುಃ ಪರಾನ್ ॥

ಈಶಾನಾಸಃ ಸೂರಯಶ್ಚ ನಿಗೂಢಾನ್ ನಿರ್ಗುಣೋಕ್ತಿಭಿಃ ॥

(ಅಜ್ಞಾಸಿಷುಃ–ತಿಳಿದುಕೊಂಡರು ಎಂಬುದು ನಿರ್ ಆ(ಅ) ಕ್ರಂತ ಎಂಬುದರ ಅರ್ಥ ತೃತೀಯಃ–ಮೂರನೆಯ ಅವತಾರವಾದ ಮಧ್ವರು. ಅಸುಃ–ವಾಯು ಎಂಬುದು ಮಾತರಿಶ್ವಾ ಶಬ್ದದ ಅರ್ಥ.)

ಛ) ಮಂತ್ರದ ಭಾವಾರ್ಥ—ವಾಯುದೇವರ ದಶಪ್ರಮತೀತ್ಯಪರ ಪರ್ಯಾಯವಾದ ಪೂರ್ಣಪ್ರಜ್ಞನಾಮಕ ತೃತೀಯರೂಪವು ಕೇವಲ ಜ್ಞಾನದೋಹನಕ್ಕಾಗಿಯೇ ಮಾಡಿದ ಅವತಾರವೆಂದು ಎರಡನೇ ಮಂತ್ರದ ಉತ್ತರಾರ್ಧದಲ್ಲಿ ಹೇಳಲಾಯಿತು. ಪ್ರಸ್ತುತ ಆ ಅವತಾರದ ಮುಖ್ಯ-ಪ್ರಯೋಜನವಾದ ಜ್ಞಾನದೋಹನಕಾರ್ಯವನ್ನೇ ವರ್ಣಿಸುತ್ತಾ ತನ್ಮೂಲಕ ಅವರಿಗೆ ಸಂಪ್ರಾಪ್ತವಾದ ನಾಮಾಂತರವನ್ನೂ ಈ ಮೂರನೇ ಮಂತ್ರ ತಿಳಿಸುತ್ತದೆ. (ಉತ್ತರಾರ್ಧದ ಭಾವವು ಪೂರ್ವಾರ್ಧದ ಅರ್ಥಕ್ಕೆ ಪೋಷಕವಾದ್ದರಿಂದ ಮೊದಲು ಉತ್ತರಾರ್ಧದ ತಾತ್ಪರ್ಯವನ್ನೇ ನಿರೂಪಣೆ-ಮಾಡುವೆನು) ಶ್ರೀಮದಾಚಾರ್ಯರ ಅವತಾರಕ್ಕೆ ಪೂರ್ವದಲ್ಲಿ ಹುಟ್ಟಿ-ಕೊಂಡಿದ್ದ ಅನೇಕ ದುರ್ಮತಗಳ ಅಪಪ್ರಚಾರದಿಂದ ಶ್ರೀಹರಿಯ ಅನಂತ ಕಲ್ಯಾಣಗುಣಗಳೇ ಕಾಣಿಸದಂತೆ ಮರೆಯಾಗಿ ಹೋದುವು. ಏಕೆಂದರೆ ಆ ದುರ್ಮತಗಳು ಕುತರ್ಕಗಳನ್ನು ಹೂಡಿ. ಕಣ್ಣಿಗೆ ಕಾಣಿಸುವ ಈ ಜಗತ್ತೇ ಸುಳ್ಳು, ಮರುಮರೀಚಿಕೆಯಲ್ಲಿ ಕಾಣುವ ನೀರಿನಂತೆ ಕಂಡರೂ ಸತ್ಯವಲ್ಲ, ಕೇವಲ ಭ್ರಾಂತಿ ; ಬ್ರಹ್ಮವು ನಿರ್ಗುಣವೂ ನಿರಾಕಾರವೂ ಆಗಿದ್ದು ಅದೇ ಜಗತ್ತಾಗಿ ಪರಿಣಮಿಸುವುದರಿಂದ ಶ್ರೀಹರಿಯು ಜಗತ್ಸೃಷ್ಟ್ಯಾದಿಕರ್ತ-ನೆಂಬುದೂ ಸಕಲಜಗನ್ನಿಯಾಮಕನೆಂಬುದೂ ಭ್ರಮೆಯೇ ಸರಿ ಎಂದು ವಾದಿ-ಸಿದ್ದರಿಂದ ಶ್ರೀಹರಿಯ ಮಹಿಮೆಯೇ ಗೊತ್ತಾಗದಂತೆ ಮುಚ್ಚಿಹೋಗಿತ್ತು. ಹೀಗಿರಲು ಶ್ರೀಮದಾಚಾರ್ಯರು ಪೂರ್ಣಪ್ರಜ್ಞರೆಂಬ ಅಭಿಧಾನದಿಂದ ಅವತಾರಮಾಡಿ, ವೇದೇತಿಹಾಸ-ಪುರಾಣ-ಪಂಚರಾತ್ರಾದಿ ಸಕಲ ಸಚ್ಛಾಸ್ತ್ರ-

ಗಳನ್ನೂ ಮಥನಮಾಡಿ, ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆಯುವಂತೆ ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ಅವುಗಳ ಅರ್ಥವನ್ನು ನಿರ್ಣಯಿಸಿ, ಶ್ರೀವಿಷ್ಣುವೇ ಸರ್ವೋತ್ತಮನೆಂಬ ಸಿದ್ಧಾಂತವನ್ನು ಸ್ಥಾಪಿಸಿ ಶ್ರೀಹರಿಯ ಅನಂತಕಲ್ಯಾಣಗುಣಗಳನ್ನು ಎಲ್ಲರೂ ಅರಿತುಕೊಳ್ಳುವಂತೆ ಬೆಳಕಿಗೆ ತಂದರು. (ಈಗ ಪೂರ್ವಾರ್ಧದ ಭಾವಾರ್ಥ) ಅದರಿಂದ ಸರ್ವಜ್ಞರಾದ ರುದ್ರಾದಿದೇವತೆ-ಗಳು ಮಾತ್ರವೇ ಅಲ್ಲದೆ ಮಹರ್ಷಿಗಳೂ ಜ್ಞಾನಿಶ್ರೇಷ್ಠರಾದ ಮನುಷ್ಯೋ-ತ್ತಮರೇ ಮೊದಲಾದ ಇತರ ಪಂಡಿತರೂ ಸಹ—ಆ ಭಗವಂತ ಐಶ್ವರ್ಯಾದಿ-ಷಡ್ಗುಣಪೂರ್ಣನಾದ್ದರಿಂದ ಅಸ್ವತಂತ್ರರಾದ ಸಕಲಜೀವರಿಗಿಂತಲೂ ಭಿನ್ನನೂ ಉತ್ತಮನೂ ಅತ ಏವ ಪೂಜ್ಯನೂ (ಮಹಿ–ಪಸ್ಯ) ಆಗಿದ್ದಾನೆಂದೂ ಅವನು ಸರ್ವನಿಯಾಮಕನಾದ್ದರಿಂದ ವರಣೀಯನೂ ದಯಾಮಯನಾದ್ದರಿಂದ ಆಶ್ರಿತಜನಸಂರಕ್ಷಕನೆಂದೂ (ವರ್–ಪಸಃ) ಅನಂತಗುಣಪರಿಪೂರ್ಣನೆಂದೂ ಸುಖವಾಗಿ ನಿಸ್ಸಂದಿಗ್ಧವಾಗಿ ಅರಿತುಕೊಳ್ಳಲು ಸಾಧ್ಯವಾಯಿತು. (ವರ್ಪಸಃ ನಿರ್ ಆಕ್ರಂತ). ಈ ರೀತಿ ಆ ಪೂರ್ಣಪ್ರಜ್ಞರು ಶ್ರೀವಿಷ್ಣುವಿನ ಆನಂದಾದಿ-ಗುಣಗಳನ್ನು ಪ್ರಕಟಿಸುವ ಶಾಸ್ತ್ರಗಳನ್ನು ರಚಿಸಿದರೆಂಬುದು ಮಾತ್ರವೇ ಅಲ್ಲ, ಅವುಗಳನ್ನು ಯಥಾಮತಿ ಅಧ್ಯಯನ ಮಾಡಿ ಅದರಲ್ಲಿ ನಿರೂಪಿತವಾದ ಶ್ರೀಹರಿಯ ಆನಂದಾದಿ ಅನಂತಗುಣಗಳನ್ನು ಉಪಸಂಹಾರಮಾಡಿ ಶ್ರವಣ-ಮನನನಿಧಿಧ್ಯಾಸನರೂಪವಾದ ಉಪಾಸನೆಯನ್ನು ತಮ್ಮತಮ್ಮ ಯೋಗ್ಯ-ತಾನುಸಾರ, ಮಾಡಿಕೊಳ್ಳುವ ಸಕಲರಿಗೂ ಮುಕ್ತಿ ದೊರಕುವುದಲ್ಲದೆ ಅವರವರ ಸ್ವರೂಪಾನಂದವೂ ಅಭಿವ್ಯಕ್ತವಾಗುವುದು. ಹೀಗೆ ಯಾವ ಕಾರಣದಿಂದ (ಯದೀಂ) ಈ ಪೂರ್ಣಪ್ರಜ್ಞರು ಹೀಗೆ ಸುಖಸಾಧನವಾದ ಶಾಸ್ತ್ರವನ್ನು ರಚಿಸಿದರೋ ಮತ್ತು ಯಾವ ಕಾರಣದಿಂದ ಆ ಶಾಸ್ತ್ರದ ಶ್ರವಣಾದ್ಯುಪಾಸನೆಯಿಂದ ಸ್ವಸ್ವರೂಪಾನಂದವು ಮೋಕ್ಷದಲ್ಲಿ ಅಭಿವ್ಯಕ್ತ-ವಾಗುವುದೋ, ಆ ಕಾರಣದಿಂದ ಶ್ರುತಿಯು ಆ ತೃತೀಯಾವತಾರವನ್ನು ಮಧ್ವ ಎಂಬ ನಾಮದಿಂದ ನಿರ್ದೇಶಮಾಡಿತು.

ಏಕೆಂದರೆ ಮಧುಶಬ್ದವು ಆನಂದವಾಚಕವೆಂಬುದು 'ಮಧು ದ್ಯೌರಸು ನಃ ಪಿತಾ' ಇತ್ಯಾದಿ ಪ್ರಯೋಗಬಾಹುಳ್ಯದಿಂದಲೇ ಪ್ರಸಿದ್ಧವಾಗಿದೆ. ವಾ ಗತಿ–

ಗಂಧನಯೋಃ ಎಂಬ ಧಾತುವಿನಿಂದ ನಿಷ್ಪನ್ನವಾದ ವ-ಶಬ್ದವು ಶಾಸ್ತ್ರಪರ-ಪರ್ಯಾಯವಾಚಿತೀರ್ಥವಾಚಕವಾಗಿದೆ. ಹೀಗೆ ಆನಂದಸಾಧನವಾದ ಶಾಸ್ತ್ರವನ್ನು (ವ-ವನ್ನು) ರಚಿಸಿದ್ದರಿಂದ ಪೂರ್ಣಪ್ರಜ್ಞರನ್ನು ಮಧುವ ಎಂದು ಕರೆಯಬೇಕಾಗಿರಲು ಉಕಾರಲೋಪಮಾಡಿ **ಮಧ್ವ** ಎಂದು ನಿರ್ದೇಶಿಸಿತು. ಹೀಗೆಯೇ ಮಧು ಶಬ್ದಕ್ಕೆ ಆನಂದ ಶಬ್ದವೂ, ಶಾಸ್ತ್ರವಾಚಕ **ವ** ಶಬ್ದಕ್ಕೆ ತೀರ್ಥಶಬ್ದವೂ ಪರ್ಯಾಯಪದಗಳಾದ್ದರಿಂದ ಬಳಿತ್ಥ-ಸೂಕ್ತೋಕ್ತರಾದ **ಮಧ್ವ**ರೇ **ಆನಂದತೀರ್ಥ**ರು. ಅಥವಾ ಗೌರವಸೂಚಕ 'ಆಚಾರ್ಯ' ಶಬ್ದವನ್ನು ಸೇರಿಸಿದರೆ ಸೂಕ್ತೋಕ್ತ **ದಶಪ್ರಮತಿಗಳೇ** ಪೂರ್ಣಪ್ರಜ್ಞಾಚಾರ್ಯರು. ಸುಖಸಾಧನೀಭೂತ ಶಾಸ್ತ್ರರಚನೆಮಾಡಿದ್ದ-ರಿಂದ ಆ ಪೂರ್ಣಪ್ರಜ್ಞಾಚಾರ್ಯರೇ ಮಧ್ವಾಚಾರ್ಯರೆಂದೂ, ಆನಂದ-ತೀರ್ಥರೆಂದೂ (ಟೀಕಾಚಾರ್ಯರು ಕರೆದಂತೆ) ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರೆಂದೂ ಪ್ರಸಿದ್ಧರಾಗಿದ್ದಾರೆ.

ಈ ವಿಷಯದಲ್ಲಿ ಬರಬಹುದಾದ ಸಣ್ಣಸಣ್ಣ ಮಂದಾಶಂಕೆಗಳನ್ನು ಪರಿಹರಿಸುವುದಕ್ಕಾಗಿ ಶ್ರುತಿಯು **ಮಾತರಿಶ್ವಾ** ಶಬ್ದವನ್ನು ಪ್ರಯೋಗಿಸಿ-ತೆಂಬುದೂ ಗಮನಾರ್ಹವಾಗಿದೆ. ಎರಡನೇ ಮಂತ್ರದಲ್ಲಿ ಶ್ರುತಿಯು 'ಯೋಷಣಃ ತೃತೀಯಂ ದಶಪ್ರಮತಿಂ ಜನಯಂತ'–ಸ್ತ್ರೀಯರು ಮೂರನೆಯ ರೂಪವಾದ ದಶಪ್ರಮತಿಯನ್ನು ಪ್ರಸವಿಸಿತು ಎಂದು ಹೇಳಿತಾದರೂ ಇಲ್ಲಿ 'ವಾಯುದೇವರ ತೃತೀಯರೂಪ' ಎಂಬುದು ಸ್ಪಷ್ಟವಾಗಿಲ್ಲ. ಎರಡನೆಯ-ದಾಗಿ ಮೊದಲು 'ದಶಪ್ರಮತಿ' ಎಂದು ಹೇಳಿ, ಉತ್ತರಕ್ಷಣದಲ್ಲೇ ಮಧ್ವಃ ಎಂದು ಹೇಳಿದ್ದರಿಂದ ಇವನೇ ಬೇರೆ ಇರಬಹುದು ಎಂಬ ಶಂಕೆಗೂ ಅವಕಾಶ-ವಿದೆ. ಈ ಎರಡೂ ಶಂಕೆಗಳ ಪರಿಹಾರಕ್ಕಾಗಿಯೇ ಶ್ರುತಿ **ಮಾತರಿಶ್ವಾ** ಶಬ್ದ-ವನ್ನು ಪ್ರಯೋಗಿಸಿತು. ಮಾತರಿಶ್ವಾ ಶಬ್ದವು ವಾಯುವಿನಲ್ಲಿ ಪ್ರಸಿದ್ಧ-ವಾಗಿರುವುದರಿಂದ ಇಲ್ಲಿ ಪ್ರಸಕ್ತವಾದ ಮೂರು ರೂಪಗಳೂ ವಾಯು-ರೂಪಗಳೇ ಎಂದು ಸಿದ್ಧವಾಗುವುದರಿಂದ ಪ್ರಥಮ ಮಂದಾಶಂಕೆಯು ಪರಿಹಾರವಾಯಿತು. ವಾಯು ಶಬ್ದಕ್ಕೆ ಅನೇಕ ಪರ್ಯಾಯಪದಗಳಿದ್ದರೂ ಮಾತರಿಶ್ವಾ. ಎಂಬ ಪದವನ್ನೇ ವಿಶೇಷವಾಗಿ ಉಪಯೋಗಿಸಿರುವುದರಿಂದ

ಅನೇಕ ಮಹತ್ವದ ವಿಚಾರಗಳನ್ನು ಸೂಚಿಸುತ್ತದೆ. ೧) ಮೊದಲನೆಯದಾಗಿ 'ಮಾತರಿ=ಪ್ರಮಾಣಭೂತೇ ಋಗಾದಿವಿದ್ಯಾಸಪ್ತಕೇ, ಶ್ವಯತಿ-ಗಚ್ಛತಿ-ಸಂಚರತಿ' ಎಂಬ ವ್ಯುತ್ಪತ್ತಿಯಿಂದ ಭೀಮನಿಗೆ ಹೇಳಿದ 'ಆ ಶಯೇ ಸಪ್ತ-ಶಿವಾಸು ಮಾತೃಷು' ಎಂಬ ಮಹಿಮೆ ಕೇವಲ ಭೀಮನಿಗೆ ಮಾತ್ರವೇ ಅನ್ವಯಿಸುವುದಿಲ್ಲ, ಅಪಿ ತು 'ಇತ್ಥಾ' ಪದ ಪ್ರಯೋಗಬಲದಿಂದ ಮೂಲ-ರೂಪಕ್ಕೂ ಅನ್ವಯಿಸುತ್ತದೆಯೆಂಬುದನ್ನು ಮೊದಲು ಸೂಚಿಸುತ್ತದೆ. ಅನಂತರ 'ಇತ್ಥಾ ತದ್ವಪುಷೇ ಧಾಯಿ' ಎಂದು ಹೇಳಿದ್ದರಿಂದ ಅವತಾರ-ತ್ರಯಕ್ಕೂ ಅನ್ವಯಿಸುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಅದರಿಂದ ಸೂಕ್ತೋಕ್ತ ಮೂರು ರೂಪಗಳೂ ಆ ಮಾತರಿಶ್ವನ ರೂಪಗಳೇ ಹೊರತು ಅನ್ಯಥಾ ಅಲ್ಲ ಎಂಬ ಅಂಶವನ್ನು ಮತ್ತಷ್ಟು ದೃಢಪಡಿಸಿತು.

೨) ಎರಡನೆಯದಾಗಿ ಶ್ರುತಿಯು 'ಮಧ್ವಃ ಮಥಾಯತಿ' ಎಂದು ಹೇಳಿತೇ ಹೊರತು ಕ್ರಿಯೆಯ ಕರ್ಮವನ್ನು (ಎಂದರೆ ಮಥಿಸಿದ್ದು ಏನನ್ನು ಎಂಬುದನ್ನು) ಹೇಳಲಿಲ್ಲ. ಮಾತರಿಶ್ವಾ ಪದವು ಆ ಕರ್ಮವನ್ನೂ ಪದ-ಸ್ವಾರಸ್ಯದಿಂದಲೇ ಸೂಚಿಸುತ್ತದೆ. ಹೇಗೆಂದರೆ ಕರ್ತೃಪದವು 'ಮಧ್ವಃ ಮಾತರಿಶ್ವಾ' ಎಂದಿರುವುದರಿಂದ ಮಧ್ವರು ಯಾವ ಮಾತೃಗಳಲ್ಲಿ ಸಂಚರಿಸು-ತ್ತಿರುತ್ತಾರೋ ಆ ಸಪ್ತಮಾತೃಗಳನ್ನೇ ಮಥಿಸಿದರು ಎಂದು ಕರ್ಮವನ್ನೂ ಸೂಚಿಸುತ್ತದೆ. ಅಷ್ಟೇ ಅಲ್ಲ, ಸಪ್ತಮಾತೃಗಳನ್ನೂ ಮಥಿಸಿದನು ಎಂದು ಹೇಳಿದ್ದರಿಂದ ದ್ವಿತೀಯ-ತೃತೀಯ ಮಂತ್ರಗಳೆರಡಕ್ಕೂ ಸಂಬಂಧವನ್ನು ಕಲ್ಪಿಸಿಕೊಟ್ಟು ಏಕಾರ್ಥತಾಜ್ಞಾಪಕವೂ ಆಗಿದೆ. ಅದರಿಂದ ದಶಪ್ರಮತಿಯೇ ಬೇರೆ, ಮಧ್ವರೇ ಬೇರೆ ಇರಬಹುದೆಂಬ ಮಂದಾಶಂಕೆಗೂ ಅವಕಾಶವಿಲ್ಲದಂತೆ ಸ್ಪಷ್ಟೀಕರಿಸಿದಂತಾಯಿತು.

೩) ಮೂರನೆಯದಾಗಿ ಸೂಕ್ತದ ಮೊದಲ ಮೂರು ಮಂತ್ರಗಳಲ್ಲಿ ಪ್ರಥಮ ಮಂತ್ರದಲ್ಲೂ ಮೂರನೇ ಮಂತ್ರದಲ್ಲೂ ಅನೇಕ ಯತ್ ಅಥವಾ ಯದೀಂ ಪದಗಳು ಬಂದಿದ್ದು ಅವೆಲ್ಲ ಪ್ರಾರಂಭದಲ್ಲಿರುವ ತತ್ (ತದ್ವಪುಷೇ ಧಾಯಿ) ಶಬ್ದದೊಡನೆ ಅನ್ವಯವಾಗುವುದರಿಂದ ಮೂರು ಮಂತ್ರಗಳೂ ಸೇರಿ ಒಂದೇ ದೊಡ್ಡ ಸಂಯುಕ್ತವಾಕ್ಯವೆಂದು ಸಿದ್ಧವಾಗುತ್ತದೆ. ಹೀಗಿರುವಾಗ

ಮೂಲರೂಪಕ್ಕೂ ಅವತಾರಗಳಿಗೂ ಇರುವ ನಿಕಟಸಂಬಂಧವನ್ನು ಅಪಲಾಪ ಮಾಡಲು ಸುತರಾಂ ಶಕ್ಯವಿಲ್ಲ. ಹೀಗಿರಲು ಮೂರನೇ ಮಂತ್ರ 'ಯದೀಂ ಪ್ರದಿವಃ ಮಧ್ವಃ, ಸ ಏವ (ಅವನೇ) 'ಮಾತರಿಶ್ವಾ' ಎಂದು ಹೇಳಿದ್ದರಿಂದ ಹನುಮಭೀಮರೂಪಗಳೂ ಮಾತರಿಶ್ವನ ರೂಪಗಳೇ ಎಂದು ಸಿದ್ಧವಾಗುತ್ತದೆ.

ಇದಕ್ಕೂ ಹೆಚ್ಚಾಗಿ ಮೇಲೆ ಹೇಳಿದಂತೆ ಈ ಮೂರು ಮಂತ್ರಗಳಲ್ಲಿ ಯುಚ್ಛಬ್ದ ಅನೇಕಾವರ್ತಿ ಬಂದಿರುವುದರಿಂದ 'ಅಭ್ಯಾಸ' - (ಅಸಕೃದುಕ್ತಿ ಅಥವಾ ಅನೇಕಾವರ್ತಿ ಹೇಳುವುದು) ಎಂಬ ತಾತ್ಪರ್ಯಲಿಂಗವನ್ನು (ಯುಕ್ತಿ-ಯನ್ನು) ಸೂಚಿಸಿದ ಹಾಗಾಯಿತು. ಅದರಿಂದ 'ಸರ್ವವ್ಯಕ್ತಿಷ್ವಭಿವ್ಯಾಪ್ತ್ಯೈ ತಾತ್ಪರ್ಯಾಧಿಕ್ಯವಿತ್ತಯೇ |....ಪುನರ್ವಚನಮುದ್ದಿಷ್ಟಂ' ಎಂದರೆ ಈ ವಿಚಾರವು ಸರ್ವವ್ಯಕ್ತಿಗಳಿಗೂ ಸಂಬಂಧಿಸುತ್ತದೆ ಎಂಬುದನ್ನು ತೋರಿಸುವುದ-ಕ್ಕಾಗಿಯೂ ತಾತ್ಪರ್ಯವಿಶೇಷವನ್ನು ಸೂಚಿಸುವುದಕ್ಕಾಗಿಯೂ ಪುನರ್ವಚನ ಬರುತ್ತದೆ ಎಂಬ ಬೃಹದ್ಭಾಷ್ಯೋಕ್ತ (೩/೧/೧) ಬ್ರಹ್ಮತರ್ಕದ ಪ್ರಮಾಣ ರೀತ್ಯಾ ಯುಚ್ಛಬ್ದದ ಅಭ್ಯಾಸದಿಂದಲೂ ಕೆಳಗಿನ ಅಂಶಗಳು ದೃಢಪಡಿ-ಸಲ್ಪಡುತ್ತವೆ—ಎ) ಮಾತರಿಶ್ವಾ ಶಬ್ದ ಮಧ್ವರೂಪದೊಡನೆ ಸೇರಿದ್ದರೂ ಹನುಮ-ಭೀಮ ರೂಪಗಳಿಗೂ ಅನ್ವಯಿಸುತ್ತದೆ ; ಬಿ) 'ಆಶಯೋ ಸಪ್ತ-ಶಿವಾಸು' ಎಂಬುದು ಭೀಮನಿಗೆ ಮಾತ್ರವಲ್ಲದೆ ಮೂಲರೂಪಕ್ಕೂ ಹನುಮ-ಮಧ್ವರೂಪಗಳಿಗೂ ಅನ್ವಯಿಸುತ್ತದೆ. ಸಿ) ದಶಪ್ರಮತಿ, ಪೂರ್ಣಪ್ರಜ್ಞರ, ಮಧ್ವ, ಆನಂದತೀರ್ಥ ಎಲ್ಲವೂ ಒಂದೇ ವ್ಯಕ್ತಿಯ ನಾಮಾಂತರಗಳು, ಡಿ) ಅವರು ಮಥನ ಮಾಡಿದ್ದು ಋಗಾದಿಶಾಸ್ತ್ರಗಳನ್ನೇ. ಒಟ್ಟಿನಲ್ಲಿ ಇಲ್ಲಿ ನಿರೂಪಿತವಾದ ರೂಪತ್ರಯ ವಾಯುರೂಪಗಳೇ ಎಂದು ಸಿದ್ಧವಾಯಿತೆಂಬಲ್ಲಿ ಮೂರನೇ ಮಂತ್ರಾಭಿಪ್ರಾಯ ಮುಗಿಯಿತು.

ನಾಲ್ಕನೆಯ ಮಂತ್ರ

375. ಅವತಾರಿಕೆ—ಅ) (ಲೇ.) ಮೂರನೇ ಮಂತ್ರದಲ್ಲಿ ಜ್ಞಾನ-ದೋಹನ ಮಾಡಿದ್ದನ್ನು ವರ್ಣಿಸಿದ ಬಳಿಕ ಈ ಮಂತ್ರದಲ್ಲಿ ಆ ಜ್ಞಾನಕಾರ್ಯ-ದಲ್ಲಿ ಪೂರ್ವಪಕ್ಷಗಳನ್ನೆಲ್ಲಾ ನಿರಾಕರಿಸಿದ್ದನ್ನು ವಿವರಿಸಿ ಸರ್ವೋತ್ತಮರೂ ಇವರ ತಂದೆ-ತಾಯಿಗಳೂ ಆದ ಲಕ್ಷ್ಮೀನಾರಾಯಣರನ್ನು ಬಿಟ್ಟರೆ ಇವರಿಗೆ

ಸರಿಸಮಾನರು ಬೇರೆ ಯಾರೂ ಇಲ್ಲವೆಂಬುದನ್ನೂ ಶ್ರುತಿಯು ಸಕಾರಣವಾಗಿ ತೋರಿಸಿಕೊಡುತ್ತದೆ—ಪ್ರಯುಕ್ಷಿತುಃ ಇತ್ಯಾದಿ ಮಂತ್ರದಿಂದ

ಪ್ರ ಯತ್ ಪಿತುಃ ಪರಮಾನ್ನೀಯತೇ ಪರ್ಯಾ
ಪೃಕ್ಷುಧೋ ವೀರುಧೋ ದಂಸು ರೋಹತಿ ।
ಉಭಾ ಯದಸ್ಯ ಜನುಷಂ ಯದಿನ್ವತ
ಆದಿದ್ಯವಿಷ್ಠೋ ಅಭವತ್ ಘೃಣಾ ಶುಚಿಃ ॥ ೪ ॥

ಖ) ಪದಪಾಠ—ಪ್ರ । ಯತ್ । ಪಿತುಃ । ಪರಮಾತ್ ।
ನೀಯತೇ । ಪರಿ । ಆ ಪೃಕ್ಷುಧಃ । ವೀರುಧಃ । ದಮ್ಽಸು । ರೋಹತಿ ॥
ಉಭಾ । ಯತ್ । ಅಸ್ಯ । ಜನುಷಮ್ । ಯತ್ । ಇನ್ವತ ।
ಆತ್ । ಇತ್ । ಯವಿಷ್ಠಃ । ಅಭವತ್ । ಘೃಣಾ । ಶುಚಿಃ ॥ ೪ ॥

ಗ) ವಿಶ್ಲೇಷಣೆ—ಈ ಮಂತ್ರದ ಪೂರ್ವಾರ್ಧದಲ್ಲಿ ಎರಡು ವಾಕ್ಯ-ಗಳೂ, ಉತ್ತರಾರ್ಧದಲ್ಲಿ ಎರಡು ವಾಕ್ಯಗಳೂ ಇವೆ. ಪೂರ್ವಾರ್ಧದಲ್ಲಿ ಶ್ರೀಮದಾಚಾರ್ಯರು ತಮ್ಮ ದೋಹನಕಾರ್ಯದಲ್ಲಿ ಎದುರಾಗಿ ಬಂದ ಪೂರ್ವಪಕ್ಷದ ಸಿದ್ಧಾಂತಗಳನ್ನು ಹೇಗೆ ಅನಾಯಾಸವಾಗಿ ನಿರಾಕರಣೆ ಮಾಡಿ-ಬಿಟ್ಟರು ಎಂಬುದನ್ನು ವರ್ಣಿಸುತ್ತದೆ. ಉತ್ತರಾರ್ಧದಲ್ಲಿ ಅವರ ಅವತಾರಕ್ಕೆ ಲಕ್ಷ್ಮೀನಾರಾಯಣರ ಆಜ್ಞೆಯೇ ಕಾರಣವೆಂದು ನಿರೂಪಣೆ ಮಾಡಿ ಈ

ವಾಯುದೇವರು ಕೇವಲ ಆ ಇಬ್ಬರಿಗೇ ಕಿರಿಯರು, ಮಿಕ್ಕ ಚೇತನವರ್ಗಕ್ಕೆಲ್ಲಾ ಹಿರಿಯರು ಎಂದರೆ ವಾಯು ಜೀವೋತ್ತಮರೆಂಬುದನ್ನು ಸಿದ್ಧಪಡಿಸಿಕೊಡುತ್ತದೆ.

ಘ) ಅನ್ವಯ—(ಪೂರ್ವಾರ್ಧ) ೧ನೇ ವಾಕ್ಯ—ಯತ್ ಪರಮಾತ್ ಪಿತುಃ (ಅಥವಾ ಪಿತುಃ ಪರಮಾತ್) ಪ್ರ ಣೀಯತೇ। ೨ನೇ ವಾಕ್ಯ—ಪೃಕ್ಷುಧಃ ವೀರುಧಃ ದಂಸು ಪರಿ ಆ ರೋಹತಿ। (ವಾದಿರಾಜರು ಪರಿ ಆ ಶಬ್ದವನ್ನು ಪ್ರ ಣೀಯತೇ ಜೊತೆಯೇ ಸೇರಿಸಿಕೊಂಡು ೨ನೇ ವಾಕ್ಯದಲ್ಲಿ ದಂಸು ಆ ರೋಹತಿ ಎಂದು ಅನ್ವಯ ಮಾಡುತ್ತಾರೆ.) (ಉತ್ತರಾರ್ಧ) ೩ನೇ ವಾಕ್ಯ—ಅಸ್ಯ ಯತ್ ಜನುಷಂ ಉಭಾ ಯತ್ ಇನ್ವತಃ। ೪ನೇ ವಾಕ್ಯ—ಆತ್ ಇತ್, ಆತ್ ಇತ್ (ತಂತ್ರದಿಂದ ಎರಡು ಸಾರಿ ಅನ್ವಯಿಸಿಕೊಳ್ಳಬೇಕು) ಘೃಣಾ ಶುಚಿಃ, ಆತ್ ಇತ್ ಯ ವಿಷ್ಠಃ ಅಭವತ್॥ ವಾದಿರಾಜರ ಅನ್ವಯ ಹೀಗಿದೆ—ಯತ್ ಉಭಾ ಅಸ್ಯ ಜನುಷಂ ಯತ್ ಇನ್ವತಃ, (ತತ್-ಇತ್ಯಧ್ಯಾಹಾರ್ಯಂ) ಆತ್ ಯವಿಷ್ಠಃ ಇತ್ ಘೃಣಾಶುಚಿಃ ಅಭವತ್।

ಙ) ಅನ್ವಯಾರ್ಥ—(ಪೂರ್ವಾರ್ಧ—೧ನೇ ವಾಕ್ಯ) ಯತ್—ಯಾವ ರೂಪತ್ರಯವು ; ಪರಮಾತ್—ಸರ್ವೋತ್ತಮನಾದ, ಪಿತುಃ = ತಂದೆಯಾದ ಶ್ರೀವಿಷ್ಣುವಿನಿಂದ (ಅಥವಾ ಪಿತುಃ—ತನಗೆ ಜನಕನಾದ ಕಾರಣ, ಪರಮಾತ್—ತನಗಿಂತಲೂ ಉತ್ತಮನಾದ ಶ್ರೀವಿಷ್ಣುವಿನಿಂದ) ಪ್ರಣೀಯತೇ—ತನಗಿಂತ ಶ್ರೇಷ್ಠನಾದ ಕಾರಣ (ಹೀಗೆ ಮಾಡು, ಹೀಗೆ ಮಾಡು ಎಂದು) ಪ್ರೇರಿಸಲ್ಪಡುತ್ತದೆ. ವಾದಿರಾಜರು—ಆ-ಸಮಂತಾತ್ ಪರಿ—ಪರಿತಃ, ಪ್ರಣೀಯತೇ—ಪ್ರೇರ್ಯತೇ ಎಂದು ಅರ್ಥ ಹೇಳುತ್ತಾರೆ. ಆ-ಸರ್ವರೀತಿಯಿಂದಲೂ, ಪರಿ—ಸುತ್ತಲೂ ಎಂದರೆ ಎಲ್ಲಾ ವಿಷಯದಲ್ಲೂ, ಪ್ರ ಣೀಯತೇ—ಪ್ರೇರಿಸಲ್ಪಡುತ್ತಾರೆ. ಎಂದರೆ ಪಾಜಕಕ್ಷೇತ್ರದಲ್ಲಿ ಅವತಾರಮಾಡು, ಬ್ರಹ್ಮಸೂತ್ರಗಳಿಗೂ ಉಪನಿಷತ್ತುಗಳಿಗೂ ಭಾಷ್ಯ ಬರಿ, ಉಡುಪಿಯಲ್ಲಿ ಶ್ರೀಕೃಷ್ಣನ ಪ್ರತಿಷ್ಠೆ ಮಾಡು ಇತ್ಯಾದಿ ರೀತಿಯಾಗಿ ಹೆಜ್ಜೆಹೆಜ್ಜೆಗೂ ಪ್ರೇರಿಸಲ್ಪಡುತ್ತಾನೆ ಎಂದು ವಿವರಣೆ ಹೇಳಿದ್ದಾರೆ.)

ಎರಡನೇ ವಾಕ್ಯ—ಮಧ್ವಾಚಾರ್ಯರು ಎಂಬ ಕರ್ತೃಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು ; ಪೃಕ್ಷುಧಃ—ಪ್ರಶ್ನರೂಪವಾದ (ಪೂರ್ವ-

ಪಕ್ಷಿಗಳ ಆಕ್ಷೇಪಣಾರೂಪವಾದ ಎಂದರ್ಥ) ; ವೀರುಧಃ-ಕಂಬ ಮೊದಲಾದುವನ್ನು (ತಾಮ್ರ.ಭಾಬೋ.ಶ್ರೀ) ಬಳ್ಳಿಗಳನ್ನು (ತಾ.ನಿ., ಯು.ಮ.), ದಂಸು-ಹುಲ್ಲುಗಳಲ್ಲಿ, ಪರ್ಯಾರೋಹತಿ (ವಾದಿರಾಜರ ಪಕ್ಷದಲ್ಲಿ ಆರೋಹತಿ ಅಥವಾ ರೋಹತಿ)-ಬಾಯಲ್ಲಿ ಹಾಕಿಕೊಂಡು ಕಡಿದುಹಾಕಿದಂತೆ ತುಂಡು ತುಂಡು ಮಾಡಿಬಿಡುತ್ತಾರೆ. (ಗೂಳಿಯು ಹೇಗೆ ಹುಲ್ಲುಕಡ್ಡಿಗಳನ್ನು ಬಾಯಲ್ಲಿ ಅಗಿದು ಅಗಿದು ಅದರ ಹುಟ್ಟೇ ಕಾಣಿಸದಂತೆ ಮಾಡಿಬಿಡುತ್ತದೋ ಹಾಗೆ ಮಧ್ವಾಚಾರ್ಯರು ಪ್ರತಿವಾದಿಗಳ ಪ್ರಶ್ನೆಗಳನ್ನು ನಾನಾರೀತಿಯಿಂದ ಖಂಡಿಸಿ ನಿರುತ್ತರರನ್ನಾಗಿ ಮಾಡಿಬಿಡುತ್ತಾರೆಂದು ಭಾವ. ಇದಕ್ಕೆ ನಿದರ್ಶನವಾಗಿ ತತ್ತ್ವಮಸಿ ವಾಕ್ಯಾರ್ಥವನ್ನು ಛಾಂದೋಗ್ಯದಲ್ಲೂ, ಅಹಂ ಬ್ರಹ್ಮಾಸ್ಮಿ ವಾಕ್ಯಾರ್ಥಕ್ಕೆ ಬೃಹದ್ಭಾಷ್ಯದಲ್ಲೂ ನೋಡಬಹುದು. ಇನ್ನು ಅನುವ್ಯಾಖ್ಯಾನದಲ್ಲಂತೂ ಮೊದಲಿಂದ ಕಡೆಯವರೆಗೆ ಪರಮತಖಂಡನೆ ಹೆಜ್ಜೆಹೆಜ್ಜೆಗೂ ಬರುವುದು ; ಅದಕ್ಕೆ ಟೀಕಾರಾಯರ ವಿವರಣೆ ಕೇಳುತ್ತಾ ಹೋದರಂತೂ ಮೈ ಉಬ್ಬಿಹೋಗುತ್ತದೆ.)

ಉತ್ತರಾರ್ಧ-೩ನೇ ವಾಕ್ಯ—ಅಸ್ಯ-ಇವನ ಎಂದರೆ ಮಧ್ವಾಚಾರ್ಯರ, ಯತ್-ಯಾವ, ಜನುಷಂ-ಜನ್ಮವನ್ನು (ಅವತಾರವನ್ನು) ; ಉಭಾ-ಲಕ್ಷ್ಮೀನಾರಾಯಣರಿಬ್ಬರೂ, ಯತ್-ಯಾವ ಕಾರಣದಿಂದ, ಇನ್ವತಃ-ಪ್ರೇರಿಸುತ್ತಾರೋ (೪ನೇ ವಾಕ್ಯ) ಆತ್ ಇತ್-ಆ ಕಾರಣದಿಂದಲೇ, ಆತ್ ಇತ್-ಆ ಲಕ್ಷ್ಮೀನಾರಾಯಣರಿಂದಲೇ, ಘೃಣಾ-ದಯೆಯಿಂದ, ಶುಚಿಃ-ಪರಿಶುದ್ಧರಾಗಿ, (ಪುನಃ) ಆತ್ ಇತ್-ಆ ಲಕ್ಷ್ಮೀನಾರಾಯಣರಿಬ್ಬರಿಂದಲೂ, ಯವಿಷ್ಠ-ಕಿರಿಯವನಾಗಿ, ಅಭವತ್-ಆದರು, (ತಾ.ನಿ.ಪ್ರಕಾರ ಹೀಗೆ ಅರ್ಥವಾಗುತ್ತದೆ.)(೩ನೇ ವಾಕ್ಯ) ಯತ್-ಯಾವ ಕಾರಣದಿಂದ ; ಉಭಾ-ಲಕ್ಷ್ಮೀನಾರಾಯಣರಿಬ್ಬರೂ, ಅಸ್ಯ-ಈ ಮಧ್ವರ, ಜನುಷಂ-ಅವತಾರವನ್ನು ; ಯತ್ (ಯಾ ಧಾತುವಿಗೆ ಹೋಗು ಎಂದರ್ಥವಿರುವುದರಿಂದ, ಉದಾ. ಪ್ರಯಾ-ಣ, ಹೋಗು ಎಂಬುದಕ್ಕೆ ಜ್ಞಾನಾರ್ಥವಿರುವುದರಿಂದಲೂ ಯತ್ ಎಂದರೆ) ಜ್ಞಾನಕ್ಕಾಗಿಜ್ಞಾನಪ್ರಚಾರ ಮಾಡುವ ಉದ್ದೇಶದಿಂದ); ಇನ್ವತಃ-ಪ್ರೇರಿಸುತ್ತಾರೋ, (೪ನೇ ವಾಕ್ಯ) ಆತ್ (ತತ್)

ಆ ಕಾರಣದಿಂದಲೇ ; ಅತ್-ಅಕಾರವಾಚ್ಯನಾದ ವಿಷ್ಣುವಿನಿಂದ; ಯವಿಷ್ಠಃ-ಮೂರು ಅವತಾರಗಳ ಪೈಕಿ ಎಲ್ಲರಿಗಿಂತ ಕಿರಿಯವರಾದ ಮಧ್ವರು, ಇತ್-ಹೀಗೆ (ಎಂದರೆ ಈಗ ಕಾಣಿಸುವ ರೀತಿಯಾಗಿ), ಘೃಣಾ-ಪ್ರತಿಪಕ್ಷಿಗಳ ವಿಷಯದಲ್ಲಿ ದಯೆಯುಳ್ಳವರೂ; ಶುಚಿಃ-ಪರಿಶುದ್ಧರೂ (ಯು.ಮ. ರೀತ್ಯಾ) ಯತ್ಯಾಶ್ರಮಧರ್ಮದಲ್ಲಿ ಅತ್ಯಂತಪರಿಶುದ್ಧರೂ; ಅಭವತ್-ಆದರು(ಹನೂಮ ದವತಾರದಲ್ಲೂ ಭೀಮಾವತಾರದಲ್ಲೂ ಪ್ರತಿಪಕ್ಷಗಳನ್ನು ಸದೆಬಡಿದು ಧ್ವಂಸ-ಮಾಡಿಬಿಡುತ್ತಿದ್ದರು.) ಈ ಮಧ್ವಾವತಾರದಲ್ಲಿ ಪ್ರತಿಪಕ್ಷಿಗಳು ಎಷ್ಟೇ ವಿರೋಧಮಾಡಿದರೂ ಮಾತಿಸಿಂದ ಅವರೆಲ್ಲರನ್ನೂ ಖಂಡಿಸಿದರೇ ಹೊರತು ಅವರ ಮೇಲೆ ಕೈ ಮಾಡಲಿಲ್ಲ, ಈ ರೀತಿ ಘೃಣಾ(ದಯೆ) ಉಳ್ಳವರೂ, ಪರಿಶುದ್ಧರೂ, ಶುಚಿರ್ಭೂತರೂ ಆಗಿದ್ದರೆಂದು ಭಾವ.

ಚ) ಹೆಚ್ಚಿನ ವಿಚಾರಗಳು—i) ಪಿತುಃ ಪಂಚಮ್ಯೇಕವಚನ-ರೂಪ. ಪ್ರಥಮಮಂತ್ರದಲ್ಲಿ 'ಯತೋ ಜನಿ'—ಯಾರಿಂದ ಹುಟ್ಟಿದರೋ ಎಂದು ಹೇಳಿದೆ. ಆ ರೀತಿ ತಮಗೆ ಜನಕರಾದ ನಾರಾಯಣನಿಂದ ಎಂದರ್ಥ. ii) ಪರಮಾತ್-ಉತ್ತಮನಾದ. ಈ ಶಬ್ದದಿಂದ ಉಪನಿಷದ್ಭಾಷ್ಯಗಳಲ್ಲಿ ಉದಾಹೃತವಾದ 'ಏತೇಷಾಂ ಪರಮೋ ವಿಷ್ಣುರ್ ನೇತಾ ಸರ್ವೇಶ್ವರೇಶ್ವರಃ'- ಈ ಮೂರು ರೂಪಗಳಿಗೂ ನಿಯಾಮಕನಾದ ವಿಷ್ಣುವು ಈ ರೂಪಗಳಿಗಿಂತಲೂ ಅವುಗಳ ಮೂಲರೂಪಕ್ಕಿಂತಲೂ ಶ್ರೇಷ್ಠನಾದವನು. ಮತ್ತು ಮುಕ್ತಾ-ಮುಕ್ತ ವರ್ಗಕ್ಕೆಲ್ಲಕ್ಕೂ ರಮಾಬ್ರಹ್ಮಾದಿ ಸಕಲರಿಗೂ ಸ್ವಾಮಿಯೂ ಆಗಿದ್ದಾನೆ. ಎಂಬ ವಾಕ್ಯವನ್ನು ಸೂಚಿಸುತ್ತದೆ. ಯು.ಮ.ದಲ್ಲಿ ಇನ್ನೊಂದು ವಿಶೇಷಾರ್ಥ ಹೇಳಿದ್ದಾರೆ. 'ಪರಾ-ಅತಿಶಯಿತಾ, ಮಾ-ವಿದ್ಯಾ ಯಸ್ಯೇತಿ ವ್ಯುತ್ಪತ್ತ್ಯಾ ಪರಮಾತ್-ವ್ಯಾಸಾದ್ವಾ', ಪರಮ ಎಂಬಲ್ಲಿ ಪರ-ಮಾ ಎಂದು ಬಿಡಿಸಿಕೊಂಡು, ಪರಾ-ಉತ್ತಮವಾದ ಅಥವಾ ನಿರವಧಿಕನಾದ, ಮಾ-ವಿದ್ಯೆಯು ಉಳ್ಳವರು ಎಂಬ ವ್ಯುತ್ಪತ್ತಿಯಿಂದ 'ವೇದವ್ಯಾಸರಿಂದ ಪ್ರನೀ-ಯತೇ-ಆಜ್ಞಾಪಿಸಲ್ಪಡುತ್ತಾರೆ' ಎಂದೂ ಅರ್ಥವಾಗುತ್ತದೆ. iii) ಪ್ರ ನೀ-ಯತೇ-ಪ್ರೇರಿಸಲ್ಪಡುತ್ತಾರೆ ಅಥವಾ 'ನಿಯಮಿಸಲ್ಪಡುತ್ತಾರೆ' (ಯು.ಮ.) ಎಂದು ಹೇಳಿದ್ದರಿಂದ ಈ ಮಧ್ವರು ಭಗವತ್ಸಂಕಲ್ಪಾನುಸಾರವಾಗಿಯೇ

ಅವರ ಪ್ರೇರಣೆಯಿಂದಲೇ ಸಕಲ ಕಾರ್ಯಗಳನ್ನೂ ಮಾಡುತ್ತಾರೆಯೇ ಹೊರತು ಇತರ ದುರ್ಮತಪ್ರಚಾರಕರಂತೆ ಸ್ವೇಚ್ಛಾಚಾರಿಗಳೂ ಅಲ್ಲ, ಪಾಪ-ಕಾರ್ಯನಿರತರೂ ಅಲ್ಲವೆಂದು ವಿಶೇಷ ಮಹಿಮೆಯನ್ನು ಹೇಳಿದಂತಾಯಿತು (ಯು.ಮ.)

iv) **ಪೃಕ್ಷುಧಃ** ಎಂಬುದು ಕ್ಷುತ್ ಶಬ್ದದಂತೆ ಧಕಾಂತಸ್ತ್ರೀಲಿಂಗ ದ್ವಿತೀಯಾ ಬಹುವಚನರೂಪ. ಇದಕ್ಕೆ ಪ್ರಶ್ನೆಗಳನ್ನು ಎಂದು ಶಬ್ದಾರ್ಥ ; ಪ್ರತಿವಾದಿಗಳು ಅಥವಾ ಪ್ರತಿಪಕ್ಷಿಗಳು ಕೇಳುವ ಪ್ರಶ್ನೆಗಳು ಅಥವಾ ಪೂರ್ವ-ಪಕ್ಷರೂಪವಾದ ಆಶಂಕೆಗಳು ಎಂದೂ ತಾತ್ಪರ್ಯಾರ್ಥ. ವಾದಿರಾಜರು ಈ ಶಬ್ದದ ವ್ಯುತ್ಪತ್ತಿಯನ್ನು ತೋರಿಸುತ್ತಾರೆ—ಪೃತಃ ಎಂದರೆ ಪ್ರಶ್ನೆಗಳೇ, ಕ್ಷುತ್–ಎಂದರೆ ಹಸಿವಿನಂತೆ ಬಾಯಾರಿಕೆ (ನೀರಡಿಕೆ)ಯಂತೆ ಪರಪೀಡಕ-ಗಳಾದ್ದರಿಂದ ಅವಕ್ಕೆ ಪೃಕ್ಷುಧಃ ಎಂದು ಪ್ರಯೋಗ. ಪೃತಃ ಏವ ಕ್ಷುದ್ವತ್ ಪರಪೀಡಕತ್ವಾತ್ ಕ್ಷುಧಃ ಇತಿ ಪೃಕ್ಷುಧಃ (ತಾ.ನಿ.) ಪ್ರಶ್ನೆಗಳಲ್ಲಿ ಪ್ರಾಮಾಣಿ-ಕತ್ವ ಇರುವುದಿಲ್ಲವೆಂಬುದನ್ನು ಸೂಚಿಸುವುದಕ್ಕಾಗಿ ಪೃತ್ ಶಬ್ದದ ಋಕಾರಕ್ಕೆ ಗುಣ ಬಂದಿಲ್ಲ (ಯು.ಮ.) (v) **ವೀರುಧಃ** ಎಂಬುದೂ ಧಕಾರಾಂತ ಸ್ತ್ರೀಲಿಂಗಶಬ್ದ. ಇದಕ್ಕೆ ತಾಮ್ರ. ಭಾ.ಬೋ. ಪ್ರಕಾರ 'ಸ್ತಂಬಾದಿಗಳನ್ನು' ಎಂದರ್ಥ ; ವಾದಿರಾಜರಂತೆ 'ಲತೆಗಳು, ಬಳ್ಳಿಗಳು' ಎಂದರ್ಥ (ತಾ.ನಿ., ಯು.ಮ.). ಅದರ ವ್ಯುತ್ಪತ್ತಿಯನ್ನೂ ತೋರಿಸುತ್ತಾರೆ—ವಿ–ವಿಧವಿಧವಾಗಿ, ಮತ್ತೆ ಮತ್ತೆ, ಪುನಃಪುನಃ, ರುಹ್–ಬೆಳೆಯುವುವಾದ್ದರಿಂದ ಬಳ್ಳಿಗಳೆಂದರ್ಥ. ವಿಶೇಷೇಣ ರುಹತೀತಿ ವೀರುತ್–ಲತಾ (ಯು.ಮ.) (vi) **ದಂಸು**— 'ಪದ್ದನ್ನೋಮಾಸ್—' (ಪಾ. ೬/೧/೬೩) ಎಂಬ ಸೂತ್ರದಂತೆ ದಂತಶಬ್ದಕ್ಕೆ ಶಸಾದಿಪ್ರತ್ಯಯಗಳು ಬಂದಾಗ ವಿಕಲ್ಪದಿಂದ ದತ್ ಆದೇಶ ಬರುವುದರಿಂದ ದತ್ಸು ಎಂಬ ರೂಪ ಸಿದ್ಧವಾಗುತ್ತದೆ ; ಆದರೆ ದಂಸು ಎಂದಾಗಿರುವುದು ಪುಂಸು-ಎಂಬ ರೂಪದಿಂದ ವರ್ಣವಿಕಾರದಿಂದ ಆಗಿದೆಯೆಂದು ತಿಳಿಯಬೇಕು. (ತಾ.ನಿ.) ಈ ಪ್ರಸಂಗದಲ್ಲಿ ಮಧ್ವರು ಹಲ್ಲಿನಿಂದಲೇ ನಿಜವಾಗಿ ಕತ್ತರಿಸಲಿಲ್ಲ, 'ಹಲ್ಲುಗಳಲ್ಲಿ' ಎಂದು ಹೇಳಿದ್ದು ಔಪಚಾರಿಕವೆಂದು ತೋರಿಸುವುದಕ್ಕಾಗಿ 'ದಂಸು' ಎಂಬ ವಿಶೇಷರೂಪ ಪ್ರಯೋಗಿಸಿದೆ (ಯು ಮ.) (vii) **ಇನ್ವತಃ**

ಎಂಬುದು ಪ್ರಥಮಪುರುಷ ದ್ವಿವಚನರೂಪ, ಇನ್ವತಿ । ಇನ್ವತಃ । ಇನ್ವಂತಿ ॥ ಇಣ್ ಗತೌ (ಅದಾದಿ.ಪ) ಎಂಬ ಧಾತುವಿಗೆ ಸಾಮಾನ್ಯವಾಗಿ ಏತಿ । ಇತಃ । ಯಂತಿ ಎಂದು ರೂಪಗಳಾಗುತ್ತವೆ ; ಇನ್ವತಿ । ಇನ್ವತಃ ಎಂಬುವು ವೈದಿಕ ರೂಪಗಳು (ಯು.ಮು.) (viii) ಯತ್ ಎಂಬ ಪದ ಈ ಋಕ್ಕಿನಲ್ಲಿ ಮೂರು ಸರಿ ಬಂದಿದೆ. ಮೊದಲನೆಯ ಯತ್ ಎಂದರೆ ರೂಪತ್ರಯವು ಎಂದೂ ಮಧ್ವರೂಪವು ಎಂದೂ ಅರ್ಥ. ಎರಡನೆಯ ಯತ್‌ಶಬ್ದ ಯತ್ ಜನುಷಂ ಎಂದು ಜನುಷಂ ಜೊತೆ ಸೇರಿಕೊಳ್ಳುತ್ತದೆ. ಮೂರನೆಯ ಯತ್‌ಗೆ ಯಾವ ಕಾರಣದಿಂದ ಎಂದರ್ಥ. ತಾ.ನಿ. ಪ್ರಕಾರ ಎರಡನೆಯ ಯತ್‌ಗೆ ಯಾವ ಕಾರಣದಿಂದ ಎಂದೂ, ಮೂರನೇ ಯತ್‌ಗೆ 'ಜ್ಞಾನಕ್ಕಾಗಿ ಅಥವಾ ಜ್ಞಾನಪ್ರಚಾರಕ್ಕಾಗಿ' ಎಂದೂ ಅರ್ಥ. (ix) ಯವಿಷ್ಠ ಶಬ್ದಕ್ಕೆ ಕನಿಷ್ಠ ಎಂದೇ ಅರ್ಥ ಯುವನ್ ಶಬ್ದದ ಮೇಲೆ ಇಷ್ಠನ್ ಪ್ರತ್ಯಯಬಂದಿದೆ. (ಪಾ. ೫/೩/೫೫ ಅತಿಶಾಯನೇ ತಮಬಿಷ್ಠನೌ). ತಾಮ್ರ. ಆದಿ ಉಪನಿಷದ್ಭಾಷ್ಯ ಟೀಕಾಕಾರರು ಇದಕ್ಕೆ ವಿಷ್ಣುವಿಗಿಂತ ಅವರರು (ಕೆಳಗಿನವರು) ಎಂಬ ಅರ್ಥ ಹೇಳಿದರೆ ವಾದಿರಾಜರು ಅವತಾರತ್ರಯದಲ್ಲಿ ಎಲ್ಲರಿಗಿಂತ ಕಿರಿಯರಾದ ಮಧ್ವರು ಎಂಬ ಅರ್ಥದಲ್ಲಿ ಗ್ರಹಣಮಾಡಿದ್ದಾರೆ. (x) ಘೃಣಾ ಶುಚಿಃ ಎಂಬುದಕ್ಕೆ ಉಪ ಟೀಕಾಕಾರರು ದಯೆಯಿಂದ ಶುದ್ಧರು ಎಂದು ಹೇಳಿದರೇ ವಿನಾ ಹೆಚ್ಚು ವಿವರಣೆ ಕೊಡಲಿಲ್ಲ ಅದನ್ನೇ ವಾದಿರಾಜರು ವಿವರಿಸುತ್ತಾರೆ. ಹಿಂದಿನ ಆ ಎರಡು ಅವತಾರಗಳಲ್ಲಿ ತಮಗೆ ವಿರೋಧ ಮಾಡಿದವರನ್ನು ಸಂಹಾರವೇ ಮಾಡಿಬಿಡುತ್ತಿದ್ದರು. ಈ ಅವತಾರದಲ್ಲಿ ಮಾತಿನಿಂದ ಅವರನ್ನು ಸೋಲಿಸುತ್ತಿದ್ದರೇ ವಿನಾ ಅವರ ಮೇಲೆ ಯಾವ ಸಂದರ್ಭದಲ್ಲೂ ಕೈಮಾಡಲಿಲ್ಲ—ಹೀಗೆ ಘೃಣಾ ಶಬ್ದದ ವಿವರಣೆ. ಶುಚಿ ಶಬ್ದಕ್ಕೆ ಯುಕ್ತಿಮಲ್ಲಿಕಾ ವಿವರಣೆಯೇ ಅತ್ಯಂತ ಶ್ಲಾಘ್ಯವೆನಿಸುತ್ತದೆ—ಪಾರಮಹಂಸ್ಯಧರ್ಮಾಚರಣಾತ್ ಪರಮಪಾವನಶ್ಚಾಭತ್-ಪರಮಹಂಸಾಖ್ಯ ಯತಿಧರ್ಮವನ್ನು ಎಳ್ಳಷ್ಟೂ ಚ್ಯುತಿಯಿಲ್ಲದಂತೆ ನಡೆಸಿದ್ದರಿಂದ ಶುಚಿ ಎಂದರೆ ಪರಮಪಾವನರೂ ಆಗಿದ್ದರು. ಹೀಗೆ ವಿವರಣೆ ಮುಗಿದಕಾರಣ ಭಾವಾರ್ಥಕ್ಕೆ ಹೋಗೋಣ.

ಛ) ·ಮಂತ್ರದ ಭಾವಾರ್ಥ—ವಾಯುದೇವರು ಅವತಾರ ಮಾಡಿದಂತೆಯೇ ರುದ್ರೇಂದ್ರಾದಿ ಇತರ ದೇವತೆಗಳೂ ಅವತಾರ ಮಾಡಿ ಭಗವತ್ಸೇವೆ

ಮಾಡಿರುವಾಗ ವಾಯುದೇವರ ಈ ಅವತಾರತ್ರಯವನ್ನೇ ಇಷ್ಟೊಂದು ಪ್ರಶಂಸಿಸಲು ಕಾರಣವೇನು ಎಂದು ಶ್ರುತಿಯು ತಾನೇ ಆಶಂಕೆ ಮಾಡಿಕೊಂಡು ತಾನೇ ಉತ್ತರ ಹೇಳುತ್ತದೆ—**ಪ್ರಯುತ್ಪಿತುಃ ಇತ್ಯಾದಿ ।** ವಾಯುದೇವರ ಈ ಮೂರೂ ಅವತಾರಗಳೂ ಜಗತ್ತಿಗೇ ತಂದೆಯಾದ ಅಲ್ಲದೆ. ತನಗೂ ಜನಕನಾದ ಸರ್ವೋತ್ತಮನಾದ ಆ ಶ್ರೀವಿಷ್ಣುವಿನ ಆಜ್ಞೆಯಿಂದಲೇ ಕೇವಲ ಅವನ ಪ್ರೀತ್ಯರ್ಥವಾಗಿಯೇ ಅವನ ಕಾರ್ಯಸಾಧನೆಗಾಗಿಯೇ ಮಾಡಿದ ಅವತಾರಗಳಾಗಿರುವುವಲ್ಲದೆ ಹೆಜ್ಜೆಹೆಜ್ಜೆಗೂ ಅವನ ಪ್ರೇರಣೆ-ಯಿಂದಲೇ ಅವನ ಪ್ರೀತ್ಯರ್ಥವಾಗಿ ಅವನ ಇಚ್ಛೆಗೆ ಈಷತ್ತೂ ವಿರೋಧವಿಲ್ಲ-ದಂತೆ ನಡೆದುಕೊಂಡ ರೂಪಗಳಾಗಿವೆ. ಒಂದು ಸಂದರ್ಭದಲ್ಲೂ ಅವನಿಗೆ ಅಪ್ರಿಯವಾಗಿ ವರ್ತಿಸಿಲ್ಲ, ಅವನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡಿಲ್ಲ. ಈ ದೃಷ್ಟಿಯಿಂದ ಮಧ್ವಾಚಾರ್ಯರು ಸಕಲ ದುರ್ದರ್ಶನಾಚಾರ್ಯರಿಗೂ ವ್ಯತಿರಿಕ್ತವಾಗಿದ್ದಾರೆ. ಭೀಮನು ಶುದ್ಧಸಾತ್ವಿಕ ವೈಷ್ಣವಧರ್ಮದಲ್ಲಿ ಹೇಗೆ ನಡೆದುಕೊಂಡದ್ದು ಪ್ರಸಿದ್ಧವಾಗಿದೆಯೋ ಆಂಜನೇಯನೂ ಮಧ್ವರೂ ಹಾಗೆಯೇ ನಡೆದುಕೊಂಡಿದ್ದಾರೆಂಬುದನ್ನು ಮಂತ್ರದ ಕಡೆಯಲ್ಲಿರುವ **ಶುಚಿ** ಶಬ್ದ ಹೇಳುತ್ತದೆ.

ಯದ್ಯಪಿ ಹನುಮದವತಾರದಲ್ಲೂ ಭೀಮಾವತಾರದಲ್ಲೂ ತಮ್ಮನ್ನು ವಿರೋಧಿಸಿದ ಸಕಲ ಶತ್ರುಗಳನ್ನೂ ಅವರು ಧ್ವಂಸವೇ ಮಾಡಿಬಿಡುತ್ತಿದ್ದರಾದರೂ ಈ ಮೂರನೇ (ಕಡೆಯ-ಯವಿಷ್ಠ) ಅವತಾರದಲ್ಲಿ ಮಾತ್ರ ತಮಗೆ ವಿರೋಧ ಮಾಡಿದ ಶತ್ರುಗಳ ಮೇಲೆಯೂ ಇವರು ಕೈಮಾಡಲಿಲ್ಲ, ಮಾತಿ-ನಿಂದಲೇ ಅವರನ್ನು ನಿರುತ್ತರರನ್ನಾಗಿ ಮಾಡಿಬಿಡುತ್ತಿದ್ದರು, ಅಷ್ಟೆ ಬ್ರಾಹ್ಮಣಧರ್ಮವನ್ನೂ, ವಿಶೇಷತಃ ತಾವು ಧರಿಸಿದ್ದ ಸನ್ಯಾಸಿಧರ್ಮವನ್ನೂ ಲಕ್ಷಿಸಿ ಹೀಗೆ ಮಾಡಿದರೇ ವಿನಾ ನಿಶ್ಯಕ್ತಿಯಿಂದಾಗಲಿ ದೌರ್ಬಲ್ಯದಿಂದಾಗಲಿ ಅಲ್ಲವೆಂಬುದನ್ನು ಕಡೆಯಲ್ಲಿರುವ **ಘೃಣಾ** ಶಬ್ದ ಸೂಚಿಸುತ್ತದೆ. ಹಾಗಿದ್ದರೆ ಅವರು ತಮ್ಮ ಪ್ರತಿವಾದಿಗಳನ್ನು ಹೇಗೆ ಎದುರಿಸಿದರು ? ಹೇಗೆ ಸೋಲಿಸಿ-ದರು ? ಎಂದರೆ ಶ್ರುತಿ ವಿವರಿಸುತ್ತದೆ—**ಪೃಕ್ಷುಧೋ ವೀರುಧೋ ದಂಸು ಪರ್ಯಾ ರೋಹತಿ ।** ಒಂದು ಗೂಳಿಯು ಹುಲ್ಲಿನ ಕಡ್ಡಿಗಳನ್ನೂ ಬಳ್ಳಿ

ಗಳನ್ನೂ ಸ್ವಾಭಾವಿಕವಾಗಿ ಬಾಯಿಂದ ಎತ್ತಿಕೊಂಡು ಹಲ್ಲುಗಳಿಂದ ಚೆನ್ನಾಗಿ ಅಗಿದು-ಅಗಿದು ಹಣ್ಣುಮಾಡಿ ಮೆಲುಕುಹಾಕುತ್ತದೋ ಹಾಗೆಯೇ ಈ ಮಧ್ವಾಚಾರ್ಯರು ಪ್ರತಿವಾದಿಗಳು ಮೇಲಿಂದ ಮೇಲೆ ಕೇಳುತ್ತಾ ಹೋಗುವ ಪ್ರಶ್ನೆಗಳ ಸುರಿಮಳೆಯನ್ನೂ ಸಹ ಪ್ರಖರತರ್ಕ ಮತ್ತು ಅಪ್ರತಿ-ಹತವಾದ ಯುಕ್ತಿಗಳಿಂದ ಜರ್ಜರಿತಮಾಡಿ ಖಂಡಿಸಿ ನಿಸ್ಸತ್ವವನ್ನಾಗಿ ಮಾಡಿ ಅವರನ್ನು ನಿರುತ್ತರರನ್ನಾಗಿ ಮಾಡಿಬಿಡುತ್ತಿದ್ದರು. ಯಾವ ಪ್ರತಿವಾದಿಯೂ ಅವರನ್ನು ಎದುರಿಸಿ ಪರಾಜಿತನಾಗದೆ ಹೋಗುತ್ತಿರಲಿಲ್ಲ.

ಅಂಥಾ ಮೇಧಾಶಕ್ತಿ ಎಲ್ಲಿಂದ ಬಂತು ? ಎಂದರೆ ಆದಕ್ಕೆ ಕಾರಣವನ್ನು ಇರಲಿ. ಇವರಿಗೆ ಹೇಳುತ್ತಾರೆ—**ಉಭಾ ಯದಸ್ಯ ಜನುಷಂ ಯದಿನ್ವತಃ ।** ಲೋಕಕ್ಕೆ ತಾಯಿ-ತಂದೆಗಳಾದ ಲಕ್ಷ್ಮೀನಾರಾಯಣರೇ ಇವರಿಗೆ ಜ್ಞಾನಪ್ರಚಾರಕ್ಕಾಗಿ (ಯತ್) ಅವತಾರ ಮಾಡುವಂತೆ ಅಪ್ಪಣೆ-ಮಾಡಿದರು. ಇದರಿಂದ 'ಅಜ್ಞಾಮನ್ಯೈರಧಾರ್ಯಾಂ' ಎಂಬ ವಾಯು-ಸ್ತುತಿಯ ಶ್ಲೋಕವನ್ನೂ 'ಸರ್ವಜ್ಞಮನ್ಯಮನವೀಕ್ಷ್ಯ' ಎಂಬ ಮಧ್ವ-ವಿಜಯದ ವಾಕ್ಯಗಳನ್ನೂ ನೆನೆಸಿಕೊಟ್ಟಂತಾಯಿತು. ಅವರ ಅನುಗ್ರಹ-ವಿಶೇಷದ ಬಲದಿಂದಲೇ ಇವರಿಗೆ ಅಂಥಾ ಮೇಧಾಶಕ್ತಿಯುಂಟಾಯಿತೆಂದು ಭಾವ. ಇದರ ಜೊತೆಗೆ ಪೂರ್ವಾರ್ಧದ 'ಪಿತುಃ ಪರಮಾನ್ನೀಯತೇ' ಎಂಬುದನ್ನೂ ಸೇರಿಸಬಹುದು. ಪರಾ-ಉತ್ತಮಾ ಮಾ-ವಿದ್ಯಾ, ಯಸ್ಯ ಎಂಬ ವ್ಯುತ್ಪತ್ತಿಯಿಂದ ಸರ್ವಜ್ಞಶಿಖಾಮಣಿಗಳಾದ ಸಾಕ್ಷಾತ್ ವೇದವ್ಯಾಸ-ರಿಂದಲೇ ವಿದ್ಯೆಯನ್ನು ಕಲಿತವರಾದ್ದರಿಂದಲೂ ಇವರಿಗೆ ಅಸಾಧಾರಣ ಸರ್ವಜ್ಞತ್ವ ಉಂಟಾಯಿತೆಂದು ಭಾವ. ಹಾಗಾದಮೇಲೆ ಇವರೇ (ಮಧ್ವರೇ) ಎಲ್ಲರಿಗಿಂತ ಹೆಚ್ಚಿನಸರ್ವಜ್ಞರೇ ? ಎಂದರೆ—**ಆತ್ ಇತ್ ಯವಿಷ್ಠಃ** ನಿರವಧಿಕಜ್ಞಾನಾನಂದ ಸ್ವರೂಪನಾದ್ದರಿಂದ ಅಕಾರಶಬ್ದವಾಚ್ಯನಾದ ಆ ವಿಷ್ಣುವಿಗಿಂತ (ಮತ್ತು ಲಕ್ಷ್ಮೀದೇವಿಗಿಂತ) ಕಿರಿಯರು-ಅವರರು ; ಆದರೆ ಮಿಕ್ಕ ಎಲ್ಲಾ ಜೀವರಿಗಿಂತಲೂ ಉತ್ತಮರೆಂದು ಭಾವ.

ಐದನೆಯ ಮಂತ್ರ

376. ಕ) ಅವತಾರಿಕೆ—(ಭಾಬೋ.ಶ್ರೀ.) ನಾಲ್ಕನೇ ಮಂತ್ರದಲ್ಲಿ 'ಉಭಾ ಯದಸ್ಯ ಜನುಷಂ ಯದಿನ್ವತಃ' ಎಂದರೆ ಲಕ್ಷ್ಮೀನಾರಾಯಣರಿಬ್ಬರೂ ಇವರಿಗೆ 'ಅವತಾರ ಮಾಡೆಂದು ಪ್ರೇರಿಸುತ್ತಾರೆ'ಂದು ಹೇಳಿದೆ. ಇದರಿಂದ ಇವರೂ (ವಾಯುದೇವರೂ) ಸಕಲಪ್ರಾಣಿಗಳಂತೆ ಶುಕ್ಲ-ಶೋಣಿತ-ಸಂಬಂಧದಿಂದ ಗರ್ಭವಾಸ ಮಾಡಿ ಅದರಲ್ಲಿದ್ದಾಗ ಆ ದುಃಖವನ್ನೆಲ್ಲಾ ಅನುಭವಿಸಿಯೇ ಹುಟ್ಟಿದರೆಂಬ ಕಲ್ಪನೆ ಬರುತ್ತದೆ. ಅದನ್ನು ನಿಷೇಧಿಸುತ್ತಾ ಇವರ ವಿಶೇಷ ಶಕ್ತಿಯನ್ನು 'ಆದಿನ್ಮಾತೄಃ...' ಎಂಬ ಋಕ್ಕಿನಿಂದ ಹೇಳುತ್ತಾರೆ.

ಆದಿನ್ಮಾತೄರಾವಿಶದ್ ಯಾಸ್ವಾಶುಚಿ-

ರಹಿಂಸ್ಯಮಾನ ಉರ್ವಿಯಾ ವಿ ವಾವೃಧೇ ।

ಅನು ಯತ್ ಪೂರ್ವಾ ಅರುಹತ್ ಸನಾಜುವೋ

ನಿ ನವ್ಯಸಿಷ್ವವರಾಸು ಧಾವತೇ ॥ ೫ ॥

ಖ) ಪದಪಾಠ—ಆತ್ । ಇತ್ । ಮಾತೄಃ । ಆ । ಅವಿಶತ್ ।

ಯಾಸು । ಆ । ಶುಚಿಃ । ಅಹಿಂಸ್ಯಮಾನಃ । ಉರ್ವಿಯಾ । ವಿ । ವವೃಧೇ ॥

ಅನು । ಯತ್ । ಪೂರ್ವಾಃ । ಅರುಹತ್ । ಸನಾಽಜುವಃ ।

ನಿ । ನವ್ಯಸೀಷು । ಅವರಾಸು । ಧಾವತೇ ॥ ೫ ॥

ಗ) ವಿಶ್ಲೇಷಣೆ –ಹಿಂದಿನ ಋಕ್ಕಿನಂತೆ ಈ ಋಕ್ಕಿನಲ್ಲೂ ಪೂರ್ವಾರ್ಧದಲ್ಲೂ ಉತ್ತರಾರ್ಧದಲ್ಲೂ ಎರಡೆರಡು ವಾಕ್ಯಗಳಿವೆ. ಆದರೆ ಪೂರ್ವಾರ್ಧದ ಎರಡು ವಾಕ್ಯಗಳು ಒಟ್ಟಾಗಿ ಸೇರಿ ಒಂದು ಭಾವವನ್ನು ಹೊರಗೆಡಹಿದರೆ ಉತ್ತರಾರ್ಧದ ಎರಡು ಎರಡು ವಾಕ್ಯಗಳೂ ಜೊತೆಯಾಗಿ ಹೊಂದಿಕೊಂಡಿರುವ ಮತ್ತೊಂದು ವಿಚಾರವನ್ನು ತಿಳಿಸುತ್ತವೆ. ಇಷ್ಟು ಅರ್ಥ ಮಾಡಿಕೊಂಡರೆ ಅನ್ವಯವೂ ಅನ್ವಯಾರ್ಥವೂ ತೊಡಕಿಲ್ಲದೆ ತಿಳಿಯುತ್ತವೆ.

ಘ) ಅನ್ವಯ—(ಪೂರ್ವಾರ್ಧ) ೧ನೇ ವಾಕ್ಯ—(ವಾಯುಃ ಅಥವಾ ಮಧ್ವಃ) ಆತ್ ಇತ್ ಮಾತೄಃ ಆ ವಿಶತ್, (೨ನೇ ವಾಕ್ಯ) ಯಾಸು ಉರ್ವಿ ಯಾ ಆಶುಚಿಃ (ಅಥವಾ–ಆಶುಚಿಃ ಉರ್ವಿಯಾ) ಅಹಿಂಸ್ಯಮಾನಃ ವಿವಾವೃಧೇ । (ಉತ್ತರಾರ್ಧ) (೩ನೇ ವಾಕ್ಯ) ಸನಾಜುವಃ ಪೂರ್ವಾಃ ಅರುಹತ್ ಯತ್ (ತತ್) ಅನು । (೪ನೇ ವಾಕ್ಯ) (ನಿ) ನವ್ಯಸೀಷು ಅವರಾಸು ನಿ ಧಾವತೇ ॥

ಙ) ಅನ್ವಯಾರ್ಥ—(ಪೂರ್ವಾರ್ಧ) (೧ನೇ ವಾಕ್ಯ) (ಯತಃ ಎಂದೂ ವಾಯುಃ ಎಂದೂ ಅಧ್ಯಾಹಾರ ಮಾಡಿಕೊಳ್ಳಬೇಕು.) ಯತಃ–ಯಾವ ಕಾರಣದಿಂದ, ವಾಯುಃ–ವಾಯುವು ; ಆತ್ ಇತ್–ಪೂರ್ವಪ್ರಸಕ್ತನಾದ (ಮತ್ತು ಅಕಾರಶಬ್ದವಾಚ್ಯನಾದ–ತಾ.ನಿ) ನಾರಾಯಣನಿಂದ ಎಂದರೆ ಆ ನಾರಾಯಣನ ಪ್ರೇರಣೆಯಿಂದಲೇ ; ಮಾತೄಃ–ತಾಯಿಯರನ್ನು (ಎಂದರೆ ಅಂಜನಾ ಕುಂತೀ ಮತ್ತು ಮಧ್ಯಗೇಹರ ಪತ್ನಿಯರನ್ನು), ಆ–ಕ್ರಮವಾಗಿ ತ್ರೇತಾ–ದ್ವಾಪರ–ಕಲಿಯುಗಗಳಲ್ಲಿ (ತಾ.ನಿ.) ; ಅವಿಶತ್–ಪ್ರವೇಶಿಸಿದರೋ (ನವಮಾಸ ಗರ್ಭದಲ್ಲಿರದಂತೆಯೇ ಪ್ರವೇಶಿಸಿದರೋ) ; (೨ನೇ ವಾಕ್ಯ) ಯಾಸು–ಯಾವ ಸ್ತ್ರೀಯರಲ್ಲಿ ; ಆ ಶುಚಿಃ–ಅತ್ಯಂತ ಪರಿಶುದ್ಧರಾಗಿ ; ಉರ್ವಿಯಾ–ಅತ್ಯಧಿಕವಾದ ತಮ್ಮ ಶಕ್ತಿಯಿಂದ (ಅಥವಾ ಉರ್ವಿಯಾ ಆಶುಚಿಃ—ತಾ.ನಿ.) ಅಹಿಂಸ್ಯಮಾನಃ–ಗರ್ಭವಾಸದುಃಖದಿಂದ ಪೀಡಿಸಲ್ಪಡದೆ (ದುಷ್ಕರ್ಮದಿಂದಲೂ, ಹೊಟ್ಟೆಯಲ್ಲಿರುವ ಜಂತುಗಳಿಂದಲೂ ತೊಂದರೆಗೆ ಒಳಗಾಗದೆ ಎಂದರ್ಥ. ತಾ.ನಿ.); ವಿವಾವೃಧೇ–ಬೆಳೆದರು (ಎಂದರೆ ಇತರ ಜೀವಿಗಳಂತೆ ತಂದೆಯಿಂದ ತಾಯಿಯ ಗರ್ಭಪ್ರವೇಶ ಮಾಡಿ ಗರ್ಭದಲ್ಲಿ

ಒಂಬತ್ತು ತಿಂಗಳಿದ್ದು ಗರ್ಭದಲ್ಲಿ ಎಲ್ಲಾ ಯಾತನೆಗಳನ್ನೂ ಸಹಿಸಿ ಹೊರಕ್ಕೆ ಬರದೆ ನೇರವಾಗಿ ತಾಯಿಯರ ಗರ್ಭದಲ್ಲೇ ದೊಡ್ಡದಾಗಿ ಬೆಳೆದು ಹೊರಕ್ಕೇ ಬಂದರೆಂದು ಭಾವ) ತಾವ್ರ. ಟೀಕಾಕಾರರು ಈ ಪೂರ್ವಾರ್ಧಕ್ಕೆ ವಿಶೇಷತಃ ಮಧ್ವಪರವಾಗಿಯೇ ಹೀಗೆ ಅರ್ಥಮಾಡುತ್ತಾರೆ—ಶ್ರೀಮಧ್ವದೇವಃ (ಎಂದು ಕರ್ತೃಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.)-ಶ್ರೀಮಧ್ವರು ; ಆತ್ ಇತ್-ಆ ಲಕ್ಷ್ಮೀನಾರಾಯಣರ ಅನುಗ್ರಹದಿಂದ ಮಾತ್ಯಾಃ-ಋಗಾದಿ ಸಪ್ತ-ವಿದ್ಯೆಗಳನ್ನು, ಆ ವಿಶತ್-ಪ್ರವೇಶಿಸಿದರು. (೨ನೇ ವಾಕ್ಯ) ಯಾಸು—ಆ ವಿದ್ಯೆಗಳಲ್ಲಿ, ಆ ಶುಚಿಃ-ಅಜ್ಞಾನಾದಿ ದೋಷಗಳಿಲ್ಲದೆ ಪರಿಶುದ್ಧವಾಗಿ; ಅ-ಹಿಂಸ್ಯಮಾನಃ-ಪೂರ್ವಪಕ್ಷಿಗಳು ಹೇಳಬಹುದಾದ ಪ್ರಮಾಣಗಳಂತೆ ತೋರುವ ವಾಕ್ಯಾದಿಗಳಿಂದ ಹಿಂಸಿತರಾಗದೆ ; ಉರ್ವಿಯಾ-ಅತ್ಯಧಿಕವಾದ, ಸ್ವಶಕ್ತಿ-ಯಿಂದ ; ವಿಮಾವೃಧೇ-ವಿಜೃಂಭಿಸಿದರು (ಮೆರೆದರು.) (**ಉತ್ತರಾರ್ಧ**) (೩ನೇ ವಾಕ್ಯ) ಎರಡನೇ ಮಂತ್ರದಲ್ಲಿ 'ಆ ಶಯೇ ಸಪ್ತಶಿವಾಸು ಮಾತೃಷು-ಪ್ರಮಾಣಭೂತವಾದ ಸಪ್ತವಿದ್ಯೆಗಳಲ್ಲಿ ಚೆನ್ನಾಗಿ ವಿಚಾರಮಾಡಿದರು' ಎಂದು ಹೇಳಿದ್ದರು ; ಅದರಲ್ಲಿ ವಿಶೇಷವಿಚಾರವನ್ನು ತಿಳಿಸುತ್ತಾರೆ—ಅನು ಇತ್ಯಾದಿ ಉತ್ತರಾರ್ಧದಿಂದ (ಭಾ ಬೋ. ಶ್ರೀ.) ಸನಾಜುವಃ—ಸನಾ-ಸನಾತನನಾದ (ಎಂದರೆ ಅನಾದಿಕಾಲದಿಂದ ಇರುವ) ಭಗವಂತನನ್ನು ಜುವಃ—ಸೇವಿಸುವ ಎಂದರೆ ಪ್ರತಿಪಾದಿಸುವ ; (ಭಾ. ಬೋ., ತಾವ್ರ, ತಾ. ನಿ.) ಅಥವಾ ಅನಾದಿ-ಕಾಲದಿಂದ ಇರುವ (ತಾವ್ರ.); ಪೂರ್ವಾಃ-ಮೊದಲಿನ ನಾಲ್ಕು ವಿದ್ಯೆಗಳಾದ ಋಗಾದಿ ಚತುರ್ವಿದ್ಯೆಗಳನ್ನು, (ಯತ್-ನಿತ್ಯಗಳಾದ ಕಾರಣ ತಾ ನಿ.) ಅರುಹತ್-ಹತ್ತಿದರು ಅಥವಾ ಅರ್ಥ ಹೇಳಿದರು; ಯತ್-ಎಂಬುದೇನಿದೆಯೋ ಅದು ; ಅದು-ಉಪಕ್ರಮಾದಿತಾತ್ಪರ್ಯಲಿಂಗಗಳನ್ನು ಯೋಜಿಸಿಯೇ ಮಾಡಿದರು. (ಭಾ. ಬೋ. ಶ್ರೀ. ತಾನಿ.) (ಪೂರ್ವಾಃ-ಋಗಾದಿ ನಾಲ್ಕು ವಿದ್ಯೆಗಳನ್ನು, ಅನ್ವಾರುಹತ್-ಉಪಕ್ರಮಾದಿಲಿಂಗಗಳ ಕ್ರಮದಿಂದಲೇ ವ್ಯಾಖ್ಯಾನ ಮಾಡಿದರು. (ತಾವ್ರ.) (೪ನೇ ವಾಕ್ಯ) (ನಿ) ನವ್ಯಸೀಷು-ವೇದಗಳಿಗೆ ಹೋಲಿಸಿದರೆ ಅರ್ವಾಚೀನಗಳಾದ (ಈಚಿನವುಗಳಾದ) ; (ಆದ್ದರಿಂದಲೇ) ಅವರಾಸು-ಕಿರಿಯವುಗಳಾದ ಇತಿಹಾಸ-ಪುರಾಣ-ಪಂಚರಾತ್ರಗಳೆಂಬ ಮೂರು

ವಿದ್ಯೆಗಳಲ್ಲಿ; ನಿ ಧಾವತೇ–(ಉಪಕ್ರಮಾದಿಗಳ ಯೋಜನೆಯಿಲ್ಲದೆ) ನೇರ-ವಾಗಿಯೆ ಶೀಘ್ರವಾಗಿ ಅರ್ಥವಿಚಾರ ಮಾಡುತ್ತಾರೆ. (ಋಗ್ವೇದಾದಿ ನಾಲ್ಕು ವಿದ್ಯೆಗಳಲ್ಲಿ ಅಪ್ರಸಿದ್ಧವಾದ ಅಲೌಕಿಕವಾದ ಅನೇಕ ಪದಗಳಿರುವುದರಿಂದಲೂ ಸ್ವರ-ಸಂಹಿತೆ-ಪದಾದಿಗಳು ನಿತ್ಯವಾದ್ದರಿಂದ ನಿಯತವಾಗಿರೋಣದರಿಂದಲೂ ಉಪಕ್ರಮಾದಿಲಿಂಗಗಳಿಂದ ಪರ್ಯಾಲೋಚನೆ ಮಾಡಿ, ವೃಕ್ಷ-ಏರುವ ಮನುಷ್ಯ ಆಯಕಟ್ಟುನೋಡಿಕೊಂಡು ಸಾವಕಾಶವಾಗಿ ಮೇಲೆ ಹತ್ತುವಂತೆ, ಸಾವಕಾಶವಾಗಿ ಅರ್ಥ ಹೇಳುತ್ತಾರೆಂದೂ, ಪೌರುಷೇಯಗ್ರಂಥಗಳಾದ ಕಾರಣ ಆ ಕಾಠಿನ್ಯವಿಲ್ಲದಿರುವುದರಿಂದ ನೇರವಾಗಿ ಸುಲಭವಾಗಿಯೇ ಅರ್ಥ ಹೇಳು-ತ್ತಾರೆಂದೂ ತಿಳಿಯಬೇಕು. ತಾ. ನಿ.)

ಚ) ವಿಶೇಷ ವಿಚಾರಗಳು—i) ಆತ್ ಎಂಬುದು ಅಕಾರಾಂತ 'ಅ'ಶಬ್ದದ ಪಂಚಮ್ಯೇಕವಚನ. ಆದ್ದರಿಂದಲೇ ತಾ. ನಿ.ದಲ್ಲಿ ಇದಕ್ಕೆ 'ಅಕಾರ-ಶಬ್ದವಾಚ್ಯಾದ್ವಿಷ್ಣೋರಾಜ್ಞಯಾ' ಎಂದು ಅರ್ಥ ಹೇಳಿದ್ದಾರೆ. ಐತರೇಯ-ದಲ್ಲಿ (೨/೩/೮) 'ಅಃ ಇತಿ ಬ್ರಹ್ಮ' ಎಂದರೆ ಅಕಾರವು ಬ್ರಹ್ಮ(ವಿಷ್ಣು) ವಾಚಕವೆಂದು ಹೇಳಿದೆ. ಅವಕ್ಕೆ ಅನುಗುಣವಾಗಿಯೇ ಹಿಂದಿನ ಮಂತ್ರದಲ್ಲೂ ಈ ಮಂತ್ರದಲ್ಲೂ ಆತ್ ಎಂದರೆ ವಿಷ್ಣುವಿನ(ಆಜ್ಞೆಯ) ದೆಸೆಯಿಂದ ಎಂದು ಅರ್ಥ ಮಾಡಿದ್ದಾರೆ. ii) ಇತ್ ಎಂಬುದು ಅವ್ಯಯ; ಏವ-ಕಾರಾರ್ಥದಲ್ಲಿ ಬಂದಿದೆ. ವಾದಿರಾಜರು ತಾ. ನಿ. ದಲ್ಲಿ ಇತ್-ಇತ್ಥಂ-ಹೀಗೆ ಎಂದು ಅರ್ಥ ಹೇಳಿ ಅದಕ್ಕೆ 'ಅವತಾರತ್ರಯದಲ್ಲಿಯೂ' ಎಂದು ಅರ್ಥಮಾಡುತ್ತಾರೆ; ಯು. ಮ. ದಲ್ಲಿ 'ಕಲ್ಪೇ ಕಲ್ಪೇ' ಎಂದರೆ ಯುಗಯುಗಾಂತರಗಳಲ್ಲೂ—ತ್ರೇತಾ-ದ್ವಾಪರ ಕಲಿ ಮೂರೂ ಯುಗಗಳಲ್ಲೂ ಎಂದು ವ್ಯಾಖ್ಯಾನಮಾಡಿದರು. iii) ಆವಿಶತ್ ಪ್ರವೇಶಿಸಿದನು ಎಂಬಲ್ಲಿ ಸೂಕ್ಷ್ಮವಿಚಾರವಿದೆ; ಅದನ್ನು ಅರ್ಥ ಮಾಡಿಕೊಳ್ಳುವುದು ಯುಕ್ತವಾಗಿದೆ. ಎಲ್ಲಾ ಮಕ್ಕಳೂ ತಂದೆಯಿಂದ ತಾಯಲ್ಲಿ ಹುಟ್ಟುವುದು ಸಹಜವಾಗಿದೆ. ಅಷ್ಟೇ ಅಲ್ಲದೆ ತಾಯಿಯ ಗರ್ಭ-ವನ್ನು ಪ್ರವೇಶಿಸಿದ ಮೇಲೆ ಒಂಬತ್ತು ತಿಂಗಳಲ್ಲಿ ಕ್ರಮವಾಗಿ ಬೆಳೆಯುತ್ತಾ ಒಂದೊಂದು ತಿಂಗಳಲ್ಲೂ ಬೇರೆ ಬೇರೆ ಅಂಗಾಂಗಗಳನ್ನು ಪಡೆದು ಪ್ರಾಯಶಃ ಏಳನೇ ತಿಂಗಳ ಹೊತ್ತಿಗೆ ಪೂರ್ಣವಾಗಿ ರೂಪಗೊಳ್ಳುವುದೆಂಬುದು ವೇದಗಳಲ್ಲಿ

ಮಾತ್ರವೇ ಅಲ್ಲದೆ ವಿಜ್ಞಾನರೀತಿಯಿಂದಲೂ ಸಿದ್ಧವಾದ ವಿಷಯವಾಗಿದೆ. ಪ್ರಸ್ತುತ ವಾಯುದೇವರಿಗೆ ಗರ್ಭವಾಸದಲ್ಲಿ ಉಂಟಾಗುವ ಈ ಕ್ರಮ ವೃದ್ಧಿ-ಯಾವುದೂ ಇಲ್ಲವೆಂದು ಹೇಳುವುದೇ ಈ ಋಕ್ಕಿನ ಮುಖ್ಯಾರ್ಥ್ಯೇಯು. ಗರ್ಭವು ಸಂಪೂರ್ಣವಾಗಿ ಬೆಳೆದ ಬಳಿಕವೇ ವಾಯುದೇವರು ತಮ್ಮ 'ಉರ್ವಿಯಾ' ಶಕ್ತಿಯಿಂದ ಆ ಗರ್ಭವನ್ನು ಪ್ರವೇಶಿಸಿ ಹೊರಕ್ಕೆ ಬಂದುಬಿಡುತ್ತಾರೆ ಎಂದು ಶ್ರುತಿ ಹೇಳುತ್ತದೆ.

ಈ ವಿಚಾರದಲ್ಲಿ ಮಧ್ವವಿಜಯದಲ್ಲಿ ನಿರೂಪಿತವಾದ ಒಂದು ಪ್ರಮೇಯವನ್ನು ನಿರೂಪಣೆ ಮಾಡಿದರೆ ಈ ವಿಷಯ ಮಂದಟ್ಟಾಗುತ್ತದೆ. ಶ್ರೀಮದಾಚಾರ್ಯರು ಭೂಮಿಯಲ್ಲಿ ಅವತಾರ ಮಾಡಿದ ಪ್ರಮೇಯವನ್ನು ವರ್ಣಿಸುತ್ತಾ ಶ್ರೀ ನಾರಾಯಣಪಂಡಿತಾಚಾರ್ಯರು ಮಧ್ವವಿಜಯದ (೨.ಸ. ೨೫ಶ್ಲೋ.) 'ಸಂಪೂರ್ಣಲಕ್ಷಣಚಣಂ—' ಎಂಬ ಶ್ಲೋಕದಲ್ಲಿ ಒಬ್ಬ ಸಮರ್ಥನಾದ ರಾಜನು ತನ್ನ ನಗರದಲ್ಲಿ ಸೇರಿಕೊಂಡಿದ್ದ ತಂಟೆಖೋರರನ್ನು ಹೊರಗೆ ಓಡಿಸಿ (ನಿಷ್ಕಾಸಯನ್) ತಾನು ತನ್ನ ಪಟ್ಟಣದೊಳಗೆ ಪ್ರವೇಶಿಸು-ವಂತೆ (ಎಂದು ಉಪಮಾನ ಕೊಟ್ಟು) ವಾಯುದೇವರು ತಾವು ಪ್ರವೇಶಿಸ-ಬೇಕಾಗಿದ್ದ ಗರ್ಭದ ದೇಹದಲ್ಲಿದ್ದ ಜೀವನನ್ನು ಹೊರಗೆ ಓಡಿಸಿ ದ್ವಾತ್ರಿಂಶಲ್ಲ-ಕ್ಷಣೋಪೇತವಾದ ಆ ಶರೀರವನ್ನು ಪ್ರವೇಶಿಸಿದರು ಎಂದು ಅಪ್ಪಣೆಕೊಡಿಸಿ-ದ್ದಾರೆ. ಈ ಶ್ಲೋಕಕ್ಕೆ ವಿವರಣೆ ಬರೆಯುತ್ತಾ ಗೋರಾಬಾಳ ಹನುಮಂತ-ರಾಯರು ಯಾವುದೋ ಅಪೂರ್ವ ಟೀಕೆಯಲ್ಲಿ ಹೇಳಿದ ಪ್ರಮೇಯಾಂಶವನ್ನು ಸಂಗ್ರಹಿಸಿ ಹೀಗೆ ಹೇಳಿದ್ದಾರೆ. ಯಾವನೋ ಗಂಧರ್ವ ತನಗೆ ದ್ವಾತ್ರಿಂಶಲ್ಲ-ಕ್ಷಣೋಪೇತವಾದ ದೇಹವೇ ಬೇಕೆಂದು ತಪಸ್ಸು ಮಾಡಿದ್ದರಿಂದ ಅವನಿಗೆ ಅಂಥಾ ದೇಹವೇ ಮಾತೃಗರ್ಭವಾಸಕಾಲದಲ್ಲಿ ಬಂದಿತ್ತು. ಅವನೇ ಗರ್ಭ-ವಾಸ ದುಃಖವೆಲ್ಲ ಅನುಭವಿಸಿದನು. ನವಮಾಸವು ತುಂಬಿದ ಬಳಿಕ ಗಂಧರ್ವನು ದ್ವಾತ್ರಿಂಶಲ್ಲಕ್ಷಣೋಪೇತ ದೇಹವುಳ್ಳ ಆ ಗರ್ಭದಲ್ಲಿದ್ದ ಗಂಧರ್ವನು ತಾಯಿಯ ಗರ್ಭದಿಂದ ಹೊರಗೆ ಬಂದಕೂಡಲೇ ವಾಯುದೇವರು ಆ ದೇಹದಲ್ಲಿದ್ದ ಗಂಧರ್ವನನ್ನು ಹೊರಗೆ ಓಡಿಸಿ ತಾವು ಆ ದೇಹದಲ್ಲಿ ಪ್ರವೇಶ-ಮಾಡಿದರು ಎಂಬ ವಿವರಣೆ ವಾಯುಪುರಾಣದಲ್ಲಿ ಹೇಳಿದೆಯೆಂದು ತಿಳಿಸಿ-

ದ್ದಾರೆ. ಈ ವಿವರಣೆಯಿಂದ ಈ ಋಕ್ಕಿನ ಅರ್ಥವು ಸಂಪೂರ್ಣವಾಗಿ ಅರ್ಥ-ವಾಗುವುದರಿಂದ ಈ ವಿಷಯುವನ್ನು ಇಲ್ಲಿಗೇ ಉಪರಮಿಸುತ್ತೇನೆ.

iv) ಅನು ಎಂಬುದು ನಿಪಾತಾವ್ಯಯ ; ಇದಕ್ಕೆ 'ಅನುಸರಿಸಿ, ಅನುಗುಣವಾಗಿ' ಎಂದರ್ಥ. ಒಂದು ಶ್ರುತಿಯ ಅರ್ಥವನ್ನು ನಿರ್ಣಯಿಸ-ಬೇಕಾದರೆ ೧. ಉಪಕ್ರಮ (ಆರಂಭ), ೨. ಉಪಸಂಹಾರ, ೩. ಅಭ್ಯಾಸ (ಆವೃತ್ತಿ), ೪. ಅಪೂರ್ವತಾ, ೫. ಫಲ, ೬. ಅರ್ಥವಾದ, ೭. ಉಪಪತ್ತಿ ಎಂದು ಏಳು ಯುಕ್ತಿಗಳಿವೆಯೆಂದು ಬ್ರಹ್ಮಸೂತ್ರಗಳಲ್ಲಿ (೧/೧/೪) ಹೇಳಿದೆ. ಜೊತೆಗೆ (೧/೩/೨೪ರಲ್ಲಿ) ೧. ಶ್ರುತಿ, ೨. ಲಿಂಗ, ೩. ವಾಕ್ಯ, ೪. ಪ್ರಕರಣ, ೫. ಸ್ಥಾನ ಮತ್ತು ೬. ಸಮಾಖ್ಯೆ ಎಂದು ಬೇರೆ ಆರೂ ಇವೆಯೆಂದು ಹೇಳಿದೆ. ಇವುಗಳನ್ನೆಲ್ಲಾ ವಿಚಾರಮಾಡಿ ಬಲಾಬಲಗಳನ್ನು ತೂಕಮಾಡಿ ವೇದವಾಕ್ಯಗಳಿಗೆ ಅರ್ಥ ನಿರ್ಣಯ ಮಾಡಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ಇದಕ್ಕೆ ನಿದರ್ಶನ ಕೊಟ್ಟು ಬಲಾಬಲಗಳನ್ನು ಹೇಗೆ ನಿರ್ಣಯಿಸಬೇಕೆಂಬ ವಿಚಾರ ತತ್ವಪ್ರಕಾಶಿಕಾ, ನ್ಯಾಯಸುಧಾ ಮತ್ತು ಶ್ರೀವ್ಯಾಸರಾಯರ ತಾತ್ಪರ್ಯಚಂದ್ರಿಕಾದಲ್ಲೂ ವಿಸ್ತಾರವಾಗಿ ನಿರೂಪಿತವಾಗಿದೆ.

v) **ಸನಾಜುವಃ** ಎಂಬುದಕ್ಕೆ ತಾವು. ಹೆಚ್ಚು ಸ್ಪಷ್ಟೀಕರಣೆ ಕೊಟ್ಟಿದ್ದಾರೆ. ೧. ಜು ಗತೌ ಎಂಬ ಧಾತುವಿನಿಂದ ಸನಾತನಕಾಲದಿಂದ ಇರುವ ಎಂದರ್ಥ. ೨. ಯದ್ವಾ ಸನಾ–ಸನಾತನನಾದ ಭಗವಂತನನ್ನು, ಜುಷಂತೇ–ಸೇವಂತೆ–ಸೇವಿಸುವ, (ಜುಷೀ ಪ್ರೀತಿಸೇವನಯೋಃ ಇತಿ ಧಾತು. ವ್ಯಾಖ್ಯಾನಾತ್ ತಾ.ನಿ. ಶ್ರೀ.) ಎಂದರೆ ಪ್ರತಿಪಾದಿಸುವ ಎಂದರ್ಥ. ಸಜೂಃ-ಮೊದಲಾದ ಶಬ್ದಗಳು ಆಗಿರುವಂತೆ ಇದು ಊಕಾರಾಂತವಾದ ಶಬ್ದವೆಂದು ತಿಳಿಯಬೇಕು(ತಾ ನಿ.) ಜುಷ ಎಂಬ ಅರ್ಥದಲ್ಲೇ 'ಜುವಃ' ಎಂಬುದು ವೈದಿಕ ಪದವೆಂದು ತಿಳಿಯಬೇಕು (ಯು.ಮ.). vi) **ಅರುಹತ್** ಎಂದರೆ ಹತ್ತಿದನು ಮೇಲಕ್ಕೆ ಏರಿದನು ಎಂದೇ ಅರ್ಥ. ವಾದಿರಾಜರು ಗಿಡವನ್ನು ಅಥವಾ ಮರವನ್ನು ಏರುವ ರೂಪಕ ತೆಗೆದುಕೊಂಡು ಮರ ಹತ್ತುವವನು ಎಚ್ಚರಿಕೆಯಿಂದ ಸ್ವಲ್ಪಸ್ವಲ್ಪವಾಗಿ ಹೇಗೆ ಏರುತ್ತಾನೋ ಅದೇ ರೀತಿ ಅರ್ಥವಿಚಾರ ಮಾಡುತ್ತಾನೆ ಎಂದು ವಿವರಿಸಿದ್ದಾರೆ (ತಾ.ನಿ.). ಯು.ಮ.ದಲ್ಲಿ ಕುದುರೆ-

ಯನ್ನು ಹತ್ತು-ಏರು ಎಂಬ ಅರ್ಥದಲ್ಲಿ ತೆಗೆದುಕೊಂಡು ಹೀಗೆ ವಿವರಿಸುತ್ತಾರೆ. ಕುದುರೆಯ ಮೇಲೆ ಸವಾರಿ ಮಾಡುವ ಮನುಷ್ಯ ತನ್ನ ಕುದುರೆಗೆ ಹೇಗೆ ಏನೂ ತೊಂದರೆ ಆಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾನೋ ಹಾಗೆಯೇ ವೇದಾಭಿಮಾನಿಗಳಾದ ವಾಯುದೇವರು ವೇದಕ್ಕೆ ಅರ್ಥ ಹೇಳುವಾಗ ಯಾವ ರೀತಿಯಿಂದಲೂ ವೇದಗಳಿಗೆ ಧಕ್ಕೆ ತಗಲದಂತೆ ನೋಡಿಕೊಳ್ಳುತ್ತಾರೆ—ಎನ್ನುತ್ತಾರೆ.

vii) **ನಿ ಸವ್ಯಸೀಷು ಸಿಃ**-ನಿತರಾಂ, ಅತಿಶಯವಾಗಿ, ನವ್ಯಸೀಷು-ಪೌರುಷೇಯಗ್ರಂಥಗಳಾದ್ದರಿಂದ ವೇದಗಳಿಗೆ ಹೋಲಿಸಿದರೆ ಈಚೆಗೆ ರಚಿತವಾದ ಎಂದರ್ಥ. ಆದ್ದರಿಂದಲೇ **ಅವರಾಸು** ಕೀಳಾದ, ಎಂದರೆ ವೇದವಿದ್ಯೆಗಿಂತ ಈಚಿನವಾದ ಎಂದರ್ಥ (ಯು.ಮ.). ಅವು ಯಾವುವೆಂದರೆ ಮೂಲ-ರಾಮಾಯಣ ಮಹಾಭಾರತಗಳೆಂಬ ಇತಿಹಾಸ, ಪುರಾಣ ಮತ್ತು ಪಂಚರಾತ್ರಗಳಲ್ಲಿ. viii) **ಧಾವತೇ**-ಓಡುತ್ತಾರೆ ಎಂದರೆ ವೇದಗಳಂತೆ ಉಪಕ್ರಮಾದಿಲಿಂಗಗಳ ಗೋಜಿಲ್ಲವಾದ್ದರಿಂದ ಬೇಗಬೇಗನೆ ವ್ಯಾಖ್ಯಾನಮಾಡುತ್ತಾರೆಂದು ಭಾವ. ವೇದಗಳೂ ಸೃಷ್ಟಿಕಾಲದಲ್ಲಿ ಹೊರಗೆ ಬಂದದ್ದರಿಂದ ಹೊಸದೇ ಎಂದು ಬಂದರೆ ತದಪೇಕ್ಷಯಾ ಹೊಸದು ಎಂದು ತೋರಿಸಲು ನಿ-ನಿತರಾಂ ಎಂಬ ಉಪಪದ ಜೋಡಿಸಿದರು. ಭಾರತ ಭಾಗವತಾದಿ ಗ್ರಂಥಗಳಲ್ಲಿ ಹೇಳಿದ ಭಾವ(ಅರ್ಥ)ಗಳೆಲ್ಲ ಅನಾದಿಪರಂಪರಾಪ್ರಾಪ್ತವಾದುವೇ ಆದರೂ ಅಕ್ಷರಗಳ ಜೋಡಣೆಯ ಕ್ರಮದಲ್ಲಿ ಹೊಸದೇ ಹೊರತು ಕಾಳಿದಾಸಾದಿಗಳ, ಗ್ರಂಥಗಳಂತೆ ವಿಷಯವೇ ಹೊಸದಲ್ಲ ಎಂದು ತೋರಿಸಲು ನವ್ಯಸೀಷು ಎಂದು ವಿಲಕ್ಷಣ ಪ್ರಯೋಗ ಮಾಡಿದೆ. (ಯು.ಮ.)

ಛ) **ಮಂತ್ರದ ಭಾವಾರ್ಥ**—ಪ್ರಥಮ ಮಂತ್ರದಲ್ಲಿ 'ಇತ್ಥಾ ತದ್ ವಪುಷೇ ಧಾಯಿ'-ಮೂಲರೂಪದಂತೆಯೇ ಅವತಾರದಲ್ಲೂ ಬಲಜ್ಞಾನಾತ್ಮಕ ಸ್ವರೂಪವುಳ್ಳದಾಗಿಯೇ ಅವತರಿಸಿದರು ಎಂದು ಹೇಳಿದ್ದನ್ನೇ ಸ್ಪಷ್ಟೀಕರಿಸುತ್ತದೆ. ವಾಯುದೇವರು ತಮಗೆ ಸ್ವಾಮಿಯೂ ಜನಕನೂ ನಿಯಾಮಕನೂ ಆದ ಆ ಅಕಾರವಾಚ್ಯನಾದ ವಿಷ್ಣುವಿನ ಆಜ್ಞೆಯಿಂದ ಅವನ ಪ್ರೀತ್ಯರ್ಥ ಅವನ ಕಾರ್ಯಸಾಧನಾರೂಪಸೇವೆಗಾಗಿಯೇ ಕ್ರಮವಾಗಿ ತ್ರೇತಾಯುಗ

ದ್ವಾಪರಯುಗ ಕಲಿಯುಗಗಳಲ್ಲಿ ಹನುಮಾನ್ ಭೀಮ ಮಧ್ವರೂಪಗಳಿಂದ ಅಂಜನಾದೇವಿ, ಕುಂತೀದೇವಿ, ಮಧ್ಯಗೇಹಭಟ್ಟರ ಪತ್ನಿಯರ ಮಕ್ಕಳಾಗಿ ಜನಿಸಿದರು, ನಿಜ. ಆದರೂ ಕೂಡ ಮಿಕ್ಕ ಎಲ್ಲ ಜೀವರಿಗೆ (ರುದ್ರಾದಿ ದೇವತೆ-ಗಳಿಗೂ ಸಹ) ಇರುವಂತೆ ಶುಕ್ಲಶೋಣಿತಸಂಪರ್ಕದಿಂದ ಜನ್ಯವಾದ ದೇಹವು ಇವರಿಗೆ ಯಾವ ಕಾಲಕ್ಕೂ ಇಲ್ಲ. ಆದಕ್ಕೆ ಪ್ರತಿಯಾಗಿ ಬಲಾತ್ಮಕವೂ ಜ್ಞಾನಾತ್ಮಕವೂ ಆದ ಮತ್ತು ದ್ವಾತ್ರಿಂಶಲ್ಲಕ್ಷಣೋಪೇತವಾದ ದೇಹವೇ ಮೂರು ಅವತಾರಗಳಲ್ಲೂ ಇತ್ತು, ಏಕೆಂದರೆ ಭಗವತ್ಸಂಕಲ್ಪದಂತೆ ಪ್ರಾಪ್ತವಾದ ವಿಶೇಷಶಕ್ತಿಯಿಂದ (**ಉರ್ವಿಯಾ ಶಕ್ತ್ಯಾ**) ತಾಯಿಯವರ ಗರ್ಭ-ಕೋಶವನ್ನು ನೇರವಾಗಿ ಪ್ರವೇಶಿಸಿ (**ಮಾತ್ರಾವಿಶತ್**) ಸ್ವೇಚ್ಛೆಯಿಂದ, ಗರ್ಭವಾಸಜನ್ಯವಾದ ಯಾವ ವಿಧವಾದ ದುಃಖಲೇಶವೂ ಇಲ್ಲದಂತೆ (**ಅಹಿಂಸ್ಯಮಾನಃ**) ಪರಿಶುದ್ಧರಾಗಿಯೇ (**ಅ ಶುಚಿಃ**) ಬೆಳೆದರೇ ವಿನಾ ಇತರ ಜೀವಿಗಳಂತೆ ತಿಂಗಳು ತಿಂಗಳಲ್ಲೂ ಪ್ರಾಪ್ತವಾದ ಅಂಗಾಂಗಗಳುಳ್ಳವರಾಗಿರಲಿಲ್ಲ (**ವಿಮಾವೃಧೇ**).

(ಮಧ್ವಾವತಾರದ ಜನನ ಕಥೆಯೇ ಬೇರೆ ರೀತಿ ಇದೆ. ಒಬ್ಬ ಗಂಧರ್ವ ತನಗೆ ದ್ವಾತ್ರಿಂಶಲ್ಲಕ್ಷಣೋಪೇತವಾದ ದೇಹ ಬೇಕೆಂದು ತಪಸ್ಸು ಮಾಡಿದನು. ಅದರಂತೆ ಅಂತಹ ದೇಹವನ್ನೇ ಧರಿಸಿ ಮಧ್ಯಗೇಹಭಟ್ಟರ ಪತ್ನಿಯ ಗರ್ಭದಲ್ಲಿ ಸೇರಿ ನವಮಾಸ ಮುಗಿಯುವ ಪರ್ಯಂತ ವೃದ್ಧಿಹೊಂದುತ್ತಾ ಗರ್ಭವಾಸ-ಜನಿತ ಸಕಲ ದುಃಖಗಳನ್ನೂ ಅನುಭವಿಸಿದನು. ಕಡೆಗೆ ಶಿಶುವಾಗಿ ಪ್ರಸವಿಸು-ವುದೇ ತಡ, ವಾಯುದೇವರು ಆ ದೇಹದಲ್ಲಿದ್ದ ಗಂಧರ್ವನನ್ನು ಓಡಿಸಿ ತಾವು ಆ ದೇಹದಲ್ಲಿ ಪ್ರವೇಶಮಾಡಿದರು. ಇದನ್ನೇ ಮಧ್ವವಿಜಯದ 'ಸಂಪೂರ್ಣ-ಲಕ್ಷಣಂ' ಎಂಬ ಶ್ಲೋಕ ಹೇಳುತ್ತದೆ. (ಈ ಗಂಧರ್ವನ ವಿಚಾರವು ವಾಯುಪುರಾಣದಲ್ಲಿ ಬಂದಿದೆಯಂತೆ ಇರಲಿ.)

ಹೀಗೆ ವಾಯುದೇವರಿಗೆ ಮೂಲರೂಪದಲ್ಲಿ ಮಾತ್ರವಲ್ಲದೆ ಅವತಾರ-ತ್ರಯದಲ್ಲೂ ಈ ಹೆಚ್ಚಿನ ಮಹಿಮೆ ಇರುವುದರಿಂದಲೇ ಶ್ರುತಿಯು ಅವರ ಅವತಾರತ್ರಯದ ವರ್ಣನೆಯನ್ನೇ ವಿಶೇಷವಾಗಿ ಮಾಡಿತೆಂದು ತಿಳಿಯ-ಬೇಕು.

ಕಡೆಯಲ್ಲಿ ಬಳಿತ್ಥಾಶ್ರುತಿಯು ಮಧ್ವಾಚಾರ್ಯರ ವ್ಯಾಖ್ಯಾನ ಕ್ರಮ-ದಲ್ಲಿದ್ದ ಒಂದು ವೈಶಿಷ್ಟ್ಯವನ್ನು ತೋರಿಸಿ ಈ ಪ್ರಸಂಗವನ್ನು ಸಮಾಪ್ತಿ-ಮಾಡುತ್ತದೆ. ಸರ್ವಜ್ಞಶಿಖಾಮಣಿಗಳಾದ ಶ್ರೀಮದಾಚಾರ್ಯರದ್ದು ಪರಿ-ಪಕ್ವವಾದ ಋಜುಯೋಗಿಜ್ಞಾನವಾದ್ದರಿಂದ ಭಗವದಿತರತ್ರ ಆಲೋಚನೆ ಸರ್ವವಿಷಕವಾದುದಷ್ಟೆ. ಆದಕಾರಣ ಅವರಿಗೆ ಋಗಾದಿ ಸಪ್ತವಿದ್ಯೆಗಳೂ ಕರತಲಾಮಲಕದಂತೆ ಭಾಸವಾಗುತ್ತವೆ. ಆದರೂ ಕೂಡ ಅವರು ಋಗಾದಿ ಚತುರ್ವಿದ್ಯೆಗಳಿಗೆ ವ್ಯಾಖ್ಯಾನ ಮಾಡುವಾಗ, ಮರ ಹತ್ತುವ ಪುರುಷನು ಸಾವಕಾಶವಾಗಿ ಸ್ವಲ್ಪಸ್ವಲ್ಪವಾಗಿ ಮೇಲೇರುವಂತೆ, ಬಹಳ ಎಚ್ಚರಿಕೆಯಿಂದ ಸಾವಕಾಶವಾಗಿ ಮಾಡುತ್ತಾನೆ. ಅಶ್ವಾರೋಹಿಯಾದ ಪುರುಷ ತನ್ನ ಕುದುರೆಗೆ ಯಾವ ಧಕ್ಕೆಯೂ ಬರದಂತೆ ಹೇಗೆ ಎಚ್ಚರಿಕೆಯಿಂದ ನೋಡಿ-ಕೊಳ್ಳುತ್ತಾನೋ ಹಾಗೆ ತಾವು ಹೇಳುವ ವೇದಾರ್ಥವು ಪೂರ್ವಾಪರವಿರೋಧ ವಿಲ್ಲದೆಯೂ ಇತಿಹಾಸಪುರಾಣಾದಿಗಳಿಗೆ ಹೊಂದಿಕೆಯಾಗಿಯೂ ಇರುವಂತೆ ಬಹಳ ಜಾಗ್ರತರಾಗಿರುತ್ತಾರೆ ವಾದಿರಾಜರು ತೋರಿಸಿರುವಂತೆ ಆ ಋಗಾದಿ ಚತುರ್ವಿದ್ಯೆಗಳು ಅನಾದಿನಿತ್ಯವಾದ್ದರಿಂದ (ಸನಾಜುವಃ) ಅವುಗಳಲ್ಲಿ ಅಪ್ರಸಿದ್ಧಲೌಕಿಕ ಬಹುಪದಗಳು ಇರುವುವಾದ್ದರಿಂದಲೂ ಅವುಗಳ ಸ್ವರ-ಸಂಹಿತಾಪದಗಳೆಲ್ಲವೂ ನಿಯತವಾದ್ದರಿಂದಲೂ ಅವುಗಳ ಅರ್ಥನಿರ್ಣಯ-ಮಾಡುವುದಕ್ಕೆ ತದರ್ಥಬೋಧಕ ಶಿಕ್ಷಾಕಲ್ಪವ್ಯಾಕರಣಾದಿ ವೇದಾಂಗಗಳನ್ನು ಅನುಸರಿಸಬೇಕಾಗಿರುವುದರಿಂದಲೂ ಉಪಕ್ರಮಾದಿ ತಾತ್ಪರ್ಯಲಿಂಗಗಳನ್ನು ಹೊಂದಿಸಿ ವಿಚಾರಮಾಡಿಯೇ ಅರ್ಥನಿರ್ಣಯಮಾಡಬೇಕಾಗುವುದರಿಂದಲೂ ಅವುಗಳ ವ್ಯಾಖ್ಯಾನ ಸಾವಕಾಶವಾಗಿ ಮುಂದೆ ಸಾಗುತ್ತದೆ. ಆದರೆ ಭಾರತ ಭಾಗವತ ಪಂಚರಾತ್ರಾದಿ ಮೂರು ವಿದ್ಯೆಗಳಲ್ಲಿ ಈ ಕಾಠಿನ್ಯವಿಲ್ಲದ್ದರಿಂದಲೂ ಅವು ಪೌರುಷೇಯಗ್ರಂಥಗಳಾದ್ದರಿಂದಲೂ ಅವುಗಳ ಪ್ರವಚನ ಸುಖವಾಗಿ ಬೇಗಬೇಗ ಸಾಗುತ್ತದೆ ಎಂದು ನಿರೂಪಣೆ ಮಾಡಿ ಶ್ರುತಿಯು ಉಪರಮಿಸು-ತ್ತದೆಯೆಂಬಲ್ಲಿಗೆ ಬಳಿತ್ಥಾಸೂಕ್ತಾರ್ಥನಿರೂಪಣೆ ಸಮಾಪ್ತವಾಯಿತು.

ಸಮರ್ಪಣೆ

ನಾನಾಟೀಕೋಕ್ತವಿಷಯಾನ್ ಸಂಗೃಹ್ಯ ಹಿ ಯಥಾಮತಿ
ಬಳಿತ್ಥಾಸೂಕ್ತವಿವೃತಿರ್ ಗ್ರಥಿತಾ ಯತ್ಪ್ರಸಾದತಃ ॥೧॥

ಸೇವಯಾವಿಷ್ಣುತೀರ್ಥಸ್ಯ ಪ್ರೀಯೇತಾಂ ಮಧ್ವಮಾಧವೌ।
ಅಸ್ಯಾರ್ಥಮನನಂಯುಸ್ಮಾ—ದತಿಪ್ರೀತಿಕರಂ ತಯೋಃ ॥೨॥

೭. ಹನೂಮಂತನ ಧ್ಯಾನ

377. ಅವತಾರಿಕೆ—(ಲೇ.) ಹನೂಮಂತನ ವ್ಯಾಕರಣಪಾಂಡಿತ್ಯ-ವನ್ನು ಪ್ರಶಂಸಿಸುತ್ತಾ ಅವನನ್ನು ಧ್ಯಾನಿಸುತ್ತಾರೆ.

ಮಹಾವ್ಯಾಕರಣಾಂಭೋಧಿ—ಮಂಥಮಾನಸಮಂದರಮ್ ।
ಕವಯಂತಂ ರಾಮಕೀರ್ತ್ಯಾ
ಹನೂಮಂತಮುಪಾಸ್ಮಹೇ ॥ ೭ ॥

ಅನ್ವಯಾರ್ಥ—ಮಹಾ.............ಮಂದರಂ—ಮಹಾವ್ಯಾಕರಣ-ಅಂಭೋಧಿ—ಮಹಾವ್ಯಾಕರಣವೆಂಬ ಸಮುದ್ರವನ್ನು, ಮಂಥ-ಕಡೆಯುವ, ಮಾನಸ-ಮನಸ್ಸೆಂಬ, ಮಂದರಂ-ಮಂದರಪರ್ವತವುಳ್ಳ ; ರಾಮಕೀರ್ತ್ಯಾ-ಶ್ರೀರಾಮನ ಯಶಸ್ಸಿನಿಂದ, ಕವಯಂತಂ-ಗಾನಮಾಡುತ್ತಿರುವ, ಹನೂ-ಮಂತಂ-ಹನೂಮಂತನನ್ನು, ಉಪಾಸ್ಮಹೇ-ಧ್ಯಾನಿಸುತ್ತೇವೆ ಅಥವಾ ಆರಾಧಿಸುತ್ತೇವೆ.

ವಿಶೇಷ ವಿವರಣೆ—ಯದ್ಯಪಿ ಈಗ ಲೋಕದಲ್ಲಿ ಪಾಣಿನಿ ಬರೆದ 'ಅಷ್ಟಾಧ್ಯಾಯೀ' ಎಂಬ ವ್ಯಾಕರಣಸೂತ್ರಗಳೇ ಪ್ರಚಾರದಲ್ಲಿವೆಯಾದರೂ ಅದಕ್ಕೆ 'ಮಹಾವ್ಯಾಕರಣ' ಎಂಬ ಹೆಸರಿಲ್ಲ. ಸಾಕ್ಷಾನ್ನಾರಾಯಣನೇ ಬರೆದ ಒಂದು ದೊಡ್ಡ ವ್ಯಾಕರಣವಿದೆಯಂತೆ. ಅದು ಈಗ ಎಲ್ಲೂ ಪ್ರಚಾರದಲ್ಲಿಲ್ಲ. ಶ್ರೀಮದಾಚಾರ್ಯರು ಮಾತ್ರ ನಾಲ್ಕಾರು ಕಡೆ ತಮ್ಮ ಗ್ರಂಥಗಳಲ್ಲಿ ಈ ಮಹಾವ್ಯಾಕರಣದ ಸೂತ್ರಗಳನ್ನು ಉದಹರಿಸಿದ್ದಾರೆ. ಉದಾಹರಣೆಗೆ ಬೃಹದ್ಭಾಷ್ಯದಲ್ಲಿ (೩/೨/೪ರಲ್ಲಿ) 'ಆಧಿಕ್ಯೇಽಧಿಕಮ್' ಎಂಬ ಸೂತ್ರವನ್ನು ಉದಹರಿಸಿದ್ದಾರೆ. ಹೀಗೆಯೇ ಭಾಗವತತಾತ್ಪರ್ಯಾದಿ ತಮ್ಮ ಇತರ ಗ್ರಂಥ-ಗಳಲ್ಲೂ ಈ ಮಹಾವ್ಯಾಕರಣಸೂತ್ರಗಳನ್ನು ಹೇಳಿದ್ದಾರೆ. 'ಮಹಾ' ಎಂಬ ಹೆಸರೇ ಹೇಳುವಂತೆ ಅದು ಬಹಳ ದೊಡ್ಡಗ್ರಂಥವೂ ಕಠಿನವೂ ಇರಬೇಕು ;

ಆದ್ದರಿಂದಲೇ ಅದನ್ನು ಸಮುದ್ರಕ್ಕೆ (ಅಂಭೋಧಿ) ಹೋಲಿಸಿದ್ದಾರೆ. ಕ್ಷೀರ-ಸಮುದ್ರವನ್ನು ಕಡೆಯುವುದಕ್ಕೆ ಮಂದರಪರ್ವತವೇ ಹೇಗೆ ಕಡಗೋಲಾ-ಯಿತೋ (ಮಂಥ) ಹಾಗೆ ಈ ಮಹಾವ್ಯಾಕರಣವೆಂಬ ಸಮುದ್ರವನ್ನು ಕಡೆಯುವುದಕ್ಕೆ ಹನುಮಂತನ ಮನಸ್ಸೇ (ಮಾನಸ) ಕಡಗೋಲಾಯಿತಂತೆ. ಕ್ಷೀರಸಮುದ್ರವನ್ನು ಕಡೆದದ್ದರಿಂದ ಹೇಗೆ ಅಮೃತ ಹುಟ್ಟಿತೋ ಹಾಗೆ ಹನೂಮಂತ ತನ್ನ ಮನಸ್ಸೆಂಬ) ಕಡಗೋಲಿಂದ (ಮಂದರದಿಂದ) ಮಹಾ-ವ್ಯಾಕರಣವನ್ನು ಕಡೆಯಲು 'ರಾಮಕೀರ್ತಿ' ಎಂಬ ಅಮೃತ ಹುಟ್ಟಿತಂತೆ ಮುಖ್ಯಭಾವವೇನೆಂದರೆ ಮಹಾವ್ಯಾಕರಣವನ್ನು ಚೆನ್ನಾಗಿ ಅಧ್ಯಯನಮಾಡಿ ಆ ಪಾಂಡಿತ್ಯದಿಂದ ಸಕಲ ವೇದಗಳನ್ನೂ ಸಕಲ ಸ್ಮೃತಿಗಳನ್ನೂ ಧ್ವನ್ಯಾತ್ಮಕ ವರ್ಣಾತ್ಮಕ ಸಕಲ ಶಬ್ದಗಳನ್ನೂ ಶ್ರೀರಾಮನಲ್ಲಿ ಅನ್ವಯಮಾಡಿ ತೋರಿಸಿ ಅವೆಲ್ಲ ಆ ಶ್ರೀರಾಮನ ಮಹಿಮೆಯನ್ನೇ ಸಾರುತ್ತವೆ ಎಂದು ತೋರಿಸಿ-ಕೊಟ್ಟ ಹನುಮಂತನನ್ನು ಧ್ಯಾನಿಸುತ್ತೇವೆ ಎಂದು ಭಾವ.

ಭಾವಾರ್ಥ— ಹನೂಮಂತನು ಸೂರ್ಯನಿಂದಲೇ ವ್ಯಾಕರಣವನ್ನು ಕಲಿತನೆಂದು ಪ್ರಸಿದ್ಧಿಯಿದೆ. ಅವನು ಅಗಾಧವಾದ ಈ ಮಹಾವ್ಯಾಕರಣ-ವೆಂಬ ಮಹಾಸಮುದ್ರವನ್ನು ತನ್ನ ಮನಸ್ಸೆಂಬ ಕಡೆಗೋಲಿಂದ ಕಡೆದು ಶ್ರೀರಾಮನ ಯಶೋಗಾನ ಮಾಡುತ್ತಿರುತ್ತಾನೆ. ಅರ್ಥಾತ್ ಮಹಾ-ವ್ಯಾಕರಣದ ಸೂತ್ರಗಳನ್ನು ಮನಸ್ಸಿನಲ್ಲೇ ಆಲೋಡನೆ ಮಾಡುತ್ತಾ ಇದ್ದು ಸಕಲ ವೇದಗಳೂ ಸಕಲ ಶಾಸ್ತ್ರಗಳೂ ಮೂಲರಾಮಾಯಣಾದಿ ಗ್ರಂಥಗಳೂ ಪದಶಃ ಅಕ್ಷರಶಃ ಮಾತ್ರವಲ್ಲದೆ ಗುಡುಗಿನ ಧ್ವನಿ, ಸಮುದ್ರ ಘೋರ್ಗರೆ-ಯುವುದೇ ಮೊದಲಾದ ಪ್ರತಿಯೊಂದು ಧ್ವನ್ಯಾತ್ಮಕ ಶಬ್ದವೂ ಸಹ ಶ್ರೀರಾಮನ ಮಹಿಮೆಯನ್ನೇ ಹೇಳುತ್ತವೆ ಎಂದು ತೋರಿಸುತ್ತಾ ಆ ಸಕಲ ಶಬ್ದಗಳನ್ನೂ ಶ್ರೀರಾಮನಲ್ಲಿ ಅನ್ವಯಮಾಡಿ ತೋರಿಸುತ್ತಾ ಆನಂದಮಗ್ನನಾಗಿರುತ್ತಾನೆ. ಅಂಥಾ ಹನುಮಂತನನ್ನು ನಾವು ಸದಾ ಧ್ಯಾನಿಸೋಣ ಎಂಬುದೇ ಶ್ಲೋಕಾ-ಭಿಪ್ರಾಯ.

೮. ವೀರಾಗ್ರೇಸರನಾದ ಭೀಮ

378. ಅವತಾರಿಕೆ—(ಲೇ.) ವ್ಯಾಕರಣಪಂಡಿತಾಗ್ರಣಿಯಾದ ಹನುಮಂತನನ್ನು ಸ್ಮರಿಸಿದಂತೆಯೇ ವೀರಾಗ್ರೇಸರನಾದ ಭೀಮನನ್ನೂ ಈ ಶ್ಲೋಕದಿಂದ ಧ್ಯಾನಿಸುತ್ತಾ ವಂದಿಸುತ್ತಾರೆ—

ಮುಖ್ಯಪ್ರಾಣಾಯ ಭೀಮಾಯ
ನಮೋ ಯಸ್ಯ ಭುಜಾಂತರಮ್ ।
ನಾನಾವೀರಸುವರ್ಣಾನಾಂ ನಿಕಷಾಶ್ಮಾಯಿತಂ ಬಭೌ ॥ ೮ ॥

ಅನ್ವಯಾರ್ಥ—ಯಸ್ಯ–ಯಾರ; ಭುಜಾಂತರಂ—ಭುಜ–ತೋಳುಗಳ, ಅಂತರಂ–ಮಧ್ಯಭಾಗವು, ಎಂದರೆ ವಕ್ಷಃಸ್ಥಲವು; ನಾನಾ....ಸುವರ್ಣಾನಾಂ—ನಾನಾ–ಅನೇಕ ಬಗೆಯ, ವೀರ–ಪರಾಕ್ರಮಿಗಳೆಂಬ, ಸುವರ್ಣಾನಾಂ–ಬಂಗಾರಗಳಿಗೆ; ನಿಕಷಾಶ್ಮಾಯಿತಂ–(ಬಂಗಾರವನ್ನು ಪರೀಕ್ಷಿಸುವ) ಒರೆಗಲ್ಲಿಗೆ ಸಮಾನವಾಗಿ; ಬಭೌ–ಪ್ರಕಾಶಿಸಿತೋ ('ಭಾ ದೀಪ್ತೌ ಧಾತು ಲಿಟ್ ರೂಪ); ಅಂಥಾ, ಭೀಮಾಯ–ಭೀಮರೂಪಿಯಾದ; ಮುಖ್ಯಪ್ರಾಣಾಯ–ಮುಖ್ಯ-ಪ್ರಾಣನಿಗೆ ; ನಮಃ.

ವಿವರಣೆ—ನಿಕಷಾಶ್ಮ ಎಂಬಲ್ಲಿ ನಿಕಷ+ಅಶ್ಮ ಎಂದು ಎರಡು ಪದಗಳಿವೆ. ನಿಕಷಃ ಎಂಬ ಪದ ಕಷ ಹಿಂಸಾಯಾಂ (ಭ್ವಾ.ಪ.) ಎಂಬ ಧಾತುವಿನ ರೂಪ, ನಿ-ಕಷ್ ಎಂದರೆ ಉಜ್ಜು, ತಿಕ್ಕು ಎಂದರ್ಥ ; ಇದರಿಂದ ನಿಕಷಃ ಎಂದರೆ ಬಂಗಾರವನ್ನು ಒರೆಹಚ್ಚುವುದಕ್ಕಾಗಿ ತಿಕ್ಕುವ ಒರೆಗಲ್ಲು ಅಥವಾ ಒರೆಗಲ್ಲು ಎಂದರ್ಥ, 'ಶಾಣಸ್ತು ನಿಕಷಃ ಕಷಃ' ಅಮರ. 'ನಿಕಷಃ ಶಾಣ-ಫಲಕೇ'–ಮೇದಿನೀ–ವಿಶ್ವಕೋಶ, ಅಶ್ಮನ್ ನಕಾರಾಂತಪುಲ್ಲಿಂಗಶಬ್ದ; ಇದಕ್ಕೆ ಕಲ್ಲು ಎಂದರ್ಥ. ಉಪಲಾಶ್ಮಾನಃ ಶಿಲಾ ದೃಷತ್–ಅಮರ. ಆದಕಾರಣ ನಿಕಷಾಶ್ಮಾ ಎಂದರೂ ಒರೆಗಲ್ಲು ಎಂದೇ ಅರ್ಥ. 'ಅದರಂತೆ ವರ್ತಿಸು' (ಉಪಮಾನಾದಾಚಾರೇ ಪಾ. ೩/೧/೧೦–೧೧) ಎಂಬ ಅರ್ಥದಲ್ಲಿ ಕ್ಯಙ್ (ಆತ್ಮ.) ಕ್ಯಚ್ (ಪರ) ಪ್ರತ್ಯಯಗಳು ಬರುವುವು ಎಂಬ ನಿಯಮದಂತೆ ನಿಕಷಾಶ್ಮವದಾಚರತೀತಿ ನಿಕಷಾಶ್ಮಾಯಿತಂ ಎಂದಾಗಿದೆ; ಒರೆಗಲ್ಲಿನಂತೆ ವರ್ತಿಸು ಎಂದರ್ಥ. ಕೊಟ್ಟಿರುವ ಬಂಗಾರವು ಶುದ್ಧವೋ ಅಶುದ್ಧವೋ,

ಎಷ್ಟು ಅಶುದ್ಧ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಆ ಬಂಗಾರದ ತುಂಡನ್ನು ಒರೆಗಲ್ಲಿನ ಮೇಲೆ ತಿಕ್ಕಿ (ಉಜ್ಜಿ) ಪರೀಕ್ಷಿಸುವರಷ್ಟೆ. ಕ್ಷತ್ರಿಯವೀರರೇ 'ಸುವರ್ಣ' (ಬಂಗಾರ)ವೆಂದೂ ಭೀಮನೇ ಒರೆಗಲ್ಲೆಂದೂ ಹೇಳಿ, ಬಂಗಾರ-ವನ್ನು ಒರೆಗಲ್ಲಮೇಲೆ ತಿಕ್ಕಿ ಪರೀಕ್ಷಿಸುವಂತೆ ಯಾವ ಕ್ಷತ್ರಿಯವೀರ ಎಷ್ಟರ-ಮಟ್ಟಿಗೆ ಪರಾಕ್ರಮಶಾಲಿ ಎಂಬ ಪರೀಕ್ಷೆಯಾಗಬೇಕಾದರೆ ಭೀಮನ ವಕ್ಷಃ-ಸ್ಥಳದ ಮೇಲೆ ಬಿದ್ದು ಸೆಣಸಾಡಲೇಬೇಕಾಗಿತ್ತು ಎನ್ನುತ್ತಾರೆ. ನಿಜವಾದ ಪರಾಕ್ರಮಶಾಲಿಗಳು ಮಾತ್ರವೇ ಅವನೊಡನೆ ಯುದ್ಧಕ್ಕೆ ಹೋಗುತ್ತಿದ್ದರು. ಮಿಕ್ಕವರು ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಹೀಗೆ ಭೀಮನ ವಕ್ಷಃಸ್ಥಳವು (ಭುಜಾಂತರಂ) ಯುದ್ಧವೀರರ ನಿಜವಾದ ಪರಾಕ್ರಮವನ್ನು ಒರೆಹಚ್ಚಿ ನೋಡುವ ಒರೆಗಲ್ಲಿನಂತೆ ಶೋಭಿಸುತ್ತಿತ್ತು (ಬಭೌ) ಎಂಬುದೇ ಶ್ಲೋಕದ ಮುಖ್ಯ ಆಶಯ.

ಭಾವಾರ್ಥ—ಮುಖ್ಯಪ್ರಾಣನ ದ್ವಿತೀಯಾವತಾರವಾದ ಭೀಮ-ರೂಪವು ಅತುಲಭುಜಬಲವುಳ್ಳ ಕ್ಷತ್ರಿಯವೀರಾಗ್ರೇಸರನಾಗಿದ್ದುದು ಮಾತ್ರ-ವಲ್ಲ, ಅವನ ಭುಜಾಂತರವು (ವಕ್ಷಃಸ್ಥಳವು) ನಾನಾಮಟ್ಟದ ವೀರಾಧಿವೀರರು ತಮ್ಮ ಪರಾಕ್ರಮದ ಮಟ್ಟವನ್ನು ಪರೀಕ್ಷಿಸಿಕೊಳ್ಳುವುದಕ್ಕೆ ಒರೆಹಚ್ಚಿ ನೋಡಿಕೊಳ್ಳಬೇಕಾದ ಒರೆಗಲ್ಲಿನಂತೆ ಶೋಭಿಸುತ್ತಿತ್ತು. ಯಾವ ಚಿನ್ನದ ತುಂಡೇ ಆಗಲಿ ಒರೆಗಲ್ಲಮೇಲೆ ಉಜ್ಜಿದರೇ ಸಾಕು, ಅದು ಅಪ್ಪಟ ಚಿನ್ನವೋ ಅಲ್ಲವೋ, ಎಷ್ಟು ಮಟ್ಟದ್ದು ಎಂಬುದು ಹೇಗೆ ತಿಳಿದು ಹೋಗು-ವುದೋ ಹಾಗೆ ಭೀಮನ ತೋಳುಗಳ ನಡುವೆ ಸಿಕ್ಕಿ ಅವನೊಡನೆ ಯುದ್ಧ-ಮಾಡುವುದೇ ದೊಡ್ಡ ಸಾಹಸವಾಗಿರುತ್ತಿತ್ತು. ಅಂಥಾ ವೀರಾಧಿವೀರನಾದ ಭೀಮನಿಗೆ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕಾರ. ಅವನ ನಾಮ-ಸ್ಮರಣೆಯೇ ಪರಮಮಂಗಳ, ಪುಣ್ಯಸಾಧನ, ವಿಜಯಪ್ರದ.

೯. ಮಧ್ವಾಚಾರ್ಯರೆಂಬ ಕ್ಷೀರಸಮುದ್ರ

379. ಅವತಾರಿಕೆ—(ಲೇ.) ಹನುಮಂತನನ್ನೂ ಭೀಮನನ್ನೂ ನೆನೆಸಿದ ಬಳಿಕ ಮೂರನೆಯ ಅವತಾರವಾದ ಮಧ್ವರನ್ನೂ ನೆನೆಸುತ್ತಾ ಅವರನ್ನೇ ಕ್ಷೀರಸಮುದ್ರವೆಂದು ನಿರೂಪಣೆಮಾಡುತ್ತಾರೆ—ಸ್ವಾಂತಸ್ಥೇತಿ.

ಸ್ವಾಂತಸ್ಥಾನಂತಶಯ್ಯಾಯ ಪೂರ್ಣಜ್ಞಾನರಸಾರ್ಣಸೇ ।
ಉತ್ತುಂಗವಾಕ್‌ತರಂಗಾಯ ಮಧ್ವದುಗ್ಧಾಬ್ಧಯೇ ನಮಃ ॥

ಕಠಿನಶಬ್ದಾರ್ಥ—ಸ್ವಾಂತ ಎಂಬುದಕ್ಕೆ ಸಮುದ್ರಪರವಾದರೆ ಸ್ವ+ಅಂತಃ–ತನ್ನ ಒಳಗೆ ಎಂದೂ, ಮಧ್ವರ ಪರವಾದರೆ ಮನಸ್ಸು ಎಂದೂ ಅರ್ಥ 'ಸ್ವಾಂತಂ ಹೃನ್ ಮಾನಸಂ ಮನಃ' ಅಮರ. **ಸ್ಥ**–ಇರುವ (ಸ್ಥಿತ, ಸ್ಥಾ–ತಿಷ್ಠ ಧಾತು.) ಅನಂತ ಎಂಬುದು ಆದಿಶೇಷನ ಹೆಸರು. (ಅನಂತಶಯನ ಹೋಲಿಸಿ.) 'ಶೇಷೋಽನಂತೋ ವಾಸುಕಿಸ್ತು (ಅಮರ). ಅನಂತಃ ಕೇಶವೇ ಶೇಷೇ—ಮೇದಿನೀ, **ಶಯ್ಯಾ** (ಶೀ ಧಾತು, ಮಲಗು)–ಹಾಸಿಗೆ, **ಅನಂತಶಯ್ಯಾಯ**–ಅನಂತಶಯನ ಅಥವಾ ಶೇಷಶಾಯಿಯಾದ ವಿಷ್ಣು. **ಅರ್ಣಸ್** ಎಂಬುದು ಸಕಾರಾಂತ ನಪುಂ. ಶಬ್ದ ; ಇದಕ್ಕೆ ನೀರು, ಜಲ ಎಂದರ್ಥ. 'ಅಂಭೋಽರ್ಣಸ್–ತೋಯ–ಪಾನೀಯ'–ಅಮರ. ರಸಾರ್ಣಸೇ ಎಂಬುದು ದುಗ್ಧಾಬ್ಧಯೇ–ಗೆ ವಿಶೇಷಣವಾದ್ದರಿಂದ ಪುಲ್ಲಿಂಗ, ಚ.ಏ.ರೂಪ ; ವೇಧಸೇ ಎಂಬಂತೆ. ಪೂರ್ಣಜ್ಞಾನರಸ ಏವ ಅರ್ಣಃ–ಉದಕಂ ಯಸ್ಯಾಸೌ–ತಸ್ಮೈ. ಪರಿಪೂರ್ಣವಾದ ಜ್ಞಾನರಸವೇ ನೀರಾಗಿರುವ ಕ್ಷೀರಸಮುದ್ರಕ್ಕೆ ಹಾಲೇ ನೀರಿಗೆ ಸಮಾನ (—ರಸಾರ್ಣಃ) ; ಮಧ್ವಾಚಾರ್ಯರಿಗೆ ಪೂರ್ಣಜ್ಞಾನವೆಂಬ ಹಾಲೇ ನೀರು. **ಉತ್ತುಂಗ**–ಎತ್ತರವಾದ (ಉತ್–ಹೆಚ್ಚಾಗಿ, ತುಂಗ–ಎತ್ತರವಾದ) **ಮಧ್ವ–ದುಗ್ಧ–ಅಬ್ಧಯೇ**–ಮಧ್ವರೆಂಬ ಹಾಲಿನ—ಸಮುದ್ರಕ್ಕೆ ; ದುಹ್ ಧಾತುವಿಗೆ ಹಾಲು ಕರೆ, ಹಾಲು ಹಿಂಡು ಎಂದರ್ಥ ; ಅದರ ಮೇಲೆ ಕ್ತ (ಭೂ.ಕೃದಂತ) ಪ್ರತ್ಯಯ ಸೇರಿ ದುಗ್ಧ–ಹಿಂಡಲ್ಪಟ್ಟದ್ದು, ಕರೆಯಲ್ಪಟ್ಟದ್ದು—ಹಾಲು ; ಇದೇ ಹಿಂದಿಯಲ್ಲಿ ದೂಧ್ ಆಗಿದೆ. ಅಪ್–ನೀರು, ಧಿ–ನಿಲ್ಲುವ ಸ್ಥಳ, ಅಬ್ಧಿ–ಸಮುದ್ರ.

ಅನ್ವಯಾರ್ಥ—ಸ್ವಾಂತಸ್ಥಾ......ಶಯ್ಯಾಯ—(ಸಮುದ್ರಪಕ್ಷದಲ್ಲಿ) ಸ್ವ–ತನ್ನ, ಅಂತಃ–ಒಳಗೇ, ಸ್ಥ–ಇರುವ (ಮಲಗಿರುವ), ಅನಂತಶಯ್ಯಾಯ–ಶೇಷಶಾಯಿಯಾದ ವಿಷ್ಣು ಮಲಗಿರುವ ; (ಮಧ್ವರ ಪಕ್ಷದಲ್ಲಿ), ಸ್ವಾಂತ–ಮನಸ್ಸಿನಲ್ಲೇ, ಸ್ಥ–ನೆಲೆಸಿರುವ (ಸದಾ ಧ್ಯಾನವಿಷಯಕನಾಗಿರುವ), ಅನಂತಶಯ್ಯಾಯ–ವಿಷ್ಣುವುಳ್ಳ ; ಪೂರ್ಣ....ರ್ಣಸೇ–(ಮಧ್ವರ ಪಕ್ಷದಲ್ಲಿ)

ಪೂರ್ಣ–ಪರಿಪೂರ್ಣವಾದ, ಜ್ಞಾನ–ಜ್ಞಾನವೆಂಬ, ರಸ–ಹಾಲೇ, ಅರ್ಣಸೇ–ನೀರಾಗಿರುವ ; (ಸಮುದ್ರದ ಪಕ್ಷದಲ್ಲಿ) ರಸ–ಹಾಲೇ, ಅರ್ಣಸೇ–ನೀರಾಗಿರುವ ; ಉತ್ತುಂಗ....ರಂಗಾಯ—ಉತ್ತುಂಗ—(ಸಮುದ್ರಪಕ್ಷದಲ್ಲಿ) ಬಹಳ ಎತ್ತರವಾಗಿ ಏಳುತ್ತಿರುವ, (ವಾಕ್ ಬಿಟ್ಟುಬಿಡಬೇಕು), ತರಂಗಾಯ–ಅಲೆಗಳುಳ್ಳ ; (ಮಧ್ವರ ಪರವಾಗಿ) ಉತ್ತುಂಗ–ಗಂಭೀರವಾದ ಆಶಯಗಳುಳ್ಳ ಅಥವಾ ಉನ್ನತವಾದ ವಿಚಾರಗಳುಳ್ಳ, ವಾಕ್–ಮಾತುಗಳೆಂಬ, ತರಂಗಾಯ–ಅಲೆಗಳುಳ್ಳ (ಅಲೆಗಳಂತೆ ಮೇಲಿಂದ ಮೇಲೆ ಹೊರಡುತ್ತಿರುವ ವಾಕ್ಪ್ರವಾಹವುಳ್ಳ ಎಂದರ್ಥ) ; ಮಧ್ವದುಗ್ಧಾಬ್ಧಯೇ–ಮಧ್ವರೆಂಬ ಕ್ಷೀರಸಮುದ್ರಕ್ಕೆ ; ನಮಃ–ನಮಸ್ಕಾರ.

ಭಾವಾರ್ಥ—ಮಧ್ವಾಚಾರ್ಯರು ಕ್ಷೀರಸಾಗರದಂತೆ ಜ್ಞಾನದ ಅಪಾರರಾಶಿಯಾಗಿದ್ದಾರೆ. ಕ್ಷೀರಸಮುದ್ರದ ಮಧ್ಯದಲ್ಲೇ ಶ್ರೀವಿಷ್ಣು ಶೇಷಶಾಯಿಯಾಗಿ ನೆಲೆಸಿರುವಂತೆ ಆ ವಿಷ್ಣು ಇವರ ಮನಸ್ಸಿನಲ್ಲೂ ಸದಾ ನೆಲೆಸಿದ್ದಾನೆ. (ಅವರು ಮನಸ್ಸಿನಲ್ಲೇ ಆ ವಿಷ್ಣುವನ್ನು ಸದಾ ಧ್ಯಾನಿಸುತ್ತಿರುತ್ತಾರಲ್ಲದೆ ನಿತ್ಯಾಪರೋಕ್ಷಿಗಳಾದ್ದರಿಂದ ಸದಾ ನೋಡುತ್ತಲೂ ಇರುತ್ತಾರೆ.) ಕ್ಷೀರಸಮುದ್ರವು ಹಾಲಿನಿಂದ ತುಂಬಿ ತುಳುಕಾಡುತ್ತಿರುವಂತೆ ಇವರು ಪೂರ್ಣಜ್ಞಾನದಿಂದ ತುಂಬಿತುಳುಕಾಡುತ್ತಿದ್ದಾರೆ. ಕ್ಷೀರಸಮುದ್ರದಲ್ಲಿ ದೊಡ್ಡ ದೊಡ್ಡ ಅಲೆಗಳು ಮೇಲಿಂದ ಮೇಲೆ ಸಾಲುಸಾಲಾಗಿ ಏಳುತ್ತಿರುವಂತೆ ಇವರ ಬಾಯಿಂದ ಉನ್ನತಾಭಿಪ್ರಾಯವುಳ್ಳ ಮಾತುಗಳು ತರಂಗತರಂಗವಾಗಿ ಹೊರಬರುತ್ತಿರುತ್ತವೆ. ಇಂಥಾ ಮಧ್ವಾಚಾರ್ಯರನ್ನು ಜ್ಞಾನಭಕ್ತಿವೈರಾಗ್ಯಗಳಿಗಾಗಿ ನಮಸ್ಕರಿಸುತ್ತೇನೆ.

೧೦. ನಮ್ಮ ಮಾರ್ಗದರ್ಶಕರು

380. **ಅವತಾರಿಕೆ**—(ಲೇ.) ಮಧ್ವಾಚಾರ್ಯರು ಕ್ಷೀರಸಮುದ್ರವಾಗಲಿ, ನಮಗೇನು ಲಾಭ? ಎಂದರೆ ಅವರು ದುರ್ಮಾರ್ಗದಲ್ಲಿದ್ದ ನಮ್ಮನ್ನು ತಿದ್ದಿ ಸನ್ಮಾರ್ಗಾವಲಂಬಿಗಳನ್ನಾಗಿ ಮಾಡಿದರೆಂದು ಕೃತಜ್ಞತೆಯಿಂದ ಸ್ತುತಿಸುತ್ತಾರೆ—ಯೇನಾಹಮಿತಿ.

ಯೇನಾಹಮಿಹ ದುರ್ಮಾರ್ಗಾದುದ್ಧೃತ್ಯಾಭಿನಿವೇಶಿತಃ ।
ಸಮ್ಯಕ್ ಶ್ರೀವೈಷ್ಣವೇ ಮಾರ್ಗೇ
ಪೂರ್ಣಪ್ರಜ್ಞಂ ನಮಾಮಿ ತಮ್ ॥ ೧೦ ॥

ಪದವಿಭಾಗ—ಯೇನ, ಅಹಂ, ಇಹ, ದುರ್ಮಾರ್ಗಾತ್, ಉದ್ಧೃತ್ಯ, ಅಭಿನಿವೇಶಿತಃ, ಸಮ್ಯಕ್, ಶ್ರೀವೈಷ್ಣವೇ, ಮಾರ್ಗೇ, ಪೂರ್ಣಪ್ರಜ್ಞಂ, ನಮಾಮಿ, ತಮ್ ॥

ಅನ್ವಯಾರ್ಥ—ಯೇನ–ಯಾರಿಂದ, ಅಹಂ–ನಾನು, ಇಹ–ಇಲ್ಲಿ (ಈ ಜನ್ಮದಲ್ಲಿ, ಈ ಸಂಸಾರಸಾಗರದಲ್ಲಿ ಪಾಪಭೂಯಿಷ್ಠವಾದ ಈ ಕಲಿಕಾಲದಲ್ಲಿ ಅಥವಾ ಈ ಭೂಮಿಯಲ್ಲಿ); ದುರ್ಮಾರ್ಗಾತ್–(ಛ.) ಕುತ್ಸಿತಮಾರ್ಗದಿಂದ (ಅಯೋಗ್ಯಮಾರ್ಗದಿಂದ) ; ಉದ್ಧೃತ್ಯ–(ಉಡುಪಿ ಪುಸ್ತಕ) ಎತ್ತಿ,(ಛ.) ಉದ್ಧಾರಮಾಡಿ, ಸಮ್ಯಕ್–ಸಮೀಚೀನವಾದ (ಪರಮೋತ್ಕೃಷ್ಟವಾದ), ಇಹ–ಈ ಎಂದರೆ ಪ್ರಸಿದ್ಧವಾದ (ಛ.), ಶ್ರೀವೈಷ್ಣವೇ ಮಾರ್ಗೇ–ವೈಷ್ಣವಸಿದ್ಧಾಂತದ ಸನ್ಮಾರ್ಗದಲ್ಲಿ ; ಸಮ್ಯಕ್–(ಛ.). ಚೆನ್ನಾಗಿ (ಪುನಃ ಜಾರಿತಪ್ಪದಂತೆ ಎಚ್ಚರಿಸಿ ಅಥವಾ ಸಂಪೂರ್ಣವಾಗಿ) ; ಅಭಿನಿವೇಶಿತಃ–(ಛ.) ಪ್ರವೇಶಿಸಲ್ಪಟ್ಟೆನೋ (ಅಥವಾ ಹೋಗುವಂತೆ–ನಡೆಯುವಂತೆ ಪ್ರೇರಿತನಾದೆನೋ); ತಂ–ಅಂಥಾ; ಪೂರ್ಣಪ್ರಜ್ಞಂ–ಪೂರ್ಣಪ್ರಜ್ಞರೆಂಬ (ಸರ್ವಜ್ಞಶಿಖಾಮಣಿಗಳಾದ ಎಂದರ್ಥ) ಮಧ್ವಾಚಾರ್ಯರನ್ನು ; ನಮಾಮಿ–ನಮಸ್ಕರಿಸುತ್ತೇನೆ.

ಭಾವಾರ್ಥ—ಸರಿಯಾದ ಮಾರ್ಗದರ್ಶಕರಿಲ್ಲದೆ ನಾನು ಪಾಪಭೂಯಿಷ್ಠವಾದ ಈ ಕಲಿಕಾಲದಲ್ಲಿ ಸರಿಯಾದ ಮಾರ್ಗ ತಿಳಿಯದೆ ಅನರ್ಥಸಾಧಕವಾದ ದುರ್ಮಾರ್ಗದಲ್ಲೇ ನಡೆಯುತ್ತಿದ್ದೆ. ಮಹಾಕರುಣಾಶಾಲಿಗಳಾದ ಪೂರ್ಣಪ್ರಜ್ಞಾಚಾರ್ಯರು ನನಗೆ ಜ್ಞಾನೋದಯ ಮಾಡಿಸಿ ನಾನು ಹೋಗುತ್ತಿದ್ದ ದುರ್ಮಾರ್ಗದಿಂದ ನನ್ನನ್ನು ಉದ್ಧಾರಮಾಡಿ ಶ್ರೇಷ್ಠವಾದ ವೈಷ್ಣವದೀಕ್ಷೆಯನ್ನು ಕೊಟ್ಟು ಶ್ರೀಮದ್ವೈಷ್ಣವಸಿದ್ಧಾಂತವೆಂಬ ಸನ್ಮಾರ್ಗದಲ್ಲೇ ಪ್ರವೃತ್ತನಾಗುವಂತೆ ಮಾಡಿದರು. ಅಂಥಾ ಪೂರ್ಣಪ್ರಜ್ಞಾಚಾರ್ಯರಿಗೆ ಭಕ್ತಿಪೂರ್ವಕ ನಮಿಸುತ್ತೇನೆಂದು ಭಾವ.

೧೧. ಪರಮಾತ್ಮನ ಆಶ್ವಾಸನ

381. ಅವತಾರಿಕೆ—(ಲೇ.) ಹಿಂದಿನ ಶ್ಲೋಕದಲ್ಲಿ 'ನಾನು ಶ್ರೀವೈಷ್ಣವಸಿದ್ಧಾಂತವೆಂಬ ಸನ್ಮಾರ್ಗದಲ್ಲಿ ನಿಯೋಗಿಸಲ್ಪಟ್ಟಿನು' ಎಂದು ಹೇಳಿದರು. ಆ ವೈಷ್ಣವದೀಕ್ಷೆ ಇದ್ದರೇ ಸಾಕು, ಅವನನ್ನು ಭಗವಂತನೇ ಸಲಹುತ್ತಾನೆ, ಏನೂ ಭಯಪಡಬೇಕಾಗಿಲ್ಲ ಎಂದು ತೋರಿಸುವುದಕ್ಕೆ ಶ್ರೀಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ (೯ ಅಧ್ಯಾ. ೨೨ ಶ್ಲೋ.) ಹೇಳಿರುವ ಆಶ್ವಾಸನವಾಕ್ಯವನ್ನು ನೆನಪುಮಾಡಿಕೊಡುತ್ತಾರೆ—ಅನನ್ಯಾ.... ಇತಿ ॥

ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್ ॥ ೧೧ ॥

ಶಬ್ದಾರ್ಥವಿವರಣೆ—ಅನನ್ಯಾಃ ಶಬ್ದಕ್ಕೆ ರಾಯರು ಗೀತಾವಿವೃತಿಯಲ್ಲಿ 'ನ ವಿದ್ಯತೇ ಅನ್ಯಶ್ಚಿಂತ್ಯತ್ವೇನ ಯೇಷಾಂ ತೇ ಅನನ್ಯಾಃ' ಎಂದರೆ ಯಾರು ಭಗವಂತನಲ್ಲದೆ ಬೇರೆ ಯಾರನ್ನೂ ಉಪಾಸನೆಯೇ ಮಾಡುವುದಿಲ್ಲವೋ ಅವರು ಎಂದು ಅರ್ಥಮಾಡಿದ್ದಾರೆ ; ಇದರಲ್ಲಿ 'ಕೇವಲ ಭಗವಂತನನ್ನೇ ಉಪಾಸನೆ ಮಾಡುವವರು' ಎನ್ನುವುದಕ್ಕಿಂತ ಹೆಚ್ಚಿನ ಭಾವವಿದೆ. ಬೇರೆ ಯಾರನ್ನೂ ಯಾವ ಸಂದರ್ಭದಲ್ಲೂ ಚಿಂತಿಸದೆ ಕೇವಲ ಪರಮಾತ್ಮನನ್ನೇ ಆರಾಧಿಸುವ ಎಂದು ಭಾವ. ಪರ್ಯುಪಾಸತೇ ಎಂಬಲ್ಲಿ ಪರಿ ಉಪಸರ್ಗ ಭಕ್ತ್ಯುದ್ರೇಕವನ್ನು ಸೂಚಿಸುತ್ತದೆ. ಪರ್ಯುಪಾಸತೇ—ಭಕ್ತ್ಯುದ್ರೇಕದಿಂದ ಆರಾಧಿಸುತ್ತಾರೋ. ನಿತ್ಯ-ಅಭಿ-ಯುಕ್ತಾನಾಂ—ನಿತ್ಯ—ನಿರಂತರವಾಗಿ, ಹಗಲಿರುಳೂ, ಅಭಿ-(ಎಲ್ಲ ರೀತಿಯಿಂದ ಎಂದರೆ) ಎಲ್ಲಾ ಸ್ಥಳಗಳಲ್ಲೂ ಶರೀರದ ಸಕಲೇಂದ್ರಿಯಗಳಿಂದಲೂ ಮನಸ್ಸಿನಿಂದಲೂ, ಯುಕ್ತಾನಾಂ—ಭಗವತ್ಸೇವೆಯಲ್ಲಿ ಉದ್ಯುಕ್ತರಾದ ಎಂದರ್ಥ ; ಅಥವಾ ನಿತ್ಯ-ನಿರಂತರವಾಗಿ ಅಭಿಯುಕ್ತಾನಾಂ—ಅವನ ಸ್ಮರಣೆಯಲ್ಲೇ ನಿರತರಾದ ಎಂದೂ

ಅರ್ಥವಾಗುತ್ತದೆ. ಯೋಗಕ್ಷೇಮಂ ಎಂಬಲ್ಲಿ ಎರಡು ರೀತಿ ಅರ್ಥ ಹೇಳಬಹುದು—(ಎ) ಯೋಗವನ್ನೂ ಮತ್ತು ಕ್ಷೇಮವನ್ನೂ ಎಡರನ್ನೂ ಅಥವಾ (ಬಿ) ಯೋಗದ ಕ್ಷೇಮವನ್ನು. ಈಗ ಎರಡೂ ಪದಗಳ ಅರ್ಥ ಹೇಳುತ್ತಾರೆ—ಅಪ್ರಾಪ್ತಪ್ರಾಪ್ತಿರ್ಯೋಗೋ ಮೋಕ್ಷರೂಪಃ। ಯುಜ್ ಧಾತುವಿಗೆ ಸೇರಿಸು, ಜೋಡಿಸು ಎಂದರ್ಥವಿರುವುದರಿಂದ ಯೋಗ ಎಂದರೆ ದೊರಕದೇ ಇದ್ದದ್ದನ್ನು ದೊರಕಿಸುವುದು ಎಂದರ್ಥ. ಪ್ರಕೃತ ಸಂದರ್ಭದಲ್ಲಿ ಅದು 'ಮೋಕ್ಷ'ವೇ ಆಗುತ್ತದೆ. ಪ್ರಾಪ್ತಸ್ಯ ಪರಿರಕ್ಷಣಂ ಕ್ಷೇಮಃ। ಸಿಕ್ಕಿದ್ದು ನಾಶವಾಗದಂತೆ ರಕ್ಷಿಸುವುದಕ್ಕೆ ಕ್ಷೇಮವೆಂದು ಹೆಸರು. ಪ್ರಕೃತಸಂದರ್ಭದಲ್ಲಿ ಪ್ರಾಪ್ತವಾದ ಮೋಕ್ಷವು ಕೈಬಿಟ್ಟುಹೋಗದಂತೆ ಅದನ್ನು ಅನಂತಕಾಲದವರೆಗೆ ರಕ್ಷಿಸುವುದು ಎಂದರ್ಥ. (ಎ) ಬೇರೆ ಬೇರೆ ಎಂದಿಟ್ಟುಕೊಂಡರೆ ಅಲಭ್ಯವಾದ ಮೋಕ್ಷವನ್ನೂ ಕೊಡುತ್ತೇನೆ (ಯೋಗ), ದೊರಕಿದ ಮೋಕ್ಷ ಕೈಬಿಟ್ಟುಹೋಗದಂತೆ ಅದನ್ನು ಅನಂತಕಾಲದವರೆಗೆ ಸಂರಕ್ಷಣೆಯನ್ನೂ ಮಾಡುತ್ತೇನೆ ಎಂದರ್ಥ. (ಬಿ) ಎರಡನೇ ಅನ್ವಯ ರೀತ್ಯಾ ದೊರಕಿದ ಮೋಕ್ಷವನ್ನು ಕೊನೆಗೊಳ್ಳದಂತೆ ರಕ್ಷಿಸುವೆನು ಎಂದರ್ಥ.

ಅನ್ವಯಾರ್ಥ— ಯೇ-ಯಾವ ; ಜನಾಃ-ಜನರು (ಭಕ್ತಜನರು) ; ಅನನ್ಯಾಃ-ಕಾಯವಾಚಾಮನಸಾಪಿ ಬೇರೆ ಯಾರನ್ನೂ ಉಪಾಸನೆ ಮಾಡದೆ ಇರುವವರಾಗಿ ; ಮಾಂ-ನನ್ನನ್ನೇ ; ಚಿಂತಯಂತಃ-ಆರಾಧಿಸುತ್ತಾ ; ಮಾಂ-ನನ್ನನ್ನೇ) ಪರ್ಯುಪಾಸತೇ-ಭಕ್ತ್ಯುದ್ರೇಕದಿಂದ ಆರಾಧಿಸುತ್ತಾರೋ; ನಿತ್ಯಾಭಿಯುಕ್ತಾನಾಂ-ನಿರಂತರವಾಗಿ ಸರ್ವಸ್ಥಳಗಳಲ್ಲೂ ಶರೀರದ ಸಕಲೇಂದ್ರಿಯಗಳಿಂದಲೂ ಪರಮಾತ್ಮನ ಸೇವೆಯಲ್ಲೇ ನಿರತರಾದ ಅಥವಾ ಹಗಲಿರುಳೆನ್ನದೆ ಅವಿಚ್ಛಿನ್ನವಾಗಿ ಅವನ ಸ್ಮರಣೆಯನ್ನೇ ಮಾಡುತ್ತಿರುವ ; ತೇಷಾಂ-ಅವರ (ಆ ಭಕ್ತರ) ; ಯೋಗ-ಕ್ಷೇಮಂ-ಮೋಕ್ಷರೂಪಫಲ-ದೊರಕುವುದನ್ನೂ (ಯೋಗಂ) ಅದು ಕೈಬಿಟ್ಟುಹೋಗದಂತೆ ಅನಂತಕಾಲ-ರಕ್ಷಣೆಯ (ಕ್ಷೇಮ) ಭಾರವನ್ನೂ ಅಥವಾ ಪ್ರಾಪ್ತವಾದ ಮೋಕ್ಷವನ್ನು ಅನಂತಕಾಲ ಅನುಭವಿಸುವುದನ್ನೂ ; ಅಹಂ-ನಾನು ; ವಹಾಮಿ-ವಹಿಸಿಕೊಳ್ಳುತ್ತೇನೆ.

ಭಾವಾರ್ಥ—ಯಾವ ವಿಷ್ಣುಭಕ್ತರು ಬೇರೆ ಯಾವ ದೇವತೆಯನ್ನೂ ಯಾವ ಸಂದರ್ಭದಲ್ಲೂ ನಂಬಿ ಯಾವ ರೀತಿಯಿಂದಲೂ ಸ್ವತಂತ್ರತ್ವೇನ ಆರಾಧಿಸದೆ ಸರ್ವದಾ ಸರ್ವರೀತಿಯಿಂದಲೂ ನನ್ನನ್ನೇ ನಂಬಿ ಆರಾಧಿಸುತ್ತಾರೋ ಮತ್ತು ಎಲ್ಲಿದ್ದರೂ ಹಗಲಿರುಳೂ ಶರೀರದ ಸಕಲೇಂದ್ರಿಯಗಳಿಂದಲೂ ನನ್ನನ್ನೇ ಉಪಾಸನೆಮಾಡುತ್ತಾ, ಅವಿಚ್ಛಿನ್ನವಾಗಿ ಕೂತಾಗ ನಿಂತಾಗ ಮಲಗಿದಾಗಲೆಲ್ಲಾ ನನ್ನ ಸ್ಮರಣೆಯನ್ನೇ ಮಾಡುತ್ತಿರುತ್ತಾರೋ ಅಂತಹ ಅವಿಚ್ಛಿನ್ನಭಕ್ತರಿಗೆ ಮೋಕ್ಷಪ್ರಾಪ್ತಿಯಾಗುವ (ಯೋಗ) ಭಾರವನ್ನೂ, ಹಾಗೆ ಪ್ರಾಪ್ತವಾದ ಆ ಮೋಕ್ಷಸುಖವನ್ನು ಅವರು ಅನಂತಕಾಲದ ವರೆಗೆ ಅನುಭವಿಸುವ ಹೊಣೆಗಾರಿಕೆಯನ್ನೂ ನಾನು ವಹಿಸಿಕೊಂಡಿದ್ದೇನೆ ಎಂದು ಕೃಷ್ಣಪರಮಾತ್ಮ ಆಶ್ವಾಸನ ಕೊಟ್ಟಿದ್ದಾನೆ. (ಇದರಿಂದ ಮಧ್ವಾಚಾರ್ಯರು ತೋರಿಸಿಕೊಟ್ಟ ಮಾರ್ಗದಲ್ಲೇ ನಾನು ಹೋಗುತ್ತಿರುವುದರಿಂದ ಶ್ರೀಕೃಷ್ಣನೇ ನನ್ನ ಯೋಗಕ್ಷೇಮವನ್ನು ವಹಿಸಿಕೊಂಡಿದ್ದಾನೆ, ಇನ್ನು ನನಗೇಕೆ ಚಿಂತೆ ಎಂಬ ಭಾವ ಗರ್ಭಿತವಾಗಿದೆ.)

ವಿಶೇಷಾರ್ಥ—ಅನನ್ಯಾಃ ಎಂಬಲ್ಲಿ ವಿಷ್ಣುಪರಿವಾರತ್ವೇನ ತಿಳಿದು ರಮಾಬ್ರಹ್ಮಾದಿಗಳನ್ನು ಆರಾಧಿಸಿದರೂ ಅದು ವಿಷ್ಣುಪೂಜೆಯೇ ಆಗುವುದರಿಂದ ನಿಷಿದ್ಧವಲ್ಲ ; ಸ್ವತಂತ್ರತ್ವೇನ ಆರಾಧಿಸುವುದಾಗಲಿ, ಕಾಮ್ಯಫಲೇಚ್ಛೆಯಿಂದಾಗಲಿ ಆರಾಧಿಸುವುದು ಮಾತ್ರ ನಿಷಿದ್ಧ. ಭಗವದ್ಭಕ್ತರು 'ಅನನ್ಯಾಃ' ಎಂದದ್ದರಿಂದ ಆ ರೀತಿ ಇತರ ದೇವತೆಗಳನ್ನು ಆರಾಧಿಸುವುದಿಲ್ಲವೆಂದೂ, ಪರ್ಯುಪಾಸತೇ ಎಂಬಲ್ಲಿ ಪರಿ ಉಪಸರ್ಗದಿಂದ ಭಕ್ತ್ಯುದ್ರೇಕದಿಂದ ಪೂಜಿಸುತ್ತಾರೆಂತಲೂ, ಮಾಂ ಚಿಂತಯಂತಃ ಎಂದದ್ದರಿಂದ ಅನ್ಯಫಲಾಪೇಕ್ಷೆ ಮಾಡುವುದಿಲ್ಲವೆಂತಲೂ, ನಿತ್ಯಾಭಿಯುಕ್ತಾನಾಂ ಎಂದದ್ದರಿಂದ ಸರ್ವತ್ರ-ಸರ್ವದಾ ಆ ಭಗವಂತನನ್ನೇ ಸ್ಮರಿಸುತ್ತಿರುತ್ತಾರೆಂತಲೂ ಹೇಳಿದಂತಾಯಿತು.

೧೨. ಪರಮಾತ್ಮನ ಶರಣಾಗತಿ

382. ಅವತಾರಿಕೆ—(ಲೇ.) ಹಿಂದಿನ ಶ್ಲೋಕದಲ್ಲಿ ಬಂದ 'ನಿತ್ಯಾಭಿಯುಕ್ತತ್ವ' ಎಂದರೆ ಹೀಗಿರಬೇಕೆಂದು ಹೇಳುತ್ತಾ ಶ್ರೀಮದಾ-

ಚಾರ್ಯರು ತಾತ್ಪರ್ಯನಿರ್ಣಯದ ಕಟ್ಟಕಡೆಯಲ್ಲಿ (೩೨ಅ., ೧೮೨ ಶ್ಲೋ.) ತೋರಿಸಿಕೊಡುತ್ತಾರೆ—ಯಃ ಸರ್ವೇತಿ। (ಉಡುಪಿ ಪುಸ್ತಕ) ಬೇರೆ ಫಲವನ್ನು ಬಯಸದೆ ಶ್ರೀಹರಿಪ್ರೀತಿಯನ್ನು ಮಾತ್ರ ಅಪೇಕ್ಷಿಸುವ ಶ್ರೀ ಮಧ್ವಾಚಾರ್ಯರ ವಚನವನ್ನು ಹೇಳುತ್ತಾರೆ.

ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ।
ಪ್ರೀಯತಾಂ ಪ್ರೀತ ಏವಾಲಂ
ವಿಷ್ಣುರ್ಮೇ ಪರಮಃ ಸುಹೃತ್ ॥೧೨॥

ಅನ್ವಯಾರ್ಥ—ಯಃ-ಯಾವ ಭಗವಂತನನ್ನು ; ಸರ್ವಗುಣಸಂಪೂರ್ಣಃ—ಜ್ಞಾನಬಲಾನಂದಾದಿ ಅನಂತಗುಣಗಳಿಂದ ಪರಿಪೂರ್ಣನಾಗಿದ್ದಾನೋ ; ಸರ್ವದೋಷವಿವರ್ಜಿತಃ-ಅಜ್ಞಾನಪಾರತಂತ್ರ್ಯಾದಿ ಸಮಸ್ತದೋಷಗಳಿಂದಲೂ (ವಿ) ಸಂಪೂರ್ಣವಾಗಿ ದೂರನಾಗಿದ್ದಾನೋ ; (ಅದಕಾರಣವೇ) ಪರಮಃ-ಸರ್ವೋತ್ತಮನೂ ; ಮೇ-ನನಗೆ, ಸುಹೃತ್-ಅತ್ಯಂತ ಆಪ್ತನೂ ಅಥವಾ (ಥ.) ಅನಿಮಿತ್ತ ಉಪಕಾರಿಯೂ ಅಥವಾ (ಥ.) ಸರ್ವದಾ ಸನ್ನಿಹಿತನೂ, ಪೋಷಕನೂ ಆದ; ವಿಷ್ಣುಃ-ಸಕಲ ವೇದಪ್ರತಿಪಾದ್ಯನಾದ ಆ ವಿಷ್ಣುವು ; ಪ್ರೀತಃ ಏವ-ಸಂತುಷ್ಟನೇ ಆಗಿದ್ದರೂ ಸಹ ; ಮೇ-ನನಗೆ, ಅಲಂ ಪ್ರೀಯತಾಂ-ಮತ್ತಷ್ಟು ಸುಪ್ರಸನ್ನನಾಗಲಿ.

ವಿಶೇಷಾರ್ಥ—**ಸರ್ವಗುಣ** ಎಂದರೆ ಟೀಕಾರಾಯರು ತತ್ವಪ್ರಕಾಶಿಕಾದಲ್ಲಿ ಹೇಳಿದಂತೆ 'ಶುದ್ಧಾನಂದ-ಉರುಸಂಪಿತ್—ದ್ಯುತಿ ಬಲ-ಬಹುಲೌದಾರ್ಯ-ವೀರ್ಯಾದಿ' ಅನಂತ ಕಲ್ಯಾಣಗುಣಗಳೆಂದರ್ಥ. ಶುದ್ಧ ಎಂದರೆ ನಿರವಧಿಕವಾದ, ನಿತ್ಯವಾದ ಎಂದರ್ಥ. ಬ್ರಹ್ಮಸೂತ್ರಗಳ ಪ್ರಥಮಾಧ್ಯಾಯದಲ್ಲಿ ಪರ್ಯಾಯವಲ್ಲದ ಅನಂತ ಪದಗಳು ಆ ಪರಮಾತ್ಮನನ್ನೇ ಹೇಳುವುದರಿಂದ ಆ ಪರಮಾತ್ಮನಲ್ಲಿ ಆ ಅನಂತಗುಣಗಳೂ ಅನಂತವಾಗಿ ತುಂಬಿವೆ ಎಂದು ತೋರಿಸಿದ್ದಾರೆ. **ಸಂ**—ಉಪಪದ ಅನಂತತ್ವದ್ಯೋತಕ. **ಸರ್ವದೋಷ** ಶಬ್ದದಿಂದ ಚಿಂತಾ-ಸಂತಾಪ. ಪುಣ್ಯಪಾಪಲೇಪ-ಜನನ-ಮರಣ ಅಜ್ಞಾನಾದಿಸಕಲ ದುಃಖಗಳನ್ನೂ ಗ್ರಹಿಸಬೇಕು. **ವಿ-ವರ್ಜಿತಃ** ಎಂಬಲ್ಲಿ ವಿ-ಉಪಸರ್ಗದಿಂದ (ಥ.) ವಿಶೇಷವಾಗಿ ಎಂದರೆ ಈಶತ್ತೂ ಇಲ್ಲದಂತೆ ಎಂದರ್ಥ ; ಅದನ್ನೇ

ಚಂದ್ರಿಕಾದಲ್ಲಿ ವ್ಯಾಸರಾಯರು 'ಅಸ್ಪೃಷ್ಟದೋಷ-ಗಂಧಾಯ' ಎಂದು ವರ್ಣಿಸಿದ್ದಾರೆ. ವೇದಗಳು 'ತಂ ಯಥಾ ಯಥೋಪಾಸತೇ ತಥೈವ ಭವತಿ' ಎಂದರೆ ಆ ಭಗವಂತನನ್ನು ಭಕ್ತನು ಯಾವ ರೀತಿ ಉಪಾಸನೆ ಮಾಡು-ತ್ತಾನೋ ಆ ರೀತಿಯೇ ಆಗುತ್ತಾನೆ ಎಂದು ಹೇಳಿರುವುದರಿಂದ ಭಗವಂತನಲ್ಲಿ ಆನಂದಾದಿಗುಣಗಳು ಇವೆ ಎಂದು ಧ್ಯಾನಮಾಡುವುದರಿಂದ ನಮ್ಮಲ್ಲೂ ನಮ್ಮ ಆ ಆನಂದಾದಿಗುಣಗಳು ಅಭಿವ್ಯಕ್ತವಾಗುತ್ತವೆ. ಆದ್ದರಿಂದ ಅವನನ್ನು ಗುಣ-ಪೂರ್ಣನೆಂದು ಆರಾಧಿಸಬೇಕು. ಇನ್ನು ಆ ಭಗವಂತ ದುಃಖಾಜ್ಞಾನಾದಿ ದೋಷದೂರನೆಂದು ಧ್ಯಾನಿಸಿದರೆ ನಮ್ಮ ಅಜ್ಞಾನ ದುಃಖಾದಿ ದೋಷಗಳು ದೂರವಾಗುವುವು ಆದಕಾರಣವೇ ಎರಡು ವಿಶೇಷಣಗಳನ್ನು ಕೊಟ್ಟಿದ್ದಾರೆ. ಸುಹೃಚ್ಛಬ್ದಾರ್ಥವನ್ನು ಗೀತಾಭಾಷ್ಯದಲ್ಲಿ ಅನಿಮಿತ್ತೋಪಕಾರೀ ಎಂದು ಹೇಳಿದ್ದಾರೆ. ಹೃತ್ ಎಂದರೆ ಹೃದಯ, ಸು—ಚೆನ್ನಾಗಿ ಎಂದಾಗುವುದರಿಂದ ಸರ್ವದಾ ಹೃದಯದಲ್ಲಿ ಸನ್ನಿಹಿತನಾಗಿರುವ ಎಂದೂ, ಸು ಎಂದರೆ ಪೋಷಕ-ನೆಂದೂ ಅರ್ಥ ಹೇಳಬಹುದು. ಮೇ—ನನಗೆ, ಪರಮಃ ಸುಹೃತ್—ಅತ್ಯಂತ ಪ್ರಿಯನಾದ, ಮಿತ್ರ—ಸ್ವಾಮಿ ಎಂಬುದು ಶ್ರೀಮದಾಚಾರ್ಯರಿಗೆ ಮಾತ್ರ ಅನ್ವಯಿಸುತ್ತದೆ. ಪ್ರೀತಃ ಏವ ಅಲಂ ಪ್ರೀಯತಾಂ—ನನ್ನ ಮೇಲೆ ಸದಾ ಪ್ರೀತ(ಪ್ರಸನ್ನ)ನೇ ಆಗಿದ್ದರೂ ಮತ್ತಷ್ಟು ಪ್ರಸನ್ನನಾಗಲಿ ಎಂಬುದು ಆಚಾರ್ಯರ ನಿಷ್ಕಾಮಭಕ್ತಿಯನ್ನು ಸೂಚಿಸುತ್ತದೆ.

ಭಾವಾರ್ಥ—ಆ ಭಗವಂತ ಶ್ರೀವಿಷ್ಣು ಅನಂತಶಬ್ದವಾಚ್ಯನಾಗಿ ಅನಂತಾನಂತಗುಣಪರಿಪೂರ್ಣನಾಗಿದ್ದಾನೆ. ದುಃಖಾಜ್ಞಾನಪಾರತಂತ್ರ್ಯಾದಿ ಸಕಲ ದೋಷಗಳಿಂದಲೂ ಅತ್ಯಂತ ದೂರನಾಗಿದ್ದಾನೆ. ಆದಕಾರಣವೇ ಆ ಸ್ವಾಮಿ ಸರ್ವೋತ್ತಮನಾಗಿದ್ದಾನೆ. ಅವನು ನನಗೂ ಪ್ರೇರಕನಾಗಿ ನನ್ನ ಹೃದಯದಲ್ಲೇ ವಾಸಿಸುತ್ತಾ ನನಗೆ ನಿತ್ಯವೂ ಗೋಚರನಾಗಿದ್ದು ನನಗೆ ಅತ್ಯಂತ ಪ್ರಿಯನಾಗಿದ್ದಾನೆ. ಅವನು ಸದಾ ನನ್ನ ಮೇಲೆ ಸದಾ ಪ್ರಸನ್ನನೇ ಆಗಿದ್ದರೂ ಈ ಸೇವೆಯಿಂದ, ಈ ಸ್ತೋತ್ರದಿಂದ ಮತ್ತಷ್ಟು ಸುಪ್ರಸನ್ನ ನಾಗಲಿ. ನನಗೆ ಬೇರೆ ಯಾವ ಅಭಿಲಾಷೆಯೂ ಇಲ್ಲ ಎಂಬುದೇ ಶ್ರೀಮದಾ-ಚಾರ್ಯರ ಹೃದ್ಗತ ಭಾವ.

೧೩. ಹಿರಿಯರಾದ ಮಹಾತ್ಮರು

383. ಅವತಾರಿಕೆ—(ಲೇ.) ವಿಷ್ಣುರೂಪದೇವತಾಸ್ತುತಿಯನ್ನು ಮಾಡಿದ ಬಳಿಕ ಗುರುಸ್ಮರಣೆಯನ್ನೂ ಮಾಡುತ್ತಾರೆ—ಸೂಕ್ತೀತಿ ।

ಸೂಕ್ತಿರತ್ನಾಕರೇ ರಮ್ಯೇ ಮೂಲರಾಮಾಯಣಾರ್ಣವೇ ।
ವಿಹರಂತೋ ಮಹೀಯಾಂಸಃ
ಪ್ರೀಯಂತಾಂ ಗುರವೋ ಮಮ ॥ ೧೩ ॥

ಅನ್ವಯಾರ್ಥ—ಸೂಕ್ತಿರತ್ನಾಕರೇ-ಹಿತಬೋಧಕವಾದ ಸೂಕ್ತಿಃ-ಗಳೆಂಬ (ಶ್ಲಾಘ್ಯವಾದ ನುಡಿಗಳೆಂಬ) ರತ್ನಗಳಿಗೆ ಗಣಿಯಂತಿರುವ ; ರಮ್ಯೇ-ಮನೋಹರವಾದ ; ಮೂಲರಾಮಾಯಣ-ಅರ್ಣವೇ-ಮೂಲರಾಮಾಯಣವೆಂಬ ಮಹಾ ಸಾಗರದಲ್ಲಿ ; ವಿಹರಂತಃ-ವಿಹಾರಮಾಡುತ್ತಿರುವ ; ಮಹೀಯಾಂಸಃ-ಪೂಜ್ಯರೂ ಮಹನೀಯರೂ ಆದ ; ಮಮ-ನನ್ನ ; ಗುರವಃ-ಗುರುಗಳೆಲ್ಲರೂ ; ಮಮ-ನನ್ನ ಮೇಲೆ ; ಪ್ರೀಯಂತಾಂ-ಪ್ರಸನ್ನರಾಗಲಿ.

ಭಾವಾರ್ಥ—ಮೂಲರಾಮಾಯಣವು ಶತಕೋಟಿ ವಿಸ್ತಾರವಾಗಿದೆ-ಯಂತೆ. ಸಮುದ್ರದಲ್ಲಿ ಹೇಗೆ ಅಸಂಖ್ಯ ರತ್ನಗಳು ಅಡಗಿವೆಯೋ ಹಾಗೆ ಈ ಮೂಲರಾಮಾಯಣವು ಅಸಂಖ್ಯ ಸದುಕ್ತಿಗಳಿಗೆ ಗಣಿಯಾಗಿದೆ. ಆದ್ದರಿಂದಲೇ ಅದು ಪಠಿಸುವವರಿಗೆ ಅತ್ಯಂತ ಮನೋಹರವಾಗಿ ಆಕರ್ಷಣೀಯವಾಗಿದೆ. ಅಪಾರವಾದ ಮಹಾಸಾಗರದಂತಿರುವ ಈ ಮೂಲರಾಮಾಯಣದ ಅಧ್ಯಯನದಲ್ಲಿ ನಿರತರಾದ ದೇವರ್ಷಿಗಂಧರ್ವಾದಿಗಳೂ ಹನುಮ-ಭೀಮ-ಮಧ್ವಾದಿ ಅವತಾರತ್ರಯವೂ ನನಗೆ ಮುಖ್ಯಗುರುಗಳು. ಅವರೆಲ್ಲರೂ ನನ್ನ ಮೇಲೆ ಪ್ರಸನ್ನರಾಗಿ ನನಗೆ ಜ್ಞಾನಪ್ರದಾನ ಮಾಡಲಿ ಎಂಬುದೇ ಮುಖ್ಯಾಭಿಪ್ರಾಯ.

೧೪. ಹನೂಮಂತನ ದ್ವಾದಶನಾಮಾವಳಿ

384. ಅವತಾರಿಕೆ—(ಲೇ.) ಇಲ್ಲಿಂದ ಮುಂದೆ ಅವತಾರತ್ರಯದ ದ್ವಾದಶನಾಮಾವಳಿಗಳನ್ನು ಪಠಿಸುತ್ತಾರೆ. ಹೆಚ್ಚು ಪ್ರಚಾರದಲ್ಲಿರುವ ಖಿಲವಾಯುಸ್ತುತಿಯ ಪಾಠದಲ್ಲಿ ಹನುಮದ್ದ್ವಾದಶನಾಮಾವಳಿಗೂ

ಭೀಮನ ದ್ವಾದಶನಾಮಾವಳಿಗೂ ಫಲಶ್ರುತಿ ಕಂಡುಬರುವುದಿಲ್ಲ. ಆದರೆ ಉಡುಪಿಯ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿತವಾದ ವಿಶ್ವಪತಿಟೀಕೆಯ ಕಡೆಯಲ್ಲಿ ಕೊಟ್ಟ ಖಿಲವಾಯುಸ್ತುತಿಯ 'ತೌಳವಪಾಠ'ದಲ್ಲಿ ಈ ಎರಡು (ಹನುಮ-ಭೀಮ) ದ್ವಾದಶನಾಮಾವಳಿಗೂ ಬೇರೆ ಬೇರೆ ಫಲಶ್ರುತಿ ಕೊಟ್ಟಿದೆ. ಆದಕಾರಣ ಕೆಳಗೆ ನಾಮಾವಳಿಗಳ ಜೊತೆಯಲ್ಲೇ ಫಲಶ್ರುತಿಯನ್ನೂ ಸೇರಿಸಿ ಕೊಟ್ಟಿದ್ದೇನೆ. ಯುಕ್ತಿಮಲ್ಲಿಕಾದಲ್ಲಿ ಈ ನಾಮಾವಳಿಗೂ ಶ್ರುತಿಯ ಸಮಾಖ್ಯೆಯನ್ನು ಸೂಚಿಸಿದ್ದಾರೆ; ಇಲ್ಲಿ ಅದನ್ನೂ ಸಂಗ್ರಹಿಸಲಾಗಿದೆ.

ಹನೂ(ನು)ಮಾನಂಜನೀಸೂನು—
ರ್ವಾಯುಪುತ್ರೋ ಮಹಾಬಲಃ ।
ರಾ(ಭೀ)ಮೇಷ್ಟಃ ಫಲ್ಗುನಸಖಃ
ಪಿಂಗಾಕ್ಷೋಽಮಿತವಿಕ್ರಮಃ ॥ ೧೪ ॥
ಉದಧಿಕ್ರಮಣಶ್ಚೈವ ಸೀತಾಸಂದೇಶಹಾ(ಕಾ)ರಕಃ ।
ಲಕ್ಷ್ಮಣಪ್ರಾಣದಾತಾ ಚ ದಶಗ್ರೀವಸ್ಯ ದರ್ಪಹಾ ॥ ೧೫ ॥
ದ್ವಾದಶೈತಾನಿ ನಾಮಾನಿ ಕಪೀಂದ್ರಸ್ಯ ಮಹಾತ್ಮನಃ ।
ಸ್ವಾಪಕಾಲೇ ಪ್ರಬೋಧೇ ಚ
ಯಾತ್ರಾಕಾಲೇ ಚ ಯಃ ಪಠೇತ್ ॥ ೧೬ ॥
ನ ಭಯಂ ವಿದ್ಯತೇ ತಸ್ಯ ಸರ್ವತ್ರ ವಿಜಯೀ ಭವೇತ್ ।
ದುಃಸ್ವಪ್ನಾನಿ ವಿನಶ್ಯಂತಿ ಕ್ಷೀಯಂತೇ ಪಾಪರಾಶಯಃ ॥೧೭॥

ಅರ್ಥವಿವರಣೆ—೧. ಹನುಃ (ಹನೂರ್ವಾ) ಜ್ಞಾನಂ ಅಸ್ಯಾಸ್ತೀತಿ ಹನು(ನೂ)ಮಾನ್—ಹನು ಎಂದರೆ ಜ್ಞಾನ, ಅದುಳ್ಳವನಾದ್ದರಿಂದ ಹನೂಮಾನ್. (ಮಾನ್ ಎಂಬುದು ಪುಲ್ಲಿಂಗ ಪ್ರಥಮಾ ವಿಭಕ್ತಿ, ಏಕವಚನದಲ್ಲಿ ಬರುವ ರೂಪ. ಇದಕ್ಕೆ ವ್ಯಾಕರಣದಲ್ಲಿ ಮತುಪ್ ಪ್ರತ್ಯಯ ಎಂದು ಹೇಳುತ್ತಾರೆ. 'ತದಸ್ಯಾಸ್ತ್ಯಸ್ಮಿನ್' ಅದು ಇವನಿಗೆ ಅಥವಾ ಇವನಲ್ಲಿ ಇದೆ ಎಂಬ ಅರ್ಥದಲ್ಲಿ ಈ ಪ್ರತ್ಯಯ ಬರುತ್ತದೆ. ಪಾ. ೫/೨/೯೪). ಈ ಶಬ್ದವನ್ನು ಶ್ರುತಿಯು ಮತಿ ಶಬ್ದದಿಂದ ನಿರ್ದೇಶಿಸಿತು. ೨. ಅಂಜನ್ಯಾಃ ಸೂನುಃ—ಪುತ್ರಃ ಅಂಜನೀಸೂನುಃ. ಅಂಜನಿಯ ಮಗ ಅಥವಾ ಆಂಜನೇಯ. 'ಆದಿನ್ಮಾತ್ರ್ಯಾರಾ-ವಿಶತ್' ಎಂಬುದು ಇದಕ್ಕೆ ಸಮಾಖ್ಯೆ. ೩. ವಾಯೋಃ ಪುತ್ರಃ ವಾಯು-

ಪುತ್ರಃ, ಪ್ರಥಮಂ ವಪುಃ ಎಂಬ ಅಧ್ಯಾಹೃತಪದಗಳೇ ಇದಕ್ಕೆ ಸಮಾಖ್ಯೆ. ೪. ಮಹತ್ ಬಲಂ ಯಸ್ಯ ಸಃ ಮಹಾಬಲಃ- ಮಹಾಬಲಿಷ್ಠನು (ವ್ಯಾಕರಣಾಂಶ) ಮಹತ್‌ಶಬ್ದದ ಮೇಲೆ 'ಆನ್ಮಹತಃ ಸಮಾನಾಧಿಕರಣಜಾತೀಯಯೋಃ' (ಪಾ. ೬/೩/೪೬) ಎಂಬ ಸೂತ್ರದಂತೆ ಆಕಾರಾದೇಶ ಬಂದಿದೆ. ೫. ರಾಮೇಷ್ಟಃ-ರಾಮ ಏವ ಇಷ್ಟಃ ಪ್ರಿಯೋ ಯಸ್ಯ ಸಃ-ಯಾರಿಗೆ ರಾಮನು ಪರಮಪ್ರೇಮಾಸ್ಪದನಾಗಿದ್ದಾನೋ ಅವನು, ರಾಮನೊಬ್ಬನೇ ತನಗೆ ಪರಮಪ್ರೇಮಾಸ್ಪದನೆಂದು ತಿಳಿದಿರುವ ಎಂದರ್ಥ. ಅಥವಾ ರಾಮಸ್ಯ ಇಷ್ಟಃ-ಪ್ರಿಯಃ ಇತಿ ವಾ । ಅಥವಾ ಶ್ರೀರಾಮನಿಗೆ ಅತ್ಯಂತಪ್ರಿಯನಾದವನು ಎಂದರ್ಥ. ಕೆಲವು ಗ್ರಂಥಗಳಲ್ಲಿ (ಪುಸ್ತಕಗಳಲ್ಲಿ) ಭೀಮೇಷ್ಟಃ ಎಂಬ ಪಾಠಾಂತರವೂ ಇದೆ. ಸೌಗಂಧಿಕಾಹರಣಕ್ಕೆ ಹೋಗಿದ್ದಾಗ ಭೀಮನಿಗೆ ಸಹಾಯಮಾಡಿದ್ದರಿಂದ ಈ ನಾಮವೂ ಕೂಡುತ್ತದೆ. ೬. ಫಲ್ಗುನಸಖಃ, ಕೆಲವು ಪುಸ್ತಕಗಳಲ್ಲಿ ಫಾಲ್ಗುನಸಖಃ ಎಂದು ಫಕಾರ ದೀರ್ಘವೂ ಆಗಿದೆ. ಫ(ಫಾ)ಲ್ಗುನಸ್ಯ ಸಖಾ-ಮಿತ್ರಂ—ಅರ್ಜುನನಿಗೆ ಮಿತ್ರನಾದವನು. ಅರ್ಜುನನ ರಥದ ಧ್ವಜದಲ್ಲಿ ಕುಳಿತು ಅವನಿಗೆ ಯುದ್ಧದಲ್ಲಿ ಜಯಗಳಿಸಿಕೊಟ್ಟವನು ಎಂದರ್ಥ. (ವ್ಯಾಕರಣಾಂಶ) ಸಖಿ ಶಬ್ದ ಇಕಾರಾಂತ, ಆದರೆ ಸಮಾಸದ ಕಡೆಯಲ್ಲಿ ಬಂದಾಗ 'ರಾಜಾಹಃಸಖಿಭ್ಯಷ್ಟಚ್' (ಪಾ. ೫/೪/೯೧) ಎಂಬ ಸೂತ್ರದಂತೆ ಟಚ್ ಪ್ರತ್ಯಯ ಬಂದು ಅಕಾರಾಂತವಾಗುತ್ತದೆ. ೭. ಪಿಂಗಾಕ್ಷಃ ಪಿಂಗೇ ಅಕ್ಷಿಣೀ ಯಸ್ಯ ಸಃ ಪಿಂಗಾಕ್ಷಃ-ಪಿಂಗವರ್ಣನೇತ್ರಃ । ಗೋರೋಚನದಂತೆ ಸ್ವಲ್ಪ ಕೆಂಪು ಬೆರೆತ ತಿಳಿಕಪ್ಪುಬಣ್ಣಕ್ಕೆ ಪಿಂಗ ಅಥವಾ ಪಿಂಗಲ ಎಂದು ಹೆಸರು. ಅಂಥಾ ಕಣ್ಣುಳ್ಳವನು ಎಂದರ್ಥ. (ವ್ಯಾಕರಣ) ಅಕ್ಷಿನ್ ನಕಾರಾಂತ ನಪುಂಸಕ ಶಬ್ದ. ಅದು ಬಹುವ್ರೀಹಿಸಮಾಸಾಂತ್ಯದಲ್ಲಿ ಬಂದರೆ 'ಬಹುವ್ರೀಹೌ ಸಕ್ಥ್ಯಕ್ಷ್ಣೋಃ ಸ್ವಾಂಗಾತ್ ಷಚ್' (ಪಾ. ೫/೪/೭೩) ಎಂಬ ಸೂತ್ರದಂತೆ ಷಚ್‌ಪ್ರತ್ಯಯ ಬಂದು ಅಕಾರಾಂತವಾಗುತ್ತದೆ. ಅಕ್ಷಿ। ಅಕ್ಷಿಣೀ। ಅಕ್ಷೀಣಿ, ಆದರೆ ಪಿಂಗಾಕ್ಷಃ । ಪಿಂಗಾಕ್ಷೌ । ಪಿಂಗಾಕ್ಷಾಃ ! ರಾಮಶಬ್ದದಂತೆ. (ಪುರುಷಸೂಕ್ತದ ಸಹಸ್ರಾಕ್ಷಃ ಶಬ್ದವೂ ಹೀಗೆಯೇ.)

೮. ಅಮಿತವಿಕ್ರಮಃ—ಮಿತ ಶಬ್ದ 'ಮಾ' ಅಳಿ, ಅಳತೆಯುಳ್ಳದ್ದು ಎಂಬ ಧಾತುವಿನ ರೂಪವಾದ್ದರಿಂದ (ಮಾ+ಇ+ತ=ಮಿತ) ಅಳತೆ-

ಯುಳ್ಳದ್ದು ಮಿತವಾದ ಎಂದರ್ಥ. ಅದಕ್ಕೆ ವಿರುದ್ಧವಾದುದು ಅಮಿತ–ಮಿತವಿಲ್ಲದ್ದು. ನ ಮಿತಃ ಅಮಿತಃ–ಮಿತಿರಹಿತಃ। ಅಮಿತಃ ವಿಕ್ರಮಃ ಪರಾಕ್ರಮಃ ಯಸ್ಯ ಸಃ ಅಮಿತವಿಕ್ರಮಃ–ಅಪಾರಪರಾಕ್ರಮಃ ಅಪಾರವಾದ(ಎಲ್ಲೆಯಿಲ್ಲದ) ಪರಾಕ್ರಮವುಳ್ಳವನೆಂದರ್ಥ. ಸುಂದರಕಾಂಡದ ಕಥೆಯೇ ಇದಕ್ಕೆ ಸಾಕ್ಷೀಭೂತವಾಗಿದೆ. **೯. ಉದಧಿಕ್ರಮಣಃ**—ಉದಕಾನಿ ಧೀಯಂತೇಽಸ್ಮಿನ್ನಿತಿ ಉದಧಿಃ, ಉದಕಕ್ಕೆ ಆಸರೆಯಾದ್ದರಿಂದ ಸಮುದ್ರಕ್ಕೆ ಉದಧಿ ಎಂದು ಹೆಸರು. (ವ್ಯಾಕರಣ) ಸಮಾಸದಲ್ಲಿ ಉದಕಶಬ್ದಕ್ಕೆ ಉದ ಎಂಬ ಆದೇಶ ಬರುತ್ತದೆ. 'ಉದಕಸ್ಯೋದಃ ಸಂಜ್ಞಾಯಾಮ್' (ಪಾ. ೬/೩/೫೭), ಉದಧೇಃ–ಸಮುದ್ರಸ್ಯ ಕ್ರಮಣಂ–ಉಲ್ಲಂಘನಂ ಯಸ್ಯ (ಅಥವಾ ಯೇನ) ಸಃ ಉದಧಿಕ್ರಮಣಃ। ಕ್ರಮಣ ಎಂದರೆ ದಾಟುವಿಕೆ, ಉಲ್ಲಂಘನ—ಸಮುದ್ರವನ್ನು ಉಲ್ಲಂಘಿಸಿದವನು ಎಂದರ್ಥ. **ಚ+ಏವ** ಎಂಬುವು ಪಾದಪೂರಣಕ್ಕಾಗಿ (ಎಂಟಕ್ಷರ ಭರ್ತಿ ಮಾಡುವುದಕ್ಕಾಗಿ) ಸೇರಿಸಿದ ಅವ್ಯಯುಗಳು. **೧೦. ಸೀತಾಸಂದೇಶ ಹಾ(ಕಾ)ರಕಃ।** ಹರತೀತಿ ಹಾರಕಃ, ಕರೋತೀತಿ ಕಾರಕಃ–ಒಯ್ದವನು ಅಥವಾ ಮಾಡಿದವನು. (ವ್ಯಾಕರಣ) 'ಣ್ವುಲ್‌ತೃಚೌ' (ಪಾ. ೩/೧/೧೩೩) ಎಂಬ ಸೂತ್ರದಂತೆ ಹೃ–ಕೃ ಧಾತುಗಳ ಮೇಲೆ ಕರ್ತ್ರರ್ಥದಲ್ಲಿ ಣ್ವುಲ್ ಪ್ರತ್ಯಯ ಬರುತ್ತದೆ. ಅನಂತರ 'ಯುವೋರನಾಕೌ' (ಪಾ. ೭/೧/೧) ಎಂಬ ಸೂತ್ರದಂತೆ ವು–ಗೆ ಅಕಾದೇಶ ಬರುತ್ತದೆ ಣ್ವುಲ್ ಣಿತ್ ಪ್ರತ್ಯಯವಾದ್ದರಿಂದ ಮೊದಲಲ್ಲಿರುವ ಋಕಾರಕ್ಕೆ 'ಅಚೋ ಞ್ಣಿತಿ' (ಪಾ. ೭/೨/೧೧೫) ಎಂಬ ಸೂತ್ರದಂತೆ ವೃದ್ಧಿ ಬಂದು ಹಾರಕಃ, ಕಾರಕಃ ಎಂಬ ರೂಪಗಳಾಗುತ್ತವೆ. ಸೀತೆಯ ಸಂದೇಶವನ್ನು ರಾಮನಿಗೆ ಒಯ್ದವನು (ಹಾರಕಃ) ಅಥವಾ ಒಯ್ದು ಮಾಡಿದವನು (ಕಾರಕಃ) ಎಂದರ್ಥ. **೧೧. ಲಕ್ಷ್ಮಣಪ್ರಾಣದಾತಾ ಚ**—ದದಾತೀತಿ ದಾತಾ–ಕೊಡುವವನು (ಮೇಲಿನ 'ಣ್ವುಲ್ ತೃಚೌ' ಎಂಬ ಸೂತ್ರದಂತೆ ದಾ–ಕೊಡು ಧಾತುವಿನ ಮೇಲೆ ತೃಚ್ ಪ್ರತ್ಯಯ ಬಂದು ದಾತಾ ಎಂದಾಗಿದೆ.) ಇಂದ್ರಜಿತುವಿನ ಶಕ್ತಿ ಪ್ರಹಾರದಿಂದ ಲಕ್ಷ್ಮಣನಿಗೆ ಮೂರ್ಛೆ ಬಂದಿದ್ದಾಗ ಗಂಧಮಾದನ ಪರ್ವತವನ್ನು ತಂದು ಅವನ ಪ್ರಾಣವನ್ನು ಉಳಿಸಿದ ಕಥೆ ರಾಮಾಯಣದಲ್ಲಿ

ಪ್ರಸಿದ್ಧವಾಗಿದೆ. ಅದನ್ನೇ ಇಲ್ಲಿ 'ಲಕ್ಷ್ಮಣನಿಗೆ ಪ್ರಾಣವನ್ನು ಕೊಟ್ಟವನು (ಉಳಿಸಿದವನು)' ಎಂದು ಹೇಳಿದೆ. **೧೨. ದಶಗ್ರೀವಸ್ಯ ದರ್ಪಹಾ.** ದರ್ಪಂ ಗರ್ವಂ ಹಂತಿ–ನಾಶಯತೀತಿ ದರ್ಪಹಾ–ಗರ್ವವನ್ನು ಅಪಹರಿಸಿದವನು ಎಂದರ್ಥ. (ವ್ಯಾಕರಣ) 'ಬ್ರಹ್ಮಭ್ರೂಣವೃತ್ರೇಷು ಕ್ವಿಪ್' (ಪಾ. ೩/೨/೮೭) ಎಂಬ ಸೂತ್ರದಂತೆ ಕ್ವಿಪ್ ಪ್ರತ್ಯಯ ಬಂದಿದೆ. ದರ್ಪಹಾ । ದರ್ಪಹಣೌ । ದರ್ಪಹಣಃ ಇತ್ಯಾದಿ ರೂಪಗಳು. ರಾವಣನ ಗರ್ವವನ್ನು ಚೂರು ಚೂರು ಮಾಡಿದವನೆಂದರ್ಥ. ವಾಯುಸ್ತುತಿಯ ಇಪ್ಪತ್ತನೇ ಶ್ಲೋಕದಲ್ಲಿ (ದೃಷ್ಟ್ವಾ ದುಷ್ಟಾಧಿಪೋರಃ) ಹೇಳಿದ್ದನ್ನು ನೆನೆಸಿಕೊಳ್ಳಿ.

ಫಲಶ್ರುತಿ—(ತಾತ್ಪರ್ಯ) ಮಹಾತ್ಮನಾದ ಕಪೀಂದ್ರನ ಈ ಹನ್ನೆರಡು ನಾಮಗಳನ್ನು ಮಲಗುವ ಕಾಲದಲ್ಲೂ, ಎಚ್ಚರವಾಗಿದ್ದಾಗಲೂ, ಪ್ರಯಾಣ ಹೊರಟಾಗಲೂ ಯಾರು ಪಠಿಸುತ್ತಾರೋ ಅವರಿಗೆ ಯಾವ ಭಯವೂ ಇಲ್ಲ. ಸರ್ವತ್ರವಿಜಯಶಾಲಿಯಾಗುತ್ತಾನೆ. ದುಸ್ಸ್ವಪ್ನಗಳು ಬೀಳುವುದು ನಿಂತು-ಹೋಗುತ್ತದೆ. ಪಾಪರಾಶಿಗಳು ಸನೆದು ಹೋಗುತ್ತವೆ. (ವ್ಯಾಕರಣ) ಸಂಸ್ಕೃತ-ದಲ್ಲಿಸ್ವಪ್ನಶಬ್ದ ಪುಲ್ಲಿಂಗ, ಆದ್ದರಿಂದ ದುಸ್ಸ್ವಪ್ನಾಶ್ಚ ಎಂದಿರಬೇಕು. ದುಸ್ಸ್ವ-ಪ್ನಾನಿ ಎಂದು ಹೇಗಾಯಿತು ? ಎಂದರೆ ಇದು ಆರ್ಷಪ್ರಯೋಗ ಎಂದು ಸಮಾಧಾನ ಮಾಡಿಕೊಳ್ಳಬೇಕು. (ರಾಮಸ್ಕಂಧಂ ಹನೂಮಂತಂ ವೈನ-ತೇಯಂ ವೃಕೋದರಮ್ । ಶಯನೇ ಯಃ ಪಠೇನ್ನಿತ್ಯಂ ದುಸ್ಸ್ವಪ್ನಂ ತಸ್ಯ ನಶ್ಯತಿ ॥ ಎಂಬಲ್ಲೂ 'ದುಸ್ಸ್ವಪ್ನಂ' ಎಂಬ ನಪುಂಸಕಲಿಂಗವೇ ಇದೆ.)

ನಾಮಗಳಿಗೆ ಶ್ರುತಿಯ ಸಮಾಖ್ಯೆ (ಯು.ಮ) ಋತಸ್ಯ ಉಪ ಹ್ವರತೇ ಎಂಬುದು ರಾಮೇಷ್ವಃ ಎಂಬುದಕ್ಕೂ ಸಾಧತೇ ಎಂದದ್ದರಿಂದ ಮಹಾಬಲಃ ದಶಗ್ರೀವಸ್ಯ ದರ್ಪಹಾ ಎಂಬ ನಾಮಗಳೂ, ಧೇನಾ ಅನಯಂತ ಎಂಬುದು ಅಮಿತವಿಕ್ರಮಃ, ಉದಧಿಕ್ರಮಣಃ, ಸೀತಾಶೋಕವಿನಾಶನಃ (ನಮ್ಮ ಪಾಠ–ಸೀತಾಸಂದೇಶಹಾ(ಕಾ)ರಕಃ ಎಂದಿದೆ) ಎಂಬ ನಾಮಗಳೂ ಹನುಮಚ್ಛ್ರುತಿಯಿಂದ (ಯದೀಮುಪ....ಸಸ್ರುತಃ) ವ್ಯಾಖ್ಯಾತವಾದುವು.

೧೫. ಭೀಮನ ದ್ವಾದಶನಾಮಾವಳಿ

385. ಅವತಾರಿಕೆ—(ಟೀ.) ಹನುಮಂತನ ದ್ವಾದಶನಾಮಗಳನ್ನು ಪಠಿಸಿದ ಬಳಿಕ ದ್ವಿತೀಯಾವತಾರ ಭೀಮಸೇನನ ದ್ವಾದಶನಾಮಾವಳಿಯನ್ನೂ ಪಠಿಸುತ್ತಾರೆ—ಮಾರುತಿರಿತಿ ।

ಮಾರುತಿಃ ಪಾಂಡವೋ ಭೀಮೋ
ಗದಾಪಾಣಿರ್ ವೃಕೋದರಃ ।
ಕೌಂತೇಯಃ ಕೃಷ್ಣದೂತಶ್ಚ
ಭೀಮಸೇನೋ ಮಹಾಬಲಃ ॥ ೧೮ ॥
ಜರಾಸಂಧಾಂತಕೋ ವೀರೋ ದುಶ್ಶಾಸನವಿನಾಶನಃ ।
ಭೀಮಸ್ಯ ದ್ವಾದಶೈತಾನಿ ನಾಮಾನಿ ನಿಯತಂ ಪಠೇತ್ ।
(ಪಾಠಾಂ. ದ್ವಾದಶೈತಾನಿ ಭೀಮಸ್ಯ)
ಆಯುರಾರೋಗ್ಯಸಂಪತ್ತಿ—ಮರಿಪಕ್ಷಕ್ಷಯಂ ಲಭೇತ್ ॥೧೯॥

ವಿವರಣೆ—೧. ಮಾರುತಿಃ-ಮಾರುತಸ್ಯ ಅಪತ್ಯಂ ಪುಮಾನ್ ಮಾರುತಿಃ । ಮಾರುತ ಎಂದರೆ ವಾಯು ; 'ಸಮೀರ-ಮಾರುತ-ಮರುತ್' ಅಮರ. (ವ್ಯಾಕರಣ) 'ತಸ್ಯಾಪತ್ಯಂ' (ಪಾ. ೪/೧/೯೨) ಎಂದರೆ ಇಂಥವನ ಸಂತತಿ, ಶಿಶು ಅಥವಾ ಮಗು ಎಂಬ ಅರ್ಥದಲ್ಲಿ 'ಅತ ಇಞ್' (ಪಾ. ೪/೧/೯೫) ಎಂಬ ಸೂತ್ರದಂತೆ ಇ ಪ್ರತ್ಯಯ ಬಂದಿದೆ. ಅಪತ್ಯ ಎಂಬುದು ಮಗು, ಶಿಶು ಎಂಬಂತೆ ಗಂಡು ಹೆಣ್ಣು ಎರಡಕ್ಕೂ ಅನ್ವಯಿಸುವುದರಿಂದ ಅಪತ್ಯಂ ಪುಮಾನ್-ಗಂಡುಮಗು, ಅಪತ್ಯಂ ಸ್ತ್ರೀ-ಹೆಣ್ಣು ಮಗು ಎಂದು ಸೇರಿಸಿ ಹೇಳುವರು. ಪ್ರಕೃತ ಮಾರುತನ ಗಂಡುಮಗುವಾದ್ದರಿಂದ ಮಾರುತ+ಇ ಸೇರಿ ಮಾರುತಿಃ ಎಂದಾಗಿದೆ. **೨. ಪಾಂಡವಃ**-ಪಾಂಡೋಃ ಅಪತ್ಯಂ ಪುಮಾನ್ ಪಾಂಡವಃ, ಪಾಂಡುರಾಜನ ಗಂಡುಮಗುವಾದ್ದರಿಂದ ಪಾಂಡವ. (ವ್ಯಾಕರಣ) 'ತಸ್ಯಾಪತ್ಯಂ' ಎಂಬ ಮೇಲಿನ ಸೂತ್ರದಂತೆ ಪಾಂಡು ಶಬ್ದದ ಮೇಲೆ ಅಣ್ ಪ್ರತ್ಯಯ ಬರಲು ಪಾಂಡು+ಅ ಎಂದಿರಲು ಉಕಾರದ ಮುಂದೆ ಅಕಾರವಿರುವುದರಿಂದ ಗುಣವಾಗಿ ಪಾಂಡೋ

+ಅ ಎಂದಾಗಲು, ಪುನಃ ಓಕಾರದ ಮುಂದೆ ಅಕಾರ ಬಂದಿರುವುದರಿಂದ ಓಕಾರಕ್ಕೆ ಅವಾದೇಶ (ವಾಂತಾದೇಶಸಂಧಿ) ಬರಲು ಪಾಂಡ್+ಅವ್+ಅ ಸೇರಿ ಪಾಂಡವ ಎಂದಾಗಿದೆ ೩. ಭೀಮಃ ಇದರ ವ್ಯುತ್ಪತ್ತಿಯನ್ನು ಉಪನಿಷ-ದ್ಭಾಷ್ಯೋದಾಹೃತ ಸ್ಮೃತಿಯೇ 'ಭೃತವೋ ಭೀಮ ಇತ್ಯುಕ್ತಃ' (ಖಂಡ ೨73೪,೧ ನೋಡಿ) ಹೇಳಿತು. ಭೀಮಃ ಎಂದರೆ ಭಯಂಕರ ಎಂದೂ ಅರ್ಥ-ವಾಗುತ್ತದೆ. 'ಘೋರಂ ಭೀಮಂ ಭಯಾನಕಂ' ಅಮರ. ದುಷ್ಟರಿಗೆ ಭಯಂಕರನಾಗಿದ್ದುದರಿಂದಲೂ ಅವನಿಗೆ ಈ ಹೆಸರು ಸಲ್ಲುತ್ತದೆ (ಭ.) ೪. ಗದಾಪಾಣಿಃ. ಗದಾ ಪಾಣೌ ಯಸ್ಯ ಸಃ ಗದಾಪಾಣಿಃ–ಕೈಯಲ್ಲಿ ಗದೆ ಹಿಡಿದವನು. (ಇದರ ವಿವರಣೆ ಭೀಮಾವತಾರದಲ್ಲೇ ಬಂದಿದೆ. ಖಂಡ 270-೧(ಎ)(ಎಫ್)ಗಳನ್ನು ನೋಡಿ.) ೫. ವೃಕೋದರಃ. ಅಜ್ಞಜನರು ವೃಕ ಎಂದರೆ ತೋಳ, ಅದರಂತೆ ಉದರ–ಹೊಟ್ಟೆಯುಳ್ಳವನು ಎಂದು ಅರ್ಥಮಾಡುತ್ತಾರೆ. ಇದು ಸರ್ವಥಾ ಅಸಮಂಜಸವೆಂದು ನಾವು ವಾಯು-ಸ್ತುತಿಗೆ ಅರ್ಥ ಹೇಳುವಾಗ 316ನೇ ಖಂಡದಲ್ಲೇ ಸಮರ್ಥಿಸಿದ್ದೇವೆ. ಸರಿಯಾದ ಅರ್ಥ ಏನೆಂದರೆ,

ತೀಕ್ಷ್ಣಶ್ಚೈವ ಪ್ರಚಂಡಶ್ಚ ವೃಕೋ ನಾಮಾನಲೋ ಮತಃ |
ಸ ಪಾಂಡವಸ್ಯ ಜಠರೇ ತೇನ ಭೀಮೋ ವೃಕೋದರಃ ||

ಎಂದು ಭಾರತ ಆದಿಪರ್ವದಲ್ಲಿ ಹೇಳಿದೆಯೆಂದು ಹೊಳವನಹಳ್ಳಿ ಶೇಷಾ-ಚಾರ್ಯರು ಬರೆದ ಗೀತಾಪುಸ್ತಕದಲ್ಲಿ ಹೇಳಿದ್ದಾರೆ. ಅದರಂತೆ ತೀಕ್ಷ್ಣವೂ ಪ್ರಚಂಡವೂ ಆದ ಜಠರಾಗ್ನಿಗೆ ವೃಕ ಎಂದು ಹೆಸರು. ಆ ಜಠರಾಗ್ನಿ ಭೀಮನ ಉದರದಲ್ಲಿದ್ದುದರಿಂದ ಭೀಮನಿಗೆ ವೃಕೋದರನೆಂದು ಹೆಸರು. ಇದರಂತೆಯೇ

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿ ಸ್ಥಿತಿಃ |
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ||

ಎಂದೂ ಮತ್ತೊಂದು ವಿವರಣೆ* ಇದೆ. ಅದರಂತೆ—ಭಕ್ತಿ, ಜ್ಞಾನ,

---

* ಹರಿವಿಠ್ಠಲ ಪ್ರಕಾಶನದವರು ಪ್ರಕಟಿಸಿದ ಶ್ರೀಮದ್ಭಗವದ್ಗೀತಾಸಾರಸುಧಾ ಪುಸ್ತಕದಲ್ಲಿ, ಪುಟ 11.

ವೈರಾಗ್ಯ, ಬುದ್ಧಿಶಕ್ತಿ, ಪ್ರತಿಭೆ, ಓದಿದ್ದನ್ನು ಅಥವಾ ಹೇಳಿದ್ದನ್ನು ಗ್ರಹಿಸುವ ಗ್ರಹಣಶಕ್ತಿ (ಧೃತಿ), ಗ್ರಹಿಸಿದ್ದನ್ನು ಮರೆಯದೆ ನೆನೆಪಿಡುವ ಸ್ಮರಣಶಕ್ತಿ (ಸ್ಮೃತಿ), ಯೋಗ, ಚಲನಶಕ್ತಿ(ಪ್ರಾಣ) ಮತ್ತು ಬಲ ಈ ಹತ್ತು ಗುಣಗಳಿಗೂ 'ವೃಕೋದರ' ಎಂದು ಹೆಸರು. ಅವುಗಳುಳ್ಳವನೇ ವೃಕೋದರ

೬. ಕೌಂತೇಯಃ (ಛ.) ಕುಂತ್ಯಾಃ ಅಪತ್ಯಂ ಪುಮಾನ್ ಕೌಂತೇಯಃ–ಕುಂತಿಯ ಮಗನೆಂದರ್ಥ. (ವ್ಯಾಕರಣ) 'ದ್ವ್ಯಚಃ' (ಪಾ. ೪/೧/೧೨೧) ಎಂಬ ಸೂತ್ರದಂತೆ ಎರಡು ಸ್ವರಗಳುಳ್ಳ ಸ್ತ್ರೀಲಿಂಗಶಬ್ದಗಳ ಮೇಲೆ ಅಪತ್ಯಾರ್ಥದಲ್ಲಿ ಢಕ್ ಪ್ರತ್ಯಯ ಬರುತ್ತದೆ. ಆ ಢಕಾರಕ್ಕೆ 'ಆಯನೇಯೀ—(ಪಾ. ೭/೧/೨) ಎಂಬ ಸೂತ್ರದಂತೆ ಏಯ್ ಎಂಬ ಆದೇಶ ಬರುವುದರಿಂದ ಕುಂತೀ+ಢ=ಕುಂತೀ+ಏಯ ಎಂದಿರಲು 'ಕಿತಿ ಚ' (ಪಾ. ೭/೨/೧೧೮) ಎಂಬ ಸೂತ್ರದಂತೆ ಢಕ್‌ಪ್ರತ್ಯಯ ಕಿತ್ತಾದ್ದರಿಂದ ಆದಿವೃದ್ಧಿ ಬಂದು ಕು ಎಂಬುದು ಕೌ ಆಗುವುದರಿಂದ ಕುಂತೀ+ಏಯ ಎಂಬುದು ಕೌಂತ್+ಏಯ=ಕೌಂತೇಯ ಎಂದಾಗುತ್ತದೆ. ೭. ಕೃಷ್ಣದೂತಃ (ಅರ್ಥ ಸುಲಭವಾಗಿದೆ) ೮. ಭೀಮಸೇನಃ ಇದರ ಅರ್ಥವನ್ನು ತಾತ್ಪರ್ಯನಿರ್ಣಯದಲ್ಲಿ (೧೨೬. ೫೮ಶ್ಲೋ.) ತೋರಿಸಿದ್ದಾರೆ. ಸ ವಾಯುರೇವಾಭವದತ್ರ ಭೀಮಾ ನಾಮಾ ಭೃತಾ ಮಾಃ ಸಕಲಾ ಹಿ ಯಸ್ಮಿನ್ । ಸ ವಿಷ್ಣುನೇಶೇನ ಯುತಃ ಸದೈವ ನಾಮ್ನಾ ಸೇನೋ ಭೀಮಸೇನಸ್ತತೋಽಸೌ ॥ ಅದರಂತೆ ಇನ ಎಂದರೆ ಶ್ರೀವಿಷ್ಣು, ಅವನಿಂದ ಸಹಿತನಾದ್ದರಿಂದ ಸೇನ. ಭೀಮಶ್ಚಾಸೌ ಸೇನಶ್ಚ-ಭೀಮಸೇನಃ । ಖಗಾದಿ ಸಪ್ತವಿದ್ಯೆಗಳಲ್ಲಿ ನಿರತನಾದ್ದರಿಂದಲೂ ದುಷ್ಟರಿಗೆ ಭಯಂಕರನಾದ್ದರಿಂದಲೂ ಭೀಮ, ವಿಷ್ಣುಸಮೇತನಾಗಿರುವುದರಿಂದ ಸೇನ. ಎರಡೂ ಸೇರಿ ಭೀಮಸೇನ ಎಂದಾಗಿದೆ. ೯. ಮಹಾಬಲಃ ಶಬ್ದದ ಅರ್ಥವನ್ನು ಹನುಮನ್ನಾಮಾವಳಿಯಲ್ಲೇ (ಖಂ. 383-2) ವಿವರಿಸಿದೆ. ೧೦. ಜರಾಸಂಧಾಂತಕಃ ಜರಾಸಂಧನನ್ನು ಸಂಹಾರ ಮಾಡಿದವನು. (ಇದರ ವಿವರಣೆ ವಾಯುಸ್ತುತಿಯ ೨೩ನೇ ಶ್ಲೋಕದಲ್ಲಿ ಬಂದಿದೆ. (ಛ.) ಜರಾಸಂಧಸ್ಯ ಅಂತಕಃ ನಾಶಕಃ ಇತಿ ಜರಾಸಂಧಾಂತಕಃ । ೧೧. ಧೀರಃ (ಛ.) ಆರಬ್ಧಾಂತಗಾಮೀ. ಪ್ರಾರಂಭಿಸಿದ ಕೆಲಸವನ್ನು ಮುಗಿಸಿಯೇ ತೀರುವವನು

ಎಂದರ್ಥ. ೧೨. ದುಃಶಾಸನವಿನಾಶನಃ (ಛ) ಉಪಲಕ್ಷಣಂ; ದುಃಶಾಸನ-ದುರ್ಯೋಧನಾದೀನಾಂ ವಿನಾಶನಂ ಯೇನ ಸಃ । ದುರ್ಯೋಧನ ದುಶ್ಶಾಸನಾದಿ ಸಕಲ ಕೌರವರನ್ನೂ ನಾಶಮಾಡಿದವನು ಎಂದರ್ಥ.

ಫಲಶ್ರುತಿ—ಭೀಮನ ಈ ಹನ್ನೆರಡು ನಾಮಗಳನ್ನು ನಿತ್ಯಪಠಿಸುವವರಿಗೆ ಆಯುಸ್ಸು, ಆರೋಗ್ಯ, ಸೌಭಾಗ್ಯ ಮೊದಲಾದ ಸಕಲ ಸಂಪತ್ತುಗಳೂ ಉಂಟಾಗುವುದಲ್ಲದೆ ಅವರ ಸಕಲ ಶತ್ರುಗಳೂ ನಾಶಹೊಂದುವರು.

ಶ್ರುತಿಸಮಾಖ್ಯೆ—ಬಳಿತ್ಥಾಸೂಕ್ತದ ಎರಡನೇ ಮಂತ್ರದಲ್ಲಿ 'ದ್ವಿತೀಯಂ ವಪುಃ' ಎಂದು ಹೇಳಿದ್ದರಿಂದ ಮಾರುತಿಃ, ಪಾಂಡವಃ ನಾಮಗಳೂ ಪೃಕ್ಷಃ ಎಂಬುದರಿಂದ ಮಹಾಬಲಃ ಗದಾಪಾಣಿಃ ಜರಾಸಂಧಾಂತ(ಕಃ)ಕೃತ್, ದುಶ್ಶಾಸನವಿನಾಶನಃ, ವೀರಃ ಎಂಬ ನಾಮಗಳೂ ಪಿತುಮಾನ್ ಎಂಬುದರಿಂದ ವೃಕೋದರಃ ಎಂಬ ನಾಮವೂ 'ಮಾತ್ಯಾಃ ಆವಿಶತ್' (೫ನೇ ಮಂತ್ರ) ಎಂಬುದರಿಂದ 'ಕೃಷ್ಣ(ದೂತಶ್ಚ)ದಯಿತಃ ಎಂಬ ನಾಮವೂ 'ಆಶಯೋ ಮಾತೃಷು' ಎಂಬುದರಿಂದ ಭೀಮನಾಮವೂ ವ್ಯಾಖ್ಯಾತವಾಯಿತು. (ಯು. ಮ.)

೧೬. ಮಧ್ವಾಚಾರ್ಯರ ದ್ವಾದಶ ನಾಮಾವಳಿ

386. ಅವತಾರಿಕೆ—(ಲೀ.) ಹನುಮ-ಭೀಮರ ನಾಮಾವಳಿಗಳನ್ನು ಹೇಳಿದ ಬಳಿಕ 'ತೃತೀಯಮಸ್ಯ' ಎಂಬ ಶ್ರುತಿಯಲ್ಲಿ ಪ್ರತಿಪಾದಿತರಾದ ಮಧ್ವಾಚಾರ್ಯರ ನಾಮಾವಳಿಯನ್ನು ಪಠಿಸುತ್ತಾರೆ-ಪೂರ್ಣಪ್ರಜ್ಞ ಇತಿ ।

ಪೂರ್ಣಪ್ರಜ್ಞೋ ಜ್ಞಾನದಾತಾ
ಮಧ್ವೋ ಧ್ವಸ್ತದುರಾಗಮಃ ॥ ೨೦ ॥
ತತ್ವಜ್ಞೋ ವೈಷ್ಣವಾಚಾರ್ಯೋ
ವ್ಯಾಸಶಿಷ್ಯೋ ಯತೀಶ್ವರಃ ।
ಶುಭತೀರ್ಥಾಭಿಧಾನಶ್ಚ ಜಿತವಾದೀ ಜಿತೇಂದ್ರಿಯಃ ॥ ೨೧ ॥
ಪಾಠಾಂ. ಜಿತಾಮಿತ್ರೋ (ಛ. ಪಾಠ)
ಶ್ರೀಮದಾನಂದಸನ್ನಾಮೋವಂ ದ್ವಾದಶಕಂ ಪಠನ್ ।

(ಉಡುಪಿ ಪಾಠಾ) **ಶ್ರೀಮದಾನಂದಸನ್ನಾಮಾಹ್ಯೇವಂ** (ಯು. ಮ.) ಆನಂದತೀರ್ಥ ಸನ್ನಾಮಾ ಹ್ಯೇವಂ (ಪಾಠಾಂತರ) ಆನಂದತೀರ್ಥ-ಸನ್ನಾಮೋ—ತ್ಯೇವಂ....ಅಥವಾ ಆನಂದತೀರ್ಥಸನ್ನಾಮ್ನಾ—ಮೇವಂ....

ಲಭತೇ ವೈಷ್ಣವೀಂ ಭಕ್ತಿಂ ಗುರುಭಕ್ತಿಸಮನ್ವಿತಾಮ್ ॥೨೨॥

ನಾಮಗಳ ವಿವರಣೆ—೧. ಪೂರ್ಣಪ್ರಜ್ಞಃ (ಛ.) ಪೂರ್ಣಾ-ಪ್ರಜ್ಞಾ-ಜ್ಞಾನಂ ಯಸ್ಯ ಸಃ ಪರಿಪೂರ್ಣವಾದ ಪರಿಶುದ್ಧವಾದ ಜ್ಞಾನ-ವುಳ್ಳವರು ಎಂದರೆ ಸರ್ವಜ್ಞಶಿಖಾಮಣಿಗಳು ಎಂದರ್ಥ. **೨. ಜ್ಞಾನದಾತ** (ಛ.) ಭಕ್ತಜನಾನಾಂ ಜ್ಞಾನಂ ದದಾತೀತಿ ಜ್ಞಾನದಾತಾ, ಭಕ್ತಜನರಿಗೆ ಜ್ಞಾನವನ್ನು ಕೊಡುವವರು ಎಂದರ್ಥ. ಓಕಾರದ ಮುಂದೆ ಅಕಾರವಿದ್ದರೆ ಅದು ಹಿಂದಿನ ಓಕಾರದೊಡನೆ ಸೇರಿಹೋಗುವುದು (ಪೂರ್ವರೂಪಸಂಧಿ) ಎಂದಿರುವುದರಿಂದ (ಲೇ.) ಅಜ್ಞಾನದಾತಾ ಎಂದೂ ಪದಚ್ಛೇದ ಮಾಡ-ಬಹುದು. ಅದರಂತೆ ತಾಮಸಜೀವಿಗಳಿಗೆ ಅಜ್ಞಾನವನ್ನುಂಟುಮಾಡು-ವವರು ಎಂದೂ ಅರ್ಥ ಹೇಳಬಹುದು. (ವಾಯುಸ್ತುತಿ ೧೬ನೇ ಶ್ಲೋ.) ಅಥವಾ 'ದೋ ಅವಖಂಡನೇ' ಎಂಬ ಧಾತುವಿಗೆ ಕತ್ತರಿಸು ಎಂದರ್ಥ-ವಿರುವುದರಿಂದ ಭಕ್ತರ ಅಜ್ಞಾನವನ್ನು ಕತ್ತರಿಸಿಹಾಕುವವರು ಅಥವಾ ಪರಿಹಾರ ಮಾಡುವವರು ಎಂದೂ ಅರ್ಥ ಹೇಳಬಹುದು. (ವ್ಯಾಕರಣ) ಹನುಮನ್ನಾಮಾವಳಿಯಲ್ಲಿ 'ಲಕ್ಷ್ಮಣಪ್ರಾಣದಾತಾ' ಎಂಬಲ್ಲಿ (ಖಂಡ 383–೧೧) ತೋರಿಸಿದಂತೆದದಾತೀತಿ ವಾ ದ್ಯತಿ–ಖಂಡಯತೀತಿ ವಾ ದಾತಾ ಎಂದಾಗಿದೆ. **೩. ಮಧ್ವ** ಶಬ್ದಾರ್ಥವನ್ನು ಈ ಹಿಂದೆಯೇ ಅನೇಕ ಕಡೆ-ವಿವರಿಸಿದ್ದೇವೆ. (ಖಂಡ 374 ಚ-viii ನೋಡಿ.) **೪. ಧ್ವಸ್ತದುರಾಗಮಃ** (ಲೇ.) ದುಷ್ಟಾಶ್ಚತೇ ಆಗಮಾಶ್ಚ ದುರಾಗಮಾಃ । ಅಯೋಗ್ಯವಾದ ಬೌದ್ಧ–ಜೈನ–ಚಾರ್ವಾಕ—ಮಾಯಾವಾದಾದಿ ಮತಗಳು ಎಂದರ್ಥ. ಅಥವಾ ದುಷ್ಟಾನಾಂ ಆಗಮಾಃ ದುರಾಗಮಾಃ, ಅಯೋಗ್ಯರು ರಚಿಸಿದ ಶೈವಪಾಶು-ಪತಾದಿ ಆಗಮಗಳು ಎಂದರ್ಥ. ಧ್ವಸ್ತಾಃ ದುರಾಗಮಾಃ ಯೇನ ಸಃ ದುರಾಗಮಗಳನ್ನು ಖಂಡಿಸಿದವರು ಎಂದರ್ಥ. ಅನುವ್ಯಾಖ್ಯಾನ ದ್ವಿತೀಯಾ-ಧ್ಯಾಯ ದ್ವಿತೀಯಪಾದದಲ್ಲೂ ಭಾಷ್ಯದಲ್ಲೂ ಅಷ್ಟೇ ಏಕೆ ಪ್ರಸ್ಥಾನತ್ರಯ-

ದಲ್ಲೂ ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ೫. ತತ್ವಜ್ಞಾಃ (ಭ.) ತತ್ವಂ (ಯಥಾರ್ಥ ಜ್ಞಾನಂ) ಜಾನಾತೀತಿ ತತ್ವಜ್ಞಾಃ ತತ್ವವನ್ನು ತಿಳಿದವರು ಎಂದರ್ಥ. ತತ್ವಶಬ್ದಾರ್ಥವನ್ನು ಹದಿನಾರನೇ ಶ್ಲೋಕದಲ್ಲಿ ಕಿಂಚಿತ್ ವಿವರಿಸಿದ್ದೇವೆ. ಬೌದ್ಧಾದಿಗಳೂ ಮಾಯಾವಾದಿಗಳೂ ಪ್ರಪಂಚವೇ ಕ್ಷಣಿಕ ಭ್ರಮೆ—ಎಂದು ವಾದಿಸುವುದಕ್ಕೆ ಪ್ರತಿಯಾಗಿ ಜಗತ್ತು ಸತ್ಯವೆಂಬ ಸಿದ್ಧಾಂತ ವನ್ನು ಮಂಡಿಸಿದವರು ಎಂದರ್ಥ. (ವ್ಯಾಕರಣ) 'ಇಗುಪಧಜ್ಞಾಪ್ರೀಕಿರಃ ಕಃ' (ಪಾ. ೩/೧/೧೩೫) ಎಂಬ ಸೂತ್ರದಂತೆ ಜ್ಞಾ ಧಾತುವಿನ ಮೇಲೆ ಕ-ಪ್ರತ್ಯಯ ಬಂದು ತತ್ವಜ್ಞಾಃ ಎಂದಾಗಿದೆ. ೬. ವೈಷ್ಣವಾಚಾರ್ಯಾಃ (ಲೇ.) ವಿಷ್ಣೋಃ ಇಮೇ ವೈಷ್ಣವಾಃ। ವಿಷ್ಣುಭಕ್ತರೆಂದರ್ಥ. (ವ್ಯಾಕರಣ) 'ತಸ್ಯೇದಂ' (ಪಾ. ೪/೩/೧೨೦) ಎಂಬ ಸೂತ್ರದಂತೆ ಅಣ್ ಪ್ರತ್ಯಯ ಬಂದಿದೆ. ವಿಷ್ಣು+ಅಣ್ ಎಂದಿರಲು ಣಿತ್ತಾದ್ದರಿಂದ ಆದಿವೃದ್ಧಿ ಬಂದು ವೈಷ್ಣು ಎಂದಾದರೆ ಉಕಾರದ ಮುಂದೆ ಅಕಾರವಿರುವುದರಿಂದ ಗುಣವೂ ಅವಾದೇಶವೂ ಬಂದು ವೈಷ್ಣವ ಎಂದಾಗುತ್ತದೆ. ಆಚಾರ್ಯಶಬ್ದಾರ್ಥವನ್ನು 'ಶ್ರೀಮ-ದ್ವಿಷ್ಣು—' ಎಂಬ ಪ್ರಥಮ ಶ್ಲೋಕದಲ್ಲೇ (ಖಂಡ 37) ವಿವರಿಸಿದ್ದೇವೆ. ವೈಷ್ಣವಾನಾಂ ಆಚಾರ್ಯಾಃ ಎಂದು ಷಷ್ಠೀತತ್ಪುರುಷ. 'ಯೇನಾಹಮಿಹ—' ಎಂಬ ಖಿಲವಾಯುಸ್ತುತಿಯ ೧೦ನೇ ಶ್ಲೋಕ ನೋಡಿ. ೭. ವ್ಯಾಸಶಿಷ್ಯಾಃ ವ್ಯಾಸಸ್ಯ ವೇದವ್ಯಾಸಸ್ಯ ಶಿಷ್ಯಾಃ। ವೇದವ್ಯಾಸರ ಶಿಷ್ಯರು. ಶ್ರೀಮದಾ-ಚಾರ್ಯರು ದೊಡ್ಡಬದರಿಗೆ ಹೋಗಿ ಅಲ್ಲಿದ್ದ ಸಾಕ್ಷಾದ್ ವೇದವ್ಯಾಸರನ್ನು ಕಂಡುಬಂದರೆಂದೂ ಅವರ ಆಜ್ಞೆಯಿಂದಲೇ ಭಾಷ್ಯಗಳನ್ನೂ ತಾತ್ಪರ್ಯ-ನಿರ್ಣಯವನ್ನೂ ಬರೆದರೆಂದು ವಾಯುಸ್ತುತಿ (ಶ್ಲೋ.೩೯)ಯಲ್ಲೂ ಮಧ್ವ-ವಿಜಯದಲ್ಲೂ ಹೇಳಿದೆ. ಇನ್ನು ಅವರೇ ತಾತ್ಪರ್ಯನಿರ್ಣಯದಲ್ಲೂ (೨/೫-೬ ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ। ಹರಿಣಾ= ಕಲಿಯುಗದಲ್ಲಿ ಈ ರೀತಿ ಗ್ರಂಥವೇ ಅಪಪಾಠಾದಿಗಳಿಂದ ಕಲುಷಿಕ-ವಾಗಿರಲು ಆ ಶ್ರೀಹರಿಯ ಪ್ರೇರಣೆಯಿಂದ ಈ ಗ್ರಂಥವನ್ನು ರಚಿಸುತ್ತೇನೆ ಎಂದೂ ಅಲ್ಲೇ ೩೨/೧೬೫. 'ವ್ಯಾಸಸ್ಯಾಜ್ಞಯಾ ಭಾಷ್ಯವರಂ ವಿಧಾಯ— ವೇದವ್ಯಾಸರ ಆಜ್ಞೆಯಿಂದ ಶ್ರೇಷ್ಠವಾದ ಭಾಷ್ಯಗಳನ್ನು ರಚಿಸಿ) ಇತರ

ಗ್ರಂಥಗಳಲ್ಲೂ ತಾವು ವ್ಯಾಸರ ಆಜ್ಞಾಪಾಲಕರು ಅರ್ಥಾತ್ ಶಿಷ್ಯರು ಎಂದು ಹೇಳಿಕೊಂಡಿದ್ದಾರೆ. ಟೀಕಾರಾಯರು ಒಂದು ಗ್ರಂಥದಲ್ಲಿ 'ನಮಾಮಿ ವ್ಯಾಸದಾಸಸ್ಯ ಪೂರ್ಣಬುದ್ಧೇಃ ಪದಾಂಬುಜೇ'—ಎಂದರೆ ವ್ಯಾಸರ ದಾಸರಾದ ಪೂರ್ಣಪ್ರಜ್ಞರ ಪಾದಕಮಲದ್ವಯವನ್ನು ವಂದಿಸುತ್ತೇನೆ—ಎಂದು ಹೇಳಿದ್ದಾರೆ. **೮. ಯತೀಶ್ವರಃ** (ಭ.) ಯತೀನಾಂ-ಸನ್ಯಾಸಿನಾಂ ಈಶ್ವರಃ ಸ್ವಾಮೀ। ಈ ವಿಷಯವನ್ನು ವಾಯುಸ್ತುತಿಯ ೩೯ನೇ ಶ್ಲೋಕದಲ್ಲಿ 'ಪಾರಿವ್ರಾಜ್ಯಾಧಿರಾಜಃ' ಎಂಬಲ್ಲಿ ವಿವರಿಸಿದ್ದೇವೆ.

೯. **ಶುಭತೀರ್ಥಾಭಿಧಾನಃ** (ಭ.) ಶುಭಂ-ಶುಭಕರಂ, ತೀರ್ಥಂ-ಶಾಸ್ತ್ರಂ ಯಸ್ಯ ಯಸ್ಮಾದ್ವಾ ಶುಭತೀರ್ಥಃ। ಶುಭಕರವಾದ ಶಾಸ್ತ್ರವನ್ನು ರಚಿಸಿದ್ದರಿಂದ ಶುಭತೀರ್ಥ ಎಂದು ಹೆಸರು. ಶುಭತೀರ್ಥ ಇತಿ ಅಭಿಧಾನಂ-ನಾಮ ಯಸ್ಯ ಸಃ। ಶುಭತೀರ್ಥ ಎಂಬ ಹೆಸರುಳ್ಳವರು ಎಂದರ್ಥ. **೧೦. ಜಿತವಾದೀ.** ಜಿತಾಃ ವಾದಿನಃ ಯೇನ ಸಃ। ಸಕಲವಿಧ ಪ್ರತಿವಾದಿಗಳನ್ನೂ ಗೆದ್ದವರು ಎಂದರ್ಥ. ಭ-ಪಾಠದಂತೆ 'ಜಿತಾಮಿತ್ರಃ', ಅಮಿತ್ರ ಎಂದರೆ ಶತ್ರುಗಳನ್ನು ಅರ್ಥಾತ್ ಪ್ರತಿವಾದಿಗಳನ್ನು ಗೆದ್ದವರು ಎಂದೇ ಅರ್ಥ. **೧೧. ಜಿತೇಂದ್ರಿಯಃ**—(ಭ.) ಸ್ವಾಧೀನೇಂದ್ರಿಯವಾನ್। ಸಕಲ ಇಂದ್ರಿಯಗಳೂ ತಮ್ಮ ವಶದಲ್ಲಿರುವವರು ಎಂದರ್ಥ. **೧೨. ಶ್ರೀಮದಾನಂದಸನ್ನಾಮಾ,** ಆನಂದತೀರ್ಥಸನ್ನಾಮಾ, ಆನಂದತೀರ್ಥ ಶಬ್ದಾರ್ಥವನ್ನೂ ಮಧ್ವ ಶಬ್ದದೊಡನೆಯೇ (ಖಂಡ 374 ಚ-viiiರಲ್ಲಿ) ವರ್ಣಿಸಿದೆ. ಈ ಹೆಸರನ್ನು ಬೇರ್ಪಡಿಸುವುದಕ್ಕಾಗಿ ಅನೇಕ ಪಾಠಗಳು ಉದ್ಭವಿಸಿವೆ.

ಫಲಶ್ರುತಿ—ಶ್ರೀಮದಾನಂದತೀರ್ಥರ ಈ ದ್ವಾದಶನಾಮಗಳನ್ನು ಪಠಿಸಿದರೆ ಗುರುಭಕ್ತಿಸಹಿತವಾದ ವಿಷ್ಣುಭಕ್ತಿಯನ್ನು ಪಡೆಯುತ್ತಾನೆ.

ಶ್ರುತಿಸಮಾಪ್ತಿ—ತೃತೀಯಮಸ್ಯ ಎಂಬ ಶ್ರುತಿಯು ಆನಂದತೀರ್ಥ ಪೂರ್ಣಪ್ರಜ್ಞ ಯತೀಶ್ವರ ಎಂಬ ನಾಮಗಳನ್ನು ಸೂಚಿಸಿತು. 'ನಿರ್-ಯದೀಂ' ಎಂಬ ವಾಕ್ಯ, ಜ್ಞಾನದಾತಾ ವೈಷ್ಣವಾಚಾರ್ಯ ಎಂಬ ನಾಮಗಳನ್ನೂ, 'ಯದೀಮನು' ಎಂಬ ವಾಕ್ಯವು ಮಧ್ವ ಎಂಬ ಹೆಸರನ್ನೂ ತತ್ವಜ್ಞ ಎಂಬ ನಾಮವನ್ನೂ ಪ್ರ ಯತ್ ಪಿತುಃ ಎಂಬ ಶ್ರುತಿಯಿಂದ ವ್ಯಾಸಶಿಷ್ಯಃ-

ಧ್ವಸ್ತದುರಾಗಮಃ, ಜಿತವಾದೀ ಎಂಬ ನಾಮಗಳನ್ನೂ ಸೂಚಿಸಿದಂತಾಯಿತು. ಉಭಾ ಯದಸ್ಯ ಎಂಬ ವಾಕ್ಯದಲ್ಲಿರುವ ಶುಚಿ ಪದದಿಂದ ಜಿತೇಂದ್ರಿಯ ಎಂಬ ನಾಮವನ್ನು ಸಂಗ್ರಹಿಸಿದಂತಾಯಿತು.

೧೭. ರಾಮದೂತನಿಗೆ ವಂದನೆ

387. ಅವತಾರಿಕೆ—ಪ್ರಸಿದ್ಧವಾದ ಶ್ರೀರಾಮದೂತನ ಸ್ತೋತ್ರವನ್ನು ಪಠಿಸುತ್ತಾರೆ—ಮನೋಜವಮಿತಿ ।

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ ॥ ३३ ॥

ಅನ್ವಯಾರ್ಥ—(ಈ ಶ್ಲೋಕಕ್ಕೂ ಛಲಾರೀಯ ಟೀಕೆ ಇದೆ. ಅದಕ್ಕೆ ಅನುಸಾರವಾಗಿ ಅರ್ಥ ಬರೆದಿದೆ) ಮನೋಜವಂ-ಮನೋವೇಗವುಳ್ಳ ; ಮಾರುತತುಲ್ಯವೇಗಂ-ಗಾಳಿಗೆ ಸಮಾನವಾದ ವೇಗವುಳ್ಳ ; ಜಿತೇಂದ್ರಿಯಂ-ಸಕಲೇಂದ್ರಿಯಗಳನ್ನೂ ತನ್ನ ವಶದಲ್ಲಿಟ್ಟುಕೊಂಡಿರುವ ; ಬುದ್ಧಿಮತಾಂ-ಜ್ಞಾನಿಗಳಲ್ಲಿ ; ವರಿಷ್ಠಂ-ಅತ್ಯಂತ ಶ್ರೇಷ್ಠನಾದ ; ವಾತಾತ್ಮಜಂ-ವಾಯುಪುತ್ರನಾದ ; ವಾನರ....ಮುಖ್ಯಂ—ವಾನರ-ಕಪಿಗಳ, ಯೂಥ-ಸಮೂಹದಲ್ಲೇ, ಮುಖ್ಯಂ-ಪ್ರಧಾನನಾದ ; ಶ್ರೀರಾಮದೂತಂ-ಶ್ರೀರಾಮದೂತನೆಂದು ಪ್ರಖ್ಯಾತನಾದ ಆಂಜನೇಯನನ್ನು ; ಶಿರಸಾ-ತಲೆಬಾಗಿ ; ನಮಾಮಿ-ನಮಸ್ಕರಿಸುತ್ತೇನೆ.

ಭಾವಾರ್ಥ—ಆಂಜನೇಯನು ಶ್ರೀರಾಮನ ಅಚ್ಛಿನ್ನ ಭಕ್ತ ; ಅವನ ಕಾರ್ಯವನ್ನು ನಡೆಸಿಕೊಟ್ಟದ್ದರಿಂದ ಇವನಿಗೆ ರಾಮದೂತನೆಂಬ ಹೆಸರು ಪ್ರಸಿದ್ಧವಾಗಿದೆ. ಇವನಿಗೆ ಅಣಿಮಾದ್ಯಷ್ಟಸಿದ್ಧಿಗಳೂ ಕರತಲಾಮಲಕವಾಗಿರುವುದರಿಂದ ಇವನು ಮನೋವೇಗದಂತೆ ಚಲಿಸಬಲ್ಲನು. ಸಮುದ್ರವನ್ನು ವಾಯುವೇಗದಿಂದ ಲಂಘಿಸಿದನು. ಈ ಹನುಮಂತ ಆಜನ್ಮಬ್ರಹ್ಮಚಾರಿ-ಅತ್ಯಂತ ಜಿತೇಂದ್ರಿಯನು. (ಆದ್ದರಿಂದಲೇ ಲಂಕಾಪಟ್ಟಣಕ್ಕೆ

ಹೋಗಿದ್ದಾಗ ರಾಕ್ಷಸರ ಮನೆಯನ್ನು ಶೋಧಿಸುವಾಗ ಅನೇಕ ರಾಕ್ಷಸ-ಸ್ತ್ರೀಯರನ್ನೂ, ದಂಪತಿಗಳನ್ನೂ, ಹೆಚ್ಚೇಕೆ, ಮಂಡೋದರಿ ಸಹಿತ ಮಲಗಿದ್ದ ರಾವಣನನ್ನು ಕಣ್ಣಾರೆ ಕಂಡರೂ ಇವನಿಗೆ ಕಿಂಚಿತ್ತೂ ಮನೋವಿಕಾರ-ವುಂಟಾಗಲಿಲ್ಲ.) ಈ ಹನೂಮಂತನು ನವವ್ಯಾಕರಣಪಂಡಿತನಾಗಿದ್ದನಲ್ಲದೆ ಸಕಲ ಶಾಸ್ತ್ರಗಳೂ ಕರತಲಾಮಲಕವಾಗಿದ್ದುವು ; ಮೂಲರಾಮಾಯಣ-ದಂಥಾ ಮಹಾಗ್ರಂಥವನ್ನೇ ಶ್ರೋತೃಗಳಿಗೆ ಶ್ರೀರಾಮನ ಆಜ್ಞೆಯಿಂದ ಬೋಧಿಸುತ್ತಾನೆಂದು 'ಮತಿರ್ಮತಸ್ಯ ಧೀನಾ ಅನಯಂತ ಸಸ್ರುತಃ' ಎಂಬ ಶ್ರುತಿಯೇ ಹೇಳುತ್ತದೆ. ಮೊದಲನೆಯ ಸಾರಿ ಭೇಟಿಯಲ್ಲಿ ಇವನ ಮಾತನ್ನು ಕೇಳಿ 'ಕಿಂಚಿದಪಶಬ್ದ ಇವಗಿಲ್ಲ' ಎಂದು ಶ್ರೀರಾಮನೇ ಇವನನ್ನು ಪ್ರಶಂಸಿ-ಸಿದ್ದಾನೆ. ಈ ಪ್ರಕಾರ ಈ ಆಂಜನೇಯ ಜ್ಞಾನಿಶ್ರೇಷ್ಠರಲ್ಲಿ ಅಗ್ರಗಣ್ಯ-ನಾಗಿದ್ದಾನೆ. ವಾಯುಪುತ್ರನಾದ ಇವನು ದೇವಾಂಶಸಂಭೂತರಾದ ಸುಗ್ರೀವಾಂಗದನಲನೀಲಾದಿ ಇಡೀ ವಾನರಸಮೂಹದಲ್ಲೇ ಮೊದಲಿಗನು. ಇಂಥಾ ಶ್ರೀರಾಮನ ದೂತನೆಂದು ಪ್ರಸಿದ್ಧನಾದ ಹನೂಮಂತನನ್ನು ತಲೆ-ಬಾಗಿ ನಮಸ್ಕರಿಸುತ್ತೇನೆಂದು ಭಾವ.

೧೮. ಹನೂಮತ್ಸ್ಮರಣೆಯ ಮಹಾಫಲ

388. ಅವತಾರಿಕೆ—(ಲೇ.) ಹಿಂದಿನ ಶ್ಲೋಕದಲ್ಲಿ 'ಶ್ರೀರಾಮ-ದೂತಂ ಶಿರಸಾ ನಮಾಮಿ' ಎಂದು ಹೇಳಿದರು. ಈ ಶ್ಲೋಕದಲ್ಲಿ ಆ ಹನೂಮಂತನನ್ನು ನಮಸ್ಕರಿಸುವುದಿರಲಿ, ಸ್ಮರಣೆ ಮಾತ್ರ ಮಾಡಿದರೇ ಸಾಕು, ಏನು ಮಹಾಫಲವೆಂದು ವರ್ಣಿಸುತ್ತಾರೆ—ಬುದ್ಧಿರಿತಿ ।

ಛಲಾರೀಯ ಟೀಕೆಯಲ್ಲಿ ಇದೇ ಕಡೆಯ ಶ್ಲೋಕ. ಬುದ್ಧಿ ಮೊದಲಾದ ಶಬ್ದಗಳಿಗೆ ಅವರು ಹೇಳಿದ ಅರ್ಥವನ್ನೂ ಸಂಗ್ರಹಿಸಿದ್ದೇನೆ.

ಬುದ್ಧಿರ್ಬಲಂ ಯಶೋ ಧೈರ್ಯಂ
ನಿರ್ಭಯತ್ವಮರೋಗತಾ ।
ಅಜಾಡ್ಯಂ ವಾಕ್ಪಟುತ್ವಂ ಚ
ಹನುಮತ್ಸ್ಮರಣಾದ್ಭವೇತ್ ॥ ೨೪ ॥

ಶಬ್ದಗಳ ವಿವರಣೆ—ಬುಧ್(ಬೋಧ್)-ತಿಳಿ, ಅರಿತುಕೋ ಎಂಬ ಧಾತುವಿನ ಮೇಲೆ ಕ್ತಿನ್(ತಿ) ಪ್ರತ್ಯಯ ಬಂದು ಬುದ್ಧಿಃ ಎಂದಾಗಿದೆ. ಬುದ್ಧ್ಯತೇಽನಯೇತಿ ಬುದ್ಧಿಃ । ಕರಣೇಕ್ತಿನ್ । 'ನಿಶ್ಚಯಾತ್ಮಕಾಂತಃಕರಣ-ವೃತ್ತಿರಿತಿ ಯಾವತ್।' ಇದು ಹೇಗೆಯೇ ಎಂದು ಸರಿಯಾಗಿ ತಿಳಿದುಕೊಳ್ಳುವ ವಿವೇಚನಾಶಕ್ತಿಗೆ ಬುದ್ಧಿಯೆಂದು ಹೆಸರು. ಬಲಂ (ಥ.)-ಶರೀರಬಲಂ, ಶಾರೀರಿಕ ಶಕ್ತಿ. ಯಶಃ (ಥ.)-ಕೀರ್ತಿ. ಧೈರ್ಯಂ ಎಂದರೆ ಮುನ್ನುಗ್ಗಿ ಹೋಗುವ ಸಾಹಸ. ನಿರ್ಭಯತ್ವಂ-ಏನು ಬಂದರೂ ಹೆದರದಿರುವಿಕೆ. ಅರೋಗತಾ ಯಾವ ರೋಗವೂ ಇಲ್ಲದೆ ಗಟ್ಟಿಮುಟ್ಟಾಗಿರುವಿಕೆ. ರೋಗ ಬಂದು ಗುಣವಾಗುವುದಕ್ಕೆ ಆರೋಗ್ಯವೆಂದು ಹೆಸರು. ಆದರೆ ರೋಗವೇ ಬರದಿರುವಿಕೆಗೇ ಅರೋಗತಾ ಎಂದು ಹೆಸರು. ಜಡ ಎಂದರೆ ಜಡಮತಿ ಎಂಬಂತೆ ಏನೂ ತಿಳಿಯದ ಮುಠ್ಠಾಳ ಅಥವಾ 'ಬೆಪ್ಪುತಕ್ಕಡಿ' ಎಂದರ್ಥ. ಜಡಸ್ಯ ಭಾವಃ ಜಾಡ್ಯಂ=ಶುದ್ಧ ದಡ್ಡತನ ಅಥವಾ ಮೌಢ್ಯ. (ಥ.) ಮೌಢ್ಯಂ ನ ಭವತೀತಿ ಅಜಾಡ್ಯಂ, ಮೌಢ್ಯವಿಲ್ಲದಿರುವಿಕೆ ಎಂದರೆ ಸಕಲವನ್ನೂ ನೋಡಿದ ಮಾತ್ರದಿಂದಲೇ ಅರಿತುಕೊಳ್ಳುವ ಶಕ್ತಿ ಎಂದರ್ಥ. ವಾಕ್ಪಟುತ್ವಂ-ವಾಚಾಳತನ, ಗಂಗಾಪ್ರವಾಹದಂತೆ ಎಡೆತಡೆಯಿಲ್ಲದೆ ಮಾತಾ-ಡುವ ಶಕ್ತಿ. ಇಷ್ಟು ಗುಣಗಳೂ, ಹನುಮತ್-ಸ್ಮರಣಾತ್-ಹನುಮಂತನ ಸತತ ಸ್ಮರಣೆಯಿಂದ, ಭವೇತ್-ಆಗುತ್ತದೆ (ಉಂಟಾಗುತ್ತದೆ.)

ಭಾವಾರ್ಥ—ಹನುಮಂತನನ್ನು ಹಗಲೂ ರಾತ್ರಿಯೂ ನಿರಂತರವಾಗಿ ಸ್ಮರಣೆಮಾಡುತ್ತಿದ್ದರೆ (ಎಂದರೆ ಪುರಂದರದಾಸರು ಹೇಳಿದಂತೆ 'ಕನಸಿಲಿ ಮನಸಿಲಿ ಕಳವಳವಾದರೆ' ಅಥವಾ 'ಹನುಮನ ನೆನೆದರೆ') ಬುದ್ಧಿಶಕ್ತಿಯೂ ಶಾರೀರಿಕಬಲವೂ ಕೀರ್ತಿಯೂ ಧೈರ್ಯವೂ, ಯಾವುದಕ್ಕೂ ಹೆದರದ ಕೆಚ್ಚೆದೆಯೂ (ನಿರ್ಭಯತ್ವ) ಸಂಪೂರ್ಣ ಆರೋಗ್ಯವೂ, ಮೇಧಾಶಕ್ತಿಯೂ ವಾಕ್ಪಟುತ್ವವೂ ಸಿದ್ಧಿಸುವುವು.

೧೯. ಹರಿಸರ್ವೋತ್ತಮ, ವಾಯುಜೀವೋತ್ತಮ

389. ಅವತಾರಿಕೆ—(ಲೇ.) ಮಧ್ವಸಿದ್ಧಾಂತದಲ್ಲೀ ಎರಡು ಬಹುಮುಖ್ಯವಾದ ಸಿದ್ಧಾಂತಗಳೆಂದರೆ ಹರಿಸರ್ವೋತ್ತಮ, ವಾಯು

ಜೀವೋತ್ತಮ ಎಂಬ ಪ್ರಮೇಯ. ಆಚಾರ್ಯರು ಅನೇಕ ಕಡೆ 'ನ ದೈವಂ ಕೇಶವಾತ್ ಪರಂ' ಎಂದರೆ ವಿಷ್ಣುವಿಗಿಂತ ಉತ್ತಮನಾದ ದೇವರು ಬೇರೆ ಯಾರೂ ಇಲ್ಲ, ಅವನೇ ಸರ್ವೋತ್ತಮ ಎಂದು ಹೇಳಿದ್ದಾರಲ್ಲದೆ ತಮ್ಮ ಗ್ರಂಥದಲ್ಲಿ ಹೆಜ್ಜೆಹೆಜ್ಜೆಗೂ ಇದನ್ನು ಸಾಧಿಸಿಕೊಟ್ಟಿದ್ದಾರೆ. 'ಯಸ್ಯ ತ್ರೀಣಿ' ಇತ್ಯಾದಿ ವಾಕ್ಯಗಳಿಂದಲೂ ಬಳಿತ್ಥಾಸೂಕ್ತಾದಿಗಳಿಂದಲೂ ಮಧ್ವಾಚಾರ್ಯರಿಗೆ ಅರ್ಥಾತ್ ವಾಯುದೇವರಿಗೆ ಸರಿಸಮಾನರಾದ ಗುರುಗಳು ಬೇರೆ ಯಾರೂ ಇಲ್ಲವೆಂದೂ ಸಿದ್ಧವಾಗುತ್ತದೆ. ಈ ಎರಡು ವಿಚಾರಗಳೂ ನಮ್ಮ ಮನಸ್ಸಿನಲ್ಲಿ ಧೃಢವಾಗಿ ನೆಲೆಸಬೇಕೆಂಬ ಉದ್ದೇಶದಿಂದ ವಾಯುಸ್ತುತಿಯ ಕಡೆಯಲ್ಲಿ ಈ ಶ್ಲೋಕವನ್ನು ಪಠಿಸುತ್ತಾರೆ—ನ ಮಾಧವ ಇತಿ ।

ನ ಮಾಧವ ಸಮೋ ದೇವೋ ನ ಚ ಮಧ್ವ ಸಮೋ ಗುರುಃ।
ನ ತದ್ವಾಕ್ಯಸಮಂ ಶಾಸ್ತ್ರಂ
ನ ಚ ತಸ್ಯ ಸಮಃ ಪುಮಾನ್ ॥ ೨೫ ॥

ಅನ್ವಯಾರ್ಥ—ಮಾಧವಸಮಃ-ಲಕ್ಷ್ಮೀಪತಿಯಾದ ನಾರಾಯಣನಿಗೆ ಸರಿಸಮಾನನಾದ, ದೇವಃ ನ—ದೇವತೆಯೂ ಇಲ್ಲ. (ಆ ಶ್ರೀಹರಿಯೇ ಸರ್ವೋತ್ತಮ ಎಂದು ಭಾವ.) ಮಧ್ವಸಮಃ—ಮಧ್ವಾಚಾರ್ಯರಿಗೆ ಸಮಾನರಾದ, ಗುರುಃ—ಗುರುಗಳೂ, ನ ಚ—ಇಲ್ಲವೇ ಇಲ್ಲ. ತದ್ವಾಕ್ಯಸಮಂ—ಅವರ (ಮಧ್ವಾಚಾರ್ಯರ) ವಾಕ್ಯರೂಪವಾದ ಶಾಸ್ತ್ರಕ್ಕೆ ಸಮಾನವಾದ; ಶಾಸ್ತ್ರಂ—ಶಾಸ್ತ್ರವೂ, ನ—ಇಲ್ಲ. ತಸ್ಯ—ಅವರಿಗೆ (ಮಧ್ವಾಚಾರ್ಯರಿಗೆ), ಸಮಃ ಪುಮಾನ್—ಸಮಾನನಾದ ಮನುಷ್ಯನೂ, ನ—ಇಲ್ಲ (ಎಂದರೆ ಜೀವಕೋಟಿಯಲ್ಲೇ ಅವರು ಉತ್ತಮರಾದ್ದರಿಂದ ಅವರಿಗೆ ಸಮಾನರಾದ ಚೇತನರು ಬೇರೆ ಯಾರೂ ಇಲ್ಲ ಎಂದರ್ಥ.)

ಭಾವಾರ್ಥ —ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನೇ ಸರ್ವೋತ್ತಮ ದೇವತೆಯಾದ್ದರಿಂದ ಅವನಿಗೆ ಸರಿಸಮಾನರಾದವರು ಬೇರೆ ಯಾರೂ ಇಲ್ಲ. ಇದೇ ರೀತಿ ವಾಯುವೇ ಜೀವೋತ್ತಮರಾದ್ದರಿಂದ ಅವರ ಅವತಾರಭೂತರಾದ ಮಧ್ವಾಚಾರ್ಯರಿಗೆ ಸಮಾನರಾದ ಗುರುಗಳೂ ಬೇರೆ ಯಾರೂ ಇಲ್ಲ. ಅದೇ ರೀತಿ ಮಧ್ವಶಾಸ್ತ್ರಕ್ಕೆ ಸರಿಸಮಾನವಾದ ಬೇರೆ

ಯಾವ ಶಾಸ್ತ್ರವೂ ಇಲ್ಲ. ಆ ಮಧ್ವರಿಗೆ ಸಮಾನನಾದ (ಪಂಡಿತನೂ) ಜ್ಞಾನಿಯೂ ಬೇರೆ ಯಾರೂ ಇಲ್ಲ. ಈ ವಿಚಾರವು ಪ್ರತಿಯೊಬ್ಬ ಮಾಧ್ವ-ಭಕ್ತನ ಮನಸ್ಸಿನಲ್ಲೂ ಬೇರೂರಿ ನಿಲ್ಲಬೇಕು. ಆಗಲೇ ವಾಯುಸ್ತುತಿ ಓದಿದ್ದಕ್ಕೆ ಸಾರ್ಥಕ.

೨೦. ಜಯ ಭೀಮಸೇನ

390. ಅವತಾರಿಕೆ—ಖಿಲವಾಯುಸ್ತುತಿಯ ಕಡೆಯಲ್ಲಿ 'ಮನೋ-ಜವಂ' ಎಂದು ಹನುಮಂತನ ಸ್ಮರಣೆ, ಹಿಂದಿನ ಶ್ಲೋಕದಿಂದ ಮಧ್ವರ ಸ್ಮರಣೆಯೂ ಆಯಿತು. ಸಕಲ ಕಾರ್ಯಗಳಲ್ಲೂ ಭೀಮಸೇನನ ಸ್ಮರಣೆಯೇ ಜಯಪ್ರದ ಎಂಬ ಅಭಿಪ್ರಾಯದಿಂದ ಭೀಮನನ್ನು ಸ್ಮರಿಸಿ ಖಿಲವಾಯು-ಸ್ತುತಿಯನ್ನು ಮುಗಿಸುತ್ತಾರೆ—ಭೀಮಸೇನ ಇತಿ.

ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।
ಪಾಂಡಿತ್ಯೇ ಚ ಪಟುತ್ವೇ ಚ
ಶೂರತ್ವೇ ಚ ಬಲೇಽಪಿ ಚ ॥೨೬॥

ಈ ಶ್ಲೋಕವನ್ನೇ ಶ್ರೀಮದಾಚಾರ್ಯರು ಭೀಮನ ಅಸಾಧಾರಣ-ಪರಾಕ್ರಮವನ್ನು ತೋರಿಸುವುದಕ್ಕಾಗಿ ಮಹಾಭಾರತದಿಂದ ಆಯ್ದು ತಾತ್ಪರ್ಯನಿರ್ಣಯದಲ್ಲಿ ಎರಡನೇ ಅಧ್ಯಾಯದಲ್ಲಿ ೧೬೫ ಶ್ಲೋಕವಾಗಿ ಪಠಿಸಿದ್ದಾರೆ. ಈ ಶ್ಲೋಕಕ್ಕೆ ಹೊಂದಿಕೊಂಡಂತೆ ಈ ಶ್ಲೋಕದ ಹಿಂದೆಯೇ ತಾತ್ಪರ್ಯನಿರ್ಣಯದಲ್ಲಿ ಈ ಶ್ಲೋಕವನ್ನೂ (೧೬೪ನೇ ಶ್ಲೋ.) ಕೊಟ್ಟಿದ್ದಾರೆ—

ತತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ ।
ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ॥
ಭೀಮಸೇನಸಮೋ..................ಬಲೇಽಪಿ ಚ ॥

ಅನ್ವಯಾರ್ಥ—(ತತ್ವಜ್ಞಾನೇ-ಶಾಸ್ತ್ರಜ್ಞಾನದಲ್ಲೂ, ವಿಷ್ಣುಭಕ್ತೌ-ವಿಷ್ಣುಭಕ್ತಿಯಲ್ಲೂ, ಧೈರ್ಯೇ-ಸಾಹಸಶಕ್ತಿಯಲ್ಲೂ, ಸ್ಥೈರ್ಯೇ-ಹಿಡಿದ-

ದ್ದನ್ನು ಸಾಧಿಸುವ ಶಕ್ತಿಯಲ್ಲೂ, ಪರಾಕ್ರಮೇ-ಪರಾಕ್ರಮದಲ್ಲೂ, ವೇಗೇ ಚ-ವೇಗದಲ್ಲೂ, ಲಾಘವೇ ಚೈವ-ಕೈಚಳಕದಲ್ಲೂ, ಪ್ರಲಾಪಸ್ಯ ಚ-ವ್ಯರ್ಥ-ವಾಗಿ ಮಾತಾಡುವುದನ್ನು, ವರ್ಜನೇ-ಬಿಡುವುದರಲ್ಲೂ ಅಥವಾ ಆತ್ಮಪೌರುಷ ಹೇಳಿಕೊಳ್ಳದಿರುವುದರಲ್ಲೂ,) ಪಾಂಡಿತ್ಯೇ ಚ-ಪಾಂಡಿತ್ಯ (ವಿದ್ವತ್ವ)ದಲ್ಲೂ ; ಪಟುತ್ವೇ ಚ—ದಕ್ಷತೆ ಅಥವಾ ಚತುರತನ (ಚಾಣಾಕ್ಷತನ)ದಲ್ಲೂ; ಶೂರತ್ವೇ ಚ-ಸಾಹಸದಲ್ಲಿಯೂ, ಬಲೇ ಅಪಿ ಚ-ಶಾರೀರಿಕ ಬಲದಲ್ಲಿಯೂ ಕೂಡ ; ಭೀಮಸೇನಸಮಃ-ಭೀಮಸೇನನಿಗೆ ಸರಿಸಮಾನನಾದವನು, ಉಭಯೋಃ ಸೇನಯೋಃ ಅಪಿ-ಕೌರವ-ಪಾಂಡವ ಎರಡು ಸೈನ್ಯಗಳಲ್ಲೂ ; ನಾಸ್ತಿ-ಇಲ್ಲ.

ಭಾವಾರ್ಥ—ಪಾಂಡವ-ಕೌರವ ಎರಡು ಸೈನ್ಯಗಳಲ್ಲೂ ಯಾವ ವಿಚಾರ ತೆಗೆದುಕೊಂಡರೂ—ತತ್ವಜ್ಞಾನ, ವಿಷ್ಣುಭಕ್ತಿ, ಧೈರ್ಯ, ಪರಾಕ್ರಮ, ವೇಗ, ಕೈಚಳಕತನ, ಪಾಂಡಿತ್ಯ, ದಕ್ಷತೆ, ಶೌರ್ಯ, ಬಲ-ಯಾವ ಗುಣದಲ್ಲೂ ಭೀಮನಿಗೆ ಸಮಾನರಾದವರು ಬೇರೆ ಯಾರೂ ಇಲ್ಲ.

391. ಉಪಸಂಹಾರ-ಕೃತಿಸಮರ್ಪಣೆ

ಇತ್ಥಂ ವ್ಯಾಸಕೃಪಾಪೂರ—ಪ್ರೋಕ್ಷಿತಜ್ಞಾನವೃತ್ತಿನಾ ।
ಖಿಲವಾಯುಸ್ತುತೇಃ ಶ್ಲೋಕಾ
ವ್ಯಾಖ್ಯಾತಾಃ ಸಾದರಂ ಮಯಾ ॥ ೧ ॥

(ಅರ್ಥ)—ಈ ಪ್ರಕಾರ ಶ್ರೀಮದ್ವೇದವ್ಯಾಸರ ದಯೆಯೆಂಬ ಮಹಾ-ಪ್ರವಾಹದಿಂದ ಮುಂದೆಮುಂದೆ ಒಯ್ಯಲ್ಪಟ್ಟ ಜ್ಞಾನಪ್ರವೃತ್ತಿಯುಳ್ಳ ಈ ನಾನು ಅತ್ಯಾದರದಿಂದ ಖಿಲವಾಯುಸ್ತುತಿಯ ಶ್ಲೋಕಗಳಿಗೆ ವಿವರಣೆಯನ್ನು ಬರೆದಿದ್ದೇನೆ.

ಸ್ವಪಾದಮೂಲೇ ನಿಕ್ಷಿಪ್ಯ ಕಟಾಕ್ಷಾಮೃತಧಾರಯಾ ।
ಯೋ ಹಿ ಮಾಮನುಜಗ್ರಾಹ
ವಂದೇ ಶ್ರೀಪಾದರಾಜ್ಮುನಿಮ್ ॥ ೨ ॥

(ಅರ್ಥ) ಯಾವ ದಯಾಸಮುದ್ರರು ನನ್ನನ್ನು ತಮ್ಮ ಪಾದದ ಆಶ್ರಯದಲ್ಲೇ ಇಟ್ಟುಕೊಂಡು ನಿತ್ಯವೂ ನನ್ನ ಮೇಲೆ ತಮ್ಮ ಕೃಪಾ-

ಕಟಾಕ್ಷವೆಂಬ ಅಮೃತಧಾರೆಯನ್ನು ಸುರಿಸಿ ಅಜ್ಞನೂ ದೀನನೂ ಆದ ನನ್ನ ಮೇಲೆ ಪೂರ್ಣಾನುಗ್ರಹಮಾಡಿದರೋ ಅಂಥಾ ಶ್ರೀಪಾದರಾಜರೆಂಬ ಯತೀಂದ್ರರನ್ನು ಭಕ್ತಿಯಿಂದ ಸ್ತುತಿಸಿ ವಂದಿಸುತ್ತೇನೆ.

ಜ್ಞಾನಾಬ್ಧಿರಪ್ಯವಾದೀದ್ಯತ್
ಸ್ಖಲತ್ವಂ ಸ್ವಾತ್ಮನಃ ಪ್ರಭುಃ ।
ಕಾ ಕಥಾ ಮೇಽಲ್ಪಮಾತ್ರಸ್ಯ
ದಯಾಂ ಕುರ್ವಂತು ಸಾಧವಃ ॥ ೩ ॥

(ಅರ್ಥ) ಜ್ಞಾನದ ದೊಡ್ಡಸಾಗರದಂತಿರುವ ಶ್ರೀ ಟೀಕಾಚಾರ್ಯ ಪ್ರಭುಗಳೇ 'ಸ್ಖಲನ್ನಪಿ'–'ಎಡುವಿದರೂ' ಎಂದು ತಮ್ಮ ನ್ಯೂನತೆಯನ್ನು ಒಪ್ಪಿಕೊಂಡಿರುವಾಗ ಅತ್ಯಂತ ಅಲ್ಪನಾದ ನನ್ನಲ್ಲಿ ಅನೇಕ ಲೋಪ-ದೋಷಗಳು ಇವೆಯೆಂದು ಹೇಳಬೇಕಾದ್ದೇನಿದೆ ? ಗುಣಗ್ರಾಹಿಗಳಾದ ಸಾಧು-ಗಳು ಗುಣವನ್ನೇ ಗ್ರಹಣಮಾಡಿ ನನ್ನ ಮೇಲೆ ದಯೆಮಾಡಲಿ.

ಮತ್ಪ್ರೇರಕಾಭ್ಯಾಂ ದೇವಾಭ್ಯಾಂ
ಸ್ವಸೇವಾ ಯಾ ಚ ಕಾರಿತಾ ।
ಸಮರ್ಪ್ಯತೇ ತಯೋರಂಘ್ರ್ಯೋಃ
ಪ್ರೀಯೇತಾಂ ಮಧ್ವಮಾಧವೌ ॥ ೪ ॥

(ಅರ್ಥ) ನನ್ನ ಸಕಲೇಂದ್ರಿಯಗಳಿಗೂ ಮುಖ್ಯನಿಯಾಮಕರಾದ ಯಾವ ಶ್ರೀಹರಿವಾಯುಗಳು ವಾಯುಸ್ತುತಿಗೆ ವಿವರಣೆ ಬರೆಯುವುದೆಂಬ ಈ ಸೇವೆಯನ್ನು ನನ್ನಿಂದ ಮಾಡಿಸಿದರೋ ಅವರಿಬ್ಬರ ಪಾದಸನ್ನಿಧಿ-ಯಲ್ಲೇ ಇದನ್ನು ಸಮರ್ಪಿಸುತ್ತೇನೆ. ಇದರಿಂದ ಶ್ರೀಮನ್ಮಧ್ವಾಚಾರ್ಯರೂ ತದಂತರ್ಗತನಾದ ಶ್ರೀಲಕ್ಷ್ಮೀಹಯಗ್ರೀವನೂ ಸುಪ್ರೀತರಾಗಲಿ.

ನವವೃಂದಾವನಸ್ಥಾನಾಂ ಮುನೀನಾಂ ಸತ್ಕೃಪಾಶ್ರಯೇ ।
ರಚಿತಾ ವಿಷ್ಣುತೀರ್ಥೇನ ಟೀಕೇಯಂ ಹರಿಸಂಸ್ತುತೇಃ ॥೫॥

(ಅರ್ಥ) ನವವೃಂದಾವನದಲ್ಲಿರುವ ಶ್ರೀಮತ್ಪದ್ಮನಾಭತೀರ್ಥಾದಿ ಸಕಲ ಯತೀಶ್ವರರ ಹಾಗೂ ಶ್ರೀಮಟ್ಟೀಕಾಕೃತ್ಪಾದಾದಿ ಸಕಲ ಮುನೀಂದ್ರರ ಸತ್ಕೃಪಾಶ್ರಯದಲ್ಲಿ ಶ್ರೀ ಹರಿವಾಯುಸ್ತುತಿಯ ಈ ವಿಸ್ತಾರವಾದ ಟೀಕೆ-

ಯನ್ನು ನವವೃಂದಾವನಸೇವಾಧುರಂಧರನಾದ ವಿಷ್ಣುತೀರ್ಥನೆಂಬ ಬ್ರಹ್ಮ-ಚಾರಿಯು ರಚಿಸಿದನು.

ಸದ್ವೈಷ್ಣವಾನಾಂ ಭಕ್ತಾನಾಂ
ಮಾಧ್ವಸಿದ್ಧಾಂತದರ್ಶನೇ ।
ಜ್ಞಾನಭಕ್ತಿಪ್ರದೋ ಗ್ರಂಥೋ
ಮಾರ್ಗದೀಪಾಯತಾಂ ಚಿರಮ್ ॥ ೩ ॥

(ಅರ್ಥ) ಸದ್ವೈಷ್ಣವಕುಲದಲ್ಲಿ ಹುಟ್ಟಿದ ಭಕ್ತರೆಲ್ಲರಿಗೂ ಜ್ಞಾನಭಕ್ತಿ ವೈರಾಗ್ಯಾದಿಗುಣಗಳನ್ನು ಉಂಟುಮಾಡುವ ಈ ಗ್ರಂಥವು ಶ್ರೀಮನ್ಮಧ್ವ-ಸಿದ್ಧಾಂತದ ಸಾರಾಂಶಗಳನ್ನು ತಿಳಿಸಿಕೊಡುವುದರಲ್ಲಿ ಚಿರಕಾಲ ದಾರಿದೀವಿಗೆ-ಯಂತೆಸಹಾಯಮಾಡಲಿ.

ಶ್ರೀಕೃಷ್ಣಾರ್ಪಣಮಸ್ತು

ಬಳಿತ್ಥಾಸೂಕ್ತಕ್ಕೆ ಸಾಯಣಭಾಷ್ಯಾರ್ಥ

ಸೂಚನೆ—ಬಳಿತ್ಥಾಸೂಕ್ತಕ್ಕೆ ಮಾಧ್ವಟೀಕಾಕಾರರ ಪ್ರಕಾರ ಅರ್ಥವನ್ನು ವಿಸ್ತಾರವಾಗಿ ನಿರೂಪಣೆ ಮಾಡಿದ ಬಳಿಕ ಸಾಯಣರು ತಮ್ಮ ಋಗ್ಭಾಷ್ಯದಲ್ಲಿ ಏನು ಅರ್ಥ ಹೇಳಿದ್ದಾರೆಂಬುದನ್ನು ತಿಳಿಯಲು ಅನೇಕರಿಗೆ ಕುತೂಹಲವಿರುವುದು ಸಹಜ. ಅವರ ನಿಮಿತ್ತವಾಗಿ ಸಾಯಣಭಾಷ್ಯರೀತ್ಯಾ ಈ ಐದೂ ಮಂತ್ರಗಳ ಅರ್ಥ-ತಾತ್ಪರ್ಯಗಳನ್ನು ಕೊಡಲಾಗಿದೆ. ಈ ಅರ್ಥ-ತಾತ್ಪರ್ಯಗಳನ್ನೂ ಕೆಲವು ವಿವರಣೆಗಳನ್ನೂ ಬರೆಯುವಾಗ ಪಂಡಿತ ಹೆಚ್.ಪಿ. ವೆಂಕಟರಾಯರ ಮೈಸೂರು ಅರಮನೆ ಋಗ್ಭಾಷ್ಯದಿಂದ ನಾನು ಯಥೇಷ್ಟ ಸಹಾಯಪಡೆದಿದ್ದೇನಾದ ಕಾರಣ ಅವರಿಗೆ ಕೃತಜ್ಞನಾಗಿದ್ದೇನೆ.

392. ಸಾಯಣರ ಪ್ರಕಾರ ಈ ಸೂಕ್ತಕ್ಕೆ ದೀರ್ಘತಮಾ ಎಂಬುವರೇ ಋಷಿ. ಜಗತೀ ಛಂದಸ್ಸು. ಅಗ್ನಿಯೇ ದೇವತೆ. ಪ್ರಾತರನುವಾಕಮಂತ್ರಪಠನ ಕಾಲದಲ್ಲಿಯೂ ಅಶ್ವಿನಶಸ್ತ್ರಮಂತ್ರ ಪಠಿಸುವಾಗಲೂ ಇದಕ್ಕೆ ವಿನಿಯೋಗ ಆಶ್ವಲಾಯನ ಶ್ರೌತಸೂತ್ರದಲ್ಲಿ (೪–೧೩) 'ವೇದಿಷದ ಇತಿ ಷಣ್ಣಾಂ ತೃತೀಯಮುದ್ಧರೇತ್' ಎಂದು ಹೇಳಿದೆ.

ಹರಿಃ ಓಂ ||

ಬಳಿತ್ಥಾ ತದ್ ವಪುಷೇ ಧಾಯಿ ದರ್ಶತಂ
ದೇವಸ್ಯ ಭರ್ಗಃ ಸಹಸೋ ಯತೋ ಜನಿ |
ಯದೀಮುಪ ಹ್ವರತೇ ಸಾಧತೇ ಮತಿರ್
ಋತಸ್ಯ ಧೇನಾ ಅನಯಂತ ಸಸ್ರುತಃ || ೧ ||

393. (ಕ). ಅನ್ವಯಾರ್ಥ—ದೇವಸ್ಯ–ಪ್ರಕಾಶನಮಾನನಾದ ಆದಿತ್ಯನ, ದರ್ಶತಂ–ಸರ್ವರಿಗೂ ಗೋಚರವಾಗತಕ್ಕದ್ದೂ, ತತ್–ಪ್ರಸಿದ್ಧವಾದುದೂ ಆದ, ಭರ್ಗಃ–ತೇಜಸ್ಸು, ಇತ್ಥಾ–ಈ ರೀತಿಯಾಗಿಯೇ (ಎಂದರೆ

ಸರ್ವರಿಗೂ ಕಾಣಿಸುವಂತೆಯೇ), **ವಪುಷೇ**–ಶರೀರ ದಾರ್ಢ್ಯಕ್ಕಾಗಿ, **ಧಾಯಿ**–ಸರ್ವರಿಂದಲೂ ಧರಿಸಲ್ಪಡುತ್ತದೆ. **ಯತಃ**–ಏಕೆಂದರೆ, **ಸಹಸಃ**–ಶಕ್ತಿಯಿಂದ, **ಜನಿ**–ಉತ್ಪನ್ನವಾಯಿತು. **ಬಟ್ ಇತ್ಥಾ**–ಇದರಲ್ಲಿ ಸಂದೇಹವಿಲ್ಲ, ನಿಜವಾಗಿಯೂ ಹೀಗೆಯೇ ಸರಿ. **ಯತ್ ಈಂ**–ಯಾವ ಈ (ಪ್ರಸಿದ್ಧವಾದುದೂ ಲೋಕೋಪಕಾರಿಯೂ ಆದ) ತೇಜಸ್ಸನ್ನು, **ಮತಿಃ**–ನನ್ನ ಬುದ್ಧಿಯು, **ಉಪ ಹ್ವರತೇ**–(ಪ್ರಯತ್ನಪೂರ್ವಕವಾಗಿ) ಸಮೀಪಿಸುತ್ತದೆ. ಮತ್ತು **ಸಾಧತೇ**–ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತದೆ. **ಋತಸ್ಯ**–ಯಜ್ಞಸಾಧಕವಾದ ಅಗ್ನಿಯ (ತೇಜಸ್ಸಿನೊಡನೆ), **ಧೇನಾಃ**–(ಸಕಲ ಪ್ರಾಣಿಗಳ) ಮಾತುಗಳನ್ನು, **ಸಸ್ರುತಃ**–ಒಂದುಗೂಡುವಂತೆ (ಸೇರಿಕೊಳ್ಳುವಂತೆ) **ಅನಯಂತ**–(ಜಗತ್ತಿನ ಸಕಲ ಕಾರ್ಯಕಲಾಪಗಳನ್ನೂ) ನಿರ್ವಹಿಸುತ್ತವೆ. ಅಥವಾ **ಋತಸ್ಯ**–ಯಜ್ಞಸಂಬಂಧವಾದ, **ಧೇನಾಃ**–ಮಂತ್ರರೂಪವಾದ ವಾಕ್ಕುಗಳು, **ಸಸ್ರುತಃ**–ಹೋತ್ರಾದಿಗಳ ಮುಖದಿಂದ ಹೊರಟು, **ಅನಯಂತ**–(ಅಗ್ನಿಯ ಸ್ತೋತ್ರವನ್ನು) ನಿರ್ವಹಿಸುತ್ತವೆ.

393. (ಖ) **ವಿಶೇಷಾರ್ಥ**—೧. 'ಅವಿದ್ಯಾತತ್ಕಾರ್ಯಯೋಃ ಭರ್ಜನಾದ್ಭರ್ಗಃ, ತೇಜಃ) ಅವಿದ್ಯೆಯನ್ನೂ ಅದರ ಕಾರ್ಯಗಳಾದ ಆ ಕಾಮಕ್ರೋಧಮೋಹಾದಿಗಳನ್ನೂ ಧ್ವಂಸ(ಭಂಗ)ಗೊಳಿಸುವುದರಿಂದ ಭರ್ಗಃ ಎಂದರೆ ತೇಜಸ್ಸು. ೨. ಸಹಸಃ ಜನಿ–ಅರಣಿಯಿಂದ ಬೆಂಕಿಯನ್ನು ಕಡೆಯುವಾಗ ಬಹಳ ಬಲಪ್ರಯೋಗ ಮಾಡಬೇಕಲ್ಲವೆ! ಅದನ್ನೇ ಇಲ್ಲಿ ಹೇಳಿದೆ. ೩. ಸಸ್ರುತಃ ಎಂದರೆ 'ಸಮಾನಂ ಗಚ್ಛಂತ್ಯಃ' ಒಟ್ಟಿಗೆ ಹೋಗುವ, 'ಸಹೈವ ಪ್ರವರ್ತಮಾನಾಃ' ಜೊತೆಜೊತೆಯಾಗಿಯೇ ನಡೆಯುವ ಎಂದರ್ಥ. ಲೋಕವ್ಯವಹಾರಗಳು ಅನೇಕ ಕಡೆ ಒಂದೇ ವೇಳೆಯಲ್ಲೇ ನಡೆಯುತ್ತವೆ. ಇದಕ್ಕೆಲ್ಲಾ ಪ್ರಾಣಧಾರಣಕ್ಕೆ ಕಾರಣವಾದ ಅಗ್ನಿಯೇ (ಶರೀರದ ತಾಪವೇ) ಕಾರಣ. ೪. ವಪುಷೇ ಧಾಯಿ–'ಜಾಠರಾಗ್ನಿನಾ ಭುಕ್ತಾನಾಂ ಜರಣೇನ ಶರೀರಧಾರಣಂ ಪ್ರಸಿದ್ಧಮ್'–ಪ್ರಾಣಿಗಳು ತಿಂದ ಆಹಾರವು ಜಠರಾಗ್ನಿಯಿಂದ ಜೀರ್ಣವಾಗಿ ಬಲರೂಪವಾಗಿ ಪರಿಣಮಿಸುವುದರಿಂದಲೇ ಪ್ರಾಣಿಗಳಿಗೆ ಶರೀರ ದಾರ್ಢ್ಯವುಂಟಾಗುತ್ತದೆ ಎಂಬ ವಿಷಯ ಪ್ರಸಿದ್ಧವಾಗಿದೆ. ೫. **ಬಟ್**

ಎಂಬುದು ಅವ್ಯಯ. ಈ ಪದ ಋಗ್ವೇದದಲ್ಲಿ ಹತ್ತು ಕಡೆ ಪ್ರಯುಕ್ತವಾಗಿದೆ— ೧-೯೬-೧, ೧-೧೪೧-೧, ೫-೬೭-೧, ೫-೮೪-೧, ೬-೫೯-೨, ೮-೬೩-೧೧ ೮-೧೦೧-೧೧ ಎರಡು ಸಾರಿ, ೮-೧೦೧-೧೨ ಮತ್ತು ೧೦-೯೨-೩. ಸಾಯಣರು ಹತ್ತು ಕಡೆಯೂ ಬಟ್ ಎಂದರೆ 'ಸತ್ಯಂ'–ನಿಜವಾಗಿಯೂ, ಖಂಡಿತವಾಗಿ ಎಂದೇ ಅರ್ಥಮಾಡಿ 'ಬಟ್-ಶ್ರತ್–ಸತ್ಯೇತ್ಥೀ'ತಿ ಶನ್ನಾಮಸು ಪಾಠಾತ್ ಎಂಬ ನಿರುಕ್ತವನ್ನೇ (೩/೧೩) ಪ್ರಮಾಣವಾಗಿ ಹೇಳಿದ್ದಾರೆ.

(ಗ) ತಾತ್ಪರ್ಯ—ಸೂರ್ಯದೇವನ (ದೇವಸ್ಯ) ತೇಜಸ್ಸನ್ನು (ಭರ್ಗಃ) ಅರಿಯುದವರಾರಿದ್ದಾರೆ ! (ತತ್) ಅದು ಎಲ್ಲರಿಗೂ ಸ್ಪಷ್ಟವಾಗಿ ಗೋಚರವಾಗಿದೆ (ದರ್ಶತಂ). ಸೂರ್ಯನ ಆ ತೇಜಸ್ಸನ್ನೇ ಸಕಲಪ್ರಾಣಿಗಳೂ ತಮ್ಮ ದೇಹದಲ್ಲಿ (ವಪುಷೇ) ದೇಹದಾರ್ಢ್ಯಕ್ಕಾಗಿ ಜಠರಾಗ್ನಿರೂಪದಿಂದ ಧರಿಸಿವೆ (ಧಾಯಿ). ಅದರ ಶಕ್ತಿಯಿಂದಲೇ ತಿಂದ ಆಹಾರವು ಜೀರ್ಣವಾಗಿ ಬಲರೂಪವಾಗಿ ಪರಿಣಮಿಸುತ್ತದೆ. ಈ ಅಗ್ನಿಗೆ ಇಂಥಾ ಶಕ್ತಿ ಹೇಗೆ ಬಂದಿತೆಂದರೆ ಅರಣಿಯಿಂದ (ಕಟ್ಟಿಗೆಯಿಂದ) ಅಗ್ನಿಯನ್ನು ಕಡೆಯುವಾಗ ಬಹಳ ಬಲಪ್ರಯೋಗ ಮಾಡಬೇಕಲ್ಲವೆ (ಸಹಸೋ ಯತೋ ಜನಿ), ಅದರಿಂದ ಅಂಥಾ ಶಕ್ತಿ ಬಂತು. ಇಂಥಾ ಆ ಅಗ್ನಿಯನ್ನು (ಯದೀಂ) ನನ್ನ ಬುದ್ಧಿಯೂ ಗ್ರಹಿಸಿ (ಉಪಹ್ವರತೇ) ತನ್ನ ಸಕಲ ಇಷ್ಟಾರ್ಥಗಳನ್ನೂ ಸಾಧಿಸಿಕೊಳ್ಳುತ್ತದೆ (ಸಾಧತೇ). ಯಜ್ಞಾನುಷ್ಠಾನಮಾಡುವಾಗ ಹೋತ್ರಾದಿ ಋತ್ವಿಕ್ಕುಗಳು ಮಂತ್ರರೂಪವಾದ ಸ್ತೋತ್ರಗಳಿಂದ (ಧೇನಾಃ) ಆ ಅಗ್ನಿಯನ್ನು ಸ್ತುತಿಸುತ್ತಾರೆ (ಅನಯಂತ) ಆ ಅಗ್ನಿಯಿಂದಲೇ ಲೋಕದ ಮಾತು-ಕತೆ ಮೊದಲಾದ ಸಕಲವ್ಯವಹಾರಗಳೂ ಏಕಕಾಲದಲ್ಲಿಯೇ ಒಟ್ಟೊಟ್ಟಿಗೆ (ಸಸ್ರುತಃ) ನಡೆಯುತ್ತಿರುತ್ತವೆ (ಧೇನಾಃ ಅನಯಂತ).

ಎರಡನೇ ಮಂತ್ರ

ಪೃಕ್ಷೋ ವಪುಃ ಪಿತುಮಾನ್ನಿತ್ಯ ಆಶಯೇ
ದ್ವಿತೀಯಮಾ ಸಪ್ತಶಿವಾಸು ಮಾತೃಷು ।
ತೃತೀಯಮಸ್ಯ ವೃಷಭಸ್ಯ ದೋಹಸೇ
ದಶಪ್ರಮತಿಂ ಜನಯಂತ ಯೋಷಣಃ ॥ ೨ ॥

394. ಅನ್ವಯಾರ್ಥ—ಹಿಂದಿನ ಮಂತ್ರದಿಂದ 'ಅಗ್ನಿಃ' ಎಂಬುದನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಅಲ್ಲದೆ ಮುಂದೆ 'ದ್ವಿತೀಯಂ' 'ತೃತೀಯಂ'ಎಂದು ಬರುವುದರಿಂದ 'ಪ್ರಥಮಂ' ಎಂದೂ ಅಧ್ಯಾಹಾರಮಾಡಿಕೊಳ್ಳಬೇಕು—ಅಯಮಗ್ನಿಃ-ಆ ಅಗ್ನಿಯು, ಪ್ರಥಮಂ-ಮೊದಲನೆಯದಾಗಿ, ಪೃಕ್ಷಃ-ಅನ್ನಸಾಧಕನಾಗಿಯೂ (ಜೀರ್ಣಕಾರಕನಾಗಿಯೂ), ವಪುಃ-ಶರೀರ ಪೋಷಕನಾಗಿಯೂ, ಪಿತುಮಾನ್-ಹವಿಸ್ಸಿನ ರೂಪವಾದ ಅನ್ನವುಳ್ಳವನಾಗಿಯೂ, ನಿತ್ಯಃ-ಶಾಶ್ವತನಾಗಿಯೂ, ಆ ಶಯೇ-ಭೂಮಿಯ ಮೇಲೆ ಇರುತ್ತಾನೆ. ದ್ವಿತೀಯಂ-ಎರಡನೆಯ ರೂಪವಾಗಿ, ಸಪ್ತಶಿವಾಸು-ಏಳು ಲೋಕಗಳಿಗೂ ಮಂಗಳಕಾರಕಗಳಾಗಿರುವ, ಮಾತೃಷು-ತಾಯಿಯಂತೆ ಇರುವ ವೃಷ್ಟಿಪ್ರಾಂತಗಳಲ್ಲಿ, ಆ ಶಯೇ-ವಿದ್ಯುದ್ರೂಪದಿಂದ (ಮಿಂಚಿನರೂಪದಿಂದ) ಇರುತ್ತಾನೆ. ತೃತೀಯಂ-ಮೂರನೆಯದಾಗಿ, ವೃಷಭಸ್ಯ-ವೃಷ್ಟಿಕಾರಕನಾದ (ಮಳೆಗೆ ಮುಖ್ಯಕಾರಣನಾದ) ಸೂರ್ಯನ, ದೋಹಸೇ-ಮಳೆಯನ್ನು ಸುರಿಸುವ ಕಿರಣಗಳ ಪ್ರವೃತ್ತಿಗಾಗಿ, ಆ ಶಯೇ-ದ್ಯುಲೋಕದಲ್ಲಿ ಹರಡಿರುತ್ತಾನೆ. ದಶಪ್ರಮತಿಂ-ಹತ್ತು ದಿಕ್ಕುಗಳನ್ನೂ ಬೆಳಗುವ ಆದ್ದರಿಂದಲೇ ಪೂಜ್ಯನೂ ಆದ ಅಗ್ನಿಯನ್ನು (ಅಥವಾ ಹತ್ತುಬೆರಳುಗಳಿಂದಲೂ ಮಥಿಸಿ ಉತ್ಪನ್ನನಾದ ಮತ್ತು ಹತ್ತು ದಿಕ್ಕುಗಳಲ್ಲೂ ಹರಡಿರುವವನಾದ ಅಗ್ನಿಯನ್ನು) ; ಯೋಷಣಃ (ಮಿಶ್ರಣಶೀಲಾಃ ಸರ್ವಾ ದಿಶಃ) ಒಂದಕ್ಕೊಂದು ಅಂಟಿಕೊಂಡಿರುವ ಹತ್ತುದಿಕ್ಕುಗಳು, ಜನಯಂತ-(ಉತ್ಪಾದಯಂತಿ, ಸರ್ವಾಸು ದಿಕ್ಷು ಪ್ರಸೃತಂ ಕುರ್ವಂತೀತ್ಯರ್ಥಃ) ಹಡೆದುವು ಎಂದರೆ ಹತ್ತುದಿಕ್ಕುಗಳಲ್ಲೂ ಹರಡುವಂತೆ ಮಾಡಿದುವು ಎಂದರ್ಥ.

395. (ಅ) ಸೂಚನೆ—ಈ ಋಕ್ಕಿನಲ್ಲಿ ಅಗ್ನಿಯ ಮೂರು ರೂಪಗಳು ಮೂರು ಲೋಕಗಳಲ್ಲಿ (ಭಿನ್ನನಾಮಗಳಿಂದ) ಇವೆಯೆಂದು ವರ್ಣಿಸಲಾಗಿದೆ. ಋಕ್ಸಂಹಿತೆಯ 'ಮೂರ್ಧಾ ಭುವೋ ಭವತಿ ನಕ್ತಮಗ್ನಿಃ' (೧೦ಮಂ. ೮೮ಸೂ, ೬ಋ) ಇತ್ಯಾದಿ ಋಕ್ಕುಗಳ ಆಧಾರದ ಮೇಲೆ ಪೃಥ್ವಿಯಲ್ಲಿ ಅಗ್ನಿ ಎಂದೂ, ಅಂತರಿಕ್ಷದಲ್ಲಿ ಜಾತವೇದಾ ಎಂಬ ಹೆಸರಿನಿಂದಲೂ ದ್ಯುಲೋಕದಲ್ಲಿ ವೈಶ್ವಾನರನೆಂದೂ ಇದ್ದಾನೆಂದು ನಿರುಕ್ತಕಾರರು ವರ್ಣಿ-

ಸಿದ್ದಾರೆ (೭–೧೪ ರಿಂದ ೨೮). ಇನ್ನು 'ಬೃಹದ್ದೇವತೆ' ಎಂಬ ಗ್ರಂಥದಲ್ಲಿ (೧–೬೧ ರಿಂದ ೬೪) ಪೃಥ್ವಿಯ ಅಗ್ನಿಗೆ ಪವಮಾನನೆಂದೂ ಮಧ್ಯಲೋಕದ ಅಗ್ನಿಗೆ ವನಸ್ಪತಿಯೆಂದೂ, ದ್ಯುಲೋಕದ ಅಗ್ನಿಗೆ ಶುಚಿಯೆಂದೂ ಹೆಸರಿದೆ-ಯೆಂದು ಹೇಳಿದೆ. ಇದನ್ನೇ ಎಲ್ಲಾ ಸಂಹಿತೆಗಳೂ "ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಸ್ಮ ದ್ವಿತೀಯಂ ಪರಿ ಜಾತವೇದಾಃ । ತೃತೀಯಮಪ್ಸು ನೃಮಣಾ ಅಜಸ್ರಮಿಂಧಾನ ಏವಂ ಜರತೇ ಸ್ವಾಧೀಃ' (ಋ. ೧೦–೪೫–೧ ; ವಾಜ.ಸಂ. ೧೨–೧೮ ; ತೈ.ಸಂ. ೧–೩–೧೪–೫) ಎಂದು ಹೇಳುತ್ತವೆ.

(ಆ) ಭಾವಾರ್ಥ—ಆ ಅಗ್ನಿಯೇ ಮೂರು ಲೋಕಗಳಲ್ಲಿ ಮೂರು ರೂಪದಿಂದ ಬೇರೆಬೇರೆ ಕಾರ್ಯನಿರ್ವಹಣೆ ಮಾಡುತ್ತಾನೆ. ಭೂಮಿ-ಯಲ್ಲಿರುವ ಪ್ರಥಮ ರೂಪವು ಯಜ್ಞಯಾಗಾದಿಗಳಲ್ಲಿ ಕೊಡುವ ಹವಿಸ್ಸಿನಿಂದ ಪುಷ್ಟವಾಗಿ ಪ್ರಾಣಿಗಳು ತಿನ್ನುವ ಆಹಾರವನ್ನು ಜೀರ್ಣಿಸಿಕೊಟ್ಟು ಶರೀರ-ದಾರ್ಢ್ಯಕ್ಕೆ ಕಾರಣೀಭೂತವಾಗಿದೆ. ಏಳು ಲೋಕಗಳಿಗೂ ಮಂಗಳವನ್ನು ಮಾಡುವ ಆದ್ದರಿಂದ ತಾಯಿಯಂತೆ ಇರುವ ವೃಷ್ಟಿಪ್ರದೇಶಗಳಲ್ಲಿ ಎರಡನೆಯ ವಿದ್ಯುದ್ರೂಪದಿಂದ (ಮಿಂಚಾಗಿ) ಇದ್ದಾನೆ. ಮೂರನೆಯ ರೂಪವು ದ್ಯುಲೋಕದಲ್ಲಿ ಸೂರ್ಯನ ಕಿರಣಗಳ ರೂಪದಿಂದ ಮಳೆಸುರಿಸುತ್ತದೆ. ಆದಿತ್ಯನ ಕಿರಣಗಳು ಸಮುದ್ರದಿಂದ ನೀರನ್ನು ಹೀರಿ ಮೋಡ ಮಾಡಿ ಮಳೆ-ಸುರಿಸುತ್ತವೆಯೆಂಬುದು ಪ್ರಸಿದ್ಧವಾಗಿದೆಯಲ್ಲವೆ. ಇಂಥಾ ತ್ರಿಸ್ಥಾನವಾಸಿ-ಯಾದ ಅಗ್ನಿಯನ್ನು ಹತ್ತುದಿಕ್ಕುಗಳೂ ಸೇರಿ ಎಲ್ಲಾ ಕಡೆಯೂ ಹರಡುವಂತೆ ಮಾಡಿದುವು ಎಂದು ಭಾವ.

ಮೂರನೇ ಮಂತ್ರ

ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ
ಈಶಾನಾಸಃ ಶವಸಾ ಕ್ರಂತ ಸೂರಯಃ ।
ಯದೀಮನು ಪ್ರದಿವೋ ಮಧ್ವ ಆಧವೇ
ಗುಹಾಸಂತಂ ಮಾತರಿಶ್ವಾ ಮಥಾಯತಿ ॥ ೩ ॥

396. ಅನ್ವಯಾರ್ಥ— **ಈಂ**-ಈ ಅಗ್ನಿಯನ್ನು, **ಯತ್**-ಯಾವ ಕಾರಣದಿಂದ, **ಮಹಿಷಸ್ಯ**-ಯಜ್ಞದ, **ಬುಧ್ನಾತ್**-ಅಗ್ನ್ಯಾಧಾನ-ಕಾಲದಿಂದ ಆರಂಭಿಸಿ, **ವರ್ಪಸಃ**-ಉಪಕ್ರಮ-ಉಪಸಂಹಾರಾತ್ಮಕವಾದ ಸಿದ್ಧಿಗಾಗಿ, **ಈಶಾನಾಸಃ**-ಸ್ವಕರ್ತವ್ಯನಿರ್ವಹಣೆಯಲ್ಲಿ ಸಮರ್ಥರಾದ ; **ಸೂರಯಃ**-ಪಂಡಿತರಾದ ಋತ್ವಿಜರು, **ಶವಸಾ**-ಮಂತ್ರರೂಪವಾದ ಶಕ್ತಿ-ಯಿಂದ ಅಥವಾ ದೇಹಶಕ್ತಿಯಿಂದ, ನಿರ್‌ಕ್ರಂತ(ನಿಷ್ಕ್ರಂತ) ಕಾಷ್ಠದಿಂದ ಉತ್ಪನ್ನಮಾಡಿದರೋ (ಅಥವಾ ಇನ್ನೊಂದು ಅನ್ವಯಕ್ರಮ) **ಬುಧ್ನಾತ್**-ಅರಣಿಗಳನ್ನು ಮಥನಮಾಡುವ (ಕಡೆಯುವ) ಕಾಲದಿಂದ ಆರಂಭಿಸಿ, **ಮಹಿಷಸ್ಯ ವರ್ಪಸಃ**-ಆಹುತಿಗಳನ್ನು ಸ್ವೀಕರಿಸಲು ಯೋಗ್ಯವಾದ ಪ್ರಜ್ವಲ-ವಾದ ದೊಡ್ಡ ಆಕಾರವನ್ನು ಪಡೆಯುವುದಕ್ಕಾಗಿ ; **ನಿಃಕ್ರಂತ**-ಕಾಷ್ಠದಿಂದ ಉತ್ಪನ್ನಮಾಡಿದರೋ ಮತ್ತು **ಗುಹಾಸಂತಂ**-ಕಟ್ಟಿಗೆಯಲ್ಲಿ ಕಾಣಿಸದಂತೆ ಗುಪ್ತವಾಗಿದ್ದ ಅಗ್ನಿಯನ್ನು, **ಪ್ರದಿವಃ**-ಅನಾದಿಕಾಲದಿಂದ ಇರುವಂತೆಯೇ, **ಮಧ್ವಃ**-ಜೇನುತುಪ್ಪದಂತೆ ಮಧುರವಾಗಿರುವ, **ಆಥವೇ**-ಆಹುತಿಯನ್ನು ಅರ್ಪಿಸುವುದಕ್ಕಾಗಿ, **ಮಾತರಿಶ್ವಾ**-ವಾಯುವು, **ಮಥಾಯತಿ**-ಬೀಸಿ ಎಲ್ಲಾ ಕಡೆ ಹರಡುವಂತೆ ಮಾಡುತ್ತಾನೋ, ಅಥವಾ ಮಾತರಿಶ್ವಾ-ಯಜ-ಮಾನನು, ಮಥಾಯತಿ-ಕಡೆದು ಹೊರಗೆಡಹುತ್ತಾನೆಯೋ ಆದ್ದರಿಂದ ಈ ಅಗ್ನಿಯು ಸ್ತುತ್ಯನಾಗಿದ್ದಾನೆ.

397(ಎ). ವಿಶೇಷ—ಸಾಯಣಭಾಷ್ಯದಲ್ಲಿ ಮಹಿಷಸ್ಯ ಎಂಬು-ದಕ್ಕೆ ಎರಡು ಪ್ರಕಾರ ಅನ್ವಯ ತೋರಿಸಿದ್ದಾರೆ—ಬುಧ್ನಾತ್ ಜೊತೆ ಮತ್ತು ವರ್ಪಸಃ ಜೊತೆ. (i) ಬುಧ್ನಾತ್ ಎಂಬುದಕ್ಕೆ 'ಮೂಲಾತ್, ಆಧಾನಾ-ದಾರಭ್ಯ' ಎಂದು ಅರ್ಥಮಾಡಿದ್ದಾರೆ. ಬುಧ್ನ ಎಂದರೆ ಗಹನವಾದ ಮೂಲ-ಪ್ರದೇಶ. ಮಹಿಷ ಶಬ್ದವು ಯಜ್ಞವಾಚಕವಾದ ಮಹನ್ನಾಮಗಳಲ್ಲಿ (೩/೧೩) ಪಠಿತವಾಗಿರುವುದರಿಂದ ಮಹಿಷಸ್ಯ ಎಂದರೆ ಯಜ್ಞದ ಎಂದರ್ಥ. ಮಹಿಷಸ್ಯ ಬುಧ್ನಾತ್ ಎಂದರೆ ಯಜ್ಞಕ್ಕೆ ಮೂಲಾಧಾರವಾದ ಪ್ರದೇಶದಿಂದ ಎಂದರೆ ಅಗ್ನ್ಯಾಧಾನಕಾಲ ಅಥವಾ ಅರಣಿಗಳ ಮಥನಕಾಲ ಎಂದಾಗುತ್ತದೆ. ಆ ಕಾಲದಿಂದ ಆರಂಭಿಸಿ ಎಂದು 'ಮಹಿಷಸ್ಯ ಬುಧ್ನಾತ್' ಎಂಬುದರ ಅರ್ಥವಾಗುತ್ತದೆ.

(ii) ಇನ್ನು 'ವರ್ಪಸಃ' ಎಂಬ ಪದ ವೃಙ್ ಸಂಭಕ್ತೌ ಎಂಬ ಧಾತುವಿಗೆ ಅಸುನ್ ಪ್ರತ್ಯಯವು 'ವೃಙ್‌ಶೀಙ್‌ಭ್ಯಾಂ ರೂಪಸ್ವಾಂಗಯೋಃ ಪುಟ್‌ಚ' ಎಂಬ ಉಣಾದಿಸೂತ್ರದಂತೆ (೪/೬೪೦) ರೂಪಾರ್ಥದಲ್ಲಿ ಬಂದು ಪುಟಾಗಮವಾಗಿ ಆಗಿದೆ. ಅದರಿಂದ ಇದಕ್ಕೆ ವಿಸ್ತೃತವಾದ ಆಕಾರವೆಂದು ಅರ್ಥ. ಹೀಗೆ ಮಹಿಷಸ್ಯ ವರ್ಪಸಃ ಎಂಬುದಕ್ಕೆ ಆಹುತಿಯನ್ನು ಸ್ವೀಕರಿಸಲು ಬೇಕಾಗುವ ದೊಡ್ಡರೂಪವನ್ನು (ಧರಿಸಿದವನಾಗಿ) ಎಂದರ್ಥವಾಗುತ್ತದೆ. ಹೋಮಾಗ್ನಿಯು ಚಿಕ್ಕದಾಗಿದ್ದರೆ ಆಹುತಿ ಹಾಕಿದ ಕೂಡಲೇ ಆರಿಯೇ ಹೋಗಬಹುದು. ಆದಕಾರಣ ಎಷ್ಟು ಆಹುತಿ ಹಾಕಿದರೂ ಸ್ವೀಕರಿಸುವಷ್ಟು ದೊಡ್ಡದಾಗಿ (ಕಟ್ಟಿಗೆಹಾಕಿ ಉರಿಮಾಡಿ) ಬೆಳೆದ ಎಂಬ ಅರ್ಥವನ್ನು ಗ್ರಹಣ-ಮಾಡಬೇಕೆಂಬುದು ಭಾಷ್ಯಕಾರರ (ಸಾಯಣರ) ಅಭಿಪ್ರಾಯ.

(ಬಿ) ತಾತ್ಪರ್ಯ—ಹೋಮಾಗ್ನಿಯು (ಯದೀಂ) ಅರಣಿಯಿಂದ ಕಡೆದು ತೆಗೆದಾಗ ಬಹಳ ಚಿಕ್ಕದಾಗಿರುತ್ತದೆ. ಅದಕ್ಕೆ ಆಗಲೇ ಆಹುತಿಯನ್ನು ಹಾಕಿದರೆ ಅದು ನಂದಿಯೇ ಹೋಗಬಹುದು. ಅದಕ್ಕೋಸ್ಕರ ಪಂಡಿತರೂ ಸ್ವಕರ್ತವ್ಯನಿರ್ವಹಣೆಯಲ್ಲಿ ಸಮರ್ಥರೂ ಮೇಧಾವಿಗಳೂ ಆದ ಋತ್ವಿಜರು (ಈಶಾನಾಸಃ ಸೂರಯಃ) ತಮ್ಮ ಮಂತ್ರಶಕ್ತಿಯಿಂದಲೂ ಶರೀರಸಾಮರ್ಥ್ಯ ದಿಂದಲೂ ಸಹ(ಶವಸಾ) ಕಾಷ್ಠದಲ್ಲಿ ಕಾಣಿಸದಂತೆ ಅಡಗಿಕೊಂಡಿದ್ದ(ಗುಹಾ-ಸಂತಂ) ಅಗ್ನಿಯನ್ನು ಮಥಿಸಿ ಹೊರಹಾಕಿದರು(ನಿರ್‌ಕ್ರಂತ). ಮತ್ತು ಆ ಅಗ್ನಿಯು ಕ್ರಮವಾಗಿ ಅಗ್ನ್ಯಾಧಾನಕಾಲದಿಂದ ಆರಂಭಿಸಿ (ಮಹಿಷಸ್ಯ ಬುಧ್ನಾತ್) ಆಹುತಿಯ ಸ್ವೀಕಾರಕ್ಕೆ ಯೋಗ್ಯವಾದ ಸ್ಥೂಲ ರೂಪ-ವನ್ನು (ಮಹಿಷಸ್ಯ ವರ್ಪಸಃ) ಹೊಂದುವಂತೆಯೂ ಮಂತ್ರಗಳಿಂದಲೂ ಬೇರೆ ಬೇರೆ ವಿಧಾನಗಳಿಂದಲೂ ಅದನ್ನು ಪ್ರಜ್ವಲಗೊಳಿಸಿದರು (ನಿಷ್‌ಕ್ರಂತ). ಅನಂತರ ಅಂತರಿಕ್ಷದಲ್ಲಿ ಸಂಚರಿಸುವ ವಾಯುವು (ಗಾಳಿಯು) (ಮಾತರಿಶ್ವಾ) ಕಟ್ಟಿಗೆಯಲ್ಲಿ ಹುದುಗಿಕೊಂಡಿದ್ದ(ಗುಹಾಸಂತಂ) ಆ ಅಗ್ನಿಯನ್ನು (ಯದೀ-ಮನು) ಅನಾದಿಕಾಲದಿಂದಲೂ ಇರುವ ಹಾಗೆ (ಪ್ರದಿವಃ) ಈಗಲೂ ಮಧುವಿನಂತೆ ಮಧುರವಾದ (ಮಧ್ವಃ) ಆಹುತಿ ಸ್ವೀಕರಿಸುವುದಕ್ಕಾಗಿ (ಆಧವೇ) ದೊಡ್ಡದಾಗಿ ಹರಡಿಕೊಳ್ಳುವಂತೆ ಬೀಸಿ (ಗಾಳಿಹಾಕಿ) ಪ್ರಜ್ವಲ-

ಗೊಳಿಸುತ್ತಾನೆ (ಮಥಾಯತಿ). ಅಥವಾ ಯಜ್ಞ ಮಾಡುವ ಯಜಮಾನನು (ಮಾತರಿಶ್ವಾ) ಆ ಅಗ್ನಿಯನ್ನು ಅರಣಿಯನ್ನು ಕಡೆದು ತೆಗೆಯುತ್ತಾನೆ (ಮಥಾಯತಿ). ಆದಕಾರಣ ಆ ಅಗ್ನಿಯು ಸ್ತೋತ್ರಾರ್ಹನೆಂದು ಭಾವ.

ನಾಲ್ಕನೇ ಮಂತ್ರ

ಪ್ರ ಯತ್ ಪಿತುಃ ಪರಮಾನ್ನೀಯತೇ ಪರ್ಯಾ
　ಪೃಕ್ಷುಧೋ ವೀರುಧೋ ದಂಸು ರೋಹತಿ ।
ಉಭಾ ಯದಸ್ಯ ಜನುಷಂ ಯದಿನ್ವತ
　ಆದಿದ್ ಯವಿಷ್ಠೋ ಅಭವದ್ ಘೃಣಾ ಶುಚಿಃ ॥ ೪ ॥

398. (ಕ) ಅನ್ವಯಾರ್ಥ—ಯತ್-ಯಾವ ಕಾರಣದಿಂದ, ಪಿತುಃ (ಷಷ್ಠೀ ವಿಭಕ್ತಿಯು ಪ್ರಥಮಾರ್ಥದಲ್ಲಿ ಬಂದಿದೆ.)—ಪಶುಲಕ್ಷಣವಾದ ಅನ್ನವು, ಪರಮಾತ್-ಉತ್ಕೃಷ್ಟವಾಗುವ ನಿಮಿತ್ತ, ಪ್ರ ಪರಿ ನೀಯತೇ-ಅಗ್ನಿಯು ಪ್ರದಕ್ಷಿಣಾಕಾರವಾಗಿ ಒಯ್ಯಲ್ಪಡುತ್ತಾನೋ (ಪರ್ಯಗ್ನಿಕರಣ ಎಂಬ ಕ್ರಿಯೆ ನಡೆಸುತ್ತಾರೋ), ಅಥವಾ ಪರಮಾತ್-ಉತ್ಕೃಷ್ಟವಾದ, ಪಿತುಃ-ಉತ್ಪಾದಕವಾದ (ಮೂಲಾಧಾರಭೂತವಾದ) ಗಾರ್ಹಪತ್ಯಾಗ್ನಿಯಿಂದ, ಪ್ರ ಪರಿ ನೀಯತೇ-(ಪರಿ ಎಂಬುದಕ್ಕೆ ವಿಶೇಷ ಅರ್ಥವಿಲ್ಲ, 'ಪರ್ಯನರ್ಥಕಃ')-ಆಹವನೀಯಾಗ್ನಿಯು ಬಳಿಗೆ ಅತಿಶಯವಾಗಿ ಒಯ್ಯಲ್ಪಡುವನೋ, ಮತ್ತು ಪೃಕ್ಷುಧಃ-ಪಶುಪುರೋಡಾಶಾದಿಗಳಲ್ಲಿ ಜ್ವಾಲೆಯ ಮಧ್ಯದಲ್ಲಿ ಎದ್ದು ನಿಲ್ಲುವವೂ ಅಥವಾ ಆಹುತಿಗಳನ್ನು ಭಕ್ಷಿಸಲು ಆತುರವುಳ್ಳವೂ ಆದ, ವೀರುಧಃ-ಲತೆಗಳಂತೆ ಮೇಲ್ಮುಖವಾಗಿ ಹರಡಿರುವುವೂ ಆದ ಜ್ವಾಲೆಗಳು, ದಂಸು-ದಂತಗಳಂತಿರುವ ಜ್ವಾಲೆಗಳ ನಡುವೆ, ಆರೋಹತಿ-ಊರ್ಧ್ವಮುಖವಾಗಿ ಏರು(ಹತ್ತು)ತ್ತವೆಯೋ, ಮತ್ತು ಯತ್-ಯಾವ ಕಾರಣದಿಂದ, ಉಭಾ-ಅಧ್ವರ್ಯು ಮತ್ತು ಯಜಮಾನರಿಬ್ಬರೂ ಅಥವಾ ಮಥನಮಾಡುವಾಗ ಉಪಯೋಗಿಸುವ ಎರಡು ಅರಣಿಗಳೂ ಒಟ್ಟಿಗೆ ಸೇರಿ, ಅಸ್ಯ-ಈ ಅಗ್ನಿಗೆ, ಜನುಷಂ-ಉತ್ಪತ್ತಿಯನ್ನು,

ಇನ್ವತಃ-ವ್ಯಾಪಿಸುತ್ತಾರೋ ಎಂದರೆ ಉಂಟುಮಾಡುತ್ತಾರೋ, ಆದಿತ್-ಆದ್ದರಿಂದಲೇ, ಯವಿಷ್ಠಃ-ಅತ್ಯಂತ ಯುವಕನೂ, ಘೃಣಾ-ಯಜಮಾನನಲ್ಲಿ ದಯೆಯುಳ್ಳವನೂ, ಅಥವಾ ಪ್ರಕಾಶಮಾನನಾದವನೂ, ಶುಚಿಃ-ಪರಿಶುದ್ಧನೂ, ಅಭವತ್-ಆದನು.

398. (ಖ) ವಿಶೇಷ—i) ಪಿತುಃ ಎಂಬುದು ಪ್ರಥಮಾ ವಿಭಕ್ತಿ-ರೂಪವೂ (ಶಂಭುಃ ಎಂಬಂತೆ) ಆಗಬಹುದು ; ಪಿತೃಶಬ್ದದ ಪಂಚಮೀ ಏಕ-ವಚನರೂಪವೂ ಆಗಬಹುದು. ಸಾಯಣರು ಎರಡೂ ರೂಪಗಳನ್ನು ಹೊಂದಿಸಿಕೊಂಡು ಅರ್ಥ ಹೇಳಿದ್ದಾರೆ. (ಎ) ಪ್ರಥಮಾವಿಭಕ್ತಿ ಎಂಬ ಪಕ್ಷದಲ್ಲಿ 'ಪಿತುರಿತ್ಯನ್ನನಾಮ । ಪಾತೇರ್ವಾ ಪಿಬತೇರ್ವಾ ಪ್ಯಾಯತೇರ್ವಾ ಎಂದು ನಿರುಕ್ತದಲ್ಲಿ (೩-೯) ವ್ಯುತ್ಪತ್ತಿ ತೋರಿಸಿದ್ದಾರೆ. ರಕ್ಷಿಸು ಎಂದರ್ಥ-ವುಳ್ಳ 'ಪಾ ರಕ್ಷಣೇ' ಎಂಬ ಧಾತುವಿನಿಂದಾಗಲಿ, ಪಾ(ಪಿಬ್) ಪಾನೇ-ಕುಡಿ ಎಂಬ ಧಾತುವಿನಿಂದಾಗಲಿ ವೃದ್ಧಿಹೊಂದು ಎಂದು ಅರ್ಥವುಳ್ಳ ಪ್ಯೈ ಧಾತುವಿನಿಂದಾಗಲಿ ಈ ಪಿತು ಶಬ್ದ ನಿಷ್ಪನ್ನವಾಗಿದೆ. 'ಪಃ ಕಿಚ್ಚ (ಉ. ೧/೩೦) ಎಂಬುದರಿಂದ ತು ಪ್ರತ್ಯಯ ಬರಲು ಕಿತ್ತ್ವದಿಂದ 'ಘುಮಾಸ್ಥಾ—' (ಪಾ. ೬-೪-೬೬) ಎಂಬುದರಿಂದ ಇತ್ವ ಬಂದು ಪಿತುಃ ಎಂದಾಗಿದೆ ; ಇದಕ್ಕೆ ಅನ್ನ ಎಂದರ್ಥ. ಆಗ ಪರಮಾತ್ ಎಂಬುದು ಕ್ರಿಯಾವಿಶೇಷಣವಾಗಿ— ಪಶುರೂಪವಾದ ಅನ್ನವು ಉತ್ಕೃಷ್ಟ (ಅತ್ಯುತ್ತಮ)ವಾಗುವುದಕ್ಕಾಗಿ ಅದನ್ನು ಪ್ರ ಪರಿ ನೀಯತೇ-ಅಗ್ನಿಯ ಸುತ್ತಲೂ ಒಯ್ಯುತ್ತಾರೆ ಎಂದು ಅರ್ಥವಾಗು-ತ್ತದೆ. (ಬಿ) ಪಿತುಃ ಎಂಬುದು ಪಿತೃಶಬ್ದದ ಪಂಚಮ್ಯೇಕವಚನವೂ ಆಗುತ್ತದೆ. ಆಗ ಅದಕ್ಕೆ 'ತಂದೆಯಾದ' ಎಂದರ್ಥ. ತಂದೆ ಎಂದರೆ ಜನಕ, ಉತ್ಪಾದಕ ಎಂಬ ಲಕ್ಷಣಾರ್ಥ ಇಟ್ಟುಕೊಂಡು 'ಗಾರ್ಹಪತ್ಯಾಗ್ನಿಯಿಂದ' ಎಂದರ್ಥ ಮಾಡಬೇಕು. ಈ ಪಕ್ಷದಲ್ಲಿ ಪರಮಾತ್-ಶ್ರೇಷ್ಠವಾದ ಎಂಬುದು ಪಿತುಃ ಶಬ್ದಕ್ಕೆ ವಿಶೇಷಣವಾಗುತ್ತದೆ. ಆದರಿಂದ—ಪರಮಾತ್ ಪಿತುಃ (ಸಕಾಶಾತ್-ಆಹವನೀಯಂ ಪ್ರತಿ) ಪ್ರ ಪರಿ ನೀಯತೇ ಎಂದರೆ ಶ್ರೇಷ್ಠವಾದ ಗಾರ್ಹಪತ್ಯಾ-ಗ್ನಿಯ ಬಳಿಯಿಂದ ಆಹವನೀಯ ಎಂಬ ಅಗ್ನಿಯ ಬಳಿಗೆ ಒಯ್ಯಲ್ಪಡುತ್ತದೆ ಎಂದರ್ಥವಾಗುತ್ತದೆ.

ii) ಪೃಕ್ಷುಧಃ । ಪ್ರ ಉಪಸರ್ಗ, 'ಕ್ಷುಧ ಬುಭುಕ್ಷಾಯಾಮ್' ಎಂಬ ಧಾತು. 'ಬಹುಲಂ ಛಂದಸಿ' (ಪಾ. ೬-೧-೩೪) ಎಂಬ ಸೂತ್ರದಂತೆ ಪ್ರ ಉಪಸರ್ಗದ ರಕಾರಕ್ಕೆ ಸಂಪ್ರಸಾರಣವಾಗಿ ಪೃ ಆಗುತ್ತದೆ. 'ಕ್ವಿಪ್ ಚ' (ಪಾ. ೩-೨-೭೬) ಸೂತ್ರದಂತೆ ಕ್ವಿಪ್ ಬಂದು 'ವೇರಪೃಕ್ತಸ್ಯ' (ಪಾ. ೬/೧/೬೭) ಎಂದು ಲೋಪವಾಗಲು ಪೃಕ್ಷುಧ್ ಎಂದಾಗುತ್ತದೆ; ಇದರ ಬಹುವಚನರೂಪವೇ ಪೃಕ್ಷುಧಃ, ಇದು ಸ್ತ್ರೀಲಿಂಗ. ಪೃಕ್ಷು-ದಾಹಮಧ್ಯೇ ಧೀಯಮಾನಾಃ-ಬೆಂಕಿಯ ಉರಿಯು ಮೇಲಕ್ಕೆ ಏಳುತ್ತಿರುವಾಗ ಆ ಉರಿಯ ಮಧ್ಯೆ ಇರುವ ಎಂದರ್ಥ. ಅಥವಾ ಕ್ಷುಧ್ ಎಂದರೆ ಹಸಿವು ಎಂದರ್ಥ; ಅದರಿಂದ 'ಆಹುತಿಗಳನ್ನು ಭಕ್ಷಿಸಲು ಆತುರವಾಗಿರುವ' ಎಂದರ್ಥವಾಗುತ್ತದೆ. ಈ ಶಬ್ದವು ವೀರುಧಃ ಶಬ್ದಕ್ಕೆ ವಿಶೇಷಣ.

iii) ವೀರುಧಃ-ಎಂದರೆ ಬಳ್ಳಿಗಳು ಎಂದರ್ಥ. ಇಲ್ಲಿ ಲಕ್ಷಣಯಾ ಲತೆಗಳು ಹೇಗೆ ಮೇಲ್ಮುಖವಾಗಿ ಹರಡುತ್ತವೋ ಹಾಗೆ ಮೇಲ್ಮುಖವಾಗಿ ಏಳುತ್ತಿರುವ ಅಗ್ನಿಯ ಜ್ವಾಲೆಗಳು ಎಂದರ್ಥವಾಗುತ್ತದೆ. iv) ಘೃಣಾ ಶಬ್ದಕ್ಕೆ ದಯಾ ಎಂದು ಅರ್ಥವಿರುವುದರಿಂದ ಯಜಮಾನನಲ್ಲಿ ದಯೆಯುಳ್ಳ-ವನು, ಯಜಮಾನನನ್ನು ಅನುಗ್ರಹಿಸುವವನು ಎಂದು ಒಂದರ್ಥ. ಹಾಗೆಯೇ ಘೃಣಾಶಬ್ದವನ್ನು ಅರ್ಚಿಃ ಶೋಚಿಃ ಮೊದಲಾದ ಪ್ರಕಾಶನಾಮಗಳಲ್ಲಿ (ನಿ. ೨-೨೮) ಪಠಿಸಿರುವುದರಿಂದ ಘೃಣಾ ಎಂದರೆ ಪ್ರಕಾಶಮಾನನಾದ ಎಂದೂ ಅರ್ಥವಾಗುತ್ತದೆ. v) ಅಗ್ನಿಯು 'ಶುಚಿ' ಎಂಬುದನ್ನು 'ಅಗ್ನಿಃ ಶುಚಿವ್ರತತಮಃ ಶುಚಿರ್ವಿಪ್ರಃ' ಎಂಬ ತೈತ್ತಿರೀಯ ಸಂಹಿತಾವಾಕ್ಯ (೧-೩-೧೪) ಹೇಳುತ್ತದೆ.

399. ತಾತ್ಪರ್ಯ—ಈ ನಾಲ್ಕನೇ ಮಂತ್ರದಲ್ಲಿ ಶ್ರುತಿಯು ಅಗ್ನಿಯನ್ನು ಯವಿಷ್ಠ(ಅತ್ಯಂತ ಚಿಕ್ಕವಯಸ್ಸಿನ ತರುಣ)ನೆಂದೂ, ಘೃಣಾ (ದಯಾವಂತ ಅಥವಾ ಪ್ರಕಾಶಮಾನ) ಎಂದೂ ಶುಚಿ (ಪರಿಶುದ್ಧ) ಎಂದೂ ಮೂರು ವಿಶೇಷಣಗಳಿಂದ ಕೊಂಡಾಡುತ್ತದೆ—ಸ್ತುತಿಸುತ್ತಿದೆ. ಅಗ್ನಿಗೆ ಈ ಗುಣಗಳು ಹೇಗೆ ಬಂದುವು? ಎಂಬುದಕ್ಕೆ ಮೂರು ಕಾರಣಗಳನ್ನು ಮೂರು ಪಾದಗಳಲ್ಲಿ ಕ್ರಮವಾಗಿ ವರ್ಣಿಸುತ್ತದೆ. ೧-ಅ) ಯಜ್ಞ-ಯಾಗಗಳಲ್ಲಿ ಅಜ, ಅಶ್ವಾದಿ ಪಶುಗಳನ್ನೇ ಅನ್ನವಾಗಿ (ಆಹಾರವಾಗಿ) ಸಮರ್ಪಿಸುತ್ತಾರಷ್ಟೆ.

(ಪಿತುಃ) ಈ ಪಶುಗಳ ಸಂಸ್ಕಾರಕ್ಕಾಗಿ—ಅವು ಉತ್ತಮವಾದ ಆಹಾರ-ವಾಗುವುದಕ್ಕಾಗಿ (ಪರಮಾತ್) ಅವುಗಳನ್ನು ಅಗ್ನಿಯ ಸುತ್ತಲೂ ಪ್ರದಕ್ಷಿಣಾಕಾರವಾಗಿ ಸುತ್ತಿಸುತ್ತಾರೆ (ಪ್ರ ಪರಿ ನೀಯತೇ). ಈ ರೀತಿ ಸುತ್ತಿಸುವ ವಿಧಾನಕ್ಕೆ ಪರ್ಯಗ್ನೀಕರಣವೆಂದು ಹೆಸರು. ಅಥವಾ ೧—ಆ ಅಗ್ನಿಯು ಗಾರ್ಹಪತ್ಯ, ದಕ್ಷಿಣಾ, ಆಹವನೀಯ ಎಂದು ಮೂರು ವಿಧವಾಗಿದೆ. ಗಾರ್ಹಪತ್ಯಾಗ್ನಿಯೇ ಮೂಲಭೂತ. ಆ ಗಾರ್ಹಪತ್ಯಾಗ್ನಿ-ಯಿಂದ (ಪರಮಾತ್ ಪಿತುಃ) ಅಗ್ನಿಯನ್ನು ಆಹವನೀಯಾಗ್ನಿಯ ಬಳಿಗೆ ಒಯ್ಯುತ್ತಾರೆ. (ಪ್ರ ಪರಿ ನೀಯತೇ). ೨. ಪಶುಪುರೋಡಾಶಾದಿಗಳಲ್ಲಿ ಅಗ್ನಿಯು ಪ್ರಜ್ವಲಿತನಾಗಿ ಉರಿಯುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅಗ್ನಿಯ ಮಧ್ಯದಿಂದ ಅಗ್ನಿಯ ಜ್ವಾಲೆಗಳು—ಬಳ್ಳಿಗಳು ಮೇಲೆಮೇಲಕ್ಕೆ ಏರುತ್ತಾ ಹೋಗುವಂತೆ (ವೀರುಧಃ)—ಊರ್ಧ್ವಮುಖವಾಗಿ ಏರುತ್ತಿರುತ್ತವೆ (ಆರೋ-ಹತಿ). ಅದನ್ನು ನೋಡಿದರೆ ಆ ಉರಿಗಳು ಏನು ಹಾಕಿದರೂ ಸುಟ್ಟು ದಹಿಸಿ-ಬಿಡುವೆವು ಎಂದು ಹೇಳುವುವೋ (ಪೃಕ್ಷುಧಃ) ಎಂದು ಭಾಸವಾಗುತ್ತದೆ. ಹಲ್ಲುಗಳಂತಿರುವ ಜ್ವಾಲೆಯ ಶಾಖೆಗಳು (ದಂಸು) ಮಧ್ಯೆಮಧ್ಯೆ ಏರುತ್ತಿರು-ತ್ತವೆ. ೩. ಯಜಮಾನ-ಅಧ್ವರ್ಯು ಇಬ್ಬರೂ ಸೇರಿ ಎರಡು ಅರಣಿಗಳನ್ನು (ಉಭಾ) ತೆಗೆದುಕೊಂಡು ಬಲಪ್ರಯೋಗಮಾಡಿ ಮಥನಮಾಡಿ ಈ ಅಗ್ನಿ-ಯನ್ನು ಉತ್ಪಾದನೆ ಮಾಡಿ ತೆಗೆದಿದ್ದಾರೆ (ಅಸ್ಯ ಜನುಷಂ ಇನ್ವತಃ)—ಆದ-ಕಾರಣವೇ (ಆದಿತ್) ಆ ಅಗ್ನಿಯು ಯವಿಷ್ಠನೂ ಘೃಣಾ (ಯಜಮಾನನಲ್ಲಿ ದಯೆಯುಳ್ಳವನೂ ಎಂದರೆ ಅನುಗ್ರಹಶೀಲನೂ ಅಥವಾ ಪ್ರಕಾಶಮಾನನೂ) ಪರಿಶುದ್ಧನೂ (ಶುಚಿಃ) ಆಗಿದ್ದಾನೆ (ಅಭವತ್) ಎಂದು ಭಾವ.

ಐದನೇ ಮಂತ್ರ

ಆದಿನ್ಮಾತೄರಾವಿಶದ್ ಯಾಸ್ವಾ ಶುಚಿ—
ರಹಿಂಸ್ಯಮಾನ ಉರ್ವಿಯಾ ವಿ ವಾವೃಧೇ ।
ಅನು ಯತ್ ಪೂರ್ವಾ ಅರುಹತ್ ಸನಾಜುವೋ
ನಿ ನವ್ಯಸೀಷ್ವವರಾಸು ಧಾವತೇ ॥ ೫ ॥

400. **ಅನ್ವಯಾರ್ಥ**—ಅಯಂ ಅಗ್ನಿಃ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು ; ಈ ಅಗ್ನಿಯು, **ಆ ಶುಚಿಃ**-ಬಹಳ ಪ್ರಜ್ವಲಿಸುವವನಾಗಿ, **ಆದಿತ್**-ಹಿಂದಿನ ಮಂತ್ರದಿಂದ ಸ್ತುತಿಸಲ್ಪಟ್ಟ ಒಡನೆಯೇ, **ಮಾತೄಃ**-ಮಾತೃಸ್ಥಾನಗಳಾದ ಹತ್ತು ದಿಕ್ಕುಗಳನ್ನೂ, **ಆವಿಶತ್**-ಪ್ರವೇಶಿಸಿದನು ಎಂದರೆ ಎಲ್ಲ ಕಡೆಯೂ ತನ್ನ ಪ್ರಕಾಶವನ್ನು ಹರಡಿದನೆಂದು ಭಾವ. **ಯಾಸು**-ಯಾವ ದಿಕ್ಕುಗಳಲ್ಲಿ, **ಅಹಿಂಸ್ಯಮಾನಃ**-ಇತರರಿಂದ ಹಿಂಸಿಸಲ್ಪಡದೆ, **ಉರ್ವಿಯಾ**-ಬಹಳ ಹೆಚ್ಚಾಗಿ (ಅತಿಶಯವಾಗಿ), **ವಿವಾವೃಧೇ**-ನಾನಾಬಗೆಯಾಗಿ ಬೆಳೆದನು. ಹೀಗೆ ಬೆಳೆದದ್ದು ಯಾವಾಗ ? ಎಂದರೆ—**ಯತ್**-ಯಾವಾಗ, **ಸನಾಜುವಃ**-ಬಹಳ ದೀರ್ಘಕಾಲದ ಹಿಂದಿನಿಂದಲೂ ಇರುವುದರಿಂದ ಚೆನ್ನಾಗಿ ಒಣಗಿದ, **ಪೂರ್ವಾಃ**-ಆದ್ದರಿಂದಲೇ ಹಳೆಯದಾದ ಸೌದೆಗಳನ್ನು (ಕಟ್ಟಿಗೆಯನ್ನು), **ಅನು**-ಕ್ರಮವಾಗಿ, **ಅರುಹತ್**-ಏರಿದನು ಎಂದರೆ ಆಕ್ರಮಿಸಿ ದಹಿಸಿಬಿಟ್ಟನು. ಅದೇ ರೀತಿಯೇ, **ನವ್ಯಸೀಷು**-ಹೊಸದಾದ (ಆದ್ದರಿಂದಲೇ ಹಸಿಯಾದ), **ಅವರಾಸು**-ಹಿಂದಿನವಕ್ಕೆ ಹೋಲಿಸಿದರೆ ನಿಕೃಷ್ಟವಾದ (ಕೆಳದರ್ಜೆಯ) ಸೌದೆಗಳಲ್ಲಿ, **ನಿ ಧಾವತೇ**-ಒಳಹೊಕ್ಕು ಉರಿಸುತ್ತಾನೆ.

ತಾತ್ಪರ್ಯ—ಈ ಮಂತ್ರದಲ್ಲಿ ಅಗ್ನಿಯ ಬೆಳವಣಿಗೆಯನ್ನು ವಿವರಿಸಿದೆ. ಹಿಂದಿನ ಮಂತ್ರದಲ್ಲಿ ಹೇಳಿದಂತೆ ಅಗ್ನಿಯು ತನ್ನ ಜ್ವಾಲೆಗಳನ್ನು ಹರಡಿಕೊಳ್ಳುತ್ತಾ ಹಬ್ಬಲು (ಹರಡಿಕೊಳ್ಳುತ್ತಾ ಹೋಗಲು) ಬಹಳ ಹಿಂದೆ ತಂದು ಒಣಗಿದ (ಸನಾಜುವಃ ಪೂರ್ವಾಃ) ಕಟ್ಟಿಗೆಯನ್ನು ಕ್ರಮವಾಗಿ ಆಕ್ರಮಿಸಿ ದಹಿಸಿಬಿಡುತ್ತಾನೆ (ಆರುಹತ್). ಈಚಿಗೆ ತಂದು ಹಸಿಯದಾದ ಕಟ್ಟಿಗೆ ಅಷ್ಟು ಉತ್ತಮವಾದುದಲ್ಲ (ನವ್ಯಸೀಷು ಅವರಾಸು). ಆದರೂ ಅವನ್ನು ಬೇಗ ದಹಿಸಿಬಿಡುತ್ತಾನೆ. (ನಿ ಧಾವತೇ). ಹೀಗೆ ವಿಧವಿಧವಾದ ಜ್ವಾಲೆಗಳಿಂದ ಅಡ್ಡಿ ಆತಂಕವಿಲ್ಲದೆ ಉರಿಯುತ್ತಾ (ಅಹಿಂಸ್ಯಮಾನಃ ಉರ್ವಿಯಾ ವಿವಾವೃಧೇ) ದಶದಿಕ್ಕುಗಳಲ್ಲೂ (ಮಾತೄಃ) ಪ್ರಕಾಶದಿಂದ ವ್ಯಾಪಿಸಿಬಿಡುತ್ತಾನೆಂದು ಭಾವ (ಆವಿಶತ್).

ಬಳಿತ್ಥಾಸೂಕ್ತಮಂತ್ರಾರ್ಥಃ ಸಾಯಣೇನ ಯಥಾ ತಥಾ |
ವಿಷ್ಣುತೀರ್ಥೇನ ಸಂಪ್ರೋಕ್ತಃ ಸತಾತ್ಪರ್ಯಂ ಸಟಿಪ್ಪಣಿಮ್ ||

ಅನುಬಂಧ-(ಆ)

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣ
ವೇದವ್ಯಾಸಾತ್ಮಕ ಶ್ರೀಹಯಗ್ರೀವಾಯ ನಮಃ ॥

ಅಥ

ಬಳಿತ್ಥಾಸೂಕ್ತಮಂತ್ರಾಣಾಂ

ಶ್ಲೋಕರೂಪವ್ಯಾಖ್ಯಾನ ಪ್ರಾರಂಭಃ

ಶ್ರೀಗುರುಭ್ಯೋ ನಮಃ । ಹರಿಃ ಓಂ ॥

ಮಂಗಳಾಚರಣ್

ಜ್ಞಾನಾನಂದಮಯಂ ದೇವಂ ಮುಖ್ಯಪ್ರಾಣಾದಿಸನ್ನುತಮ್ ।
ವಿದ್ಯಾಧೀಶಂ ರಮಾನಾಥಂ ಹಯಗ್ರೀವಂ ತಮಾಶ್ರಯೇ ॥ ೧ ॥

ಪ್ರಣಮ್ಯ ಶ್ರೀಮದಾನಂದ—ತೀರ್ಥಾದಿಗುರುಶೇಖರಾನ್ ।
ಬಳಿತ್ಥಾಸೂಕ್ತಸಾರಾರ್ಥಂ ಸಂಗ್ರಹಿಷ್ಯೇ ಯಥಾಮತಿ ॥ ೨ ॥

ಶ್ಲೋಕಗಳ ಭಾವಾರ್ಥ

೧) ಜ್ಞಾನಾನಂದಸ್ವರೂಪಿಯೂ ದೇವದೇವೋತ್ತಮನೂ ಮುಖ್ಯಪ್ರಾಣನೇ ಮೊದಲಾದ ಸಕಲ ದೇವತೆಗಳಿಂದ ಸ್ತುತಿಸಲ್ಪಡುವವನೂ ಸಕಲ ವಿದ್ಯಾಧಿದೇವತೆಯೂ ಲಕ್ಷ್ಮೀಪತಿಯೂ ಆದ ಶ್ರೀಲಕ್ಷ್ಮೀಹಯಗ್ರೀವ ಸ್ವಾಮಿಯನ್ನು (ಜ್ಞಾನಸ್ಫೂರ್ತಿಗಾಗಿ) ಮೊರೆಹೋಗುತ್ತೇನೆ.

೨) ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರೇ ಮೊದಲಾದ ಸಕಲ ಗುರುಗಳನ್ನೂ ಭಕ್ತ್ಯಾದರಗಳಿಂದ ವಂದಿಸಿ ಬಳಿತ್ಥಾಸೂಕ್ತಕ್ಕೆ ಅನೇಕ ಟೀಕಾಕಾರರು ಬರೆದ ಟೀಕೆಗಳ ಸಾರಭೂತವಾದ ಅರ್ಥವನ್ನು ಯಥಾಮತಿ ಸಂಗ್ರಹಿಸಿ ಶ್ಲೋಕರೂಪದಿಂದ ಹೇಳುತ್ತೇನೆ.

[ಸೂಚನೆ—ಮುಂದೆ ಹೇಳಿರುವ ಅನೇಕ ವಿಚಾರಗಳು ಗದ್ಯರೂಪದಲ್ಲಿ ಹಿಂದೆಯೇ ಬಂದಿವೆ. ಆ ಪ್ರಸಕ್ತ ಪುಟಸಂಖ್ಯೆಗಳನ್ನು ಕನ್ನಡ ಅಂಕೆ-

ಋಷ್ಯಾದಿನಿರೂಪಣಮ್

'ಬಳಾದ್ಯಂ ಭೃಗುಣಾ ದೃಷ್ಟಂ' ಪಂಚರ್ಚಂ ಕಿಲ ಜಾಗತಮ್ ।
ರೂಪತ್ರಯಸ್ಯ ವಾಯೋಸ್ತು ಮಹಿಮಾ ಹ್ಯತ್ರ ವರ್ಣಿತಃ ॥ ೩ ॥
ಪ್ರಾಣಾಗ್ನಿನಾಮಕೋ ವಾಯು—ರ್ದೇವತಾಸ್ಯ ಪ್ರಕೀರ್ತಿತಃ ।
ತಸ್ಯಾಪಿ ನೇತಾ ಯೋ ವಿಷ್ಣುಃ ಸ ಏವ ಪರದೇವತಾ ॥ ೪ ॥

ಗಳಲ್ಲೂ ಖಂಡದ ಸಂಖ್ಯೆಗಳನ್ನು ಇಂಗ್ಲೀಷ್ ಅಂಕೆಗಳಲ್ಲೂ ಸೂಚಿಸಿದೆ. ಆಯಾ ಪುಟಗಳಲ್ಲಿ ಆಯಾ ಖಂಡಗಳಲ್ಲಿ ಈ ಶ್ಲೋಕಗಳಲ್ಲಿ ಹೇಳಿದ ವಿಚಾರ ಬಂದಿವೆಯೆಂದು ತಿಳಿಯಬೇಕು.]

೩) 'ಬಳಿತ್ಥಾ' ಎಂದು ಆರಂಭವಾಗುವ ಋಗ್ವೇದ ಪ್ರಥಮಮಂಡಲದ ೧೪೧ನೇ ಸೂಕ್ತದಲ್ಲಿ ಮೊದಲನೆಯ ವರ್ಗಕ್ಕೆ ಸೇರಿದ ಐದು ಋಕ್ಕುಗಳಿಗೆ ಮುಖ್ಯಪ್ರಾಣಪರವಾಗಿ ಅರ್ಥವನ್ನು ಕಂಡದ್ದರಿಂದ ಭೃಗುಋಷಿಗಳೇ ಋಷಿ. (ಅನುಕ್ರಮಣಿಕೆಯಂತೆ, ಅಗ್ನಿಪರವಾದ ಅರ್ಥವನ್ನು ಕಂಡದ್ದರಿಂದ, ದೀರ್ಘತಮಾ ಎಂಬುವರೂ ಋಷಿಗಳು. ಋಗ್ಭಾಷ್ಯದಲ್ಲಿ ಒಂದು ಸೂಕ್ತಕ್ಕೆ ಅಥವಾ ಋಕ್ಕಿಗೆ* ಅನೇಕ ಋಷಿಗಳಿರುವುದೂ ಉಂಟು ಎಂದು (೧ಅ. ೩ಶ್ಲೋ.) ಹೇಳಿರುವುದರಿಂದ ಇಬ್ಬರು ಋಷಿಗಳಿರುವುದು ವಿರೋಧವಲ್ಲ.) ಈ ಐದು ಮಂತ್ರಗಳೂ ಜಗತೀಛಂದಸ್ಸಿನಲ್ಲಿವೆ (ಎಂದರೆ ಪ್ರತಿಪಾದದಲ್ಲಿಯೂ ಹನ್ನೆರಡು ಅಕ್ಷರಗಳಿರುತ್ತವೆ.) ಈ ಐದು ಮಂತ್ರಗಳಲ್ಲೂ ಮೂರು ಅವತಾರ ಮಾಡಿದ ವಾಯುದೇವರ ಮಹಿಮೆಯು ಪ್ರತಿಪಾದಿತವಾಗಿದೆ (ಖಂಡ 370ಕ, ಪುಟ ೩೨)

೪) ಆದಕಾರಣ ಪ್ರಾಣಾಗ್ನಿನಾಮಕ ವಾಯುದೇವರೇ ಈ ಸೂಕ್ತಕ್ಕೆ ಪ್ರತಿಪಾದ್ಯ ದೇವತೆ. ಆ ವಾಯುವಿಗೂ ನಿಯಾಮಕನಾದ ಶ್ರೀವಿಷ್ಣುವೇ ಈ ಸೂಕ್ತದ ಮುಖ್ಯ ದೇವತೆ. (370ಕ, ಪುಟ ೩೨)

---

* ತೇ ಚೈಕಸ್ಯಾಪಿ ಬಹವಃ ಸ್ಯುಃ ಸೂಕ್ತಸ್ಯರ್ಚ ಏವ ವಾ

ಪ್ರಥಮಾ ಋಕ್ ಪೂರ್ವಾರ್ಧವಿವರಣಮ್

ಮುಖ್ಯಪ್ರಾಣಸ್ಯ ದೇವಸ್ಯ ದರ್ಶಯನ್ನಮಿತಾನ್ ಗುಣಾನ್ ।
ವಾಯುಶಬ್ದಂ ಸಮನ್ವೇತಿ ತಸ್ಮಿನ್ ಹಿ ಬಹುಧಾ ಶ್ರುತಿಃ ॥ ೫ ॥
ವಕಾರೋ ವಾಯುಶಬ್ದಸ್ಥೋ ಬಲವಾಚೀ ತಥಾಽಪರಃ ।
ಗತ್ಯರ್ಥೋ ಹ್ಯಾಯುಶಬ್ದಸ್ತು ಜ್ಞಾನವಾಚೀ ಬುಧೈರ್ಮತಃ ॥ ೬ ॥
ಸೂಕ್ತಸ್ಥಿತೋ ಹಿ ಬಟ್ ಶಬ್ದೋ ವಾಯುಮಾಹ ಬಲಾತ್ಮಕಮ್ ।
ಬಟ್-ಶಬ್ದೋಽವ್ಯಯ ಉದ್ದಿಷ್ಟೋ ಬಲಾಧಿಕ್ಯಂ ವದತ್ಯಸೌ ॥ ೭ ॥
ತತ್ರಸ್ಥಂ ದರ್ಶತ ಪದಂ ತ್ವಾಯು ಶಬ್ದಾರ್ಥಸೂಚಕಮ್ ।
ಜ್ಞಾನಾರ್ಥಸ್ಯ ದೃಶೇರ್ಧಾತೋ—ರತಚ್ಯೇವಂ ಭವಿಷ್ಯತಿ ॥ ೮ ॥

---

೫) 'ದೇವಸ್ಯ ಭರ್ಗಃ' ಎಂಬಲ್ಲಿರುವ ದೇವಶಬ್ದಕ್ಕೆ 'ವಾಯುದೇವರ' ಎಂದರ್ಥ. ಆ ವಾಯುದೇವರ ಅಪಾರವಾದ ಗುಣಗಳನ್ನು ವರ್ಣಿಸುತ್ತಾ ಶ್ರುತಿಯು 'ವಾಯು' ಶಬ್ದಕ್ಕೆ ಅನೇಕ ವಿಧ ಅರ್ಥಗಳನ್ನು ಹೊಂದಿಸಿಕೊಡುತ್ತದೆ.

೬) ವಾಯುಶಬ್ದದಲ್ಲಿರುವ 'ವ'-ಕಾರವು ಬಲವಾಚಕ. ಇನ್ನೊಂದು ಅವಯವವಾದ 'ಆಯು'ಶಬ್ದವು ಗತ್ಯರ್ಥಕವಾದ್ದರಿಂದ ಜ್ಞಾನಾರ್ಥಕವೆಂದು ಪಂಡಿತರು ಹೇಳುತ್ತಾರೆ. (ಋಂ.112ಕ,ಪು ೧೫೮-೫೫; 369ಛv, ೨೩, ಮತ್ತು 294ಟ, ೫೮೩)

೭) ಸೂಕ್ತದಲ್ಲಿರುವ ಬಟ್ ಶಬ್ದವು ಬಲವಾಚಕವಾಗಿದ್ದು ವಕಾರದ ಅರ್ಥವಾಗಿ ಆ ವಾಯು ಬಲಸ್ವರೂಪನೆಂಬುದನ್ನು ಹೇಳುತ್ತದೆ. ಬಟ್ ಎಂಬುದು ಅವ್ಯಯ, ವೈದಿಕ ಪ್ರಯೋಗ. ವಾಯುದೇವರಲ್ಲಿ ಬಲಾಧಿಕ್ಯವನ್ನು ಹೇಳುತ್ತದೆ (369ಛ iv, ೨೨).

೮) ಸೂಕ್ತದಲ್ಲಿರುವ ದರ್ಶತಂ ಎಂಬ ಪದವು ಆಯು ಎಂಬುದರ ಅರ್ಥ. ದರ್ಶತಂ ಎಂದರೆ ಜ್ಞಾನಸ್ವರೂಪನೆಂದರ್ಥ. ಹೇಗೆಂದರೆ 'ದೃಶಿರ್ ಪ್ರೇಕ್ಷಣೇ' ಎಂಬ ಜ್ಞಾನಾರ್ಥಕವಾದ ದೃಶ್ ಧಾತುವಿಗೆ ಅತಚ್ ಪ್ರತ್ಯಯ ಸೇರಿ ದರ್ಶತ ಎಂದಾಗಿದೆ. (ಅಲ್ಲೇ v ನೋಡಿ).

ಅಥವಾ ದರ್ಶಶಬ್ದೋಽಯಂ ಪುಲ್ಲಿಂಗೋ ಜ್ಞಾನವಾಚಕಃ ।
ತೇನ ತಂ ವ್ಯಾಪ್ತಮಿತ್ಯರ್ಥೇ ವಾಯುಮಾಹ ಮಹಾಕವಿಃ ॥ ೯ ॥
ಏವಂ ದರ್ಶತಶಬ್ದೋಽತ್ರ ವಾಯೋ ರಾಯ್ವರ್ಥಬೋಧಕಃ ।
ಸಾಧತೇ ಜ್ಞಾನರೂಪತ್ವ—ಮಜ್ಞಾನಾಸ್ಪೃಷ್ಟತಾಂ ತಥಾ ॥ ೧೦ ॥
ಏವಂ ಬಟ್ ದರ್ಶತಂ ಶಬ್ದೌ ವಾಯುಶಬ್ದಾರ್ಥಮಾಹತುಃ ।
ದರ್ಶತಂ ಪೃಥಗುಕ್ತಂ ಯತ್ ವಿಶೇಷಾರ್ಥಾಯ ಕಲ್ಪ್ಯತೇ ॥ ೧೧ ॥
ವಕ್ತ್ರ್ಯಾದೌ ಜ್ಞಾನಪ್ರಾಚುರ್ಯಂ ತಸ್ಯವಾಯೋರ್ಮಹಾತ್ಮನಃ ।
ಆಲೋಚನೇ ಕಿಲಾಶೇಷ—ಜ್ಞಾನವಾನ್ ಸ ಉದೀರಿತಃ ॥ ೧೨ ॥

---

೯) ಅಥವಾ ದೃಶ್ ಧಾತುವಿನ ಮೇಲೆ ಭಾವಾರ್ಥದಲ್ಲಿ ಘಞ್ ಪ್ರತ್ಯಯ ಬಂದರೆ ದರ್ಶಃ ಎಂಬ ಪುಲ್ಲಿಂಗರೂಪವಾಗುತ್ತದೆ, ಅದಕ್ಕೂ ಜ್ಞಾನ ಎಂದೇ ಅರ್ಥ. ದರ್ಶೇನ–ಜ್ಞಾನೇನ ತಂ-ವ್ಯಾಪ್ತಂ ದರ್ಶತಂ ಎಂಬ ವಿಗ್ರಹ-ದಂತೆ ಜ್ಞಾನದಿಂದ ವ್ಯಾಪ್ತನಾದ, ಜ್ಞಾನಸ್ವರೂಪನಾದ ಎಂದೇ ಅರ್ಥವಾಗು-ತ್ತದೆ. ಹೀಗೆ ದರ್ಶತ ಶಬ್ದವು ಆ ವಾಯು ಮಹಾಪಂಡಿತ, ದೊಡ್ಡ ಜ್ಞಾನೀ ಎಂದು ಹೇಳುತ್ತದೆ. (ಅಲ್ಲೇ, ಪುಟ ೨೩).

೧೦) ಈ ಪ್ರಕಾರ ದರ್ಶತಂ ಪದವು ವಾಯುಶಬ್ದದ ಆಯು ಎಂಬ ಅವಯವದ ಅರ್ಥವನ್ನು ಹೇಳುತ್ತದೆಯಲ್ಲದೆ ಆ ವಾಯು ಜ್ಞಾನಸ್ವರೂಪ ನೆಂಬುದನ್ನೂ ಜ್ಞಾನದಿಂದಲೇ ವ್ಯಾಪ್ತನಾದ್ದರಿಂದ ಅವನಿಗೆ ಅಜ್ಞಾನ-ಸಂಶಯ-ವಿಪರ್ಯಯಾದಿ ಯಾವ ದೋಷವೂ ಇಲ್ಲವೆಂಬುದನ್ನೂ ಸಾಧಿಸಿ ಕೊಡುತ್ತದೆ. (37೭, ೪೧).

೧೧) ಈ ರೀತಿ ಬಟ್ ದರ್ಶತಂ ಎರಡು ಶಬ್ದಗಳೂ ವಾಯು ಶಬ್ದಾರ್ಥವನ್ನೇ ಹೇಳಿದುವು. ಆದರೆ ದರ್ಶತಂ ಎಂಬುದನ್ನು ಬಟ್ ಶಬ್ದ ದೊಡನೆಯೇ ಸೇರಿಸಿ ಹೇಳದೆ ದೂರ ಬಿಡಿಸಿ ಹೇಳಿದ್ದರಿಂದ ಅನೇಕ ವಿಶೇಷ ವಿಚಾರಗಳನ್ನು ಸೂಚಿಸುತ್ತದೆ.

೧೨) ಮೊಟ್ಟಮೊದಲನೆಯದಾಗಿ ಈ ವಾಯು ರುದ್ರಾದಿಗಳೆಲ್ಲರಿ ಗಿಂತಲೂ ಹೆಚ್ಚಿನ ಜ್ಞಾನವುಳ್ಳವನೆಂದೂ ಆಲೋಚನೆ ಮಾಡಿದರೆ ಭಗವ-

ತೃತೀಯೋ ಭರ್ಗಶಬ್ದೋಽಸ್ಯ ವಕ್ಷ್ಯತ್ಯರ್ಥಾಂತರಂ ನನು ।
ವಾತೇರುಣ್‌ಪ್ರತ್ಯಯೇ ಪ್ರಾಪ್ತೇ ತನ್ಮಧ್ಯೇ ಯುಕ್ ಪ್ರವರ್ತತೇ॥ ೧೩ ॥

ಅನೇಕಾರ್ಥತ್ವಾದ್ಧಾತೂನಾಂ ವಾತಿಶ್ಚ ಭರಣಾರ್ಥಕಃ ।
ಬಿಭರ್ತ್ಯಯಂ ಸದಾ ಶ್ವಾಸ—ರೂಪೇಣ ಸಕಲಂ ಜಗತ್ ॥ ೧೪ ॥

ತದ್ಧಾರಣಾರ್ಥಮೇವೈಷಾಂ ಸನ್ನಿವಿಷ್ಟೋ ಹ್ಯಯಂ ಹೃದಿ ।
ಗತ್ಯರ್ಥೋ ಹ್ಯಸ್ಯ ವಾತೇಸ್ತು ಧಾತಾವೇವ ಹಿ ಪಠ್ಯತೇ ॥ ೧೫ ॥

ಏವಂ ಭರ್ಗಶಬ್ದೋತ್ರ ಭರಣ-ಗಮನಾರ್ಥಕಃ ।
ಸೂತ್ರೋಕ್ತಂ ವಾಯುಮೇವಾಹ ಶ್ವಾಸಧಾರಣಕಾರಣಾತ್ ॥ ೧೬ ॥

ದಿತರತ್ರ ಸರ್ವವಿಷಯಕ ಜ್ಞಾನವುಳ್ಳವನೆಂಬುದನ್ನೂ ತೋರಿಸುತ್ತದೆ. (ನಖ ಸ್ತುತಿ ಪುಟ ೭೨ ; ಖಂಡ 372, ४೧)

೧೩) 'ಭರ್ಗಃ' ಎಂಬ ಮೂರನೆಯ ಶಬ್ದವು ವಾಯು ಶಬ್ದದ ಮತ್ತೊಂದು ಅರ್ಥವನ್ನು ಹೇಳುತ್ತದೆ. (ಅದೇನೆಂದರೆ) 'ವಾ ಗತಿಗಂಧನಯೋಃ' ಎಂಬ ವಾ-ಧಾತುವಿನ ಮೇಲೆ ಉಣ್‌ಪ್ರತ್ಯಯ ಸೇರಿದಾಗ ಮಧ್ಯೆ ಯಕಾರಾಗಮ (ಯುಕ್) ಬಂದು ವಾಯು ಎಂದಾಗುತ್ತದೆ.

೧೪) ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ವಾ-ಧಾತು ಭರಿಸು, ಧಾರಣ ಮಾಡು ಎಂಬ ಅರ್ಥದಲ್ಲಿ ಬಂದಿದೆ. ಆದ್ದರಿಂದ ವಾಯು ಎಂದರೆ ಶ್ವಾಸರೂಪದಿಂದ ಸಕಲ ಜಗತ್ತನ್ನೂ ಧರಿಸಿರುವವನು ಎಂದರ್ಥವಾಗುತ್ತದೆ. (369 ಥ. viii, ೨೫).

೧೫) 'ವಾ' ಎಂದರೆ ಹೋಗು, ಹೋಗಿರು, ನೆಲೆಸಿರು ಎಂಬ ಅರ್ಥವೂ ಇರುವುದರಿಂದ ವಾಯು ಎಂದರೆ ಶ್ವಾಸಧಾರಣೆ ಮಾಡುವುದಕ್ಕಾಗಿ ಸಕಲ ಪ್ರಾಣಿಗಳ ಹೃದಯದಲ್ಲೂ ನೆಲೆಸಿರುವವನು ಎಂಬ ಅರ್ಥವೂ ಆಗುತ್ತದೆ. ವಾ-ಧಾತುವಿಗೆ ಹೋಗು, ನೆಲೆಸಿರು ಎಂಬ ಅರ್ಥವು ಧಾತು ಪಾಠದಲ್ಲೇ 'ವಾ ಗತಿ-' ಎಂಬಲ್ಲೇ ಹೇಳಿದೆ. (ಅಲ್ಲೇ.)

೧೬) . ಭರ್ಗ ಶಬ್ದವು ಭರಣ-ಗಮನ ಎರಡು ಅರ್ಥದಲ್ಲಿದ್ದು ಎರಡು ಅರ್ಥಗಳೂ (ಶ್ವಾಸಧಾರಣ ಮಾಡು—ಹೃದಯದಲ್ಲಿ ನೆಲೆಸಿರು) ಕೇವಲ

ವಾಯೋಸ್ತ್ರಿವಿಧಜೀವಾನಾಂ ತತ್ತದ್ಯೋಗ್ಯಕ್ರಮೇಣ ವೈ ।
ಸಾಧನಂ ಕಾರಯಿತ್ವಾ ತು ಸುಖದುಃಖಸ್ಯ ಭಾಜಕಮ್ ॥ ೧೭ ॥
ಗತಿತ್ರಯಪ್ರದಾನಂ ಚ ಭರ್ಗಶಬ್ದೇನ ಕೀರ್ತ್ಯತೇ ।
ಭರಣಂ ಸಾಧನಂ ಪ್ರೋಕ್ತಂ ಗಮನಂ ಗತಿರಿಷ್ಯತೇ ॥ ೧೮ ॥
ಯಾ ಸರ್ವಶಾಸ್ತ್ರತತ್ತ್ವಾರ್ಥ—ವೇತ್ತೃತಾ ಶ್ರುತಬೋಧಿತಾ ।
ಸಾ ಚಾತ್ರ ವಾಯುನಿಷ್ಠೇತಿ ದರ್ಶನೈವ ಹಿ ಸೂಚ್ಯತೇ ॥ ೧೯ ॥

ವಾಯುವಿಗೆ ಮಾತ್ರ ಕೊಡುವುದರಿಂದ ಈ ಸೂಕ್ತಪ್ರತಿಪಾದ್ಯನು ಮುಖ್ಯ-ಪ್ರಾಣನಲ್ಲದೆ ಬೇರೆ ಯಾರೂ ಆಗಲಾರರು ಎಂಬುದನ್ನು ಈ ಪದ ಘಂಟಾ-ಘೋಷವಾಗಿ ಹೇಳುತ್ತದೆ.

೧೭-೧೮) ಭರ್ಗ ಶಬ್ದವು ವಾಯು ಶಬ್ದಕ್ಕೆ ಮತ್ತೊಂದು ಅರ್ಥವನ್ನೂ ಹೊಂದಿಸಿಕೊಡುತ್ತದೆ. ಆ ವಾಯುದೇವರು 'ತತ್ವಜ್ಞಾನ್ ಮುಕ್ತಿಭಾಜಃ' ಎಂಬ ೧೬ನೇ ಶ್ಲೋಕದಲ್ಲೂ 'ಜನ್ಮಾದಿ' ಎಂಬ ಮೂರನೇ ಶ್ಲೋಕದಲ್ಲೂ ಹೇಳಿದಂತೆ ತ್ರಿವಿಧ ಜೀವರಿಗೆ ಅವರವರ ಸ್ವರೂಪಯೋಗ್ಯತಾನುಸಾರ ಭಿನ್ನಭಿನ್ನ ಸಾಧನಗಳನ್ನು ಮಾಡಿಸಿ ಕೇವಲ ಸುಖ, ಕೇವಲ ದುಃಖ, ಸುಖ-ದುಃಖಮಿಶ್ರ ಎಂಬ ಭಿನ್ನಭಿನ್ನ ಗತಿಯನ್ನು ಕೊಡಿಸುತ್ತಾರೆ ಎಂಬ ಅರ್ಥವೂ ವಾಯು ಶಬ್ದಕ್ಕೆ ಇದೆ ಎಂಬುದನ್ನು ಭರ್ಗ-ಶಬ್ದ ತೋರಿಸಿಕೊಡುತ್ತದೆ. ಭರಣ ಎಂದರೆ ಸಾಧನ ಮಾಡಿಸುವಿಕೆ; ಗಮನವೇ ಗತಿ. ವಾ-ಧಾತುವಿಗೂ ಈ ಎರಡು ಅರ್ಥಗಳೂ ಇವೆ (369 ಛ. viii, ೨೪-೩೨).

೧೯) ಶಾಂತಿಪಾಠದಲ್ಲಿ 'ನಮಸ್ತೇ ವಾಯೋ !—ಋತಂ ವದಿ-ಷ್ಯಾಮಿ' ಎಂದು ಹೇಳಿದೆ. ಇದಕ್ಕೆ ಆ ವಾಯುದೇವರು ಸಕಲ ಶಾಸ್ತ್ರಗಳ ತತ್ವಾರ್ಥವನ್ನೂ ಚೆನ್ನಾಗಿ ಬಲ್ಲವರು ಎಂದರ್ಥ. ಈ ಋತಶಬ್ದ, ಹೇಳುವ ಸರ್ವಶಾಸ್ತ್ರಾರ್ಥ ತತ್ವಜ್ಞಾನವು ವಾಯುದೇವರಿಗೆ ಇದೆಯೆಂಬುದನ್ನು ಸೂಕ್ತದಲ್ಲಿ ಹೇಳಿದ 'ದರ್ಶತಂ' ಪದವು ತೋರಿಸಿಕೊಡುತ್ತದೆ. (371, x, ೩೯)

ಸ್ಯೈವಾಸ್ಯ ಕೇವಲಂ ಸರ್ವ – ಶಾಸ್ತ್ರೇಷ್ವಪ್ಯತಿಪ್ರೌಢಿಮಾ ।
ತದುಕ್ತಸರ್ವಕ್ರಿಯೋಪ—ಸಂಹರ್ತಾ ಚ ತಥೈವ ಚ ॥ ೨೦ ॥
ಅತ ಏವ ಹಿ ಶ್ರುತ್ಯಾದೌ ಸತ್ಯಶಬ್ದೇನ ಕೀರ್ತಿತಃ ।
ಇತ್ಯರ್ಥದ್ವಯಮಪ್ಯಾಹ ಭರ್ಗಶಬ್ದಃ ಕ್ರಮಾದಸೌ ॥ ೨೧ ॥
ಜ್ಞಾನಂ ಭರಣಶಬ್ದೇನ ಗತ್ಯಾ ಚೈವ ಕ್ರಿಯಾರ್ಥಯಾ ।
ಪ್ರತ್ಯಕ್ಷದರ್ಶನೇ ರೂಢಿ—ಮಾಶ್ರಿತ್ಯ ಪುನರನ್ವಿತೇ ॥ ೨೨ ॥
ದರ್ಶತಂ ಸೂಚಯತ್ಯದ್ಧಾ ಸ್ಫುಟಮರ್ಥಾಂತರಂ ತಥಾ ।
ಏವಂ ನಿರಂತರಧ್ಯಾನಾತ್(ಭರ್) ಭಕ್ತ್ಯಾ ಚೈವ ಗರಿಷ್ಠಯಾ(ಗ)॥೨೩॥
ಅಪರೋಕ್ಷೀಕೃತಶ್ರೀಶೋ ವಿಷ್ಣುಂ ಪಶ್ಯತಿ ಸೂರ್ಯವತ್ ।

(೨೦–೨೨ ಪೂ) ಈ ವಾಯುದೇವರಿಗೆ ಸಕಲ ಶಾಸ್ತ್ರಾರ್ಥದ ಅರಿವು ಇರುವುದು ಮಾತ್ರವಲ್ಲದೆ ಆ ಶಾಸ್ತ್ರಗಳಲ್ಲಿ ಹೇಳಿದ ಪ್ರತಿಯೊಂದು ಕರ್ಮವನ್ನೂ ಒಂದನ್ನೂ ಬಿಡದೆ ಇವರು ಮಾಡುತ್ತಾರೆ, ಆದ್ದರಿಂದ ಇವರಿಗೆ 'ಸತ್ಯ' ಎಂದು ಹೆಸರಿದೆ. ಶಾಂತಿಪಾಠದಲ್ಲಿ ಈ ಕಾರಣದಿಂದಲೇ 'ಸತ್ಯಂ ವದಿಷ್ಯಾಮಿ' ಎಂದು ಹೇಳಿದೆ. ಹೀಗೆ ಋತ-ಸತ್ಯ ಎರಡು ಶಬ್ದಗಳ ಅರ್ಥವನ್ನೂ ಭರ್ಗಃ ಶಬ್ದ ಹೊಂದಿಸಿಕೊಡುತ್ತದೆ. ಹೇಗೆಂದರೆ ಭರಣ ಎಂಬುದೇ ಜ್ಞಾನ, ಗಮನ (ನಡೆಸುವುದು) ಎಂಬುದೇ ಕ್ರಿಯೆ (ಸತ್ಯ). (371 x, ೩೯-೪೦).

(೨೨ಉ*-೨೪ಪೂ) ದರ್ಶ-ನೋಡು ಎಂಬ ಧಾತುವಿಗೆ 'ಪ್ರತ್ಯಕ್ಷವಾಗಿ ನೋಡು' ಎಂಬ ಅರ್ಥ ಪ್ರಸಿದ್ಧಿಯಿರುವುದರಿಂದ ದರ್ಶತಂ ಎಂಬುದು ಮತ್ತೊಂದು ಭಾವವನ್ನೂ ಎತ್ತಿ (ಸ್ಪಷ್ಟವಾಗಿ) ತೋರಿಸುತ್ತದೆ. ಅದೇನೆಂದರೆ ಈ ವಾಯುದೇವರು ಭಗವಂತನನ್ನು ನಿರಂತರವಾಗಿ ಧ್ಯಾನಿಸುತ್ತಿರುವುದರಿಂದಲೂ (ಭರ್) ಅಸ್ಖಲಿತವಾದ ನಿರ್ವ್ಯಾಜ ಭಕ್ತಿ ಮಾಡುತ್ತಿರುವುದರಿಂದಲೂ (ಗ) ಅವರು ನಿತ್ಯಾಪರೋಕ್ಷಿಗಳು–ಎಂದರೆ ಭಗವಂತನನ್ನು ಪ್ರತಿಕ್ಷಣದಲ್ಲೂ ಸೂರ್ಯನಂತೆ ಸ್ಪಷ್ಟವಾಗಿ ನೋಡುತ್ತಿರುತ್ತಾರೆ ಎಂಬ ಭಾವವನ್ನು ದರ್ಶತಮ್ ತೋರಿಸುತ್ತದೆ. (371, x, ೪೦)

---

* ಉ—ಉತ್ತರಾರ್ಧ, ಪೂ—ಪೂರ್ವಾರ್ಧ

ಬಟ್ಶಬ್ದಃ ಪ್ರಥಮನಿರ್ದಿಷ್ಟೋ ಬಲಾಧಿಕ್ಯಂ ಪ್ರದರ್ಶಯನ್ ॥ ೨೪ ॥
ಅವತಾರದ್ವಯೇ ತ್ವಾದ್ಯೇ ಬಲಪ್ರಾಚುರ್ಯಸೂಚಕಃ ।
ಪಶ್ಚಾತ್ ಪ್ರಯುಕ್ತಂ ಯಚ್ಚಾತ್ರ **ದರ್ಶತಂ** ಜ್ಞಾನವಾಚಕಮ್ ॥ ೨೫ ॥
ಮಧ್ವಾವತಾರೇ ವಾಯೋಸ್ತು ಜ್ಞಾನಪ್ರಾಚುರ್ಯಬೋಧಕಮ್ ।
ಏವಂ ರೂಪತ್ರಯಸ್ಯೇಮೌ ಕ್ರಮಾದ್ ವೈಶಿಷ್ಟ್ಯಸೂಚಕೌ । ॥ ೨೬ ॥
ಇತ್ಥಾ ಧಾಯೀತಿ ತತ್ರೋಕ್ತ—ಮೇವ ಸ್ಪಷ್ಟೀಕರಿಷ್ಯತಃ ।

ದೇವಸ್ಯ ಸಹಸಃ ಇತ್ಯನಯೋರ್ವಿವರಣಮ್

ದೇವಸ್ಯ ಸಹಸ ಇತಿ ವಾಯುಮಾಹ ಪದದ್ವಯಮ್ ॥ ೨೭ ॥
ಆದ್ಯೋ ಹಿ **ದೇವ**ಶಬ್ದೋಽಯಂ ದೇವಶ್ರೇಷ್ಠಂ ಪ್ರಚಕ್ಷತೇ ।
ವಯ ಶ್ರೇಷ್ಠತ್ವ ಇತ್ಯಸ್ಮಾದ್ ವಾಯುರ್ಜೀವೋತ್ತಮೋ ಮತಃ॥ ೨೮ ॥

(೨೪ಉ–೨೫ಪೂ) ಸೂಕ್ತದಲ್ಲಿ ಬಟ್ ಶಬ್ದವನ್ನು ಮೊದಲಿಗೇ ಹೇಳಿದೆ. ಬಟ್ ಶಬ್ದ ಬಲಸೂಚಕವಾದ್ದರಿಂದ ಮೊದಲನೆಯ ಎರಡು ಅವತಾರಗಳಲ್ಲಿ—ಹನುಮ-ಭೀಮ ರೂಪಗಳಲ್ಲಿ ಬಲಕಾರ್ಯವೇ ಪ್ರಾಚುರ್ಯ ಎಂಬುದನ್ನು ಸೂಚಿಸಿತು. (371, viii, ೩೯)

(೨೫ಉ–೨೬ಪೂ) ದರ್ಶತಂ ಪದವನ್ನು ಆಮೇಲೆ ಪ್ರಯೋಗಿಸಿರುವುದರಿಂದಲೂ ಅದು ಜ್ಞಾನವಾಚಕವಾದ್ದರಿಂದಲೂ ಮೂರನೆಯ ಮಧ್ವಾವತಾರದಲ್ಲಿ ಜ್ಞಾನಕಾರ್ಯವೇ ಪ್ರಚುರ (ಹೆಚ್ಚು) ಎಂಬುದನ್ನು ಸೂಚಿಸಿತು. (ಅಲ್ಲೇ)

(೨೬ಉ–೨೭ಪೂ) ಹೀಗೆ ಕ್ರಮವಾಗಿ ಪ್ರಯುಕ್ತವಾದ ಬಟ್-ದರ್ಶತ ಶಬ್ದಗಳು ಮೂರು ಅವತಾರಗಳಲ್ಲಿನ ವೈಶಿಷ್ಟ್ಯವನ್ನೂ ಸ್ಪಷ್ಟವಾಗಿ ತಿಳಿಸುತ್ತವೆ. ಮತ್ತು ಸೂಕ್ತದಲ್ಲಿ 'ಹೀಗೆಯೇ ಧರಿಸಲ್ಪಟ್ಟಿತು' ಎಂಬುದರ ಭಾವವನ್ನು ಸ್ಪಷ್ಟವಾಗಿ ತೋರಿಸಿಕೊಟ್ಟವು. (371, viii, ೩೯; 372, ೪೧; 369 ಛ, vi, ೨೪)

(೨೭ಉ–೨೮) ದೇವಸ್ಯ ಸಹಸಃ ಎಂಬ ಎರಡು ಪದಗಳೂ ವಾಯುದೇವರನ್ನೇ ಹೇಳುತ್ತವೆ. ಮೊದಲನೆಯ ದೇವಸ್ಯ ಶಬ್ದ ಈ ವಾಯು-

ಸಹಃಶಬ್ದೋ೭ತ್ರ ಕ್ಲೀಬೋಽಪಿ ಛಾಂದಸಾತ್ ಪುಂಸಿ ಯೋಜಿತಃ ।
'ಪ್ರಾಣಃ ಸಹೋ ಬಲಂ ಚೇ'ತಿ ವಾಯುಪರ್ಯಾಯವಾಚಕಾಃ ॥ ೨೯ ॥

ಇತಿ ಭಾಗವತೋಕ್ತೇಸ್ತು ಸಹೋ ವಾಯುರುದೀರಿತಃ ।
'ಸಹೋ ಬಲಂ ಚ ಶೌರ್ಯಾಣೀ'—ತ್ಯಭಿಧಾನಾತ್ ಬಲಾಧಿಕಃ ॥೩೦॥

'ಷಹ ಮರ್ಷಣ' ಇತ್ಯಸ್ಮಾ—ಚ್ಛತ್ರುವೇಗಸಹೋಽಪಿ ಸಃ ।
ಕಲ್ಯಾದಿಭಿರ್ದೈತ್ಯಪೂಗೈ—ರವಿದ್ಧಶ್ಚಾಖಣೋ ಹಿ ಸಃ ॥ ೩೧ ॥

ಸಹೋ ವೇಗಾರ್ಥವತ್ವಾದ್ವಾ ವೇಗವಾನಿತಿ ವಾ ಭವೇತ್ ।

ದೇವರು ದೇವಶ್ರೇಷ್ಠರೆಂದು ಹೇಳುತ್ತದೆ. 'ವಯ ಶ್ರೇಷ್ಠತ್ವ' ಎಂಬ ಧಾತು ಪಾಠದಂತೆ ವಾಯು ಎಂದರೂ ದೇವಶ್ರೇಷ್ಠನೆಂದೇ ಅರ್ಥ. (369, vii, ಮತ್ತು xi, ೨೪, ೨೬)

(೨೯-೩೦ಪೂ) ಸಹಸಃ ಎಂಬುದು ಷಷ್ಠೀ ಏಕವಚನರೂಪ. ಸಾಮಾನ್ಯವಾಗಿ ಸಹಃ ಶಬ್ದ ನಪುಂಸಕಲಿಂಗವಾದರೂ ವೈದಿಕ ಪ್ರಯೋಗ ವಾದ್ದರಿಂದ ಇಲ್ಲಿ ಪುಲ್ಲಿಂಗವಾಗಿದೆ. ೧. ಭಾಗವತದಲ್ಲಿ ಪ್ರಾಣಃ ಸಹಃ ಬಲಂ ಇವುಗಳೆಲ್ಲಾ ವಾಯುಶಬ್ದದ ಪರ್ಯಾಯಗಳೆಂದು ಹೇಳಿರುವುದರಿಂದ ಸಹಃ ಎಂದರೆ ವಾಯು ಎಂದೇ ಅರ್ಥ. (371, i, ೩೫)

(೩೦ಉ—೩೨ಪೂ) ೨. ಅಭಿದಾನ (ಕೋಶ)ದಲ್ಲಿ ಸಹಃ ಎಂದರೆ ಬಲ, ಶೌರ್ಯ, ಪರಾಕ್ರಮ ಎಂದು ಹೇಳಿದೆ. ಅದರಂತೆ ಬಲಾಧಿಕನಾದ್ದರಿಂದ ವಾಯುವಿಗೆ ಸಹಃ ಎಂಬುದು ಅನ್ವಯಿಸುತ್ತದೆ. ೩. ಸಹ ಧಾತುವಿಗೆ ಸಹಿಸು, ಮನ್ನಿಸು ಎಂದೂ ಅರ್ಥವಿರುವುದರಿಂದ ಆ ಧಾತುವಿನ ರೂಪವೇ ಸಹಃ, ಆದಕಾರಣ ಸಹಃ ಎಂದರೆ ಶತ್ರುಗಳ ವೇಗವನ್ನು ಸಹಿಸುವವನು ಎಂದೂ ಅರ್ಥವಾಗುತ್ತದೆ. ಅಷ್ಟೇ ಅಲ್ಲ, ಕಲ್ಯಾದಿ ದೈತ್ಯರ ಉಪಟಳಕ್ಕೂ (ಬಾಧೆಗೂ) ಈ ವಾಯು ಜಗ್ಗುವವನಲ್ಲ. ಆದ್ದರಿಂದಲೇ ಇವನಿಗೆ ಉಪ-ನಿಷತ್ತುಗಳಲ್ಲಿ ಅಖಣ (ಕಲ್ಲುಬಂಡೆ) ಎಂಬ ಪ್ರಯೋಗವಿದೆ. ಸಹ ಎಂದರೆ ಈ ಅರ್ಥವೂ ಬರುತ್ತದೆ. ಕಡೆಯದಾಗಿ ಸಹ ಧಾತುವಿಗೆ ವೇಗ ಎಂಬ

ಪೂರ್ವಾರ್ಧಸ್ಯ ಭಾವಾರ್ಥಃ

ಏತಾದೃಶೋ ಹಿ ಯೋ ವಾಯುಃ ಸ ಹರೇರ್ವಶಗಃ ಸದಾ ॥ ೩೨ ॥
ಯತಸ್ತಸ್ಮಾದ್ಧಿ ಸಂಜಾತ—ಸ್ತದಾಜ್ಞಾಮನುವರ್ತತೇ ।
ತದಾಜ್ಞಯೈವ ಹಿ ಸೇವಾರ್ಥಂ ತ್ರೇತಾದೌ ಚ ಯುಗತ್ರಯೇ ॥ ೩೩ ॥
ಈದೃಶಾನ್ಯೇವ ದಿವ್ಯಾನಿ ರೂಪಾಣಿ ತ್ರೀಣ್ಯಧಾರಯತ್ ।

ಪೂರ್ವಾರ್ಧಸ್ಯ ಅನ್ವಯಕ್ರಮಃ

ಪೂರ್ವಾರ್ಧಸ್ಯಾನ್ವಯಂ ವಕ್ಷ್ಯೇ ಶ್ರುತ್ಯರ್ಥಜ್ಞಾನ (ಸಾಧನಮ್)
ಕಾರಣಮ್ ॥ ೩೪ ॥

ಅರ್ಥವೂ ಇದೆ. ಅದರಂತೆ ಸಹಃ ಎಂದರೆ ವೇಗವುಳ್ಳವನು ಎಂದೂ ಅರ್ಥವಾಗುತ್ತದೆ. (ಅಲ್ಲೇ)

(೩೨ಉ-೩೪ಪೂ) ಈಗ ಪೂರ್ವಾರ್ಧದ ಅನ್ವಯ ತಾತ್ಪರ್ಯಗಳನ್ನು ತೋರಿಸಲಾಗಿದೆ. ಯತಃ-ಯಾವ ಕಾರಣದಿಂದ, ಯತಃ-ಯಚ್ಛಬ್ದವಾಚ್ಯನಾದ ವಿಷ್ಣುವಿನಿಂದ, ಅಜನಿ-ಹುಟ್ಟಿದನೋ, ತತ್-ಆದ್ದರಿಂದ, ತತ್—ಆ ಮೂಲರೂಪವು, ಸಹಸಃ ದೇವಸ್ಯ (ಇವು ಷಷ್ಠೀ ರೂಪಗಳು) ಬಲಸ್ವರೂಪನಾದ ವಿಷ್ಣುವಿಗೆ ಅಧೀನ, ಅವನ ವಶದಲ್ಲೇ ಇದೆ. ಯತಃ (ಪಂಚಮ್ಯರ್ಥ-ಅನ್ವಯ) ಆ ವಿಷ್ಣುವಿನ ಆಜ್ಞೆಯಿಂದಲೇ ಅವನ ಸೇವೆಗಾಗಿಯೇ ತ್ರೇತ-ದ್ವಾಪರ ಕಲಿಯುಗಗಳಲ್ಲಿ (ಎಂದು ಸೇರಿಸಿಕೊಳ್ಳಬೇಕು) ತತ್—ಆ ಮೂಲರೂಪವು, ಇತ್ಥಾ-ಈ ರೀತಿಯಾಗಿಯೇ (ಇಂಥವೇ ಆದ), ವಪುಷೇ—ದೇಹಗಳಿಗಾಗಿ (ಅವತಾರಗಳಾಗಿ), ಧಾಯಿ-ಧರಿಸಲ್ಪಟ್ಟಿತು. ಇದರ ತಾತ್ಪರ್ಯವೇನೆಂದರೆ—ಇಂಥಾ (ಬಲ-ಜ್ಞಾನ ಸ್ವರೂಪನೂ, ಶ್ವಾಸಧಾರಣ ಮಾಡುವುದೇ ಮೊದಲಾದ ಹಿಂದೆ ಹೇಳಿದ ಅಮಿತಗುಣಗಳುಳ್ಳ) ವಾಯುವು ವಿಷ್ಣುವಿನಿಂದ ಹುಟ್ಟಿದನು. ಆದಕಾರಣ ಅವನ ಆಧೀನ ಮತ್ತು ಅವನ ಸೇವೆಗಾಗಿಯೇ ಈ ರೀತಿಯೇ (ಮೂಲರೂಪದಂತೆಯೇ ಬಲಜ್ಞಾನಾದಿ ಅಮಿತಗುಣಗಳುಳ್ಳವನಾಗಿಯೇ) ತ್ರೇತಾದಿ ಮೂರು ಯುಗಗಳಲ್ಲಿ ಮೂರು ರೂಪಗಳನ್ನು ಧರಿಸಿದನು ಎಂಬುದೇ ಪೂರ್ವಾರ್ಧದ ಭಾವ

(೩೪ಉ-೩೫) ಪೂರ್ವಾರ್ಧದ ಅನ್ವಯಕ್ರಮವನ್ನು ತೋರಿಸಲಾಗಿದೆ. (ಸೂಚನೆ—ಯತಃ, ಸಹಸಃ, ದೇವಸ್ಯ, ತತ್ ಮೊದಲಾದ ಶಬ್ದಗಳನ್ನು

ಯತೋ ಯತೋ ಹಿ ವಿಷ್ಣೋಶ್ಚ ತದಜನ್ಯತ ಏವ ಹಿ ।
ದೇವಸ್ಯ ಸಹಸಸ್ತತ್ತು ಬಟ್ ದರ್ಶತಂ ಚೈವ ಭರ್ಗಃ ॥ ೩೫ ॥
ದೇವಸ್ಯ ಸಹಸೋ ವಿಷ್ಣೋ—ರಧೀನೋಽವರ ಏವ ಚ ।
ತದಾಜ್ಞಯಾ ಚ ತದಿತ್ಥಾ ವಪುಷೇ ಧಾಯಿ ಚ ಕ್ರಮಾತ್ ॥ ೩೬ ॥

[ತಥಾಚಾಯಮನ್ವಯಕ್ರಮಃ ॥ **ಯತೋ-ಯಸ್ಮಾತ್, ಯತೋ** ಯಚ್ಛಬ್ದವಾಚ್ಯಾತ್ ಪ್ರಕಾಶರೂಪಾತ್ **ವಿಷ್ಣೋಃ** (ಸಕಾಶಾತ್), **ತತ್** (ಮೂಲರೂಪಂ), **ಅಜ** ನಿ=ಜಾತಂ, **ತತ್**=ತಸ್ಮಾತ್ (ಅತ ಏವ ಹಿ) **ದೇವಸ್ಯ ಸಹಸಃ** (ವಾಯೋಃ) ತತ್-ಮೂಲರೂಪಂ, **ಬಟ್ ದರ್ಶತಂ ಭರ್ಗಃ** (ಚ) । (ಕಿಂಚ) **ದೇವಸ್ಯ ಸಹಸಃ** (ಷಷ್ಠ್ಯರೂಪೇ)=**ವಿಷ್ಣೋಃ** ಅಧೀನಃ ಅವರಶ್ಚ **ದೇವಸ್ಯ ಸಹಸಃ**=ವಿಷ್ಣೋಃ ಆಜ್ಞಯಾ ಚ, **ತತ್**= ಮೂಲರೂಪಂ ಇತ್ಥಾ=ಏವಮೇವ **ವಪುಷೇ ಧಾಯಿ** ॥ ಇತ್ಯಾವೃತ್ತ್ಯಾ ಯೋಜನೀಯಮ್ ॥]

ಉತ್ತರಾರ್ಧವ್ ಹನೂಮದವತಾರಃ

ತ್ರೇತಾಯಾಂ ತು ಯುಗೇ ರಾಮ—ಸೇವಾರ್ಥಂ ಹನುಮಾನಭೂತ್ ।
ರಾಮಸ್ಯ ಸಾಧಯಾಮಾಸ ಕಾರ್ಯಾಣಿ ವಿವಿಧಾನ್ಯಪಿ ॥ ೩೭ ॥

'ಮತಿ' ಶಬ್ದಾರ್ಥಃ

ಹನು ಶಬ್ದೋ ಜ್ಞಾನವಾಚೀ ಭೂಮಾರ್ಥೇ ವರ್ತತೇ **ಮತುಪ್** ।
ಸ್ವರೂಪತೋ ಯತಶ್ಚಾಯಂ ಶುದ್ಧಜ್ಞಾನಮಯೋ ಮತಃ ॥ ೩೮ ॥

ಆವೃತ್ತಿಮಾಡಿಕೊಂಡು ಅನ್ವಯ ಮಾಡಿ ಅರ್ಥ ಹೇಳಬೇಕು. ಕಂಸದಲ್ಲಿ ಅದನ್ನೇ ಸ್ಪಷ್ಟವಾಗಿ ತೋರಿಸಿದೆ.)

(೩೭) ಉತ್ತರಾರ್ಧದಲ್ಲಿ ಪ್ರಥಮಾವತಾರ ಹನುಮಂತನ ಸೇವೆಯನ್ನು ವರ್ಣಿಸಿದೆ—ಆ ವಾಯು ತ್ರೇತಾಯುಗದಲ್ಲಿ ಶ್ರೀರಾಮನ ಸೇವೆಗಾಗಿ ಹನುಮಂತನಾಗಿ ಅವತರಿಸಿದನು. ಮತ್ತು ಆ ರಾಮನ ನಾನಾವಿಧ ಕಾರ್ಯಗಳನ್ನು ಸಾಧಿಸಿದನು.

(೩೮-೪೦) ಹನುಮಾನ್ ಎಂಬಲ್ಲಿ ಹನು ಶಬ್ದವು ಜ್ಞಾನವಾಚೀ. ಅದರ ಮೇಲೆ ಭೂಮಾರ್ಥದಲ್ಲಿ (ಅತ್ಯಧಿಕವಾಗಿ ಉಳ್ಳವನು ಎಂಬ ಅರ್ಥ-

ದೂರೋಽಜ್ಞಾನಾದಿದೋಷೈಶ್ಚ ಸರ್ವಶಾಸ್ತ್ರಾರ್ಥಕೋವಿದಃ ।
ಪಾರದೃಶ್ವಾ ತಥೈವಾಯಂ ಮಹಾವ್ಯಾಕರಣಾಂಬುಧೇಃ ॥ ૩೯ ॥
ಅತೋ ವ್ಯಾಹರತಾನೇನ ನ ಕಿಂಚಿದಪಶಬ್ದಿತಮ್ ।
ಇತಿ ಬೋಧಯಿತುಂ ಹ್ಯೇವ ಶ್ರುತಿರೇನಂ ಮತಿಂ ಜಗೌ ॥ ೪೦ ॥

ಉತ್ತರಾರ್ಧಸ್ಯ ಅರ್ಥವಿವರಣಮ್

ತದಿದಂ ಪ್ರಥಮಂ ರೂಪಂ ಋತಾಖ್ಯಸ್ಯ ಹರೇಃ ಪ್ರಿಯಮ್ ।
ರಾಮಸ್ಯ ಸ್ವತೃರೂಪಸ್ಯ ಶಶ್ವದೇಕವಿಧಸ್ಯ ಚ ॥ ೪೧ ॥
ಯಥಾರ್ಥಜ್ಞಾನರೂಪಸ್ಯ ಪೂರ್ವಾವಗತವತ್ಸ್ವತಃ ।
ನಿತ್ಯಯೌವನರೂಪಸ್ಯ ತತ್ಸಮೀಪಗತಃ ಸದಾ ॥ ೪೨ ॥

ದಲ್ಲಿ) ಮತುಪ್ (ಮಾನ್) ಪ್ರತ್ಯಯ ಬಂದಿದೆ. (201, ૩೯) ಈ ಹನುಮಂತ ಸ್ವರೂಪತಃ ಪರಿಶುದ್ಧಜ್ಞಾನವುಳ್ಳವನಾದ್ದರಿಂದ ಇವನಿಗೆ ಆ ಹೆಸರು ಬಂತು. ಕೇವಲ ಜ್ಞಾನಸ್ವರೂಪನಾದ್ದರಿಂದ ಅವನಿಗೆ ಅಜ್ಞಾನ, ದೈತ್ಯಬಾಧೆ ಮೊದಲಾದ ಯಾವ ದೋಷಗಳೂ ಹತ್ತಿರಕ್ಕೇ ಸುಳಿಯುವುದಿಲ್ಲ. ಜ್ಞಾನಿಯಾದ್ದರಿಂದ ಸರ್ವಶಾಸ್ತ್ರಾರ್ಥಕೋವಿದನಾಗಿದ್ದಾನೆ. ಮಹಾ-ವ್ಯಾಕರಣವೆಂಬ ಅಪಾರಸಮುದ್ರವನ್ನು ದಾಟಿದವನು (ಮಹಾವ್ಯಾಕರಣ-ದಲ್ಲಿ ನಿಪುಣನೆಂದರ್ಥ). ಆದ್ದರಿಂದಲೇ ಇವನು ಮಾತಾಡುವಾಗ ಕಿಂಚಿದಪ-ಶಬ್ದವೂ ಬರುವುದಿಲ್ಲ (201, ૩೯–೩೩) ಇತ್ಯಾದಿ ಪ್ರಮೇಯ-ಗಳನ್ನು ತಿಳಿಸುವುದಕ್ಕಾಗಿಯೇ ಶ್ರುತಿಯು ಇವನ ಹೆಸರನ್ನು 'ಮತಿಃ' (ಬುದ್ಧಿ) ಎಂದೇ ಹೇಳಿತು. ಹೀಗೆ ಉತ್ತರಾರ್ಧದಲ್ಲಿರುವ 'ಮತಿ' ಶಬ್ದಕ್ಕೆ 'ಹನುಮಂತ'ನೆಂದೇ ಅರ್ಥ. (371.ii, ૩೬–૩೭)

(೪೧–೪૩) ಯತ್ ಮತಿಃ ಋತಸ್ಯ ಉಪಹ್ವರತೇ ಎಂಬುದರ ಅರ್ಥ-ವನ್ನು ಹೇಳಲು ಉಪಕ್ರಮಿಸಿ ಮೊದಲು ಋತಶಬ್ದವನ್ನು ಶ್ರೀರಾಮನಲ್ಲಿ ಅನ್ವಯಿಸಿ ಅನೇಕಾರ್ಥ ಹೇಳುತ್ತಾರೆ—ಯತ್ ಎಂಬುದರ ವಿವರಣೆಯೇ 'ತದಿದಂ ಪ್ರಥಮಂ ರೂಪಂ'—ಆ ಮೊದಲನೆಯ ಹನುಮಾವತಾರವು

(ಯದೀಮುಪಹ್ವರತೇ)

'ಹ್ವರ ಕೌಟಿಲ್ಯ' ಇತ್ಯುಕ್ತೇ—ರ್ನಮ್ರೀಭಾವಯುತಸ್ತಥಾ ।
ಕ್ರೀಡತೇ ಸೇವಮಾನೋಽಮುಂ ತದ್ಧ್ಯೈಕಧ್ಯಾನತತ್ಪರಃ ॥ ೪೩ ॥
ದೂರಸ್ಥೋಽಪ್ಯೇವಮೇವಾಸೌ ರಾಮಕಾರ್ಯಾಣಿ ಸಾಧತೇ ।
ಅಮೃತಸ್ರಾವಿಣೀರ್ವಾಚೋ
ಸೀತಾ ರಾಮಸ್ಯ ಜಾನಕೀವತ್ (ಈವತ್) ॥ ೪೪ ॥

ಎಂದರ್ಥ. ಋತಸ್ಯ ಎಂದರೆ ಜ್ಞಾನಸ್ವರೂಪನಾದ ಶ್ರೀಹರಿಯು ಅವತಾರ-ವಾದ ಶ್ರೀರಾಮನಿಗೆ 'ಪ್ರಿಯವಾದುದು' (ಎಂದು ಅಧ್ಯಾಹಾರ). ಋತ ಎಂದರೆ ಯಾವಾಗಲೂ ಒಂದೇ ರೀತಿ ಇರುವವನು—ಜನನ-ಮರಣ, ಮುಪ್ಪು-ರೋಗರುಜಿನ ಮೊದಲಾದ ಯಾವ ವಿಕಾರಗಳೂ ಇಲ್ಲದವನು ಎಂಬುದು ಒಂದರ್ಥ. ಋತ ಎಂದರೆ ಯಥಾರ್ಥಜ್ಞಾನ ಎಂದರ್ಥ; ಅದರಿಂದ ಋತಸ್ಯ ಎಂದರೆ ಅಜ್ಞಾನಾದಿ ಯಾವ ದೋಷಲೇಶವೂ ಇಲ್ಲದ ಅನಂತವೂ ನಿರವಧಿಕವೂ ಆದ ಜ್ಞಾನವುಳ್ಳವನೆಂಬುದು ಎರಡನೇ ಅರ್ಥ. ಹಿಂದಿ-ದ್ದಂತೆಯೇ (ಹಿಂದಿನ ಕಲ್ಪಗಳಲ್ಲಿ ಹೇಗಿದ್ದನೋ ಹಾಗೆ) ಈಗಲೂ ಇರುವವ-ನೆಂದು ತಿಳಿಯಲ್ಪಡುವವನು ಎಂಬುದು ಮೂರನೇ ಅರ್ಥ. ನಿತ್ಯಯೌವನ-ವುಳ್ಳವನೆಂಬುದು ನಾಲ್ಕನೇ ಅರ್ಥ. (ಖಂಡ 371, iii, ೩೭). ಇಂಥಾ ರಾಮನ, ಉಪ-ಸಮೀಪದಲ್ಲಿ ಹ್ವರತೇ-ಇರುವವನು ಎಂಬುದರ ಭಾವವನ್ನೇ ಶ್ಲೋಕದಲ್ಲಿ ತೋರಿಸಿದೆ. ಹ್ವರ ಕೌಟಿಲ್ಯೇ ಎಂದು ಧಾತು ಪಾಠವಿರುವುದರಿಂದ ಹ್ವರತೇ ಎಂದರೆ ರಾಮನ ಸಮೀಪದಲ್ಲಿ ನಮ್ರತೆಯಿಂದ-ವಿಧೇಯತೆಯಿಂದ ಇರುತ್ತಾನೆ ಎಂದೂ ಅರ್ಥವಾಗುತ್ತದೆ. ಹ್ವರ ಎಂದರೆ ಕ್ರೀಡಿಸು ಎಂದೂ ಅರ್ಥವುಂಟು. ಅದರಂತೆ ಹ್ವರತೇ ಎಂದರೆ ಆ ರಾಮನ ಸೇವೆಯಲ್ಲಿ ನಲಿದಾಡುತ್ತಾನೆ ಎಂದೂ ಅರ್ಥವಾಗುತ್ತದೆ. ಅವನ ಸಮೀಪದಲ್ಲಿ ಇರು-ತ್ತಾನೆ ಎಂಬುದಕ್ಕೆ ಸದಾ ಅವನ ಧ್ಯಾನದಲ್ಲೇ ಮಗ್ನನಾಗಿರುತ್ತಾನೆ ಎಂದೂ ಉಪ ಹ್ವರತೇ ಎಂಬುದರ ಅರ್ಥವಾಗುತ್ತದೆ. (370 ಫ, ೩೪)

(೪೪-೪೫) ಉಪ ಎಂದರೆ ಸಮೀಪ ಎಂದರ್ಥ, ಅದರಿಂದ 'ಈಂ-ದೂರೇಽಪಿ' ಎಂದು ಅರ್ಥ. ಇದನ್ನು ಸಾಧತೇ ಜೊತೆ ಸೇರಿಸಬೇಕು.

(ಸಸ್ರುತಃ ಧೇನಾಃ)

ಸಂದೇಶಶ್ಚ ತಥೈವಾಸ್ಯಾ ರಾಮಂ ಪ್ರತಿ ಪುನಸ್ತಥಾ ।
ಧೇನಾ ಇತಿ ವಾಚಾಂ ನಾಮ ನಾನಾಭಾವಾರ್ಥಸೂಚಕಮ್ ॥ ೪೫ ॥

'ಧಿಙ್ ಪುಷ್ಟೌ'ವಿತಿ ಧಾತೋಸ್ತು ದೇವಕಾರ್ಯಸುಸಾಧಿಕಾಃ ।
'ಧಿನು ಪುಷ್ಟೌ'ವಿತಿ ಧಾತೋರ್ವಾ ಕಾಮಧೇನುರ್ಯಥಾ ತಥಾ ॥ ೪೬ ॥

ವೃದ್ಧಿದಾಃ ಪುಷ್ಟಿದಾಶ್ಚೈವ ಸಂರಕ್ಷಣಪರಾಸ್ತಥಾ ।
ನೀತಾ ರಾಮಸ್ಯ ತಾ ವಾಚಃ ಸೀತಾಂ ಪ್ರತಿ ಹನೂಮತಾ ॥ ೪೭ ॥

ಹತ್ತಿರದಲ್ಲಿದ್ದು ರಾಮಸೇವೆ ಮಾಡುವಂತೆ ದೂರದಲ್ಲಿಯೂ ರಾಮಸೇವೆ-ಯನ್ನು ಸಾಧಿಸುತ್ತಾನೆ ಎಂದರ್ಥ. ಆ ಸೇವೆ ಏನೆಂದರೆ—ಸಸ್ರುತಃ ಧೇನಾಃ ಅನಯಂತ ಎಂದು ಶ್ರುತಿ ಹೇಳಿತು. ಸಸ್ರುತಃ ಎಂಬುದರ ಅರ್ಥವೇ 'ಅಮೃತವನ್ನು ಸುರಿಸುವ' ಎಂದು (37l, vi, ೩೮-೯). 'ಸ್ರು ಗತೌ' ಎಂಬ ಧಾತುವಿನ ಮೇಲೆ 'ಕ್ವಿಪ್ಚ' (ಪಾ. ೩-೨-೭೬) ಎಂಬ ಸೂತ್ರದಂತೆ ಕರ್ತರಿಯಲ್ಲಿ ಕ್ವಿಪ್ ಬರಲು 'ಹ್ರಸ್ವಸ್ಯ ಪಿತಿ ಕೃತಿ ತುಕ್' (ಪಾ. ೬-೧-೭೧) ಎಂಬುದರಿಂದ ತುಗಾಗಮ ಬಂದಿದೆ. ಧೇನಾಃ ಎಂದರೆ ಮಾತುಗಳನ್ನು ಎಂದರ್ಥ (ಮುಂದೆ ೪೬-೪೮ ಶ್ಲೋ. ನೋಡಿ). ಮಾತುಗಳನ್ನು ಒಯ್ದನು ಎಂದು ಹೇಳಿದೆಯಾದರೂ ಯಾರ ಮಾತನ್ನು ? ಯಾರಿಗೆ ಒಯ್ದದ್ದು ? ಎಂಬುದು ಅಸ್ಪಷ್ಟವಾಗಿದೆ. ಆದ್ದರಿಂದ ಅದನ್ನೇ ತೋರಿಸುತ್ತಾರೆ—ಋತಸ್ಯ—ರಾಮನ, ಧೇನಾಃ—ಮಾತುಗಳನ್ನು, ಈಂ(ಯದೀಮುಪ ಎಂಬಲ್ಲಿರುವ ಈಂ)—ಲಕ್ಷ್ಮೀಸ್ವರೂಪಳಾದ ಸೀತೆಯ ಬಳಿಗೆ ಒಯ್ದನು ಎಂದು ಅನ್ವಯ. ಅದೇ ರೀತಿ ಈಂ—ಹೀಗೆಯೇ, ಸೀತೆಯ ವಾಕ್ಯವನ್ನು ಋತಸ್ಯ ಅನಯಂತ ಎಂದೂ ಅನ್ವಯ ಮಾಡಬೇಕೆಂದು ಸೂಚಿಸಲಾಗಿದೆ. ಈಗ 'ಧೇನಾಃ' ಶಬ್ದಕ್ಕೆ ನಾನಾ ಟೀಕಾಕಾರರು ಅನೇಕ ವಿಧವಾಗಿ ಹೇಳಿರುವ ಅರ್ಥವನ್ನು ತೋರಿಸಲಾಗಿದೆ.

(೪೬–೪೭) ೧ನೇ ಅರ್ಥ—ಧಿಙ್ ಪುಷ್ಟೌ ಎಂಬ ಧಾತುವಿನಿಂದ ದೇವತೆಗಳ ಕಾರ್ಯವನ್ನು ಸಾಧಿಸುವ ಮಾತುಗಳು. ೨ನೇ ಅರ್ಥ—ಧಿನು-

'ಧೇಟ್ ಪಾನ' ಇತಿ ಧಾತೋರ್ವಾ ಪೀಯಮಾನಾ ಮುಮುಕ್ಷುಭಿಃ ।
ಮೋಕ್ಷಪ್ರದಾಶ್ಚ ತಾ ಧೇನಾ ಮೂಲರಾಮಾಯಣಾದಿಗಾಃ ॥ ೪೮ ॥
ತೇನಾನಯಂತ ದೇವರ್ಷಿ—ಗಂಧರ್ವಾದಿಗಣಂ(ಣಾನ್) ಪ್ರತಿ ।
ಏವಂ ನಾನಾವಿಧೇಷ್ವೇಷ ರಾಮಕಾರ್ಯೇಷು ತತ್ಪರಃ ॥ ೪೯ ॥
ವೇದತೇಽದ್ಯಾಪಿ ಕಲ್ಪಾಂತಂ ಖಂಡೇ ಕಿಂಪುರುಷಾಭಿಧೇ ।
ಇತ್ಯರ್ಥೋ ಲಭ್ಯತೇ ಧಾತೋ—ರಪೂರ್ವಂ ಕರ್ಮಣಿಯೋಗತಃ ॥ ೫೦ ॥

ಪುಷ್ಟೌ ಎಂಬ ಧಾತುವಿನಿಂದ ಕಾಮಧೇನುವಿನಂತೆ ಸಜ್ಜನರನ್ನು ಬೆಳೆಸಿ ಪೋಷಿಸಿ ಸಂರಕ್ಷಿಸತಕ್ಕ ಮಾತುಗಳು. ಇಂಥಾ ರಾಮನ ಮಾತುಗಳನ್ನು ಸೀತೆಗೂ ಸೀತೆಯ ಸಂದೇಶವನ್ನು (ಧೇನಾಃ) ರಾಮನಿಗೂ ಒಯ್ದನು ಎಂದು ಅನ್ವಯ ಹೇಳಿದಂತಾಯಿತು. (371, iv, ೩೮)

(೪೮-೫೦) 'ಧೇಟ್ ಪಾನೇ'—ಕುಡಿ ಎಂಬ ಧಾತುವೆಂದು ಗ್ರಹಿಸಿದರೆ ಮೋಕ್ಷಾಪೇಕ್ಷಿಜನಗಳಿಂದ ಕುಡಿಯಲ್ಪಡುವ, ಮೋಕ್ಷದಾಯಕವಾದ ಮಾತುಗಳನ್ನು ಎಂಬುದು ಮೂರನೇ ಅರ್ಥ. (ಅಲ್ಲೇ). ಆ ಮಾತುಗಳು ಯಾವುವೆಂದರೆ ಮೂಲರಾಮಾಯಣಾದಿ ಗ್ರಂಥಗಳಲ್ಲಿರುವ ಮಾತುಗಳನ್ನು ಆ ಹನುಮಂತ ದೇವರ್ಷಿಗಂಧರ್ವರೇ ಮೊದಲಾದ ಶಿಷ್ಯಗಣ(ಗಳಿಗೆ)ಕ್ಕೆ ಒಯ್ದನು ಎಂದರೆ ಉಪದೇಶಿಸಿದನು ಎಂದು ಅರ್ಥ. ಅನಯಂತ ಎಂಬ ಕ್ರಿಯೆ ಕರ್ಮಣಿಯಲ್ಲಿದೆ; ಅದಕ್ಕೆ ಅನುಗುಣವಾಗಿ 'ತೇನ'–ಅವನಿಂದ ಎಂಬ ಪದ ಅಧ್ಯಾಹಾರ ಮಾಡಿಕೊಳ್ಳಬೇಕು. ಅಥವಾ ಕರ್ತರಿ ಅರ್ಥದಲ್ಲೇ ಕರ್ಮಣಿ ಬಂದಿದೆ ಎಂದಾದರೂ ಇಟ್ಟುಕೊಳ್ಳಬಹುದು. (371, v, ೩೮) ಈಗ ಹನುಮದವತಾರದ ಚರಿತ್ರೆಯನ್ನು ಮುಗಿಸುತ್ತಾರೆ—ಈ ಪ್ರಕಾರ ಹನುಮಂತ ಶ್ರೀರಾಮನ ನಾನಾಕಾರ್ಯಗಳಲ್ಲಿ ಆಸಕ್ತನಾಗಿ ಬ್ರಹ್ಮದೇವರ ಈ ದಿನಕಲ್ಪ ಮುಗಿಯುವವರೆಗೂ ಇಂದಿಗೂ ಕಿಂಪುರುಷಖಂಡದಲ್ಲಿದ್ದಾನೆ ಎಂಬ ಅರ್ಥ 'ಅನಯಂತ' ಎಂಬ ಕ್ರಿಯೆಯ (ಕರ್ಮಣಿ)ಪ್ರಯೋಗದಿಂದ ಸೂಚಿತವಾಗಿದೆ.

ಉತ್ತರಾರ್ಧಸ್ಯ ಅನ್ವಯಾದಿವಿವರಣಮ್

ಈಮಿತ್ಯವ್ಯಯಂ ಏವಾರ್ಥೇ ಲಕ್ಷ್ಮೀರಿತಿ ಭವೇತ್ ಸ್ತ್ರಿಯಾಮ್ ।
ಉಪಶಬ್ದೇನ ಸಾಮೀಪ್ಯ ವ್ಯಜ್ಯತೇ ಹ್ವರಣಸ್ಯ ತು ॥ ೫೧ ॥
ಅತಶ್ಚ ಸಾಧತ ಇತಿ ದೂರೇಽರ್ಥಾತ್ ಸಿದ್ಧ್ಯತೇ ಕ್ರಿಯಾ ।
ದ್ವಿತೀಯಂ ತೃತೀಯಂ ಚೇತಿ ವಕ್ಷ್ಯತೇಽಗ್ರೇ ಕ್ರಮಾದ್ಯತಃ ॥ ೫೨ ॥
ತದ್ಬಲಾತ್ ಪ್ರಥಮಂ ಚಾತ್ರ ಮಂತ್ರೇಽಧ್ಯಾಹಾರ್ಯತೇ ಪದಮ್ ।
ತತಶ್ಚಾಸ್ಯೋತ್ತರಾರ್ಧಸ್ಯ ಹ್ಯನ್ವಯಕ್ರಮ ಉಚ್ಯತೇ ॥ ೫೩ ॥
ಯಚ್ಚಾಸ್ಯ ಪ್ರಥಮಂರೂಪಂ ಮತಿಸ್ತದುಪ ಏವ ಹಿ ।
ಹ್ವರತೇ ತಸ್ಯ ಚರ್ತಸ್ಯ ಪುನರ್ದೂರೇಽಪಿ ಸಾಧತೇ ॥ ೫೪ ॥
ಸಸ್ರುತಶ್ಚಾಸ್ಯ ಧೇನಾಸ್ತು ಸೀತಾ ಮೀಮನಯಂತ ಹಿ ।
ತಸ್ಯಾಃ ಪುನರಿಮಂ ಚೈವ ತಥಾ ದೇವಗಣಾನ್ ಪ್ರತಿ ॥ ೫೫ ॥

[ತಥಾಚಾನ್ವಯಶ್ಚೈವಂ ಜ್ಞೇಯಃ ॥ ಯದೀಂ-ಯಚ್ಚ (ಅಸ್ಯ ಪ್ರಥಮಂ ರೂಪಂ) (ತತ್) ಮತಿಃ । (ತತ್) ಋತಸ್ಯ ಉಪ-ಹ್ವರತೇ । ಈಂ-ದೂರೇ ಚ ತಸ್ಯ ಕಾರ್ಯಾಣಿ ಸಾಧತೇ । (ತಥಾಹಿ-ಋತಸ್ಯ ಸಸ್ರುತಃ ಧೇನಾಃ । ಈಂ ಅನಯಂತ, ಪುನಃ ಅಸ್ಯಾಃ ಇಮಂ ಪ್ರತಿ ಅನಯಂತ । ಸಸ್ರುತಃ ಧೇನಾಃ ದೇವರ್ಷಿಗಂಧರ್ವಾದಿ-ಗಣಾನ್ಪ್ರತ್ಯಪಿ ಅನಯಂತ ॥

(೫೧-೫೫) ಈಂ ಎಂಬುದು ಅವ್ಯಯವಾದರೆ 'ಹೀಗೆಯೇ' ಎಂದರ್ಥ. ಸ್ತ್ರೀಲಿಂಗವಾದರೆ 'ಲಕ್ಷ್ಮೀ' ಎಂದರ್ಥ (305ನ, ೬-೨೪). ಉಪ ಎಂದರೆ ಸಮೀಪದಲ್ಲಿ ಎಂದರ್ಥವಾದ್ದರಿಂದ ಹ್ವರಣಕ್ರಿಯೆ ಸಮೀಪದಲ್ಲಿ ನಡೆಯಿತೆಂದು ಹೇಳಿದಂತಾಯಿತು. ಈಂ-ಹೀಗೆಯೇ ಎಂದರೆ ದೂರದಲ್ಲೂ ಎಂಬ ಪದ ಅರ್ಥಾತ್ ಸಿದ್ಧಿಸುತ್ತದೆ. ಆದಕಾರಣ 'ಸಾಧತೇ' ಎಂಬುದಕ್ಕೆ 'ದೂರದಲ್ಲೂ ಸಾಧಿಸುತ್ತದೆ' ಎಂದು ಹೇಳಿದಂತಾಯಿತು. ಮುಂದಿನ ಎರಡನೇ ಋಕ್ಕಿನಲ್ಲಿ ದ್ವಿತೀಯಂ ತೃತೀಯಂ ಪದಗಳು ಬಂದಿರುವುದರಿಂದ ಈ ಋಕ್ಕಿನಲ್ಲಿ

ದ್ವಿತೀಯಮಂತ್ರೇ ಪೂರ್ವಾರ್ಧಃ ಭೀಮಾವತಾರಮಹಿಮಾ

ತಸ್ಯ ರೂಪಂ ದ್ವಿತೀಯಂ ತು ದ್ವಾಪರೇ ಭೀಮನಾಮಕಮ್ |
ಅಭವತ್ ಕೃಷ್ಣಸೇವಾರ್ಥಂ ಭೂಭಾರಕ್ಷಪಣಾಯ ಚ || ೫೬ ||

ಭೃತಮೋ ಭೀಮ ಇತ್ಯುಕ್ತಃ ಶೇತೇಽಸೌ ಸಪ್ತಮಾತೃಷು |
ಮಾಪಯಂತೀತಿ ವ್ಯುತ್ಪತ್ತ್ಯಾ ಸದ್ವಿದ್ಯಾ ಏವ ಮಾತರಃ || ೫೭ ||

ನಿರ್ದುಷ್ಟತ್ವಾಚ್ಛಿವಾಃ ಪ್ರೋಕ್ತಾ ಮೋಕ್ಷಕಾರಣತಸ್ತಥಾ |
ಋಗಾದ್ಯಾ ಇತಿಹಾಸಂ ಚ ಪುರಾಣಂ ಪಂಚರಾತ್ರಕಮ್ || ೫೮ ||

ಪ್ರೋಕ್ತಾಃ ಸಪ್ತಶಿವಾಸ್ತತ್ರ ಶೇತೇ ನಿತ್ಯಮತಂದ್ರಿತಃ |
ಯಥಾ ನಿದ್ರಾರತೋ ನೈವ ಜಾನಾತಿ ವಿಷಯಾಂತರಮ್ || ೫೯ ||

ತಥಾ ವಿಚಾರಮಗ್ನೋಽಸೌ ಸರ್ವಮನ್ನದುಪೇಕ್ಷತೇ |
ನಿತ್ಯಃ ಸ್ವಚ್ಛಂದವೃತ್ತಿತ್ವಾ—ನ್ನಿತ್ಯಂ ವಿಷ್ಣ್ವೇಕಮಾನಸಃ || ೬೦ ||

‘ಪ್ರಥಮಂ’ ಪದ ಸೇರಿಸಿಕೊಳ್ಳಲು ಅಡ್ಡಿಯಿಲ್ಲ. ಈಗ ಉತ್ತರಾರ್ಧದ ಅನ್ವಯವನ್ನೂ ಅರ್ಥವನ್ನೂ ತೋರಿಸಲಾಗಿದೆ

ಎರಡನೇ ಋಕ್ (ಪೂರ್ವಾರ್ಧ) (೫೬) ಅವನ (ವಾಯುವಿನ) ಎರಡನೆಯ ರೂಪಕ್ಕೆ ಭೀಮ ಎಂದು ಹೆಸರು. ಈ ರೂಪವು ದ್ವಾಪರ ಯುಗದಲ್ಲಿ ಕೃಷ್ಣಸೇವೆಗಾಗಿ ಭೂಭಾರವನ್ನು ಇಳಿಸುವುದಕ್ಕಾಗಿ ಆಯಿತು. (೫೭–೬೦) ಭೀಮ ಶಬ್ದಕ್ಕೆ ಭೃತಾ ಮಾಃ ಯೇನ ಯಸ್ಮಿನ್ವಾ ಎಂಬ ವ್ಯುತ್ಪತ್ತಿಯಿಂದ ಪ್ರಮಾಣಭೂತಗಳಾದ (ಮಾಃ) ವಿದ್ಯೆಗಳನ್ನು ಧರಿಸಿದವನು ಎಂದರ್ಥವಾಗುತ್ತದೆ. ಹನುಮಂತನಿಗೆ ‘ಮತಿ’ ಶಬ್ದ ಹೇಳಿದಂತೆಯೇ ಭೀಮ ಶಬ್ದಾರ್ಥವನ್ನು ವಿವರಿಸುತ್ತಾ ಭೀಮನ ಹೆಸರನ್ನು ಪರೋಕ್ಷವಾಗಿ ಹೇಳುತ್ತದೆ—‘ಆ ಶಯೇ ಆ ಸಪ್ತಶಿವಾಸು ಮಾತೃಷು’. ಇದರ ವಿವರಣೆ—ಮಾಪಯಂತಿ ಎಂಬ ವ್ಯುತ್ಪತ್ತಿಯಿಂದ ಸದ್ವಿದ್ಯೆಗಳೇ ಮಾತೃಗಳು. ಆ ವಿದ್ಯೆಗಳೆಲ್ಲವೂ ನಿರ್ದೋಷವಾದ್ದರಿಂದಲೂ ಮೋಕ್ಷಕಾರಣೀಭೂತಗಳಾದ್ದರಿಂದಲೂ ಅವು ‘ಶಿವಾಸು’-ಮಂಗಳಕರಗಳಾದ ಎಂದು ಶ್ರುತಿ ಹೇಳಿತು. ಆ ವಿದ್ಯೆಗಳು ‘ಸಪ್ತ’ ಏಳು. ಯಾವುವೆಂದರೆ ಋಗಾದಿ ನಾಲ್ಕು ವೇದಗಳು

ಪೃಕ್ಷಶಬ್ದಾರ್ಥಃ

ಧರ್ಮದ್ರೋಹಿಣೋ ಯೇ ದೈತ್ಯಾ ಭಾರಭೂತಾ ಭುವಸ್ತಥಾ ।
ಭಗವದ್‌ದ್ವೇಷಿಣಃ ಕ್ರೂರಾ ಅಸಂಖ್ಯಾತಗಣಾನ್ ಬಹೂನ್ ॥ ೬೧ ॥
ಏಕಾಕೀ ಕ್ಷಪಯಾಮಾಸ ತತೋಽಸೌ ಪೃಕ್ಷ ಈರಿತಃ ।
ಪೃಚ್ಛಬ್ದೋ ಪೃತನಾವಾಚೀ ಕಯೋಗಃ ಕ್ಷೀಯತೇಸ್ತಥಾ ॥ ೬೨ ॥
ತಕಾರಸ್ಯ ತು ಲೋಪೇ ಚ ಪೃಕ್ಷಶಬ್ದೋ ಭವೇತ್ ಪುಮಾನ್ ।
ಕ್ಷೀಯತೇರಸುನಿ ಪ್ರಾಪ್ತೇ ಕ್ಲೀಬಂ ರೂಪಂ ಭವೇತ್ತದಾ ॥ ೬೩ ॥

(ಋಕ್, ಯಜುಸ್, ಸಾಮ, ಅಥರ್ವ), ಇತಿಹಾಸ, ಪುರಾಣ ಮತ್ತು ಪಂಚರಾತ್ರಗಳು. ಈ ಏಳರಲ್ಲಿ ಭೀಮನು ಸದಾ 'ಆ ಶಯೇ' ಮಲಗಿರುತ್ತಾನೆ ಎಂದು ವಾಕ್ಯಾರ್ಥ. ಅದರ ಭಾವಾರ್ಥ ಏನೆಂದರೆ—ನಿದ್ರಾಸಕ್ತನಾದ ಮನುಷ್ಯನಿಗೆ ಹೊರಗಿನ ವಿಷಯಗಳ ಕಡೆ ಗಮನ ಕೊಡದೆ ಹೇಗೆ ನಿದ್ರೆ ಮಾಡುತ್ತಾನೋ ಹಾಗೆ ಭೀಮ ಈ ಸಪ್ತ ವಿದ್ಯೆಗಳಲ್ಲಿ ಆಸಕ್ತನಾಗಿ ಮಿಕ್ಕದ್ದೆಲ್ಲ ವನ್ನೂ ಉಪೇಕ್ಷೆ ಮಾಡುತ್ತಾನೆಂದು ಭಾವ. (373 iv, ೪೬). ನಿತ್ಯಃ ಎಂದರೆ ಸ್ವೇಚ್ಛಾಮರಣವುಳ್ಳವನೆಂದು ಅರ್ಥ. (373, vಋ, ೪೫) ಅಥವಾ ಕೇವಲ ವಿಷ್ಣುವಿನಲ್ಲೇ ಮನಸ್ಸುಳ್ಳವನೆಂದೂ ಅರ್ಥವಾಗುತ್ತದೆ. 'ನಿತ್ಯಃ = ನಿತ್ಯಂ' ಮಾತ್ರ್ಯಷು ಆಶಯೇ ಎಂದು ಕ್ರಿಯಾ ವಿಶೇಷಣವಾಗಿಯೂ ಅನ್ವಯಿಸಬಹುದು (ಅಲ್ಲೇ ಜೊತೆಗೆ 341 ಘ, ೬೪೦-೪೧ನ್ನೂ ನೋಡಿ).

(೬೧-೩) ಪೃಕ್ಷ ಶಬ್ದಾರ್ಥ ವಿವರಿಸುತ್ತಾರೆ. ಪೃತ್ ಎಂದರೆ ಸೈನ್ಯ (ಪೃತನಾ). ಕ್ಷೀ-ಕ್ಷಯಿಸು ಧಾತುವಿನ ಮೇಲೆ ಕ ಪ್ರತ್ಯಯ ಸೇರಲು ಕ್ಷಃ ಎಂದಾಗುತ್ತದೆ. ಹೀಗೆ ಪೃ-ಕ್ಷಃ ಎಂದರೆ ಸೈನ್ಯವನ್ನು ನಾಶ ಮಾಡಿದವನು ಎಂದರ್ಥ. ಯಾರ ಸೈನ್ಯ ? ಎಂದರೆ ವಿವರಣೆ— ದ್ವಾಪರಯುಗದಲ್ಲಿ ಧರ್ಮದ್ರೋಹಿಗಳಾದ ಅನೇಕ ದೈತ್ಯರು ಹುಟ್ಟಿ ಹರಿದ್ವೇಷಿಗಳೂ ಕ್ರೂರರೂ ಆಗಿ ಭೂಭಾರವಾಗಿದ್ದರು. ಅಂಥಾ ಅನೇಕ ದೈತ್ಯರ ತಂಡಗಳನ್ನು ಈ ಭೀಮನೊಬ್ಬನೇ ನಾಶ ಮಾಡಿದ್ದರಿಂದ ಶ್ರುತಿಯು ಭೀಮನನ್ನು 'ಪೃಕ್ಷಃ' ಎಂದು ಹೇಳಿತು. ಪೃತ್ ಶಬ್ದದ ತಕಾರಕ್ಕೆ ನಿರುಕ್ತ ನಿಯಮದಂತೆ

ಪಿತುಮಾನ್ನಿತ್ಯಸ್ಯಾರ್ಥಃ

·ಅನ್ನಂ ವೈ ಪಿತು' ರಿತ್ಯುಕ್ತೇಃ ಪಿತುರಿತ್ಯನ್ನಮುಚ್ಯತೇ ।
ಪಿತುಮಾನನ್ನವಾನ್ ಪ್ರೋಕ್ತೋ
ಭೀಮೋ ಬಹುಭುಕ್ ಪಿತೋಃ ॥ ೬೪ ॥

ವೃಕಾಖ್ಯಾಜ್ಜಾಠರಾಗ್ನೇಃ ಸ ವೃಕೋದರ ಇತೀರಿತಃ ।
ಇತಿ ಭೀಮಸ್ಯ ಮಹಿಮಾ ಋಗರ್ಧೇನ ನಿರೂಪಿತಃ ॥ ೬೫ ॥

ಉತ್ತರಾರ್ಧಮ್—ಮಧ್ವಾವತಾರಪ್ರಸಕ್ತಿಃ

ಅಥಾಧುನಾ ಕ್ರಮಪ್ರಾಪ್ತಂ ತೃತೀಯಂ ರೂಪಮುಚ್ಯತೇ ।
ಅಸ್ಯೇತಿ ವೃಷಭಸ್ಯೇತಿ ವಾಯುರೇವ ನಿರೂಪಿತಃ ॥ ೬೬ ॥

ಬಹುಧಾ ಯೋಗಮಾಶ್ರಿತ್ಯ ವ್ಯಾಖ್ಯಾತೋ ವೃಷಭೋ ಬುಧೈಃ ।
ನಾಗಾದಿವದಯಂ ಶಬ್ದಃ ಪುಂಸಿ ಶ್ರೇಷ್ಠಾರ್ಥವಾಚಕಃ ॥ ೬೭ ॥

ಲೋಪ ಬಂದು ಪೃ ಎಂದೇ ಉಳಿಯುತ್ತದೆ. ಕ್ಷೀ ಧಾತುವಿನ ಮೇಲೆ ಕ ಪ್ರತ್ಯಯ ಬಂದಿದೆ ಎಂದಿಟ್ಟುಕೊಂಡರೆ ಪೃಕ್ಷ ಶಬ್ದ ರಾಮ ಶಬ್ದದಂತೆ ಅಕಾರಾಂತ ಪುಲ್ಲಿಂಗವಾಗುತ್ತದೆ. ಕ್ಷೀ-ಧಾತುವಿನ ಮೇಲೆ ಅಸುನ್ ಪ್ರತ್ಯಯ ಎಂದಿಟ್ಟುಕೊಂಡರೆ ನಪುಂಸಕಲಿಂಗವಾಗುತ್ತದೆ. (369 ಥ xi, ೨೭-೮).

(೬೪-೫) ಪಿತುಃ ಎಂದರೆ (ಉಕಾರಾಂತ) ಅನ್ನವೆಂದರ್ಥ (399, ೧೩೦). ಆದ್ದರಿಂದ ಪಿತುಮಾನ್ ಎಂದರೆ ಬಹಳ ಅನ್ನವುಳ್ಳವನು ಅಂದರೆ ಬಹಳ ಅನ್ನ ತಿನ್ನುವವನು ಎಂದರ್ಥ. ಭೀಮನ ಜಠರಾಗ್ನಿಗೆ ವೃಕ ಎಂದು ಹೆಸರು. ಅದುಳ್ಳವನಾದ್ದರಿಂದ ಅವನಿಗೆ 'ವೃಕೋದರ' ಎಂಬ ಹೆಸರು ಪ್ರಸಿದ್ಧವಾಗಿದೆ. (373 v ಕ, ೪೫) ಹೀಗೆ ಅರ್ಧ ಋಕ್ಕಿನಲ್ಲಿ ಶ್ರುತಿಯು ಭೀಮನ ಮಹಿಮೆ ಹೇಳಿ ಮುಗಿಸಿತು. (ಈ ಸಂದರ್ಭದಲ್ಲೇ ಸಿಂಹಾವಲೋಕನದ ಶ್ಲೋ. ೨೦೩-೦೫ ನೋಡಿ).

ಮಧ್ವಾವತಾರ ಪ್ರಸಕ್ತಿ (ಶ್ಲೋ. ೬೬) ಈಗ ಕ್ರಮಪ್ರಾಪ್ತವಾದ ಮೂರನೇ ರೂಪವನ್ನು ಹೇಳುತ್ತದೆ. ಉತ್ತರಾರ್ಧದಲ್ಲಿರುವ ಅಸ್ಯ ವೃಷಭಸ್ಯ ಎರಡೂ ವಾಯುಪರ. (೬೭) ವೃಷಭ ಶಬ್ದಕ್ಕೆ ಪಂಡಿತರು (ಟೀಕಾಕಾರರು) ಅನೇಕ ರೀತಿಯಿಂದ ವ್ಯುತ್ಪತ್ತಿ ಹೇಳಿ ಅನೇಕ ವಿಧವಾಗಿ ಅರ್ಥ

ಇತಿ ಶ್ರೇಷ್ಠಾರ್ಥಮಾಶ್ರಿತ್ಯ ಸರ್ವಶ್ರೇಷ್ಠ ಇತೀರ್ಯತೇ |
ದೇವಶ್ರೇಷ್ಠೋಽಥವಾ ವಿಷ್ಣು—ಭಕ್ತಾನಾಮಗ್ರಣೀರ್ಭವೇತ್ ॥ ೬೮ ॥
'ವೃಷ ಸೇಚನ' ಇತ್ಯುಕ್ತೇ—ರ್ಭಕ್ತಾಭೀಷ್ಟಪ್ರವರ್ಷಕಃ |
ಇತ್ಯರ್ಥೋಽವಾಪ್ಯತೇ, ಧಾತುಃ ಸ್ನೇಹಾರ್ಥೋ ವಿದ್ಯತೇಽಪರಃ ॥ ೬೯ ॥
ತಸ್ಮಾದ್ ಭಕ್ತಾನುರಾಗೀತಿ ಭವತ್ಯರ್ಥಾಂತರಂ ತಥಾ |
ಅಥವಾ ಭಗವದ್ಭಕ್ತ—ಪ್ರವರಃ ಪರಿಕೀರ್ತಿತಃ ॥ ೭೦ ॥
'ಶಕ್ತ್ಯತಿಶಯು' ಇತ್ಯರ್ಥೇ ಪಠಿತೋಽಯಂ ಪುನಸ್ತತಃ |
ಅದಭ್ರಶಕ್ತಿಸಂಪನ್ನ ಇತ್ಯರ್ಥೋ ವ್ಯಜ್ಯತೇ ಽಪರಃ ॥ ೭೧ ॥

ದಶಪ್ರಮತಿಶಬ್ದಾರ್ಥಃ

ತಾದೃಶಸ್ಯ ಚ ವಾಯೋಸ್ತು ಯತ್ತು ರೂಪಂ ತೃತೀಯಕಮ್ |
ಜಾತಂ ಕಲಿಯುಗೇ ತತ್ತು ದಶಪ್ರಮತಿನಾಮಕಮ್ ॥ ೭೨ ॥

ಹೇಳುತ್ತಾರೆ. i) ನಾಗ, ಇಂದ್ರ, ಸಿಂಹ ಮೊದಲಾದ ಶಬ್ದಗಳಂತೆ ವೃಷಭ ಶಬ್ದವೂ ಶ್ರೇಷ್ಠಾರ್ಥವಾಚಕ. (೬೮) ಆದರಂತೆ ವೃಷಭಸ್ಯ ಎಂದರೆ i) ಸರ್ವ-ಶ್ರೇಷ್ಠನಾದ (ಜೀವೋತ್ತಮರಾದ) ಎಂದೂ, ii) ದೇವಶ್ರೇಷ್ಠರೆಂದೂ iii) ವಿಷ್ಣುಭಕ್ತಾಗ್ರೇಸರರೆಂತಲೂ ಅರ್ಥವಾಗುತ್ತದೆ. (೬೯) ವೃಷ್ ಎಂದರೆ ಮಳೆಗರಿ, ಸುರಿಸು ಎಂದರ್ಥವಿರುವುದರಿಂದ iv) ಭಕ್ತರಿಗೆ ಸರ್ವಾ-ಭೀಷ್ಟಗಳನ್ನು ಸುರಿಸುವ ಎಂದೂ, ವೃಷ ಸ್ನೇಹೇ ಎಂಬ ಧಾತು ಪಾಠವನ್ನ-ನುಸರಿಸಿ (೭೦)(v) ಭಕ್ತರಲ್ಲಿ ಸ್ನೇಹ ಮಾಡುವವನು-ಭಕ್ತಾನುರಾಗಿ ಎಂದೂ vi) ಭಗವದ್ಭಕ್ತ ಶಿಖಾಮಣಿ ಎಂದೂ ಅರ್ಥವಾಗುತ್ತದೆ. (೭೧) ವೃಷ-ಧಾತುವಿಗೆ ಶಕ್ತ್ಯತಿಶಯು ಎಂದೂ ಅರ್ಥವಿರುವುದರಿಂದ ವೃಷಭಸ್ಯ ಎಂದರೆ vii) ಬಹು ಶಕ್ತಿಸಂಪನ್ನರಾದ ಎಂದೂ ಅರ್ಥ. (373 v ೫, ೪೭-೮) ಅದಭ್ರ-ಬಹಳ, 'ಅದಭ್ರಂ ಬಹುಲಂ ಬಹು' ಅಮರ.

(೭೨-೩) ಅಂಥಾ ವಾಯುವಿನ ಮೂರನೆಯ ರೂಪವೇ 'ದಶ-ಪ್ರಮತಿ' ಎಂಬುದು. ದಶ ಎಂದರೆ ಸರ್ವ ಎಂದೂ, ಸರ್ವ ಎಂದರೆ ಪೂರ್ಣ

ದಶೇತಿ ಸರ್ವಮುದ್ದಿಷ್ಟಂ **ಸರ್ವಂ** ಪೂರ್ಣಮಿಹೋಚ್ಯತೇ ।
ಪ್ರಜ್ಞಾ **ಪ್ರಮತಿ**ರುದ್ದಿಷ್ಟಾ ಪೂರ್ಣಪ್ರಜ್ಞಸ್ತತಃ ಸ್ಮೃತಃ ॥ ೭೩ ॥

'ದಶಪ್ರಮತಿಂ ಜನಯಂತ ಯೋಷಣಃ' ಇತ್ಯಸ್ಯಾರ್ಥಃ

ಪೂರ್ಣಪ್ರಜ್ಞಂ ತಮೇನಂ ತು **ಯೋಷಣೋ ಜನಯಂತ** ಹಿ ।
ಯೋಷಾ ಯೋಷಿಚ್ಚ ನಾರ್ಯುಕ್ತಾ ನಕಾರಾಂತೋಽಪಿ ವಿದ್ಯತೇ ॥ ೭೪ ॥

ಬಹುತ್ವೇ **ಯೋಷಣಶ್ಚೇತಿ** ರೂಪಂ ಸ್ಯಾದ್ಗೌರವಾರ್ಥಕಮ್
ವೇದಾಭಿಮಾನಿನೋ ದೇವ್ಯಃ ಶ್ರೀಭೂದುರ್ಗಾಭಿಧಾಸ್ತಥಾ ॥ ೭೫ ॥
ಮಧ್ಯಗೇಹಸ್ಯ ದಾರಾ ವಾ **ಯೋಷಣೋ**ಽತ್ರ ಪ್ರಕೀರ್ತಿತಾಃ ।
ತಾಶ್ಚೈನಂ ಜ್ಞಾನದೋಹಾಯಾ—ಜನಯನ್ ಸೂರಿಶೇಖರಮ್ ॥ ೭೬ ॥
ಯಥಾಸ್ಯ ಗರ್ಭವಾಸಾದಿ—ದೋಷಲೇಶೋ ಭವೇನ್ನ ವೈ ।
ಏವಂ ಪ್ರಕ್ರಮ್ಯ ತಜ್ಜನ್ಮ
ಸೇವಾಮಗ್ರೇ (ತನೋತಿ ಚ) ತನಿಷ್ಯತಿ ॥ ೭೭ ॥

ಎಂದೂ ಅರ್ಥ. ಪ್ರಜ್ಞೆಯೇ ಪ್ರಮತಿ—ಹೀಗೆ ದಶಪ್ರಮತಿ ಎಂದರೆ ಪೂರ್ಣ-ಪ್ರಜ್ಞ ಎಂದೇ ಅರ್ಥ. ಇದು ಶ್ರೀಮದಾಚಾರ್ಯರ ಆಶ್ರಮನಾಮ (373 v ಚ., ೪೯). (೭೪–೭೭) ಇಂಥಾ ಪೂರ್ಣಪ್ರಜ್ಞನನ್ನು ದಶಪ್ರಮತಿಂ ಜನಯಂತ ಯೋಷಣಃ ಎಂದು ಅನ್ವಯ. ಯೋಷಾ, ಯೋಷಿತ್ ಮೊದಲಾದ ಶಬ್ದಗಳಿಗೆ 'ಸ್ತ್ರೀ' ಎಂದರ್ಥವಿದೆ. ಅದರಂತೆ ನಕಾರಾಂತವಾದ ಯೋಷನ್ ಶಬ್ದವೂ ಇದೆ (ಎನ್ನುತ್ತಾರೆ ವಾದಿರಾಜರು). (373, ಛ, ೪೯) ಯೋಷನ್ ಶಬ್ದದ ಬಹುವಚನರೂಪವೇ ಯೋಷಣಃ. ಬಹು-ವಚನವು ಅನೇಕರನ್ನು ಸೂಚಿಸುತ್ತದೆ. ಒಬ್ಬರನ್ನೇ ಹೇಳಿದರೆ ಗುರುಗಳ ಮಾತ್ರವಾದ ಕಾರಣ ಗೌರವಾರ್ಥದಲ್ಲಿ ಬಹುವಚನ ಎಂದಿಟ್ಟುಕೊಳ್ಳಬೇಕು. ಯೋಷಣಃ ಎಂದರೆ ವೇದಾಭಿಮಾನಿಗಳಾದ ಶ್ರೀಭೂದುರ್ಗಾದೇವಿಯರು ಎಂದು ಒಂದರ್ಥ, ಮಧ್ಯಗೇಹರ ಪತ್ನೀ ಎಂದು ಇನ್ನೊಂದರ್ಥ. ಈ ದೇವಿ-ಯರು ಅಥವಾ ಮಧ್ಯಗೇಹಭಟ್ಟರಪತ್ನಿಯು ದಶಪ್ರಮತಿನಾಮಕನಾದ

ತೃತೀಯಮಂತ್ರಾರ್ಥಃ

ಪೂರ್ವಮಂತ್ರೋಕ್ತದೋಹಸ್ಯ ಫಲಮೇವ ಪ್ರದರ್ಶಯನ್ ।
ವಿವೃಣೋತ್ಯುತ್ತರಾರ್ಧೇ ತು ಪ್ರಕಾರಂ ದೋಹನಸ್ಯ ಚ ॥ ೭೮ ॥
ಅತ್ರೋಕ್ತಾನೇಕಶಬ್ದಾನಾಂ ನಿಷ್ಪತ್ತಿರ್ಬಹುಧಾ ಭವೇತ್ ।
ವಿಭಕ್ತಯೋಽಪಿ ಭಿನ್ನಾಃ ಸ್ಯು—
ರ್ಯತೋಽತ್ರ ಬಹುಧಾಽನ್ವಯಮ್ ॥ ೭೯ ॥
ಪೂರ್ವಾರ್ಧೇ ಶಕ್ಯತೇ ವಕ್ತುಂ ಪರಾರ್ಧೇಽಪಿ ತಥೈವ ಚ ।
ಕ್ರಮೇಣ ದರ್ಶಯಿಷ್ಯಾಮಃ ಪ್ರತೀಕೋಚ್ಚಾರಪೂರ್ವಕಮ್ ॥ ೮೦ ॥

ಪೂರ್ಣಪ್ರಜ್ಞನನ್ನು 'ದೋಹಸೇ' ಎಂದರೆ ಜ್ಞಾನದೋಹಕ್ಕಾಗಿ, ಅವನಿಗೆ ಗರ್ಭವಾಸಾದಿ ಯಾವ ದುಃಖದ ಗಂಧವೂ ಇಲ್ಲದಂತೆ (ಅಜನಯನ್) ಪ್ರಸವಿಸಿದರು ಎಂದರ್ಥ. ಆದಕಾರಣ ಅನ್ವಯ ಹೀಗೆ ತಿಳಿಯಬೇಕು—ಅಸ್ಯ ವೃಷಭಸ್ಯ ತೃತೀಯಂ (ವಪುಃ) ದಶಪ್ರಮತಿಂ ಯೋಷಣಃ ದೋಹಸೇ ಜನಯಂತ ಹೀಗೆ ಅವತಾರ ಮಾಡಿದ ಪ್ರಸ್ತಾಪ ಆರಂಭಿಸಿ ಮುಂದಿನ ಮೂರು ಋಕ್ಕುಗಳಲ್ಲಿ ಅವರು ಸಲ್ಲಿಸಿದ ಸೇವೆಯನ್ನೇ ವಿಸ್ತರಿಸಿ ಹೇಳುತ್ತದೆ.

ಮೂರನೇ ಋಕ್ (೭೮) (ಅವತಾರಿಕೆ) ಹಿಂದಿನ ಮಂತ್ರದಲ್ಲಿ ಪ್ರಸಕ್ತವಾದ ಜ್ಞಾನದೋಹದ ಫಲವೇನಾಯಿತೆಂಬುದನ್ನು ಪೂರ್ವಾರ್ಧದಲ್ಲಿ ತಿಳಿಸಿ ಉತ್ತರಾರ್ಧದಲ್ಲಿ ಏನು ದೋಹನ ಮಾಡಿದರು ? ಎಂಬುದನ್ನು ವರ್ಣಿಸುತ್ತದೆ.

(೭೯–೮೦) ಈ ಮಂತ್ರದಲ್ಲಿ ಬರುವ ಅನೇಕ ಶಬ್ದಗಳಿಗೆ ಅನೇಕ ರೀತಿ ವ್ಯುತ್ಪತ್ತಿಯೂ ಹೇಳಬಹುದಲ್ಲದೆ ಒಂದೇ ಪದವೇ ಬೇರೆಬೇರೆ ವಿಭಕ್ತಿ ರೂಪಗಳಾಗಿಯೂ ಇದೆ ಇದರಿಂದ ಪೂರ್ವಾರ್ಧದಲ್ಲಿಯೂ ಉತ್ತರಾರ್ಧದಲ್ಲಿಯೂ ಅನೇಕ ವಿಧವಾಗಿ ಅನ್ವಯ ಹೇಳಲು ಸಾಧ್ಯವಿದೆ. ಅವನ್ನೇ ಕ್ರಮವಾಗಿ ತೋರಿಸುತ್ತಾ ಯಾವ ಪದಗಳ ವಿವರಣೆ ಬರುವುದೋ ಆ ಪದಗಳನ್ನೇ ಹೇಳಿ ವಿವರಿಸಲಾಗಿದೆ. (374 ಕ, ೫೫).

ಪೂರ್ವಾರ್ಧೇ ಅನ್ವಯಕ್ರಮಃ

ತತ್ರಾದೌ ಮಹಿಷಸ್ಯೇತಿ ವಾಯೋರೇವ ವಿಶೇಷಣಮ್ ।
ದೇವಶ್ರೇಷ್ಠಸ್ಯ ಚೇತ್ಯರ್ಥಃ ಸಂಬಂಧೋऽಸ್ಯ ಯತಾ ಸಹ ॥ ೮೧ ॥
ಯದೀಮಿತಿ ಯಚ್ಛಬ್ದಸ್ತು ಪಂಚಮ್ಯರ್ಥೇ ಭವಿಷ್ಯತಿ ।
ಪೂರ್ವಮಂತ್ರೋಕ್ತ ತೃತೀಯಂ ವಪುರಿತ್ಯಸ್ಯ ಸೂಚಕಃ ॥ ೮೨ ॥
ಬುಧ್ನಾತ್ ವರ್ಪಸ ಇತ್ಯೇತೌ ಯದಿತ್ಯಸ್ಯ ವಿಶೇಷಣೇ ।
ವಾಯೋಃ ರೂಪಸ್ಯ ಮಧ್ವಸ್ಯ ಪ್ರಕಾಶೇತೇ ಬಹೂನ್ ಗುಣಾನ್ ॥೮೩॥

ಬುಧ್ನಾತ್ ಇತ್ಯಸ್ಯಾರ್ಥಃ

ಜ್ಞಾನಾರ್ಥಕಾದ್ಧಿ ಬುದ್ಧಾತೋಃ—ರ್ನಕಿ ಬುಧ್ನೋ ಭವಿಷ್ಯತಿ ।
ಸುಶುದ್ಧಜ್ಞಾನರೂಪತ್ವಾ—ನ್ಮಧ್ವೋ ಬುಧ್ನ ಉದೀರಿತಃ ॥ ೮೪ ॥

(೮೧-೨) ಮೊಟ್ಟಮೊದಲು ಪೂರ್ವಾರ್ಧದಲ್ಲಿರುವ ಮಹಿಷಸ್ಯ ಎಂಬುದು ವಾಯುಪರವಾಗಿದೆ ಎಂಬುದು ವಾದಿರಾಜರ ಮತ. ಆದಕ್ಕೆ 'ದೇವಶ್ರೇಷ್ಠರಾದ ವಾಯುದೇವರ' ಎಂದರ್ಥ. ಇದನ್ನು 'ನಿರ್ ಯದೀಂ' ಎಂಬಲ್ಲಿರುವ ಯತ್ ಶಬ್ದದೊಡನೆ ಅನ್ವಯ ಮಾಡಬೇಕು. ಎಂದರೆ ಮಹಿಷಸ್ಯ ಯತ್ ಎಂದು ಜೋಡಿಸಬೇಕು. ಈ ಯತ್ ಪಂಚಮ್ಯಂತವಾದ (ತಸ್ಮಾತ್, ತತ್ ಎಂಬಂತೆ) ಅನ್ವಯ ಈ ಯತ್ ಎಂಬುದು ಎರಡನೇ ಮಂತ್ರದಲ್ಲಿ ಪ್ರಸಕ್ತವಾದ 'ತೃತೀಯಂ ವಪುಃ' ಎಂಬುದರ ಸೂಚಕವಾಗಿದೆ. ಆದ್ದರಿಂದ ಇದಕ್ಕೆ 'ದೇವಶ್ರೇಷ್ಠರಾದ ವಾಯುದೇವರ ಅಥವಾ ಹಿಂದಿನ ಮಂತ್ರದ ಉತ್ತರಾರ್ಧದಲ್ಲಿ ಪ್ರಸಕ್ತವಾದ ಪೂರ್ಣಪ್ರಜ್ಞನೆಂಬ ಮೂರನೇ ಅವತಾರದ ದೆಸೆಯಿಂದ' ಎಂದು ಅರ್ಥವಾಯಿತು.

(೮೩) ಪಂಚಮ್ಯಂತವಾದ ಬುಧ್ನಾತ್ ವರ್ಪಸಃ ಎಂಬ ಎರಡು ಪದಗಳೂ ಹಿಂದೆ ಹೇಳಿದ ಆ 'ಯತ್'ಗೆ ವಿಶೇಷಣಗಳು. ಈ ಎರಡು ಪದಗಳೂ ಆ ವಾಯುವಿನ ಹಾಗೂ ಮೂರನೇ ರೂಪದ ಅನೇಕ ಗುಣಗಳನ್ನು ಪ್ರಕಾಶಪಡಿಸುತ್ತವೆ. ಹೇಗೆಂದರೆ–(೮೪) ಬುಧ್ ಧಾತು-ವಿಗೆ ತಿಳಿ ಎಂದು ಜ್ಞಾನಾರ್ಥವಿದೆ. ಈ ಬುಧ್ ಧಾತುವಿನ ಮೇಲೆ

ಬಂಧೇರ್ನಕಿ ಬುಧಾದೇಶೇ ಸತ್ಯಪ್ಯೇವಂ ಹಿ ಸಿದ್ಧ್ಯತಿ |
'ಅನುಬಂಧಶ್ಚ ಭಕ್ತಿಃ ಸ್ಯಾ'—ದಿತ್ಯುಕ್ತೇಃ ಸಾ ಹಿ ಬಂಧನಮ್ || ೮೫ ||
ಭಕ್ತಿಬಂಧನಬದ್ಧಸ್ತು ಪ್ರಸಿದ್ಧಃ ಕಿಲ ಮಾರುತಃ |
ತದ್ರೂಪಮೇವ ಮಧ್ವೋಽಪಿ ಭಕ್ತಾಗ್ರೇಸರ ಈರ್ಯತೇ || ೮೬ ||
ಭಕ್ತಿಶ್ಚ ಜ್ಞಾನರೂಪೇತಿ ಬುಧ್ನೋ ವಾ ಜ್ಞಾನರೂಪತಃ |
ಯದ್ವಾ ಬುಧೇವ ಜ್ಞಾನೀ ಸ್ಯಾತ್ ತನ್ನೇತಾ ಬುಧ್ನ ಈರಿತಃ || ೮೭ ||

ನಕ್ ಪ್ರತ್ಯಯ ಬಂದು ಬುಧ್ನ ಎಂದಾಗುತ್ತದೆ. ಆದ್ದರಿಂದ ಬುಧ್ನ ಎಂದರೆ ಪರಿಶುದ್ಧವಾದ ಜ್ಞಾನವುಳ್ಳ ಎಂದರ್ಥವಾಯಿತು. ಇದು ವಾಯುದೇವರಿಗೂ ಮಧ್ವಾಚಾರ್ಯರಿಗೂ (ಹಾಗೆಯೇ ಹನುಮ ಭೀಮ ರೂಪಗಳಿಗೂ) ಅನ್ವಯಿಸುತ್ತದೆ. (೮೫) ಅಥವಾ ಪಕ್ಷಾಂತರದಲ್ಲಿ ii) ಬಂಧ್ (ಬಂಧಿಸು) ಧಾತುವಿನ ಮೇಲೆ ನಕ್‌ಪ್ರತ್ಯಯ ಬಂದಾಗ ಬಂಧ್ ಧಾತುವಿಗೆ ಬುಧಾದೇಶ ಬರುವುದೆಂದು 'ಬಂಧೇ ಬ್ರಧಿ ಬುಧೀ ಚ' (ಉ. ೩/೫) ಎಂಬ ಸೂತ್ರ ಹೇಳುವುದರಿಂದ ಬಂಧ್+ನಕ್ ಎಂಬುದು ಬುಧ್+ನ ಸೇರಿ ಬುಧ್ನ ಎಂದಾಗುತ್ತದೆ. (374, ಚ i, ೫೮–೯). ಅದರಂತೆ ಬುಧ್ನ ಎಂದರೆ ಬಂಧನವೆಂದರ್ಥವಾಯಿತು. 'ಅನುಬಂಧಶ್ಚ ಭಕ್ತಿಃ ಸ್ಯಾತ್' ಎಂಬ ಹೇಳಿಕೆಯಂತೆ ಭಕ್ತಿಯೇ ಬಂಧನ. (೮೬) ಹಾಗೆ ಭಕ್ತಿಯೆಂಬ ಬಂಧನಕ್ಕೆ ಒಳಗಾದವರು ವಾಯುದೇವರೆಂಬುದು ಪ್ರಸಿದ್ಧವಾಗಿದೆ. ಅವರ ಮೂರನೇ ರೂಪವೂ (ಮಧ್ವಾಚಾರ್ಯರೂ) ಬುಧ್ನ ಎಂದರೆ ಭಕ್ತಿಬಂಧನಕ್ಕೆ ಒಳಗಾದವರಲ್ಲಿ ಅಗ್ರಗಣ್ಯರಾದವರು–ಭಕ್ತಾಗ್ರೇಸರರು ಎಂಬ ಅರ್ಥ ಸಿದ್ಧವಾಗುತ್ತದೆ. (ಅಲ್ಲೇ).

(೮೭–೯) iii) ಭಕ್ತಿಯೂ ಜ್ಞಾನರೂಪವಾದ್ದರಿಂದ ಬುಧ್ನ ಎಂದರೆ ಭಕ್ತಿರೂಪಜ್ಞಾನಸ್ವರೂಪವೆಂದರ್ಥವಾಗುತ್ತದೆ. ಅಥವಾ (ವಾದಿರಾಜರ ಪ್ರಕಾರ) iv) ಬುಧ್ ಧಾತುವಿನಿಂದ ಬಂದ ಕಾರಣ ಬುಧ್ (ಧಕಾರಾಂತ) ಎಂದರೇ ಜ್ಞಾನಿ ಎಂದರ್ಥವಾಗುತ್ತದೆ. 'ಬುಧೋ ನಯತೀತಿ ಬುಧ್ನಃ' ಎಂಬ ವ್ಯುತ್ಪತ್ತಿಯಿಂದ ಜ್ಞಾನಿಗಳನ್ನು ಸನ್ಮಾರ್ಗದಲ್ಲಿ

ಜ್ಞಾನಿನಾಂ ಸನ್ಮಾರ್ಗನೇತಾ ಪೂರ್ಣಪ್ರಜ್ಞಃ ಸುವಿಶ್ರುತಃ ।
'ಮೂಲಂ ಬುಧ್ನೋಂಘ್ರಿನಾಮಕ' ಇತಿ ಕೋಶಾತ್ ತಥೈವ ಚ ॥ ೮೮ ॥

ಮೂಲಾಧಾರೋಽಪಿ ಬುಧ್ನಸ್ಯ ವಾಚ್ಯಾರ್ಥಃ ಸಂಭವೇದ್ಯತಃ ।
ವೈಷ್ಣವಾನಾಮಶೇಷಾಣಾಂ ಮೂಲಾಧಾರಃ ಸ ಉಚ್ಯತೇ ॥ ೮೯ ॥

ವರ್ಪಸಃ ಶಬ್ದಾರ್ಥಃ

ವರ್ಪಸಸ್ತ್ವಥ ಪುಲ್ಲಿಂಗೇ ಪಂಚಮ್ಯೇರೂಪಮೇತತ್ ।
ವರಣೀಯೋ ವರಿತ್ಯುಕ್ತಃ ಪಾಲನಾಚ್ಚ ಪ ಈರಿತಃ ॥ ೯೦ ॥

ತಾಚ್ಛೀಲ್ಯಾರ್ಥೇ ಽಸುನಿ ಪ್ರಾಪ್ತೇ ವರ್ಪಶ್ಶಬ್ದಸ್ತು ಸಿದ್ಧ್ಯತಿ ।
ವರಣೀಯೋ ರಕ್ಷಕಶ್ಚ ಶ್ರಿತಾನಾಂ ರಕ್ಷಕೋ ಽಥವಾ ॥
ಇತ್ಯರ್ಥೋ ವರ್ಪಸಃಶಬ್ದೇನೋಚ್ಯೇತೇ ದ್ವಿಪ್ರಕಾರಕಃ ॥ ೯೧ ॥

ಒಯ್ಯುವವರು ಎಂದೂ ಅರ್ಥವಾಗುತ್ತದೆ. 'ಯೋನಾಹಮಿಹ–' ಎಂಬ ಶ್ಲೋಕದಲ್ಲಿ ಪೂರ್ಣಪ್ರಜ್ಞರು ಸಜ್ಜನರನ್ನು ಸನ್ಮಾರ್ಗದಲ್ಲಿ ಒಯ್ಯುವ ನಾಯಕರೆಂದು ಹೇಳಿದಂತೆ ಈ ವಿಶೇಷಣ ಶ್ರೀ ಮಧ್ವಾಚಾರ್ಯರಿಗೆ ಚೆನ್ನಾಗಿ ಅನ್ವಯಿಸುತ್ತದೆ. v) ಇನ್ನು ಕೋಶ (ಅಭಿಧಾನ) ದಲ್ಲಿ 'ಮೂಲಕ್ಕೂ, ಮೂಲಾಧಾರಕ್ಕೂ' ಬುಧ್ನ ಎಂಬ ಪ್ರಯೋಗವಿದೆಯೆಂದು ಹೇಳಿದೆ. ಅದರಂತೆ ಬುಧ್ನ ಎಂದರೆ ಸಕಲ ವೈಷ್ಣವರಿಗೂ ಮೂಲಾಧಾರಭೂತರಾದ ಎಂಬ ಅರ್ಥವೂ ಸಿದ್ಧಿಸುತ್ತದೆ. ಈ ರೀತಿ ಬುಧ್ನ ಶಬ್ದಕ್ಕೆ ಐದು ರೀತಿ ಅರ್ಥ ಹೇಳಿದ್ದಾರೆ. (374 ಚ, i, ೫೮–೯).

(೯೦–೯೧) ವಾದಿರಾಜರ ಮತದಂತೆ ವರ್ಪಸಃ ಎಂಬುದು ಪುಲ್ಲಿಂಗ ಪಂಚಮ್ಯೇಕವಚನರೂಪ, (ಯುತ್‌ಗೆ ವಿಶೇಷಣ). ಈ ಪದದಲ್ಲಿರುವ ವರ್‌ಗೆ ವರಣೀಯ (ಆಶ್ರಯದಾತಾ) ಎಂದೂ ಪ ಎಂದರೆ ಪಾಲಿಸುವವನೂ ಎಂದೂ ಅರ್ಥ. ವರ್+ಪ ಮೇಲೆ ತಾಚ್ಛೀಲ್ಯಾರ್ಥದಲ್ಲಿ ಅಸನ್ ಪ್ರತ್ಯಯ ಬಂದು ವರ್ಪಸ್–ವರ್ಪಃ ಎಂದಾಗಿದೆ. ಆದಕಾರಣ ಈ ಪದಕ್ಕೆ (ಬಿಡಿ-ಬಿಡಿಯಾಗಿ ಅರ್ಥ ಹೇಳಿದರೆ) ವರಿಸುವುದಕ್ಕೆ ಯೋಗ್ಯನೂ (ಆಶ್ರಯ-ದಾತನೂ) ರಕ್ಷಕನೂ ಆದ ಎಂದೂ (ಒಟ್ಟಿಗೆ ಸೇರಿಸಿದರೆ) ಮೊರೆ ಹೊಕ್ಕ-

ಪೂರ್ವಾರ್ಧಸ್ಯ ಅವತಾರಿಕಾ

ಏತಾದೃಶಸ್ಯ ಮಧ್ವಸ್ಯ ಜ್ಞಾನದೋಹಾದಭೂತ್ ಕಿಮು ? ।
ಇತಿ ಶಂಕಾಪನೋದಾಯ ಶ್ರುತಿರ್ವಕ್ತಿ ದಮುತ್ತರಮ್ ॥ ೯೨ ॥
ಜ್ಞಾನದೋಹಾತ್ತು ತಸ್ಯೈವ **ಈಶಾನಾಸಸ್ತು ಸೂರಯಃ** ।
ಶವಸೈವ ನಿರಾಕ್ರಂತ ಇತ್ಯುಕ್ತ್ಯೈವ ಸಮಾದಧೇ ।

ಈಮಿತ್ಯವ್ಯಯಃ ಪ್ರೋಕ್ತ ಏವಮಿತ್ಯರ್ಥಬೋಧಕಃ ॥ ೯೩ ॥
(ನಿರ್ಯದೀಂ)
ಈಶಾನೋ ರುದ್ರ ಉದ್ದಿಷ್ಟಃ ಸಕಾರಾಂತಸ್ತು ಛಾಂದಸಃ ।
ಬಹುತ್ವಮುಕ್ತಮಾದ್ಯರ್ಥೇ ರುದ್ರಾದ್ಯಾ ಇತಿ ಭವೇತ್ತತಃ ॥ ೯೪ ॥

ವರನ್ನು ಕೈಬಿಡದೆ ಕಾಪಾಡುವವರೂ ಆದ ಎಂದು ಎರಡು ಬಗೆ ಅರ್ಥ ಸಿದ್ಧಿಸುತ್ತದೆ. (374 ಗ, ೫೬).

(೯೨-೩) ಅವತಾರಿಕೆ— ಮೇಲೆ ಹೇಳಿದಂತೆ ಅನೇಕ ಗುಣಸಂಪನ್ನರಾದ ಮೂರನೆಯ ಅವತಾರವಾದ ಮಧ್ವಾಚಾರ್ಯರ ಜ್ಞಾನದೋಹದಿಂದ ಯಾರಿಗೆ ಏನು ಲಾಭವಾಯಿತು ? ಎಂಬ ಪ್ರಶ್ನೆ ಬಂದರೆ ಅದಕ್ಕೆ ಉತ್ತರವಾಗಿ ಶ್ರುತಿ ಹೀಗೆ ಹೇಳಿ ಸಮಾಧಾನಪಡಿಸುತ್ತದೆ— ಅವರ ಜ್ಞಾನದೋಹದಿಂದ 'ಈಶಾನಾಸಃ ಸೂರಯಃ ಶವಸಾ ನಿರ್ ಆಕ್ರಂತ' ಎಂದು ಸಮಾಧಾನ ಹೇಳುತ್ತದೆ. (ನಿರ್ಯದೀಂ ಎಂಬಲ್ಲಿರುವ ನಿರ್ ಜೊತೆ ಶವಸಾ ಜೊತೆ ಸೇರಿರುವ ಆ ಎಂಬುದನ್ನೂ ಸೇರಿಸಿ (ಉಪಸರ್ಗಮಾಡಿ) ಕ್ರಂತ ಎಂಬ ಕ್ರಿಯೆಯ ಜೊತೆ ಸೇರಿಸಿ ಅರ್ಥ ಹೇಳಬೇಕು.) ಯದೀಂ ಎಂಬಲ್ಲಿರುವ ಈಂ ಎಂಬುದು ಅವ್ಯಯ, ಇದಕ್ಕೆ 'ಇದರಿಂದಲೇ, ಹೀಗೆಯೇ' ಎಂದರೆ ಪೂರ್ಣಪ್ರಜ್ಞರ ದೋಹನದಿಂದಲೇ, ಅಥವಾ ಈಗ ಕಾಣಿಸುವಂತೆಯೇ ಎಂದರ್ಥ (374 ಗ, ೫೬).

(೯೪) ಈಶಾನ ಎಂದರೆ ರುದ್ರ ಎಂದರ್ಥ. ಅಮರದಲ್ಲಿ 'ಈಶ್ವರಃ ಶರ್ವ ಈಶಾನಃ' ಎಂದು ರುದ್ರನ ಹೆಸರು ಹೇಳಿದೆ. ಈಶ ಐಶ್ವರ್ಯೇ ಎಂಬ ಧಾತುವಿನ ಮೇಲೆ 'ತಾಚ್ಛೀಲ್ಯ ವಯೋವಚನೇಷು ಚಾನಶ್'

ಸೂರಯೋ ಜ್ಞಾನಿನಃ ಪ್ರೋಕ್ತಾಃ ಶವಸೇತಿ ಸುಖೇನ ವೈ ।
ನಿರಾಪೂರ್ವಸ್ಯ ಕ್ರಾಂತಸ್ಯ ಧ್ಯೇಯೋ ಹ್ಯರ್ಥಃ ಕೃತಾ ಇತಿ ॥ ೯೫ ॥

ಪೂರ್ವಾರ್ಧಸ್ಯ ತಾತ್ಪರ್ಯವಾಹ

ದೇವಶ್ರೇಷ್ಠಸ್ಯ ವಾಯೋಸ್ತು ಭಕ್ತಾನುಗ್ರಹಕಾರಿಣಃ ।
ನಿರ್ದುಷ್ಟಜ್ಞಾನರೂಪಸ್ಯ ತಥಾ ಭಕ್ತಶಿರೋಮಣೇಃ ॥ ೯೬ ॥

ವೈಷ್ಣವಾನಾಮಶೇಷಾಣಾಂ ಮೂಲಾಧಾರಸ್ವರೂಪಿಣಃ ।
ಭಕ್ತಾನಾಂ ಸಜ್ಜನಾನಾಂ ತು ಸನ್ಮಾರ್ಗೇ ಸ್ಥಾಪಕಸ್ಯ ಚ ॥ ೯೭ ॥

(ಪಾ. ೩/೨/೧೨೯) ಎಂಬ ಸೂತ್ರದಂತೆ ಚಾನಶ್ (ಆನ) ಪ್ರತ್ಯಯು ಬಂದಿದೆ. ಪ್ರಥಮಾ ವಿಭಕ್ತಿ ಬಹುವಚನದಲ್ಲಿ 'ಆಜ್ಜಸೇರಸುಕ್' (ಪಾ. ೭/೧/೫೦) ಎಂಬ ಸೂತ್ರದಂತೆ ಅಸುಕ್ ಪ್ರತ್ಯಯುವು (ವೇದದಲ್ಲಿ) ಬಂದು ಈಶಾನಾಸಃ ಎಂದಾಗಿದೆ. 'ಬಹುವಚನಮಾದ್ಯರ್ಥೇ' ಎಂಬುದರಿಂದ ಬಹುವಚನವು 'ಮೊದಲಾದ' ಎಂಬ ಅರ್ಥದಲ್ಲಿ ಬಂದಿದೆ. ಹೀಗೆ ಈಶಾನಾಸಃ ಎಂದರೆ ರುದ್ರಾದಿ ದೇವತೆಗಳು ಎಂದರ್ಥವಾಗುತ್ತದೆ.

(೯೫) ಸೂರಯಃ ಎಂದರೆ ಪಂಡಿತರು, ಜ್ಞಾನಿಗಳು, ವಿದ್ವಾಂಸರು ಎಂದರ್ಥ. 'ವಿದ್ವಾನ್ ಸೂರಿಃ' ಎಂದು ಅಮರ. ಸೂ (ಪ್ರಸವಿಸು) ಧಾತುವಿನ ಮೇಲೆ 'ಸೂಙ್ ಕ್ರಿಃ' ಎಂಬ ಉಣಾದಿಸೂತ್ರ (೪/೬೪) ದಿಂದ ಕ್ರಿ (=ರಿ) ಪ್ರತ್ಯಯು ಬಂದು ಸೂರಿ ಎಂದಾಗಿದೆ. ಶವಸಾ ಎಂದರೆ 'ಸುಖವಾಗಿ' ಎಂದರ್ಥ. ನಿರ್ ಮತ್ತು ಆ ಉಪಸರ್ಗಗಳ ಜೊತೆ ಕ್ರಾಂತ ಕ್ರಿಯೆ ಸೇರಿದರೆ ನಿರಾಕ್ರಾಂತ ಎಂದಾಗುತ್ತದೆ. ಇದಕ್ಕೆ 'ಮಾಡಲ್ಪಟ್ಟರು' ಎಂದು ಒಂದು ಅರ್ಥವೂ 'ತಿಳಿದುಕೊಂಡರು' ಎಂದು ಇನ್ನೊಂದು ಅರ್ಥವೂ ಆಗುತ್ತದೆ.

(೯೬–೧೦೦) ಈಗ ಪೂರ್ವಾರ್ಧದ ಅನ್ವಯು ಹೀಗಾಗುತ್ತದೆ—ಮಹಿಷಸ್ಯ (ವಾಯೋಃ) ಬುಧ್ನಾತ್ ವರ್ಪಸಃ ಯತ್ ಈಂ ಈಶಾನಾಸಃ ಶವಸಾ ಸೂರಯಃ ನಿರ್–ಆಕ್ರಾಂತ ॥ ಇದಕ್ಕೆ ಅರ್ಥ ಹೇಳುತ್ತಾರೆ—(ಮಹಿಷಸ್ಯ) ದೇವಶ್ರೇಷ್ಠರಾದ ವಾಯುದೇವರ (ಬುಧ್ನಾತ್) i) ಭಕ್ತಾನುಗ್ರಹಕಾರಿಗಳಾದ, ii) ಪರಿಶುದ್ಧ ಜ್ಞಾನಸ್ವರೂಪರಾದ, iii) ಭಕ್ತ-

ಪಾಲಕಸ್ಯ ಶರಣ್ಯಸ್ಯ ಶ್ರಿತಾನಾಂ ರಕ್ಷಕಸ್ಯ ಚ ।
ಸರ್ವಥಾ ದೋಷದೂರಸ್ಯ ಪೂರ್ಣಪ್ರಜ್ಞಾಭಿಧಸ್ಯ ಚ ॥ ೯೮ ॥

ತಸ್ಯ ಪೂರ್ವಪ್ರಸಕ್ತಸ್ಯ (ಯದೀಂ) ಜ್ಞಾನದೋಹಾದ್ಧಿ ಕೇವಲಮ್ ।
ರುದ್ರಾದ್ಯಾಶ್ಚ ಸುಖೇನೈವ ಬೋಧಿತಾಃ ಪಂಡಿತಾಃ ಕೃತಾಃ ॥ ೯೯ ॥
ಯೇನ ತೃತೀಯರೂಪೇಣೇ—ತ್ಯನ್ವೇತವ್ಯಂ ದ್ವಿತೀಯಯಾ ॥ ೧೦೦ ॥

ಕ್ರಿಯತೇರ್ಲುಙಿ ಚ್ಲೇರ್ಲೋಪೇ ಝಸ್ಯ ಚಾಂತೋ ಭವೇತ್ತಥಾ ।
ಛಂದಸ್ಯಡಾಗಮಾಭಾವೇ ಕ್ರಂತರೂಪಂ ಭವೇಲ್ಲುಟಿ ॥ ೧೦೧ ॥

ಗತ್ಯರ್ಥಾತ್ ಕ್ರಂದಿಧಾತೋರ್ವಾ ಕ್ರಮತೇರ್ವಾ ಭವೇದಿದಮ್ ॥ ೧೦೨ ॥

ಶಿರೋಮಣಿಗಳಾದ, iv) ಸಕಲ ವೈಷ್ಣವರಿಗೂ ಮೂಲಾಧಾರದಂತಿರುವ, v) ಭಕ್ತರಾದ ಸಕಲ ಸಜ್ಜನರನ್ನೂ ಸನ್ಮಾರ್ಗದಲ್ಲಿ ಒಯ್ಯುವ (ವರ್ಪಸಃ) ಆಶ್ರಯದಾತರೂ ರಕ್ಷಕರೂ ಮೊರೆಹೊಕ್ಕವರನ್ನು ತಪ್ಪದೆ ಸಂರಕ್ಷಿಸುವವರೂ ಆದ (ಯತ್) ಸುತರಾಂ ದೋಷದೂರರಾದ (ಎಂಬುದು ಪೂರ್ಣಪ್ರಜ್ಞ ಎಂಬುದರಿಂದ ಸೂಚಿತವಾಗುತ್ತದೆ) ದಶಪ್ರಮತಿ ಅಥವಾ ಪೂರ್ಣಪ್ರಜ್ಞರೆಂಬ ತೃತೀಯಾವತಾರದಿಂದ ಮಾಡಲ್ಪಟ್ಟ (ಈಂ) ಈ ಜ್ಞಾನದೋಹದಿಂದಲೇ (ಈಶಾನಾಸಃ) ರುದ್ರಾದಿ ಸಕಲ ದೇವತೆಗಳೂ (ಶವಸಾ) ಸುಖವಾಗಿ-ನಿರಾಯಾಸವಾಗಿ ಉಪದಿಷ್ಟರಾಗಿ (ಉಪದೇಶ ಹೊಂದಿದವರಾಗಿ) (ಸೂರಯಃ) ಜ್ಞಾನಿಗಳಾಗಿ (ನಿರಾಕ್ರಂತ) ಮಾಡಲ್ಪಟ್ಟರೋ, ಅಂಥಾ 'ತೃತೀಯಂ (ವಪುಃ) ದಶಪ್ರಮತಿಂ ಯೋಷಣಃ ಜನಯಂತ' ಎಂದು ಹಿಂದಿನ ಋಕ್ಕಿನೊಡನೆ ಅನ್ವಯವಾಗುತ್ತದೆ. ಹೀಗೆ ಏಕವಾಕ್ಯತ್ವ ಸಿದ್ಧಿಯಾಗುತ್ತದೆ.

(೧೦೧-೦೨) ಕ್ರಂತ ಎಂಬ ರೂಪ ಹೇಗಾಯಿತೆಂದರೆ ವರ್ಣಿಸಲಾಗಿದೆ. ಒಂದು ಪಕ್ಷರೀತ್ಯಾ (ಸಾಯಣಭಾಷ್ಯದಂತೆ) ಡುಕೃಞ್ ಕರಣೇ ಎಂಬ ಧಾತುವಿನ ಮೇಲೆ ಲುಙ್ ಲಕಾರದಲ್ಲಿ 'ಚ್ಲಿ ಲುಙಿ' (ಪಾ. ೩-೧-೪೩) ಎಂಬಂತೆ ಚ್ಲಿ ಪ್ರತ್ಯಯ ಬರುತ್ತದೆ. ಅದು 'ಮಂತ್ರೇ ಘಸಹ್ವರ—' (ಪಾ. ೨-೪-೮೦) ಎಂಬ ಸೂತ್ರದಂತೆ ಲೋಪವಾಗಿ ಹೋಗುತ್ತದೆ. ಮುಂದೆ ಪ್ರಥಮಪುರುಷ ಬಹುವಚನದಲ್ಲಿ (ಆತ್ಮನೇಪದರೂಪವಾದ್ದರಿಂದ) ಝ (ತ-ಆತಾಂ-ಝ ಎಂಬ

ಉತ್ತರಾರ್ಧಮ್

ಉತ್ತರಾರ್ಧೇ ಶ್ರುತಿಃ ಪೂರ್ಣ–ಪ್ರಜ್ಞನಾಮಾಂತರಂ ವದನ್ ।
ಕೀದೃಶಂ ತಸ್ಯನು ಜ್ಞಾನ—ಮಿತ್ಯಾಕಾಂಕ್ಷಾಂ ಹರತ್ಯಥ ॥ ೧೦೩ ॥

ಅನ್ವಯಕ್ರಮಃ

ಮಧ್ವೋ ಮಾತರಿಶ್ವೇತಿ ಪ್ರಥಮಾಂತಾವುಭಾವಪಿ ।
ಸಾಮಾನಾಧಿಕರಣ್ಯಂ ಚ ವಕ್ತಿ ಮಧ್ವಸ್ಯ ವಾಯುತಾಮ್ ॥ ೧೦೪ ॥
ಪ್ರದಿವೋ ಮಧ್ವ ಇತಿ ಚ ಸಹೋಕ್ತ್ಯಾ ಮಧ್ವವಿಶೇಷಣಮ್ ।
ಪ್ರಕೃಷ್ಟಾ ದ್ಯೌಶ್ಚ ಯಸ್ಯೇತಿ ವಿಗ್ರಹೇ **ಪ್ರದಿವೋ** ಭವೇತ್ ॥ ೧೦೫ ॥

ಕ್ರಮದಂತೆ) ಪ್ರತ್ಯಯ ಬರಲು, 'ಬಹುಲಂ ಛಂದಸ್ಯಮಾಙ್ಯೋಗೇಪಿ' (ಪಾ. ೬-೪-೭೫) ಎಂಬ ಸೂತ್ರದಂತೆ ಅಡಾಗಮವು ಬರದೇಹೋಗಲು ಝ ಪ್ರತ್ಯಯಕ್ಕೆ 'ಝೋಽನ್ತಃ' (ಪಾ.೭-೧-೩) ಎಂಬ ಸೂತ್ರದಂತೆ 'ಅಂತಾ'-ದೇಶ ಬರಲು ಕ್ರಂತ ಎಂಬ ರೂಪ ಸಿದ್ಧಿಸುತ್ತದೆ. 'ಛಂದಸಿ ಲುಙ್ಲಙ್ಲಿಟಃ' (ಪಾ. ೩-೪-೬) ಎಂಬ ಸೂತ್ರದಂತೆ ಲುಙ್‌ಲಕಾರಕ್ಕೇ ಭೂತಕಾಲಕ್ಕೇ ಲಟ್ (ವರ್ತಮಾನಕಾಲದ) ಅರ್ಥ ಬಂದಿದೆ. ವಾದಿರಾಜರು 'ಕ್ರಂದಿರ್ಗತಿ-ಶೋಷಣಯೋಃ' ಎಂಬ ಧಾತುವಿನ ರೂಪವೆಂದೂ ಶ್ರೀನಿವಾಸತೀರ್ಥರು (ತೈತ್ತಿರೀಯ ಭಾಷ್ಯಟೀಕೆಯಲ್ಲಿ) ಕ್ರಮು ಪಾದ ವಿಕ್ಷೇಪೇ ಎಂಬ ಧಾತುವಿನ ರೂಪವೆಂದೂ ಹೇಳುತ್ತಾರೆ (374, ಚvi, ೬೧-೨)

(೧೦೩) ಮೂರನೇ ಋಕ್ಕಿನ ಉತ್ತರಾರ್ಧದಲ್ಲಿ ಶ್ರುತಿಯು ಪೂರ್ಣ-ಪ್ರಜ್ಞರ ಇನ್ನೊಂದು ಹೆಸರನ್ನು ಹೇಳಿ ಅವರ ಜ್ಞಾನದೋಹವು ಎಂಥಾದ್ದು ಎಂಬ ಆಕಾಂಕ್ಷೆಯನ್ನು ನಿವಾರಣೆಮಾಡುತ್ತದೆ.

(೧೦೪-೦೭) ಉತ್ತರಾರ್ಧದಲ್ಲಿರುವ ಮಧ್ವಃ ಮಾತರಿಶ್ವಾ ಎರಡೂ ಪ್ರಥಮಾ ವಿಭಕ್ತಿಯಲ್ಲಿರುವುದರಿಂದ ಮಧ್ವರೇ ಮಾತರಿಶ್ವ ಅಥವಾ ವಾಯು-ವೆಂದು ಹೇಳಿದಂತಾಯಿತು. (374ಚ, ix, ೬೫) ಇದೇ ರೀತಿ ಪ್ರದಿವೋ ಮಧ್ವಃ ಎಂಬ ಎರಡು ಪದಗಳೂ ಒಟ್ಟಿಗೆ ಇರುವುದಲ್ಲದೆ ಪ್ರಥಮಾವಿಭಕ್ತಿ-ಯಲ್ಲೂ ಇರುವುದರಿಂದ ಪ್ರ ದಿವಃ ಎಂಬುದು ಮಧ್ವರಿಗೆ ವಿಶೇಷಣವೆಂದು

ದೀವ್ಯತೇರ್ಭಾವೇ ಕಪ್ರತ್ಯಯಾತ್—ವಕಾರಾಂತೋ ಭವೇತ್ತಥಾ ।
ಪ್ರಕೃಷ್ಟಜ್ಞಾನತೇಜಸ್ವೀ ತ್ಯರ್ಥೋ ಮಧ್ವವಿಶೇಷಣಮ್ ॥ ೧೦೬ ॥
ವಕಾರಾಂತಸ್ತು ಪ್ರದಿವ ಈಶಾನಾಸವಿಶೇಷಣಮ್ ।
ಶಸಂತಶ್ಚ ಸುರಾನಾಹ ಪ್ರಕೃಷ್ಟಮತಿಭಾಸುರಾನ್ ॥ ೧೦೭ ॥

ಮಧ್ವಶಬ್ದಸ್ಯ ಅನ್ವಯೋಽರ್ಥಶ್ಚ

ತೃತೀಯರೂಪಸ್ಯೈವಾತ್ರ ಪ್ರಸಕ್ತಿರ್ದೃಶ್ಯತೇ ಯತಃ ।
ಅತೋ ಮಧ್ವಸ್ತದೇವೇತಿ ಸ್ಫುಟಂ ವ್ಯಕ್ತೀಭವಿಷ್ಯತಿ ॥ ೧೦೮ ॥

ಸ್ಪಷ್ಟವಾಗುತ್ತದೆ. ಪ್ರಕೃಷ್ಟಾ–ಉತ್ತಮವಾದ (ಉತ್ಕೃಷ್ಟವಾದ), ದ್ಯೌಃ–ಪ್ರಕಾಶವು, ಯಸ್ಯ–ಯಾರಿಗೆ ಇದೆಯೋ ಅವರು ಎಂಬ ವಿಗ್ರಹದಿಂದ ಪ್ರದಿವಃ ಎಂದಾಗಿದೆ. 'ದಿವು ಕ್ರೀಡಾ—' ಎಂಬ (ನಖಸ್ತುತಿ ಪು. ೨೯೭) ಧಾತುವಿನ ಮೇಲೆ ಭಾವಾರ್ಥದಲ್ಲಿ ಕ ಪ್ರತ್ಯಯ ಬರಲು ಪ್ರದಿವಃ ಎಂದು ಅಕಾರಾಂತ ಪುಲ್ಲಿಂಗ ಶಬ್ದವಾಗುತ್ತದೆ. (374ಚ, vii, ೬೨) ಅದರಂತೆ ಪ್ರಕೃಷ್ಟವಾದ (ಉತ್ಕೃಷ್ಟವಾದ) ಜ್ಞಾನದ ಪ್ರಕಾಶವುಳ್ಳ ಎಂದರ್ಥವಾಯಿತು. ಇದು ಮಧ್ವರಿಗೆ ವಿಶೇಷಣವಾಗುತ್ತದೆ. ಪ್ರದಿವ್ ಎಂಬ ವಕಾರಾಂತ ಶಬ್ದದ ರೂಪವೆಂದು ಇಟ್ಟುಕೊಂಡರೆ (ದಿವಂ–ದಿವೌ–ದಿವಃ ಎಂಬ ಶಬ್ದರೂಪದಂತೆ) ದ್ವಿತೀಯಾ ಬಹುವಚನದಲ್ಲಿ(ಶಸ್–ಅಂತ್)ಯೂ 'ಪ್ರದಿವಃ' ಎಂದೇ ರೂಪವಾಗುತ್ತದೆ. ಆಗ ಇದು (ಪ್ರದಿವಃ) (ತಾತ್ಪರ್ಯನಿರ್ಣಯ ಭಾವಪ್ರಕಾಶಿಕಾ ಟೀಕೆಯ ಪ್ರಕಾರ) ಈಶಾನಾಸಃ ಎಂಬ ಪದಕ್ಕೆ ವಿಶೇಷಣವಾಗಿ 'ಪ್ರಕೃಷ್ಟಬುದ್ಧಿಯ ಪ್ರಕಾಶವುಳ್ಳ' ರುದ್ರಾದಿ ದೇವತೆಗಳನ್ನುದ್ದೇಶಿಸಿ ಎಂದು ಅನ್ವಯವಾಗುತ್ತದೆ. (ಅಲ್ಲೇ.)

(೧೦೮–೦೯) ಈ ಇಡೀ ಮೂರನೇ ಮಂತ್ರದ ಉದ್ದಕ್ಕೂ ಎರಡನೇ ಮಂತ್ರದಲ್ಲಿ ಹೇಳಿದ 'ತೃತೀಯ' (ವಪುಃ) ಅವತಾರದ ವಿಚಾರವೇ ಹೇಳಲ್ಪಡುತ್ತಿರುವುದರಿಂದ ಮಧ್ವ ಎಂಬುದೂ ಆ ವಾಯುದೇವರ ಮೂರನೇ ಅವತಾರದ ಹೆಸರೇ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಧು ಎಂದರೆ ಆನಂದ, ವ ಎಂದರೆ ತೀರ್ಥ. ಆದಕಾರಣ ಮಧ್ವ ಎಂದರೆ ಆನಂದತೀರ್ಥ ಎಂದೇ

ಮಧ್ವಿತ್ಯಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಮ್ ।
ಮಧ್ವ ಆನಂದತೀರ್ಥಃ ಸ್ಯಾತ್ ತೃತೀಯಾ ಮಾರುತೀತನುಃ ।
ಪೂರ್ಣಪ್ರಜ್ಞಃ ಸ ಏವೋಕ್ತೋ ದಶಪ್ರಮತಿನಾಮಕಃ ॥ ೧೦೯ ॥

ಉತ್ತರಾರ್ಧಸ್ಯ ಅನ್ವಯಕ್ರಮಃ

ಸೈಷ ಮಧ್ವೋ ವಾಯುರೂಪಂ

ಪ್ರದಿವೋಽನು ಯದೀಂ ಹರಿಮ್ ॥ ೧೧೦ ॥

ಮಥಯತ್ಯಾಥವತ್ವೇ ತ–ಚ್ಛವಸಾಽಜ್ಞಾಸಿಷುಃ ಸುರಾಃ ।
ಇತ್ಯನ್ವಯೋ ಭವತ್ಯತ್ರ ವಾಕ್ಯಯೋರುಭಯೋರಪಿ ॥ ೧೧೧ ॥

ಶಸಂತಃ ಪ್ರದಿವಃಶಬ್ದೋ ರುದ್ರಾದೀನಾಂ ವಿಶೇಷಣಮ್ ।
ಪ್ರತ್ಯರ್ಥಾನುಶಬ್ದಸ್ತು ತಂತ್ರೇಣ ಪುನರನ್ವಿತಃ ॥ ೧೧೨ ॥

ಶಾಸ್ತ್ರಗ್ರಂಥಾನನುಸ್ಮೃತ್ಯೇ—ತ್ಯರ್ಥಬೋಧನತತ್ಪರಃ ।
ಪ್ರಕೃಷ್ಟಜ್ಞಾನಪೂರ್ವಾಂಸ್ತು ರುದ್ರಾದೀನ್ ನಿರ್ಜರಾನ್ ಪ್ರತಿ ॥ ೧೧೩ ॥

ಅರ್ಥ. ಅವರೇ ದಶಪ್ರಮತಿ ಎಂದು ಕರೆಯಲ್ಪಟ್ಟ ಪೂರ್ಣಪ್ರಜ್ಞರೂ ಆಗಿದ್ದಾರೆ. (374 ಚ. viii, ೬೨-೪).

(೧೧೦-೧೧೧) ಹೀಗೆ ಅನ್ವಯ—(ತೃತೀಯಂ ವಪುಃ) ಮಾತರಿಶ್ವಾ ಮಧ್ವಃ ಪ್ರದಿವಃ (ರುದ್ರಾದೀನ್) ಅನು, ಗುಹಾಸಂತಂ ಯತ್ ಈಂ (ಹರಿಮೇವ) ಅನು ಆ ಧವೇ ಮಥಾಯತಿ, (ತತ್) ಈಶಾನಾಸಃ ಸೂರಯಃ ಶವಸಾ ನಿರಾಕ್ರಂತೆ ಎಂದು ಉತ್ತರಾರ್ಧದ ವಾಕ್ಯವು ಪೂರ್ವಾರ್ಧದೊಡನೆ ಸೇರಿಕೊಳ್ಳುತ್ತದೆ.

(೧೧೨-೧೧೩) ಈಗ ಬಂದ 'ಪ್ರದಿವಃ' ಶಬ್ದ ದ್ವಿತೀಯಾ ಬಹುವಚನಾಂತವಾದ್ದರಿಂದ ಮೇಲೆ (ಶ್ಲೋ. ೧೦೭) ಹೇಳಿದಂತೆ ರುದ್ರಾದಿ ದೇವತೆಗಳಿಗೆ ವಿಶೇಷಣವಾಗುತ್ತದೆ. ಅನು ಶಬ್ದ ಅವ್ಯಯ, ಅದಕ್ಕೆ 'ಪ್ರತಿ', ಕುರಿತು, ಉದ್ದೇಶಿಸಿ ಎಂದು ಒಂದು ಅರ್ಥವೂ 'ಶಾಸ್ತ್ರಗ್ರಂಥಗಳನ್ನನುಸರಿಸಿ' ಎಂದು ಇನ್ನೊಂದು ಅರ್ಥವೂ ಇದೆ. ಹೀಗೆ ಎರಡರ್ಥದಲ್ಲಿ ಎರಡಾವರ್ತಿ ಅನ್ವಯ ಮಾಡಬೇಕು. ಅದರಂತೆ i) ಪ್ರದಿವಃ (ರುದ್ರಾದೀನ್) ಅನು–

ಸರ್ವಶಾಸ್ತ್ರಂ ಪುರಸ್ಕೃತ್ಯ ಸಮಾಲೋಡ್ಯ ಪುನಃಪುನಃ ।
ಅಸತ್ಯಮಪ್ರತಿಷ್ಠಂ ಚ ಜಗದೇತದನೀಶ್ವರಮ್ ॥ ೧೧೪ ॥
ವದದ್ಭಿರ್ಗೂಹಿತಂ ಸಂತಂ ತಥಾ ಸ್ವಾಂತಗುಹಾಸ್ಥಿತಮ್ ।
ನಾರಾಯಣಂ ಮಥಿತ್ವಾಽಥ ಹರಿರೇವ ಪರಾತ್ಪರಃ ॥ ೧೧೫ ॥
ಇತ್ಯೇವಂ ದರ್ಶಯಾಮಾಸ ಯತಸ್ತೇ ಸೂರಯೋಽಭವನ್ ।
ತಾದೃಶಜ್ಞಾನದೋಹಾಯ ತಮಜೀಜನಯನ್ ಸ್ತ್ರಿಯಃ ॥ ೧೧೬ ॥
ಅನ್ವಯೋಽಯಂ ವಾದಿರಾಜ—ಯತೀಂದ್ರೈರ್ದರ್ಶಿತೋ ದ್ವಯೋಃ ।

ಉಪನಿಷದ್ಭಾಷ್ಯಟೀಕಾಕಾರಾಣಾಮನ್ವಯಕ್ರಮಃ

ಟೀಕಾಕಾರಾಸ್ತು ಸರ್ವೇಽನ್ಯೇ ಯದೀಂ ಮಹಿಷವರ್ಪಸಃ ॥ ೧೧೭ ॥

ಪ್ರಕೃಷ್ಟಬುದ್ಧಿಯ ಪ್ರಕಾಶವುಳ್ಳ ರುದ್ರಾದಿ ದೇವತೆಗಳನ್ನು ಕುರಿತು ಅಥವಾ ಉದ್ದೇಶಿಸಿ, ii) ಅನು-ಸರ್ವಶಾಸ್ತ್ರಗಳ ತಾತ್ಪರ್ಯವನ್ನು ಅನುಸರಿಸಿ ಎಂದರೆ ಸಕಲ ಶಾಸ್ತ್ರಗಳನ್ನೂ ಪುನಃಪುನಃ ವಿಚಾರಮಾಡಿ (ಎಂದರ್ಥ). (ಈಗ ಗುಹಾಸಂತಂ ಎಂಬುದರ ಅರ್ಥ ವಿವರಣೆ) ಅನೇಕ ದುರ್ವಾದಿಗಳು 'ಈ ಜಗತ್ತು ಸುಳ್ಳು, ನಿಜವೇ ಅಲ್ಲ. ಇದಕ್ಕೆ ಒಡೆಯನಾದ ದೇವರೂ ಇಲ್ಲ (ಅನೀಶ್ವರಂ)' ಎಂದು ಹೇಳುತ್ತಿದ್ದುದರಿಂದ ಮರೆಯಾಗಿ ಹೋಗಿದ್ದ (ಗೂಹಿತಂ) ಅಥವಾ (ಗುಹಾಸಂತಂ ಎಂಬುದಕ್ಕೆ ಇನ್ನೊಂದು ಅರ್ಥ) ಹೃದಯಗುಹೆಯಲ್ಲಿ ಅಡಗಿಕೊಂಡಿದ್ದ (374, ಗ, ೫೭) ನಾರಾಯಣನನ್ನು (ಆ ಧಮೇ ಮಥಾಯತಿ ಎಂಬುದರ ಭಾವಾರ್ಥ ಏನೆಂದರೆ) ಶಾಸ್ತ್ರಮಂಥನ ಮಾಡಿ (ಯತ್-ಈಂ) ಶ್ರೀಹರಿಯೇ ಸರ್ವೋತ್ತಮ ಎಂದು ಸ್ಥಾಪಿಸಿದರೋ ಆದರಿಂದಲೇ ಈಶಾನಾಸಃ (ವಿಷ್ಣುಂ ಸರ್ವೋತ್ತಮಂ) ಶವಸಾ, ನಿರಾಕ್ರಂತ-ತಿಳಿದುಕೊಂಡರೋ ಅಂಥಾ 'ದೋಹಸೇ'-ಜ್ಞಾನದೋಹಕ್ಕಾಗಿ ದಶಪ್ರಮತಿಂ ಯೋಷಣಃ ಜನಯಂತ ಎಂದು ಎರಡನೇ ಋಕ್ಕಿನ ಉತ್ತರಾರ್ಧದೊಡನೆ ಈ ಇಡೀ ಮೂರನೇ ಋಕ್ಕು ಅನ್ವಯವಾಗುತ್ತದೆ.

(೧೧೭-೧೮) ಮೇಲೆ ಹೇಳಿದ್ದು ಶ್ರೀವಾದಿರಾಜರ ಅನ್ವಯ ಪ್ರಕಾರ. ಉಪನಿಷದ್ಭಾಷ್ಯಗಳ ಟೀಕಾಕಾರರು ಹೀಗೆ ಅನ್ವಯ ಹೇಳುತ್ತಾರೆ—

ಈಶಾನಾಸಃ ಸೂರಯಶ್ಚ ನಿರಾಕ್ರಂತ ತದೇವ ಹಿ ।
ಯೋಷಣೋಽಜನಯಂತೇತಿ ಯೋಜಯಂತಿ ದ್ವಿತೀಯಯಾ ॥ ೧೧೮ ॥
ಯದೀಮಿತ್ಯವ್ಯಯೌ ಪ್ರೋಕ್ತೌ—ಈಂ ತ್ವೇವಾರ್ಥವಾಚಕಃ ।
ಯಸ್ಮಾತ್ ತೃತೀಯರೂಪಾತ್ತು ದಶಪ್ರಮತಿನಾಮಕಾತ್ ॥ ೧೧೯ ॥
ಬುದ್ಧ್ನಾದ್ಧಿ ಜ್ಞಾನರೂಪತ್ವಾದ್ ಭಕ್ತಿಜ್ಞಾನಮಯಾತ್ ತಥಾ ।
ಮಹಿತಾ ಷಡ್ಗುಣಾ ಯಸ್ಯ ಮಹಿಷೋ ವಿಷ್ಣುರುಚ್ಯತೇ ॥ ೧೨೦ ॥
ವರಣಾತ್ ಪಾಲನಾಚ್ಚೈವ ವರ್ಪಸಸ್ತದ್ಗುಣಾ ಮತಾಃ ।
ತಸ್ಯ ವಿಷ್ಣೋರ್ಗರಿಷ್ಠಸ್ಯ (ಮಹಿಷಸ್ಯ)
ವರ್ಪಾಖ್ಯಾನ್ ಪೂರ್ಣಸದ್ಗುಣಾನ್ ॥ ೧೨೧ ॥

(ಪೂರ್ವಾರ್ಧ) ಬುಧ್ನಾತ್ ಯದೀಂ ಮಹಿಷಸ್ಯ ವರ್ಪಸಃ (ದ್ವಿ.ಬಹು.) ಈಶಾನಾಸಃ ಸೂರಯಃ (ಚ) ಶವಸಾ ನಿರ್ ಆ ಕ್ರಂತ, (ತತ್) ತೃತೀಯಂ ದಶಪ್ರಮತಿಂ ಯೋಷಣಃ ಜನಯಂತ ಎಂದು ಎರಡನೇ ಮಂತ್ರದೊಡನೆ ಅನ್ವಯ ಹೇಳುತ್ತಾರೆ. ಇದರ ಸಾಮಾನ್ಯಾರ್ಥ ಬುಧ್ನಾತ್ (ಜ್ಞಾನ-ಸ್ವರೂಪನಾದ) ಯತ್ ಈಂ-ಯಾವ ಮೂರನೇ ರೂಪ(ದ ದೋಹನ) ದಿಂದಲೇ, ಮಹಿಷಸ್ಯ-ಮಹಾಮಹಿಮನಾದ ವಿಷ್ಣುವಿನ, ವರ್ಪಸಃ-ಗುಣ-ಗಳನ್ನು, ಈಶಾನಾಸಃ-ರುದ್ರಾದಿದೇವತೆಗಳೂ, ಸೂರಯಃ-ಋಷಿ-ಗಂಧರ್ವ-ಮನುಷ್ಯಾದಿ ಇತರ ಜ್ಞಾನಿಗಳೂ, ಶವಸಾ-ಸುಖವಾಗಿ, ನಿರಾಕ್ರಂತ-ತಿಳಿದುಕೊಂಡರೋ, ತತ್-ಅಂಥಾ, ತೃತೀಯಂ-ಮೂರನೆಯ ರೂಪವನ್ನು ಸ್ತ್ರೀಯರು ಪ್ರಸವಿಸಿದರು ಎಂದು ೨ನೇ ಋಕ್ಕಿನ ಉತ್ತರಾರ್ಧದೊಡನೆ ಅನ್ವಯ ಮಾಡುತ್ತಾರೆ. (374, ೫, ೫೮).

(೧೧೯-೨೨) ಪದಗಳ ಅರ್ಥ ಹೇಳಿ ಅನ್ವಯಾರ್ಥ ವಿವರಿಸಲಾಗಿದೆ— ಯತ್ ಮತ್ತು ಈಂ ಎರಡೂ ಅವ್ಯಯಗಳು. ಈಂ ಎಂದರೆ 'ಏವ' (ಅದೇ) ಎಂದರ್ಥ. ಯತ್ ಎಂಬುದು ಪಂಚಮ್ಯಂತ ರೂಪಾವ್ಯಯವಾದ್ದರಿಂದ ಇದಕ್ಕೆ i) ಯಾವುದರ ದೆಸೆಯಿಂದ ಎಂದರೆ ಯಾವ ದಶಪ್ರಮತಿಯೆಂಬ ತೃತೀಯ ರೂಪದಿಂದ ಎಂದು ಒಂದರ್ಥವೂ, ii) ಯಾವ ಕಾರಣದಿಂದ

ರುದ್ರಾದ್ಯಾ ದೇವತಾಶ್ಚಾನ್ಯೇ ನರಾಂತಾಃ ಸೂರಯಸ್ತಥಾ
ಉಪದಿಷ್ಟಾ ಬುಬುಧಿರ ಇತಿ ಪೂರ್ವಾರ್ಧಯೋಜನಾ ॥ ೧೨೨ ॥

ಯದೀಂ ಯಃ ಪ್ರದಿವೋ ಮಧ್ವೋ ಮಾತರಿಶ್ವಾ ಸ ಏವ ಹಿ ।
ಸೈಷ ವಿಷ್ಣುಂ **ಗುಹಾಸಂತಂ** ಗೂಹಿತಂ ನಿರ್ಗುಣೋಕ್ತಿಭಿಃ ॥ ೧೨೩ ॥

ಅಥವೇ ಸರ್ವಸ್ವಾಮಿತ್ವೇ ಮಥಿತ್ವಾ ಹ್ಯಾಗಮ್ಯೈರನು ।
ನಿರ್ಣೀಯ ಸ್ಥಾಪಯಾಮಾಸ ತತಸ್ತೇ ಸಂವಿದುರ್ಬುಧಾಃ ॥ ೧೨೪ ॥
ಇತ್ಯನ್ವಯೋऽತ್ರ ಬೋದ್ಧವ್ಯೋ ದ್ವಯೋಃ ಪೂರ್ವಪರಾರ್ಧಯೋಃ ॥
ಅನ್ವಯಂ ದರ್ಶಯಿತ್ವೈವಂ ಭಾವಾರ್ಥಃ ಕಥ್ಯತೇऽಧುನಾ ॥ ೧೨೫ ॥

ಎಂಬ ಇನ್ನೊಂದು ಅರ್ಥವೂ ಆಗುತ್ತದೆ. ಯತ್ ಎಂಬುದಕ್ಕೆ ಬುಧ್ನಾತ್ ಎಂಬುದು ವಿಶೇಷಣ. ಬುಧ್ನಾತ್ ಎಂದರೆ i) ಜ್ಞಾನಸ್ವರೂಪರಾದ ii) ಅಥವಾ ಭಕ್ತಿರೂಪ ಜ್ಞಾನಸ್ವರೂಪರಾದ ಯಾವ ತೃತೀಯರೂಪವಾದ (ಯತ್ ಈಂ) ಪೂರ್ಣಪ್ರಜ್ಞರಿಂದಲೇ (ಉಂಟಾದ ಎಂದು ಸೇರಿಸಿಕೊಳ್ಳಬೇಕು); ಮಹಿಂ–ಮಹಿತವಾದ (ಪೂಜ್ಯವಾದ), ಷ–ಷಡ್ಗುಣವುಳ್ಳ, ಮಹಿಷಸ್ಯ–ವಿಷ್ಣುವಿನ ಎಂದರ್ಥ, ವರ್-ವರಿಸಲ್ಪಡು (ಆಶ್ರಯಿಸಲ್ಪಡು) ವುದರಿಂದಲೂ, ಪ–ಪಾಲಿಸು (ರಕ್ಷಿಸು)ವುದರಿಂದಲೂ, 'ವರ್ಪ'ಗಳೆಂಬುದು ವಿಷ್ಣುವಿನ ನಿರ್ದುಷ್ಟವಾದ (ಸತ್) ಮತ್ತು ಪೂರ್ಣವಾದ (ಸತ್) ಗುಣಗಳು. ಅದರಂತೆ ಮಹಿಷಸ್ಯ–ಮಹಾಮಹಿಮನಾದ ವಿಷ್ಣುವಿನ, ವರ್ಪಸಃ (ದ್ವಿ.ಬಹು.)-ವರ್ಪಗಳೆಂಬ ಪೂರ್ಣವಾದ (ಅನಂತವಾದ) ಗುಣಗಳನ್ನು, ಈಶಾನಾಸಃ–ರುದ್ರಾದಿ ದೇವತೆಗಳೂ, ಸೂರಯಃ–ಋಷಿಗಂಧರ್ವರಿಂದ ಮನುಷ್ಯೋತ್ತಮರವರೆಗೆ ಇರುವ ಸಕಲ ಜ್ಞಾನಿಗಳೂ, ನಿರಾಕೃಂತ–ಉಪದಿಷ್ಟರಾಗಿ ತಿಳಿದರು ಎಂಬುದು (ಇತರ ಟೀಕಾಕಾರರ ಪ್ರಕಾರ) ಪೂರ್ವಾರ್ಧದ ಅನ್ವಯ. (374 ಜ, ೫೭-೮).

(೧೨೩–೫) ಉತ್ತರಾರ್ಧದ ಅನ್ವಯ–ಅರ್ಥ ತೋರಿಸಲಾಗುತ್ತದೆ— ಯದೀಂ-ಯಾವ, ಪ್ರದಿವಃ–ಪ್ರಕೃಷ್ಟವಾದ ಪ್ರಕಾಶವುಳ್ಳ, ಮಧ್ವಃ–ಮಧ್ವಾಚಾರ್ಯರಿದ್ದಾರೋ ಅವರೇ, (ಈಂ) ಮಾತರಿಶ್ವಾ–ವಾಯುದೇವರು.

ಪೂರ್ವಾರ್ಧಸ್ಯ ಭಾವಾರ್ಥಃ

ದ್ವಿತೀಯಸ್ಯಾ ಉತ್ತರಾರ್ಧೇ ಯದುಕ್ತಂ ಕಿಲ ಯೋಷಣಃ ।
ತೃತೀಯಂ ಜ್ಞಾನದೋಹಾಯ ರೂಪಂ ಸುಷುವಿರೇ ತದು ॥ ೧೨೬ ॥
ಸದ್ರ್ಯಷ್ಟಜ್ಞಾನರೂಪತ್ವಾದ್ ದಶಪ್ರಮತಿನಾಮಕಮ್ ।
ತೃತೀಯೇऽಥ ಸ ಏವಾತ್ರ ಮಧ್ವನಾಮ್ನಾ ಪ್ರಕೀರ್ತಿತಃ ॥ ೧೨೭ ॥
ಸ ಏವ ಮಾತರಿಶ್ವೇತಿ ವದನ್ ಸ್ಪಷ್ಟೀಕರಿಷ್ಯತಿ ।
ಮಧ್ವಾಖ್ಯಃ ಪೂರ್ಣಪ್ರಜ್ಞಶ್ಚ ವಾಯುರೇವ ನ ಸಂಶಯಃ ॥ ೧೨೮ ॥

ಇಂಥಾ ಈ ಮಧ್ವರು, ಗುಹಾಸಂತಂ–ನಿರ್ಗುಣನೆಂದು ಸಾರುವ ಅಜ್ಞಾನಿಗಳ ಪ್ರಚಾರದಿಂದ ಮುಚ್ಚಿಹೋಗಿದ್ದ ವಿಷ್ಣುವನ್ನು, 'ಅನು'–ವೇದಾದಿ ಶಾಸ್ತ್ರಗಳ ಪ್ರಮಾಣಾನುಸಾರವಾಗಿ, ಆ ಧನೇ–ಸರ್ವಸ್ವಾಮಿ, ಸರ್ವೋತ್ತಮ ಎಂಬ ವಿಷಯದಲ್ಲಿ, ಮಥಾಯತಿ–ಮಥನಮಾಡಿ ನಿರ್ಣಯಮಾಡಿ ಏನು ಸ್ಥಾಪನೆ ಮಾಡಿದರೋ (ತತ್ ಎಂಬುದನ್ನು ಯತ್ ಶಬ್ದದಿಂದ ಸೇರಿಸಿಕೊಳ್ಳಬೇಕು) ತತ್–ಆದ್ದರಿಂದಲೇ ರುದ್ರಾದಿ ದೇವತೆಗಳೂ ಇತರ ಜ್ಞಾನಿಗಳೂ ಹರಿಸರ್ವೋತ್ತಮನೆಂಬುದನ್ನು, ಶವಸಾ–ನಿಸ್ಸಂಶಯವಾಗಿ, ನಿರಾಕ್ರಂತ–ತಿಳಿದುಕೊಂಡರು ಎಂದು ಉತ್ತರಾರ್ಧ–ಪೂರ್ವಾರ್ಧಗಳ ಹೊಂದಾಣಿಕೆಯನ್ನು ತಿಳಿದುಕೊಳ್ಳಬೇಕು. ಹೀಗೆ ಅನ್ವಯವನ್ನು ತೋರಿಸಿ ಈಗ ಅರ್ಥ ಹೇಳುತ್ತೇವೆ.

(೧೨೬-೮) ಎರಡನೇ ಋಕ್ಕಿನ ಉತ್ತರಾರ್ಧದಲ್ಲಿ "ದೇವಿಯರು ಜ್ಞಾನದೋಹನಕ್ಕಾಗಿ ಯಾವ ಮೂರನೇ ರೂಪವನ್ನು ಪಡೆದರೋ ಅದು ನಿರ್ದುಷ್ಟಜ್ಞಾನಸ್ವರೂಪವುಳ್ಳದ್ದಾದ್ದರಿಂದ 'ದಶಪ್ರಮತಿ' ಅಥವಾ 'ಪೂರ್ಣಪ್ರಜ್ಞ' ನಾಮಕವಾಗಿದೆಯೆಂದು ಏನು ಹೇಳಿತೋ ಆ ದಶಪ್ರಮತಿಯೇ ಈ ಮೂರನೇ ಮಂತ್ರದಲ್ಲಿ ಮಧ್ವ ಎಂಬ ಬೇರೊಂದು ಹೆಸರಿನಿಂದ ಕರೆಯಲ್ಪಟ್ಟಿದ್ದಾರೆ. ಆ ಮಧ್ವರೇ ವಾಯುವೆಂದು ಮಾತರಿಶ್ವಾ ಶಬ್ದದಿಂದಲೂ ಹೇಳಿ ಸ್ಪಷ್ಟಪಡಿಸುತ್ತದೆ. ಇದರಿಂದ ಮಧ್ವ ಎಂಬುವರೂ ದಶಪ್ರಮತಿ ಎಂಬುವರೂ ವಾಯುದೇವರ ಅವತಾರವೇ ಹೊರತು ಬೇರೆಯಲ್ಲ—ಇದರಲ್ಲಿ ಯಾವ ಸಂಶಯವೂ ಇಲ್ಲ"ವೆಂದು ಹೇಳಿದಂತಾಯಿತು.

ತೇನ ಜ್ಞಾನೋಪದೇಶೇನ ರುದ್ರಾದ್ಯಾ ದೇವತಾಸ್ತಥಾ ।
ಋಷ್ಯಾದ್ಯಾಶ್ಚ ನರಾಂತಾಶ್ಚ ಶವಸಾ ಜ್ಞಾನಿನಃ ಕೃತಾಃ ॥ ೧೨೯ ॥
ಇತಿ ತಜ್ಜ್ಞಾನದೋಹಸ್ಯ ಮಹಿಮಾತ್ರ ಪ್ರಶಂಸಿತಃ ।

ಉತ್ತರಾರ್ಧಸ್ಯ ಭಾವಾರ್ಥಃ

ಸ ಹಿ ಮಧ್ವೋ ಜ್ಞಾನರೂಪೋ ಮಥಿತ್ವಾ ಶಾಸ್ತ್ರಸಂಚಯಮ್ ॥ ೧೩೦ ॥
ವಿಷ್ಣುಂ ಸರ್ವಸಮರ್ಥಂ ಚ ಗೂಹಿತಂ ನಿರ್ಗುಣೋಕ್ತಿಭಿಃ ।
ಸರ್ವೇಶ್ವರಂ ವಿನಿರ್ಣೀಯ ಸ್ಥಾಪಯಾಮಾಸ ಸುಸ್ಥಿರಮ್ ॥ ೧೩೧ ॥
ಅತ ಏವ ಹಿ ರುದ್ರಾದ್ಯಾ—ಸ್ತದ್ದೋಹನಫಲಾದ್ಧಿ ತೇ ।
ಅಭವನ್ ನಿಶ್ಚಿತಜ್ಞಾನಾ ಇತಿ ಪೂರ್ವಾರ್ಧಯೋಜನಾ ॥ ೧೩೨ ॥
ಈದೃಗ್ರೂಪಂ ಪ್ರಸೂತಂ ಹಿ ಸ್ತ್ರೀಭಿರಿತ್ಯನ್ವಯೋ ಭವೇತ್ ।
ಏವಂ ಮಂತ್ರತ್ರಯೇಽಪ್ಯೇಕ—ವಾಕ್ಯತಾ ಘಟತೇ ಸ್ಥಿರಮ್ ॥ ೧೩೩ ॥

(೧೨೯-೩೦ಪೂ) ಆ ಮಧ್ವರು ತಮ್ಮ ಜ್ಞಾನದೋಹದಿಂದ ಜ್ಞಾನೋಪದೇಶ ಮಾಡಿ ರುದ್ರಾದಿ ದೇವತೆಗಳನ್ನೂ ಋಷ್ಯಾದಿಗಳನ್ನೂ ಮನುಷ್ಯೋತ್ತಮರನ್ನೂ ನಿಸ್ಸಂಶಯವಾದ ಜ್ಞಾನವುಳ್ಳ ಜ್ಞಾನಿಗಳನ್ನಾಗಿ ಮಾಡಿದರು ಎಂದು ಹೇಳಿ ಅವರ ಜ್ಞಾನದೋಹದ ಮಹಿಮೆಯನ್ನು ಶ್ರುತಿಯು ವರ್ಣಿಸಿತು.

(೧೩೦ಉ-೩೩) (ಪ್ರದಿವಃ) ಜ್ಞಾನಸ್ವರೂಪರಾದ ಆ ಮಧ್ವರು ಸಕಲ ಶಾಸ್ತ್ರಸಮೂಹವನ್ನೂ ಮಥಿಸಿ(ಮಥಾಯತಿ) ವಿಷ್ಣು ಸರ್ವಸಮರ್ಥನಾಗಿದ್ದರೂ ನಿರ್ಗುಣನೆಂಬ ದುಷ್ಟವಾದಗಳಿಂದ ಮುಚ್ಚಿಹೋಗಿದ್ದುದನ್ನು ನಿರಾಕರಣೆ ಮಾಡಿ ಅವನೇ ಸರ್ವೋತ್ತಮ (ಅ ಥವೇ)ನೆಂದು ನಿರ್ಣಯಮಾಡಿ ದೃಢವಾಗಿ ಸ್ಥಾಪನೆ ಮಾಡಿದರು. ಆದ್ದರಿಂದಲೇ (ಈಂ) ಆ ದೋಹನದ ಫಲವಾಗಿಯೇ ರುದ್ರಾದಿ ಸಕಲ ಜ್ಞಾನಿಗಳೂ (ಶವಸಾ ನಿರಾಕ್ರಂತ) ನಿಶ್ಚಿತ ಜ್ಞಾನವುಳ್ಳವರಾದರು ಎಂದು ಉತ್ತರಾರ್ಧಕ್ಕೂ ಪೂರ್ವಾರ್ಧಕ್ಕೂ ಹೊಂದಾಣಿಕೆ (ಅನ್ವಯ) ತಿಳಿಯಬೇಕು. ಇಂಥಾ ಮೂರನೆಯ ರೂಪವನ್ನು

ವಿಶೇಷ ವಿಚಾರಾಃ

ಕಿಂಚ ಮಂತ್ರತ್ರಯೇಽಪ್ಯದ್ಧಾ ಹ್ಯಾವೃತ್ತಿರ್ಬಹುಧಾ ಯತಃ ।
ಅಭ್ಯಾಸೋಽಯಂ ಮತೋಽಹ್ಯತ್ರ 'ತಾತ್ಪರ್ಯಾಧಿಕ್ಯವಿತ್ತಯೇ' ॥ ೧೩೪ ॥
ತ್ರೀಣಿ ರೂಪಾಣಿ ಯಾನ್ಯತ್ರ ಕಥಿತಾನಿ ಕ್ರಮೇಣ ವೈ ।
ಸರ್ವಾಣಿ ಮಾತರಿಶ್ವಾಖ್ಯ—ವಾಯೋಃ ರೂಪಾಣಿ ನಾನ್ಯಥಾ ॥ ೧೩೫ ॥

ಸ ವಾಯುರ್ಮೂಲರೂಪೇ ವಾ ಹ್ಯವತಾರತ್ರಯೇಽಪಿ ವಾ ।
ಬಲರೂಪೋ ಜ್ಞಾನರೂಪಶ್ಚ ಭಕ್ತ್ಯಾದಿಗುಣಮಂಡಿತಃ ॥ ೧೩೬ ॥
ದೂರೋಽಜ್ಞಾನಾದಿದೋಷೈಶ್ಚ ಸರ್ವಶಾಸ್ತ್ರಾರ್ಥಕೋವಿದಃ ।
ಸರ್ವಕ್ರಿಯೋಪಸಂಹರ್ತಾ ವಿಷ್ಣುಂ ಪಶ್ಯತಿ ಸರ್ವದಾ ॥ ೧೩೭ ॥

ಯಶ್ಚ ದ್ವಿತೀಯಮಂತ್ರೋಕ್ತೋ ದಶಪ್ರಮತಿನಾಮಕಃ ।
ಮಧ್ವಸ್ತೃತೀಯಮಂತ್ರೋಕ್ತ ಏಕ ಏವ ನ ಚಾಪರಃ ॥ ೧೩೮ ॥

ದೇವಿಯರು ಪ್ರಸವಿಸಿದರು (374 ಚ, xiii, ೬೭) ಎಂದು ಮೂರು ಮಂತ್ರಗಳಿಗೂ ಒಂದಕ್ಕೊಂದಕ್ಕೆ ಹೊಂದಾಣಿಕೆಯಿರುವುದರಿಂದ ಏಕವಾಕ್ಯತೆ ಸ್ಥಿರವಾಗಿ ಕೂಡುತ್ತದೆ.

(೧೩೪-೩೮) ಇನ್ನೊಂದು ವಿಶೇಷವೇನೆಂದರೆ ಈ ಮೂರು ಮಂತ್ರ-ಗಳಲ್ಲೂ ಯತ್-ಶಬ್ದ ಅನೇಕ ವೇಳೆ ಬಂದಿದೆ, ಹೀಗೆ ಒಂದೇ ಪದ ಅನೇಕಾವರ್ತಿ ಬರುವುದಕ್ಕೆ ಮೀಮಾಂಸಾಶಾಸ್ತ್ರದಲ್ಲಿ 'ಅಭ್ಯಾಸ' ಎಂದು ಹೆಸರು. ಅಭ್ಯಾಸ ಎಲ್ಲಿರುವುದೋ ಅಲ್ಲಿ 'ಹೆಚ್ಚಿನ ತಾತ್ಪರ್ಯವಿದೆ'ಯೆಂದು ತಿಳಿಯಬೇಕೆಂದು ಬ್ರಹ್ಮತರ್ಕದಲ್ಲಿ ಹೇಳಿದೆ (374 ಛ, ೭೨). ಆದರಂತೆ i) ಈ ಮೂರು ಮಂತ್ರಗಳಲ್ಲಿ ಕ್ರಮವಾಗಿ ಹೇಳಿರುವ ಮೂರು ರೂಪಗಳೂ ಮಾತರಿಶ್ವನಾಮಕನಾದ ವಾಯುವಿನ ರೂಪಗಳೇ ಹೊರತು ಅನ್ಯಥಾ ಅಲ್ಲ. ವೆಂದೂ, ii) ಆ ವಾಯು ಮೂಲರೂಪದಲ್ಲಾಗಲಿ ಮೂರು ಅವತಾರ-ಗಳಲ್ಲಾಗಲಿ ಬಲಸ್ವರೂಪನೂ ಜ್ಞಾನಸ್ವರೂಪನೂ ಆಗಿರುವುದಲ್ಲದೆ ವಿಷ್ಣು-ಭಕ್ತ್ಯಾದಿ ಪೂರ್ಣ ಸದ್ಗುಣನೆಂದೂ, ಅಜ್ಞಾನ-ದ್ವೇಷ್ಯಬಾಧೆ ಮೊದಲಾದ ದೋಷಗಳಿಂದ ದೂರನೆಂದೂ ಸಕಲ ಶಾಸ್ತ್ರಾರ್ಥತತ್ತ್ವಾಭಿಜ್ಞನೆಂದೂ

ಮಧ್ವಸ್ಯಾನಂದತೀರ್ಥೇತಿ ಭವೇನ್ನಾಮಾಂತರಂ ತಥಾ ।
ಇತ್ಯಾದ್ಯನೇಕಭಾವಾಶ್ಚ ಯಚ್ಛಬ್ದಾಭ್ಯಾಸಗೋಚರಾಃ ॥ ೧೩೯ ॥

ಚತುರ್ಥ ಮಂತ್ರಾರ್ಥಃ

ಚತುರ್ಥೇ ಮಧ್ವಜನನೇ ಹೇತುಂ ವಕ್ತಿ ಮಹತ್ತರಮ್ ।
ಪಶ್ಚಾತ್ ತಜ್ಜ್ಞಾನಕರ್ಮೈವ ಪ್ರಶಂಸನ್ನಾಹ ಹಿ ಶ್ರುತಿಃ ॥ ೧೪೦ ॥

ಪೂರ್ವಾರ್ಧೇ ಪ್ರಥಮವಾಕ್ಯಾರ್ಥಃ

ಪೂರ್ವಾರ್ಧೇ ಯೇ ಸ್ಥಿತೇ ವಾಕ್ಯೇ ಕ್ರಮೇಣೈವಂ ವದಿಷ್ಯತಃ ।
ಯತ್ಪಿತುಃ ಪರಮಾದೇವ ಪ್ರಣೀಯತೇ ಇತಿ ತಾವತ್ ॥ ೧೪೧ ॥
ಭವೇತ್ ಪ್ರಥಮವಾಕ್ಯಂ ತು, ಯತ್ರ ಯನ್ಮಧ್ವ ಉಚ್ಯತೇ ।
ಅಥವಾ ಯಚ್ಛಬ್ದಯೋಗಾತ್ ಗ್ರಾಹ್ಯಂ ರೂಪತ್ರಯಂ ತಥಾ ॥೧೪೨॥

ವೇದೋಕ್ತ ಸರ್ವಕ್ರಿಯೋಪಸಂಹರ್ತನೆಂದೂ, ನಿತ್ಯಾಪರೋಕ್ಷಿಯಾಗಿ ಸದಾ ಸರ್ವದಾ ವಿಷ್ಣುವನ್ನು ಸೂರ್ಯನಂತೆ ನೋಡುತ್ತಿರುತ್ತಾನೆಂಬುದೂ, iii) ಎರಡನೆಯ ಮಂತ್ರದಲ್ಲಿ ಹೇಳಿದ ದಶಪ್ರಮತಿಯೂ ಮೂರನೆಯ ಮಂತ್ರದಲ್ಲಿ ಹೇಳಿದ ಮಧ್ವರೂ ಒಬ್ಬರೇ, ಬೇರೆಯಲ್ಲ ಎಂದೂ, iv) ಆ ಮಧ್ವರಿಗೇ ಆನಂದತೀರ್ಥ ಎಂಬುದು ಅದೇ ಅರ್ಥವುಳ್ಳ ನಾಮಾಂತರವೆಂದೂ ಅನೇಕ ವಿಚಾರಗಳು ಯತ್, ಯದೀಂ ಶಬ್ದಗಳ ಅಭ್ಯಾಸದಿಂದ (ಆವೃತ್ತಿ-ಯಿಂದ) ಹೊರಬೀಳುತ್ತದೆಯೆಂದು ತಿಳಿಯಬೇಕು (374ಛ, ೭೨).

ನಾಲ್ಕನೇ ಮಂತ್ರ—(೧೪೦-೪೩) ನಾಲ್ಕನೇ ಮಂತ್ರದಲ್ಲಿ ಮಧ್ವರ ಅವತಾರಕ್ಕೆ ಮಹತ್ತರವಾದ ಕಾರಣವನ್ನು ಹೇಳುತ್ತದೆ. ಅನಂತರ ಎರಡನೇ ಚರಣದಲ್ಲಿ ಅವರ ಜ್ಞಾನದೋಹದ ರೀತಿಯನ್ನೇ ಪ್ರಶಂಸಿಸುತ್ತದೆ. ಈ ರೀತಿ ಪೂರ್ವಾರ್ಧದಲ್ಲಿರುವ ಎರಡು ವಾಕ್ಯಗಳು ಕ್ರಮವಾಗಿ ಎರಡು ಬೇರೆ ವಿಷಯಗಳನ್ನು ತಿಳಿಸುತ್ತದೆ. ಅನ್ವಯಕ್ರಮ—ಯತ್ ಪಿತುಃ ಪರಮಾತ್ (ಅಥವಾ ಪರಮಾತ್ ಪಿತುಃ) ಸಕಾಶಾತ್ ಪ್ರ ಣೀಯತೇ ಎಂಬುದು ಮೊದಲನೆಯ ವಾಕ್ಯ ಇಲ್ಲಿ 'ಯತ್' ಎಂದರೆ ಹಿಂದಿನ (ಮಂತ್ರದ)

ಸರ್ವೋತ್ತಮಾಚ್ಚ ಪರಮಾತ್ ಸಕಾಶಾದ್ಧಿ ಪಿತುರ್ಹರೇಃ ।
ತದಾಜ್ಞಯಾ ಚ ಸರ್ವತ್ರ ಪ್ರೇರ್ಯತೇ ನೀಯತೇ ತಥಾ ॥ ೧೪೩ ॥
ತಥಾಚಾಸ್ಯ ವಾಕ್ಯಸ್ಯ ಭಾವಾರ್ಥಃ ಸ್ಫುಟಮುಚ್ಯತೇ ।
ಹನುಮದಾದಿಮಧ್ವಾಂತಾ ಹರೇಶ್ಚ ಜಗತಃ ಪಿತುಃ । ॥ ೧೪೪ ॥
ಸಂದೇಶಾದೇವ ಜಾತಾಶ್ಚ ತದಾಜ್ಞಾವರ್ತಿನಸ್ತಥಾ ॥
ವಾದಿರಾಜಃ ಪರಂತ್ವತ್ರ ಪರಿ ಆ ಇತ್ಯಭಾವಪಿ । ॥ ೧೪೫ ॥
ಯೋಜಯನ್ ಪ್ರಥಮೇ ವಾಕ್ಯೇ ವಕ್ಷ್ಯತ್ಯರ್ಥಾಂತರಂ ತಥಾ ।
ಆಸಮಂತಾತ್ ಸರ್ವರೀತ್ಯಾ ಪರೀತಿ ಪರಿತಸ್ತಥಾ ॥ ೧೪೬ ॥
ಸರ್ವಕಾರ್ಯೇಷು ಸರ್ವತ್ರ ಪ್ರೇರ್ಯತೇ ತೇನ ಚಾಂಜಸಾ ।
ತಥಾ ಪರಮಶಬ್ದಂ ಚ ವ್ಯಾಖ್ಯಾತಿ ನ್ಯಾಸಸೂಚಕಮ್ ॥ ೧೪೭ ॥
ಪರಾ ಚಾತಿಶಯಿತಾ ಚ ಮಾ ವಿದ್ಯಾ ಯಸ್ಯ ಸದ್ಗುರೋಃ ।
ಸ ವ್ಯಾಸಃ ಪರಮಃ ಪ್ರೋಕ್ತ—ಸ್ತಸ್ಮಾದೇವ ಪ್ರಣೀಯತೇ ॥ ೧೪೮ ॥

ಸಂಬಂಧದಿಂದ 'ಮಧ್ವ' ಎಂದೇ ಅರ್ಥ. ಅಥವಾ ಮೇಲೆ (ಶ್ಲೋಕ ೧೩೪) ಹೇಳಿದಂತೆ ಯತ್ ಶಬ್ದದ 'ಅಭ್ಯಾಸ'ದಿಂದ ಯತ್ ಎಂದರೆ ರೂಪತ್ರಯವೂ ಗ್ರಾಹ್ಯ. ಪರಮಾತ್–ಸರ್ವೋತ್ತಮನಾದ, ಪಿತುಃ–ತಂದೆಯಾದ ಶ್ರೀಹರಿಯು ದೆಸೆಯಿಂದ ಎಂದರೆ ಅವನ ಆಜ್ಞೆಯಿಂದ (ಅಥವಾ ಪಿತುಃ–ತಂದೆಯಾದ್ದರಿಂದ, ಪರಮಾತ್–ತನಗಿಂತ ಶ್ರೇಷ್ಠನಾದ ಶ್ರೀಹರಿಯು ಆಜ್ಞೆಯಿಂದ) ಆ (ಪರ್ಯಾ= ಪ + ಆ)ಎಲ್ಲ ವಿಷಯದಲ್ಲೂ, ಪ್ರ ನೀಯತೇ (ರಕಾರದ ಯೋಗವಿರುವುದರಿಂದ ವ್ಯಾಕರಣರೀತ್ಯಾ ಪ್ರ + ನೀಯತೇ ಎಂಬುದು ಎಂದು ಪ್ರಣೀಯತೇ ಮಾರ್ಪಾಡಾಗುತ್ತದೆ) ಪ್ರೇರಿಸಲ್ಪಡುತ್ತದೆ (375ಜ, ೬೪)

(೧೪೪–೪೯) ಈ ವಾಕ್ಯದ ತಾತ್ಪರ್ಯವೇನೆಂದರೆ—ಹನುಮ, ಭೀಮ, ಮಧ್ವ ಈ ಮೂರು ರೂಪಗಳೂ ತಂದೆಯಾದ ಶ್ರೀಹರಿಯು ಆಜ್ಞೆಯಿಂದಲೇ ಅವತಾರವೆತ್ತಿದವು, ಅವನ ಆಜ್ಞೆಯಂತೆಯೇ ವರ್ತಿಸುತ್ತವೆ. ಆದರೆ ವಾದಿ-ರಾಜರೇ ಈ ವಾಕ್ಯಕ್ಕೆ ಬೇರೆ ರೀತಿ ಅರ್ಥ ಹೇಳುತ್ತಾರೆ; ಅವರು ಪರಿ ಆ ಎಂಬ ಎರಡು ಪದಗಳನ್ನೂ ಮೊದಲನೇ ವಾಕ್ಯಕ್ಕೆ ಹೊಂದಿಸಿಕೊಳ್ಳುತ್ತಾರೆ. ಆ

ಮಧ್ವೋಽಯಂ ಸರ್ವಕಾರ್ಯೇಷು ಪ್ರೇರ್ಯತೇ ಚ ಪದೇಪದೇ।
ಜನನೇ ಗ್ರಂಥರಚನೇ ತಥಾ ದುರ್ವಾದಿಭಂಜನೇ ॥ ೧೪೯ ॥

ಪೂರ್ವಾರ್ಧೇ ದ್ವಿತೀಯವಾಕ್ಯಾರ್ಥಃ ಅನ್ವಯಶ್ಚ

ತದಾಜ್ಞಯೈವ ಮಧ್ವಃ ಸ **ವೀರುಧೋ ದಂಸು ರೋಹತಿ**
ಇತ್ಯನ್ವಯಸ್ತು ವಕ್ತವ್ಯೋ ದ್ವಿತೀಯೇ ಚರಣೇ ತಥಾ ॥ ೧೫೦ ॥

ಪೃಕ್ಷುಧೋ ವೀರುಧ ಇತಿ ಶಸಂತೌ ಕಿಲ ದ್ವಾವಪಿ।
ಕ್ಷುಚ್ಛಬ್ದವದ್ ಧಕಾರಾಂತೌ ಸ್ತ್ರೀಲಿಂಗೌ ಚ ತಥಾ ಮತೌ ॥ ೧೫೧ ॥

ಎಂದರೆ ಸಮಂತಾತ್ ಎಂದರೆ ಎಲ್ಲ ರೀತಿಯಿಂದಲೂ ಎಂದರ್ಥ. ಪರಿ ಎಂದರೆ ಪರಿತಃ–ಸುತ್ತಲೂ, ಎಲ್ಲ ವಿಷಯಗಳಲ್ಲೂ ಎಂದರ್ಥ. ಆದ್ದರಿಂದ ಪರಿ ಆ ಎಂದರೆ ಸರ್ವಕಾರ್ಯಗಳಲ್ಲೂ ಸರ್ವವಿಷಯಗಳಲ್ಲೂ, ಆ ಹರಿಯಿಂದ (ಪಿತುಃ ಪರಮಾತ್) ಪ್ರಣೀಯತೇ–ಪ್ರೇರಿಸಲ್ಪಡುತ್ತಾರೆ ಎಂದು ಅರ್ಥಮಾಡುತ್ತಾರೆ. ಅಷ್ಟೇ ಅಲ್ಲದೆ ಪರಮಾತ್ ಎಂಬುದನ್ನೇ ವೇದವ್ಯಾಸಪರವಾಗಿ ಹೊಂದಿಸಿ-ಕೊಡುತ್ತಾರೆ—ಪರಾ–ಉತ್ತಮವಾದ (ನಿರತಿಶಯವಾದ), ಮಾ–ವಿದ್ಯೆಯು, ಯಸ್ಯ–ಯಾರಿಗಿದೆಯೋ ಅವರು ಪರಮಃ–ಜ್ಞಾನನಿಧಿಗಳಾದ ವೇದವ್ಯಾಸರು ಎಂದು ಅರ್ಥಮಾಡುತ್ತಾರೆ (375 ಚ, ii, ೭೬). ಅಂಥಾ ವ್ಯಾಸರಿಂದ ಈ ಮಧ್ವಾಚಾರ್ಯರು ಪ್ರತಿಯೊಂದು ಕಾರ್ಯದಲ್ಲೂ ಹೆಜ್ಜೆಹೆಜ್ಜೆಗೂ ಹೀಗೆ ಮಾಡು, ಹೀಗೆ ಮಾಡು' ಎಂದು ಅವತಾರ ಎತ್ತುವುದರಲ್ಲೂ, ಗ್ರಂಥ-ಗಳನ್ನು ರಚಿಸುವುದರಲ್ಲೂ ದುರ್ವಾದಿಗಳನ್ನು ಸೋಲಿಸುವುದೇ ಮೊದಲಾದ ಸಕಲಕಾರ್ಯಕಲಾಪಗಳಲ್ಲೂ ಪ್ರೇರಿಸಲ್ಪಡುತ್ತಾರೆ (ಎಂದು ಕೇವಲ ಮಧ್ವ-ಪರವಾಗಿಯೂ ವ್ಯಾಖ್ಯಾನ ಮಾಡುತ್ತಾರೆ) (375 ಜ, ೭೪).

(೧೫೦–೫೧) ದ್ವಿತೀಯ ಚರಣದಲ್ಲಿ—ಮಧ್ವಃ ಎಂಬ ಕರ್ತೃಪದ ಅಧ್ಯಾಹಾರ ಮಾಡಿಕೊಳ್ಳಬೇಕು; ಮಧ್ವಃ ಪೃಕ್ಷುಧೋ ವೀರುಧೋ ದಂಸು-ಪರ್ಯಾರೋಹತಿ ಎಂದು ಅನ್ವಯವಾಗುತ್ತದೆ. 'ಪೃಕ್ಷುಧಃ ವೀರುಧಃ' ಎಂಬ ಎರಡು ಪದಗಳೂ ಕ್ಷುತ್ ಶಬ್ದದಂತೆ ಧಕಾರಾಂತ ಸ್ತ್ರೀಲಿಂಗ. ಎರಡೂ ದ್ವಿತೀಯಾ ವಿಭಕ್ತಿ ಬಹುವಚನ(ಶಸಂತ) ರೂಪಗಳು, (375 ಚ, iv-v ೭೭) (೧೫೨–೩) ಪೃತ್ ಎಂದರೆ ಪ್ರಶ್ನೆ. ಪೃತಃ–ಪ್ರಶ್ನೆಗಳೇ ಕ್ಷುತ್–

ಪೃಕ್ಷುಧಃಶಬ್ದಾರ್ಥವರ್ಣನಮ್

ಪೃತ ಏವ ಹಿ ಪ್ರಶ್ನಾಃ ಸ್ಯು—ಸ್ತಾಶ್ಚ ಕ್ಷುಧ್ವದ್ ಭವಂತಿ ಹಿ।
ಪರಪೀಡಾಕರಾ ಯಸ್ಮಾತ್ ಪೃಕ್ಷುಧಃ ಪರಿಕೀರ್ತಿತಾಃ ॥ ೧೫೨ ॥

ತಕಾರೋ ಲುಪ್ಯತೇ ಮಧ್ಯೇ ನಿರುಕ್ತನಿಯಮಾದನು।
ತಥಾಚ ಪೂರ್ವಪಕ್ಷೀಯ—ಪ್ರಶ್ನಾ ವೈ ಪೃಕ್ಷುಧೋ ಮತಾಃ ॥ ೧೫೩ ॥

ವೀರುಧಃಶಬ್ದಾರ್ಥಃ

ರೋಹಂತಿ ವಿವಿಧಂ ಹೀತಿ ಲತಾ ಏವ ಹಿ ವೀರುಧಃ।
ಯದ್ವಾ ಸ್ತಂಭಾದಿಕಾಶ್ಚೈವ
ಪ್ರೋಚ್ಯಂತೇ ವೀರುಧೋ ೭ತ್ರ ಹಿ ॥ ೧೫೪ ॥

ದದಾದೇಶೇ ತು ದಂತಸ್ಯ ದತ್ಸ್ವರೂಪಂ ಭವೇದಪಿ।
ವ್ಯತ್ಯಯೇನ ವರ್ಣಸ್ಯ ದಂಸುರೂಪಂ ಚ ಸಿದ್ಧ್ಯತಿ ॥ ೧೫೫ ॥

ದ್ವಿತೀಯವಾಕ್ಯಸ್ಯಾರ್ಥಃ

ಪ್ರತಿವಾದಿಪ್ರಶ್ನಭೂತಾ ಲತಾದ್ಯಾ ಯಾಶ್ಚ ಕಶ್ಚನ।
ತಾಶ್ಚ ದಂಸು ಸ್ವದಂತೇಷು ಪರ್ಯಾರೋಹತಿ ಚರ್ವತಿ ॥ ೧೫೬ ॥

ಹಸಿವಿನಂತೆ ಹಿಂಸೆಮಾಡುವವು ಎಂಬ ಅಭಿಪ್ರಾಯದಿಂದ ಪೂರ್ವಪಕ್ಷಿಯು ಕೇಳುವ ಪ್ರಶ್ನೆಗಳಿಗೇ ಪೃಕ್ಷುಧಃ ಎಂದು ಹೆಸರು. ಪೃತ್+ಕ್ಷುತ್ ಸೇರಿದಾಗ ನಿರುಕ್ತನಿಯಮದಂತೆ ಮಧ್ಯದ ತಕಾರ ಲೋಪವಾಗಿ ಪೃಕ್ಷುಧ್ ಎಂದುಳಿಯುತ್ತದೆ(ಅಲ್ಲೇ). (೧೫೪) ವಿ-ವಿಧವಿಧವಾಗಿ, ರುಹ್-ಬೆಳೆಯುವುದು ಎಂಬ ವ್ಯುತ್ಪತ್ತಿಯಿಂದ ಬಳ್ಳಿಗಳಿಗೇ ವೀರುಧಗಳೆಂದು ಹೆಸರು. (೧೫೫) 'ಪದ್ದನ್ನೋ—'(ಪಾ. ೬-೧-೬೩) ಎಂಬ ಸೂತ್ರದಂತೆ ದಂತಶಬ್ದಕ್ಕೆ ವಿಕಲ್ಪ-ದಿಂದ ದತ್ ಆದೇಶ ಬರುವುದರಿಂದ ಸಪ್ತಮೀ ಬಹುವಚನದಲ್ಲಿ 'ದತ್ಸು' ಎಂಬ ರೂಪ ವ್ಯಾಕರಣರೀತ್ಯಾ ಸಿದ್ಧವಾಗುತ್ತದೆಯಾದರೂ ವೈದಿಕ ಪ್ರಯೋಗ ವಾದ್ದರಿಂದ ತಕಾರವೇ ಮಕಾರವಾಗಿ ವ್ಯತ್ಯಾಸವಾಗಿ 'ದಂಸು' ಎಂಬ ರೂಪ ಸಿದ್ಧಿಯಾಗುತ್ತದೆ. ಇದಕ್ಕೆ 'ಹಲ್ಲುಗಳಲ್ಲಿ' ಎಂದರ್ಥ. (3/5 ಚ. vi, ೭೭)

(೧೫೬-೯) ಎರಡನೇ ವಾಕ್ಯಕ್ಕೆ ಹೀಗೆ ಅರ್ಥವಾಗುತ್ತದೆ—ಮಧ್ವಃ-ಮಧ್ವಾಚಾರ್ಯರು, ಪೃಕ್ಷುಧಃ-ಪೂರ್ವಪಕ್ಷೀಯರು ಕೇಳುವ (ಸಾಮಾನ್ಯ-

ಇತಿ ಶಬ್ದಾರ್ಥಬೋಧಃ ಸ್ಯಾತ್ ತಾತ್ಪರ್ಯಂ ವಕ್ಷ್ಯತೇಽಧುನಾ ।
ಯಥಾ ಹಿ ವೃಷಭೋ ಮತ್ತೋ ಕ್ಷುದ್ರಂ ತೃಣಲತಾದಿಕಮ್ ॥೧೫೭॥

ಚರ್ವಯಿತ್ವಾ ಸ್ವದಂತೇಷು ನಿಸ್ಸಾರಂ ಪರಿವರ್ತಯೇತ್ ।
ತಥೈವ ಮಧ್ವರೂಪೋಽಯಂ ಪರೇಷಾಂ ಪ್ರಶ್ನಸಂಚಯಮ್ ॥ ೧೫೮ ॥

ಚರ್ವಯಿತ್ವಾ ಯುಕ್ತಿಜಾಲೈ—ರ್ನಾನಾ(ಧಾರ)ಽಽಕರಬಲಾನ್ವಿತೈಃ !
ನಿಸ್ಸಾರಂ ದರ್ಶಯಿತ್ವೈವ ಹೇಲಯಾ ಖಂಡಯತ್ಯಥಾ ॥ ೧೫೯ ॥
(ಖಂಡಯೇದ್ ಭೃಶಮ್)

ಇತಿ ತಜ್ಜ್ಞಾನದೋಹಂ ತು ಪ್ರಶಂಸತಿ ಸ್ವಯಂ ಶ್ರುತಿಃ ।

ಉತ್ತರಾರ್ಧಸ್ಯಾರ್ಥವಿವರಣಮ್

ಉತ್ತರಾರ್ಧೇಽಪಿ ಮಧ್ವಸ್ಯ ಜನನೇ ಕಾರಣಂ ವದನ್ ॥ ೧೬೦ ॥
ಅವರತ್ವಂ ಹರೇರೇವ ತಸ್ಯ ವಕ್ತಿ ತಥಾಽನ್ಯಥಾ ॥
ದ್ವೇ ವಾಕ್ಯೇಽತ್ರಾಪಿ ಸಂಯುಕ್ತೇ (ಸಂಬದ್ಧೇ)
ಯಚ್ಛಬ್ದೈಶ್ಚ ಪರಸ್ಪರಮ್ ॥ ೧೬೧ ॥

ಜನರಿಗೆ ಉತ್ತರಕೊಡುವುದಕ್ಕೇ ಕಷ್ಟವಾಗುವ) ಪ್ರಶ್ನೆಗಳೆಂಬ, ವೀರುಧಃ–ಬಳ್ಳಿ ಅಥವಾ ಹುಲ್ಲುಕಡ್ಡಿಗಳನ್ನು ದಂಸು–ತನ್ನ ಹಲ್ಲುಗಳಲ್ಲಿ, ಪರಿ ಆರೋಹತಿ= ಅಗಿದು ಅಗಿದು ನಿಸ್ಸಾರಮಾಡುತ್ತಾರೆ. ಇದು ಪದಶಃ ಅರ್ಥ. ತಾತ್ಪರ್ಯ ವೇನೆಂದರೆ—ಮದಿಸಿದ ಗೂಳಿಯು (ಬಸವವು) ನಿರ್ಬಲವಾದ ಹುಲ್ಲು-ಬಳ್ಳಿ ಮೊದಲಾದುವನ್ನು ತನ್ನ ಹಲ್ಲುಗಳಲ್ಲಿ ಹಾಕಿ ಅಗಿದು-ಅಗಿದು ಹೇಗೆ ನಿಸ್ಸಾರಮಾಡುವುದೋ ಹಾಗೆಯೇ ಈ ಮಧ್ವಾಚಾರ್ಯರು ಪ್ರತಿಪಕ್ಷಿಗಳು ಕೇಳುವ (ಅಥವಾ ಹೇಳುವ) ಪ್ರಶ್ನೆಗಳನ್ನು (ಯುಕ್ತಿಗಳನ್ನು) ನಾನಾಗ್ರಂಥ-ಗಳಲ್ಲಿ ಹೇಳಿದ ಯುಕ್ತಿಗಳ ಬಲದಿಂದ ಖಂಡಿಸಿ ನಿಸ್ಸಾರವೆಂದು ಸಿದ್ಧಪಡಿಸಿ-ಬಿಡುತ್ತಾರೆಂದು ಭಾವ. (375 ಜ, ೨ನೇ ವಾಕ್ಯ, ೭೪-೫) (೧೬೦ ಪೂ.). ಹೀಗೆ ಶ್ರುತಿಯು ತಾನೇ ಆ ಮಧ್ವಾಚಾರ್ಯರ ಜ್ಞಾನದೋಹವನ್ನು ಪ್ರಶಂಸಿಸುತ್ತದೆ (375 ಛ, ೭೯-೮೦).

(೬೦–೬೧) ನಾಲ್ಕನೇ ಮಂತ್ರದ ಉತ್ತರಾರ್ಧದಲ್ಲಿಯೂ ಮಧ್ವರು ಅವತಾರಮಾಡಿದ್ದಕ್ಕೆ ಕಾರಣವನ್ನು ಹೇಳುತ್ತಾ ಅವರು (ಮಧ್ವರು)

ಉಭ ಶಬ್ದಸ್ಯ ಸುಬ್ಲೋಪೇ ಚಾಕಾರಾಂತೋ ಭವೇತ್ಸದಾ ।
ತಥಾದಿಚ್ಛಬ್ದಯೋಶ್ಚಾತ್ರ ತಂತ್ರೇಣಾ(ಬಹುಧಾ)ಽಽವೃತ್ತಿರಿಷ್ಯತೇ ॥೧೬೨॥

ಆದಿದಿತ್ಯವ್ಯಯೌ ಪ್ರೋಕ್ತೌ ತದರ್ಥಸ್ತ್ವತ ಏವ ಹಿ ।
ಇಚ್ಛಬ್ದೋಽವ್ಯಯಃ ಪ್ರೋಕ್ತ ಏವೇತ್ಯರ್ಥೇ ಪ್ರಯುಜ್ಯತೇ ॥ ೧೬೩ ॥

ಯದಸ್ಯ ಜನುಷಂ ಜನ್ಮ ಯದುಭೌ ಪಿತರೌ ಹಿ ತೌ ।
ಲಕ್ಷ್ಮೀನಾರಾಯಣೌ ದೇವಾ—ವಿನ್ವತಸ್ತ್ವತ ಏವ ಹಿ (ಆದಿತ್) ॥೧೬೪॥

ಆದಿತ್–ತಯೋರ್ದ್ವಯೋರೇವ ಯವಿಷ್ಠಶ್ಚ ಘೃಣಾ ಶುಚಿಃ ।
ಅಭವದಿತ್ಯನ್ವಯಃ ಸ್ಯಾ—ದರ್ಥೋಽತು ನಿರೂಪ್ಯತೇ ॥ ೬೫ ॥

ಶ್ರೀಹರಿಗಿಂತ ಕಿರಿಯರೆಂದೂ ಮಿಕ್ಕವರೆಲ್ಲರಿಗಿಂತಲೂ ಹಿರಿಯರೆಂದೂ ಹೇಳುತ್ತದೆ. ಹೀಗೆ ಎರಡು ವಾಕ್ಯಗಳೂ ಯಚ್ಛಬ್ದರಿಂದ ಒಂದಕ್ಕೊಂದು ಹೊಂದಿಕೊಂಡಿವೆ.

(೬೨-೩) ಉಭಶಬ್ದ ನಿತ್ಯದ್ವಿವಚನಾಂತ; ಏಕವಚನವೂ ಇಲ್ಲ, ಬಹುವಚನವೂ ಇಲ್ಲ. ಪುಲ್ಲಿಂಗದಲ್ಲಿ ಉಭೌ ಎಂದಾಗಬೇಕು. ಆದರೆ 'ಸುಪಾಂ ಸುಲುಕ್—' (ಪಾ' ೭-೧-೩೯) ಎಂಬ ಸೂತ್ರದಂತೆ ಛಂದಸ್ಸಿನಲ್ಲಿ ಔಕಾರಕ್ಕೆ ಆಕಾರಾದೇಶಬಂದಿದೆ, ಈ ರೂಪ ಎಲ್ಲ ವಿಭಕ್ತಿಗಳಲ್ಲೂ ಒಂದೇ ಆಗಿರುತ್ತದೆ. ಇನ್ನು 'ಆದಿತ್ (ಆತ್ + ಇತ್) ಎಂಬ ಎರಡು ಪದಗಳನ್ನೂ ತಂತ್ರದಿಂದ ಎರಡು ಸರಿ ಅನ್ವಯಿಸಿಕೊಳ್ಳಬೇಕು, ಆತ್, ಇತ್ ಎರಡೂ ಅವ್ಯಯಗಳು. ಅವಕ್ಕೆ i) ಆದ್ದರಿಂದ ಎಂದೂ, ii) ಆ ಇಬ್ಬರ ಎಂದೂ, ಎರಡರ್ಥ. ಇತ್ ಶಬ್ದವೂ ಅವ್ಯಯ, ಅದಕ್ಕೆ 'ಏವ' ಎಂದರ್ಥ. ಆತ್–ಇತ್–ಆದ್ದರಿಂದಲೇ.

(೧೬೪-೫) ಉತ್ತರಾರ್ಧದ ಅನ್ವಯ ಹೀಗೆ ಹೇಳಬೇಕು—ಯತ್ ಅಸ್ಯ ಜನುಷಂ ಯತ್ ಉಭಾ ಇನ್ವತಃ, ಆದಿತ್ ಆದಿತ್ ಯವಿಷ್ಠಃ ಘೃಣಾ ಶುಚಿಃ ಅಭವತ್ ॥ ಇದರ ಅರ್ಥವನ್ನು ಹೇಳುತ್ತೇವೆ.

'ಜನೇರುಸೀ'ತಿ ಸೂತ್ರಾತ್ತು ಹ್ಯುಸಂತೋ ಜನುರಿಷ್ಯತೇ ।
(ಉ-೨/೧೧೫)
ಸಕಾರಾಂತೋಪಿ ಕ್ಲೀಬೋಪಿ ಛಾಂದಸಾತ್ ಪುಂಸಿ ಯೋಜಿತಃ॥ ೧೬೬ ॥
'ಜನುರ್ಜನನಜನ್ಮಾನೀ'—ತ್ಯಮರೇ ಪಠ್ಯತೇ ಕಿಲ ।
ಇನ್ವತಇತೀಣ್‌ಧಾತೋಸ್ತು ಛಾಂದಸಂ ರೂಪಮುಚ್ಯತೇ ॥ ೧೬೭ ॥
'ಇವಿ ವ್ಯಾಪ್ತಾ'ವಿತಿ ಧಾತೋ—ರ್ನುಮಿ ವ್ಯೆವಂ ಭವೇತ್ತಥಾ ।
ವ್ಯಾಪ್ತಿರೇವಾತ್ರ ಮಂತವ್ಯಾ ಪ್ರೇರಣೇತಿ ಯಥೋಚಿತಮ್ ॥ ೧೬೮ ॥

(೧೬೬–೬೮) ಜನುಃ ಎಂಬುದಕ್ಕೆ ಜನ್ಮ, ಜನನ ಎಂದರ್ಥ. 'ಜನೀ ಪ್ರಾದುರ್ಭಾವೇ' (ಹುಟ್ಟು) ಎಂಬ ಧಾತುವಿಗೆ 'ಜನೇರುಸಿ' (ಉ-೨-೧೧೫) ಎಂಬ ಸೂತ್ರದಂತೆ ಉಸ್ ಪ್ರತ್ಯಯ ಸೇರಲು ಜನುಸ್–ಜನುಃ ಎಂದಾಗುತ್ತದೆ. ಪಾಣಿನಿಯು 'ಇಸುಸಂತಃ' (೩/೧೯) ಎಂದು ಲಿಂಗಾನುಶಾಸನದಲ್ಲಿ ಹೇಳಿದಂತೆ ಉಸ್ ಅಂತವಾದ ಪದಗಳೆಲ್ಲ ನಪುಂಸಕಲಿಂಗವಾಗಬೇಕು. ಆದರೆ ವೈದಿಕಪ್ರಯೋಗವಾದ್ದರಿಂದ ಪುಲ್ಲಿಂಗವಾಗಿ 'ಜನುಷಂ' ಎಂಬ ರೂಪವಾಗಿದೆ; ಇಲ್ಲದಿದ್ದರೆ ಜನುಃ ಎಂದೇ ಇರಬೇಕಾಗಿತ್ತು. ಅಮರದಲ್ಲೂ 'ಜನುಃ, ಜನನಂ, ಜನ್ಮ' ಈ ಮೂರೂ ನಪುಂಸಕಲಿಂಗವೆಂದು ಹೇಳಿದೆ. ಇನ್ವತಃ ಎಂಬುದು ಪ್ರಥಮಪುರುಷ ದ್ವಿವಚನರೂಪ. ಇಣ್ ಗತೌ ಎಂಬ ಧಾತುವಿಗೇ ಛಾಂದಸರೂಪವೆಂಬುದು ಒಂದು ಪಕ್ಷ (375 ಚ vii, ೭೭-೮). ಸಾಯಣಭಾಷ್ಯದಂತೆ 'ಇವಿ ವ್ಯಾಪ್ತೌ' ಧಾತು 'ಇದಿತೋ ನುಮ್ ಧಾತೋಃ' (ಪಾ. ೭-೧-೫೮) ಎಂಬ ಸೂತ್ರದಂತೆ ಇದಿತ್ ಧಾತುಗಳಿಗೆ ('ಇ'ಕಾರವು -ಇತ್ ಆಗಿ ಸೇರಿದ್ದರೆ) ನುಮ್ ಆಗಮ (ನ್) ಬರುವುದರಿಂದ ಇವ್ (ಧಾತು) ಅ (ಶಪ್) ವಿಕರಣ + ತಸ್ (ಪ್ರತ್ಯಯ) ಸೇರಲು ಇನ್‌ವ್-ಅ-ತಃ (ನುಮಾಗಮ) ಸೇರಿ ಇನ್ವತಃ ಆಗಿದೆ. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಪ್ರೇರಣೆಯೇ ಅರ್ಥವಾಗಿದೆ.

ಅಸ್ಯ ಮಧ್ವಸ್ಯ ಯಜ್ಜನ್ಮ ಯತೋಽಸ್ಯ ಪಿತರಾವುಭೌ ।
ಸ್ವಯಂ ಪ್ರೇರಯತಸ್ತಸ್ಮಾ—ದವರೋಽಯಂ ತಯೋರ್ದ್ವಯೋಃ ॥೧೬೯॥

ದಯಯಾ ಚ ತಯೋರೇವ (ಘೃಣಾ) ಪರಿಶುದ್ಧೋಽಭವಚ್ಛುಚಿಃ ।
ಅನ್ಯೇಭ್ಯಸ್ತು ಸರ್ವೇಭ್ಯೋ ಜ್ಯೇಷ್ಠಃ ಶ್ರೇಷ್ಠಸ್ತಥೈವ ಚ ॥ ೧೭೦ ॥

ಇತ್ಯನ್ವಯಂ ಸಮಾಶ್ರಿತ್ಯ ಕೇಚಿದರ್ಥಂ ಪ್ರಚಕ್ಷತೇ ।
ವಾದಿರಾಜಃ ಪರಂತ್ವಸ್ಯ ವಕ್ಷ್ಯತ್ಯರ್ಥಾಂತರಂ ಯಥಾ ॥ ೧೭೧ ॥

ಯದ್ಯಸ್ಮಾದಸ್ಯ ಮಧ್ವಸ್ಯ ಯದಿತಿ ಜ್ಞಾನವಾಚಕಮ್ ।
ಜನುಷಂ ಜ್ಞಾನಕಾರ್ಯಾರ್ಥಂ ತಾವುಭೌ ಯತ ಇನ್ವತಃ ॥ ೧೭೨ ॥

(೧೬೯–೭೧) ಉತ್ತರಾರ್ಧಕ್ಕೆ ಅರ್ಥ ತೋರಿಸುತ್ತಾರೆ. ಯತ್–ಯಾವ ಕಾರಣದಿಂದ, ಅಸ್ಯ–ಈ ಮಧ್ವರ, ಯತ್ ಜನುಷಂ-ಯಾವ ಜನನವನ್ನು, ಅಸ್ಯ–ಇವರ, ಉಭಾ-ತಂದೆತಾಯಿಗಳಾದ ಲಕ್ಷ್ಮೀನಾರಾಯಣರಿಬ್ಬರೂ ತಾವೇ, ಇನ್ವತಃ–ಪ್ರೇರಿಸುತ್ತಾರೋ; (i) ಆದಿತ್–ಆದ್ದರಿಂದಲೇ, (ii) ಆದಿತ್–ಆ ಇಬ್ಬರಿಗಿಂತ, ಯವಿಷ್ಠಃ–ಕಿರಿಯನೂ, ಘೃಣಾ-ಅವರಿಬ್ಬರ ದಯಾಪಾತ್ರನೂ, ಶುಚಿಃ–ಪರಿಶುದ್ಧನೂ, ಅಭವತ್–ಆದನು. ಭಾವವೇನೆಂದರೆ-ಮಧ್ವರಿಗೆ ತಾಯಿ-ತಂದೆಗಳಾದ ಲಕ್ಷ್ಮೀನಾರಾಯಣರಿಬ್ಬರೂ ಅವತಾರ ಮಾಡೆಂದು ತಾವೇ ಪ್ರೇರಣೆ ಮಾಡಿ ಅವರಿಗೆ ಗರ್ಭವಾಸಾದಿಗಳಿಲ್ಲದಂತೆ ಕೃಪೆಮಾಡಿ (ಘೃಣಾ) ಪರಿಶುದ್ಧ (ಶುಚಿಃ) ನಾಗುವಂತೆ ಮಾಡಿದರು ಆದ್ದರಿಂದ ಇವರು ಕೇವಲ ಅವರಿಬ್ಬರಿಗೆ ಮಾತ್ರ ಕಿರಿಯರು, ಇದರಿಂದ ಮಿಕ್ಕ ಎಲ್ಲರಿಗಿಂತ ಹಿರಿಯರೂ ಶ್ರೇಷ್ಠರೂ ಆಗಿದ್ದಾರೆಂದೂ ಹೇಳಿದಂತಾಯಿತು. (375ಜ, ೭೫-೬, 375 ಛ, ೮೦). ಹೀಗೆ ಕೆಲವರು ಅನ್ವಯ ಅರ್ಥ ಹೇಳಿದರೆ ವಾದಿರಾಜರೇ ಬೇರೆ ರೀತಿ ಅನ್ವಯ ಮಾಡುತ್ತಾರೆ.

(೧೭೨–೭೪) 375ಜದಲ್ಲಿ ಪುಟ ೭೫ರಲ್ಲಿ ತಾ.ನಿ. ಪ್ರಕಾರದ ಅರ್ಥ ನೋಡಿ. ಹೀಗೆ ಉತ್ತರಾರ್ಧಕ್ಕೆ ಕೇವಲ ಮಧ್ವಪರವಾದ ಒಂದು ಅರ್ಥವೂ ಇದೆ.

ಆತ್ತಸ್ಮಾತ್ ಪುನರಾದ್ ವಿಷ್ಣೋ—ರ್ಯವಿಷ್ಠೋ ಕನಿಷ್ಠೋ ಮತಃ।
ಸೋಽಯಂ ಮಧ್ವಾಭಿಧಶ್ಚೈವ ಘೃಣಾನಾಮ ದಯಾಮಯಃ ॥ ೧೭೩ ॥
ಯತಿಧರ್ಮೋ ಶುಚಿರ್ಭೂತೋ ಹಿಂಸಾಭಾವವಿವರ್ಜಿತಃ ।
ಏವಂ ಮಧ್ವಪರೋಽಪ್ಯರ್ಥೋ ಭವಿಷ್ಯತಿ ಶ್ರುತೇಸ್ತಥಾ ॥ ೧೭೪ ॥

ಪಂಚಮೀ ಋಕ್ ಅವತಾರಿಕಾ

ವಾಯೋಸ್ತು ಗರ್ಭವಾಸಾದಿ—ದುಃಖಾಭಾವಂ ವದನ್ ಪುನಃ ।
ಜ್ಞಾನಕಾರ್ಯೇ ಚ ಮಧ್ವಸ್ಯ ವಿಶೇಷಂ ವಕ್ತಿ ಹಿ ಶ್ರುತಿಃ ॥ ೧೭೫ ॥

ಪೂರ್ವಾರ್ಧೇ ಅನ್ವಯಕ್ರಮಃ

ಆದಿನ್ಮಾತೄರಾವಿಶದ್ ಯಸ್ಮಾದ್
ವಾಯು **ರ್ಯಾಸೂರ್ವಿಯಾಽಽಶುಚಿಃ** ।
ತಸ್ಮಾದ್ಧಿ ಗರ್ಭದುಃಖೈ'ರ—**ಹಿಂಸ್ಯಮಾನೋ ವಿವಾವೃಧೇ** ॥ ೧೭೬ ॥
ಇತ್ಯನ್ವಯಕ್ರಮೋ ಜ್ಞೇಯಃ ಪೂರ್ವಾರ್ಧಸ್ಯ ತದಸ್ಯ ತು ।

ಅರ್ಥವಿವರಣಮ್

ಆದಿತ್ಯಕಾರವಾಚ್ಯಾತ್ತು ಪೂರ್ವೋಕ್ತಾದ್ಧಿ ಹರೇರಿತಿ ॥ ೧೭೭ ॥
ತದಾಜ್ಞಯಾ ಯತೋ ವಾಯು—ರಾವಿಶಚ್ಚ ಯುಗತ್ರಯೇ ।
ಮಾತೄಸ್ತಿಸ್ರೋಽಞ್ಜನಾಕುಂತೀ—ಮಧ್ಯಗೇಹಸತೀಸ್ತಥಾ ॥ ೧೭೮ ॥
ಸ್ವಯಮೇವಾವಿಶದ್ಗರ್ಭಂ ಸ್ವಶಕ್ತ್ಯೈವ ತಥೋ**ರ್ವಿಯಾ** ।
ಶುಕ್ಲಶೋಣಿತಸಂಸರ್ಗ—ದೋಷಹೀನೋ ಽತ **ಆಶುಚಿಃ** ॥ ೧೭೯ ॥
ಅತ ಏವಾಽಽಸಮಂತಾತ್ತು ಪರಿಶುದ್ಧಃ ಪ್ರಕೀರ್ತಿತಃ ।
ತಸ್ಮಾದ್ಧಿ ಗರ್ಭವಾಸಾದಿ—ದುಃಖಹೀನಃ ಪ್ರವವೃಧೇ ॥ ೧೮೦ ॥

ಐದನೇ ಋಕ್ಕಿಗೆ ಅವತಾರಿಕೆ (೧೭೫) ಈ ಋಕ್ಕಿನಲ್ಲಿ ಶ್ರುತಿಯು ವಾಯುದೇವರಿಗೆ ಗರ್ಭವಾಸಾದಿ ದುಃಖಗಳು ಇಲ್ಲವೆಂದು ಹೇಳುತ್ತಾ ಅವರ ಜ್ಞಾನಕಾರ್ಯದಲ್ಲಿರುವ ವೈಶಿಷ್ಟ್ಯವನ್ನೂ ಹೇಳುತ್ತದೆ. (376 ಕ. ೮೧).

(೧೭೬) ಪೂರ್ವಾರ್ಧದ ಅನ್ವಯ ಕ್ರಮ ಈ ರೀತಿ ಇದೆ.–(ಯತಃ) (ವಾಯು.) ಆದಿತ್ ಮಾತೄಃ ಆವಿಶತ್, ಯಾಸು ಉರ್ವಿಯಾ ಆಶುಚಿಃ

ಅವತಾರತ್ರಯೇಽಪ್ಯೇವ—ಮಿತಿ ಜ್ಞಾತವ್ಯಮಂಜಸಾ ।
ಇದಿತೀತ್ಥಂ ಭವೇದೇವಂ ಕಲ್ಪೇ ಕಲ್ಪೇಽಪಿ ನಿತ್ಯಶಃ ॥ ೧೮೧ ॥

ಅಥವಾ ಕೇವಲಂ ಮಧ್ವ—ಪರೋಽಪ್ಯರ್ಥೋಽಪಿ ವಿದ್ಯತೇ ।
ಯತೋಽಸೌ ಮಧ್ವ ಆದಿದ್ಧಿ ಪರಮಾನುಗ್ರಹಾದ್ಧರೇಃ ॥ ೧೮೨ ॥

ಯುಗಾದ್ಯಾ ಸಪ್ತ ಮಾತ್ರಾಶ್ಚ ಪ್ರಾವಿಶದ್ ಜ್ಞಾನಮಾರ್ಗತಃ ।
ಅತೋಽಸೌ ತಾಸು ವಿದ್ಯಾಸು ನಿತರಾಮಾಶುಚಿಃ ಖಲು ॥ ೧೮೩ ॥

ಅಜ್ಞಾನಾಭಿಭವಾಸ್ಪೃಷ್ಟಃ ಪ್ರತಿವಾದಿಭಯೋಜ್ಝಿತಃ ।
ಪ್ರಗಲ್ಭಯಾ ಬುದ್ಧಿಶಕ್ತ್ಯಾ ಮೇಧಯಾ ಚ ಸುತೀಕ್ಷ್ಣಯಾ ॥ ೧೮೪ ॥

ಯತ್ರಕುತ್ರಾಪಿ ಸರ್ವತ್ರ ಜೃಂಭಮಾಣೋ ವಿವಾವೃಧೇ ।
ಏವಂ ಮಧ್ವಸ್ಯ ಪ್ರಾಗಲ್ಭ್ಯ—ಮಪ್ರತರ್ಕ್ಯ ಮನೌಪಮಮ್ ॥ ೧೮೫ ॥

ಅಹಿಂಸ್ಯಮಾನಃ ವಿವಾವೃಧೇ ॥ (೧೭೭-೮೧) ಆತ್ ಇತ್ ಎಂದರೆ ಅಕಾರ ವಾಚ್ಯನಾದ ಮತ್ತು 'ಪಿತುಃ' ಎಂದು ಪೂರ್ವಮಂತ್ರಪ್ರಸಕ್ತನಾದ ಶ್ರೀಹರಿಯ ಆಜ್ಞೆಯಿಂದ, ಯತಃ-ಯಾವ ಕಾರಣದಿಂದ, ವಾಯುಃ-ವಾಯುವು, ಮಾತೄಃ-ಮೂರು ಯುಗಗಳಲ್ಲಿ ಕ್ರಮವಾಗಿ ಅಂಜನಾ, ಕುಂತೀ ಮತ್ತು ಮಧ್ಯಗೇಹರ ಪತ್ನೀ ಎಂಬ ಮೂರು ಜನ ತಾಯಿಯರನ್ನು, ಆವಿಶತ್-ತಾನೇ ಪ್ರವೇಶಿಸಿದನೋ ಆದ್ದರಿಂದ, ಯಾಸು-ಅವರಲ್ಲಿ, ಉರ್ವಿಯಾ-ಮಹತ್ತರವಾದ ಸ್ವಶಕ್ತಿಯಿಂದಲೇ, ಅಶುಚಿಃ-ಅತ್ಯಂತ ಪರಿಶುದ್ಧನಾಗಿ, ಅಹಿಂಸ್ಯಮಾನಃ-ಗರ್ಭವಾಸಜನ್ಯವಾದ ದುಃಖಗಳಿಲ್ಲದೆಯೇ, ವಿವಾವೃಧೇ-ಬೆಳೆದನು. (376, ಘ-ಜ, ೮೨). ಆದಿತ್ ಎಂಬಲ್ಲಿ ಇತ್‌ಗೆ 'ಹೀಗೆಯೇ' ಎಂದರ್ಥ. ಹೀಗೆಯೇ ಎಂದರೆ ಏನರ್ಥ? ವಿವರಿಸುತ್ತಾರೆ—ಹೀಗೆಯೇ ಎಂದರೆ ಗರ್ಭವಾಸಾದಿ ದುಃಖವಿಲ್ಲದೆಯೇ (ಹೀಗೆಯೇ) ಪ್ರತಿಕಲ್ಪದಲ್ಲಿಯೂ ಅವತಾರ ಮಾಡುತ್ತಾರೆಂದು ಭಾವ (376 ಚii, ೮೪).

(೮೨-೮೫) ಐತರೇಯ ಭಾಷ್ಯ ಟೀಕೆಯಲ್ಲಿ ತಾಮ್ರಪರ್ಣಿಯವರು ಈ ಪೂರ್ವಾರ್ಧಕ್ಕೆ ಕೇವಲ ಮಧ್ವಪರವಾಗಿ ಹೀಗೆ ಅರ್ಥ ಹೇಳುತ್ತಾರೆ— ಅಸೌ ಮಧ್ವಃ (ಎಂದು ಕರ್ತೃಪದ ಸೇರಿಸಿಕೊಳ್ಳಬೇಕು)-ಈ ಮಧ್ವಾ-

ಉತ್ತರಾರ್ಧಸ್ಯ ವಿವರಣಮ್ 'ಸನಾಜುವಃ'ಶಬ್ದಾರ್ಥಃ

'ಜು ಗತೌ'ವಿತಿಧಾತೋಽಸ್ತು ಸ್ಥಿತ್ಯರ್ಥೇ ವರ್ತತೇ ಜುವಃ ।
ಸನಾದನಾದಿಕಾಲಾಚ್ಚ ವಿದ್ಯಮಾನಾ ಜುವೋ ಯತಃ ॥ ೧೮೬ ॥
ಋಗಾದ್ಯಾ ವೈದಿಕಾ ವಿದ್ಯಾಃ ಪ್ರೋಚ್ಯಂತೇ ಸನಾಜುವಃ ।
ಸಜೂಃಶಬ್ದ ಇವಾಸೌ ಚ ಹ್ಯೂಕಾರಾಂತೋ ಮತಃ ಸ್ತ್ರಿಯಾಮ್ ॥೧೮೭॥
ಅನ್ವಿತ್ಯನುಗುಣಂವಾನು—ಸ್ವತ್ವೇತ್ಯರ್ಥ್ಯೇ ಽವ್ಯಯೋ ಮತಃ ।
ಸನಾಜುವಶ್ಚತಸ್ರೋಽಪಿ ಪೂರ್ವಾ ಆದ್ಯಾಶ್ಚ ಯಾಃ ಪುನಃ ॥ ೧೮೮ ॥
ವಿದ್ಯಾಶ್ಚಾನು ಕ್ರಮೋಣ್ವೇವ ತಾತ್ಪರ್ಯಜ್ಞಾನಸಾಧನ್ಯೈಃ ।

ಚಾರ್ಯರು, ಯತಃ-ಯಾವ ಕಾರಣದಿಂದ, ಆತ್ ಇತ್-ಅಕಾರವಾಚ್ಯನಾದ ಶ್ರೀಹರಿಯ ಅನುಗ್ರಹದಿಂದಲೇ, ಮಾತ್ಯಾಃ-ಪೂರ್ವಪ್ರಸಕ್ತವಾದ ಋಗಾದಿ ಸಪ್ತ (ಮಾತೃಗಳನ್ನು ಎಂದರೆ) ವಿದ್ಯೆಗಳನ್ನು, ಆವಿಶತ್-ಜ್ಞಾನಮಾರ್ಗದಿಂದ ಪ್ರವೇಶಿಸಿದರೋ ಎಂದರೆ ಭಗವದುಪದೇಶದಿಂದ ಅರಿತುಕೊಂಡರೋ, (ಅತಃ-) ಆದ್ದರಿಂದ, ಯಾಸು-ಆ ವಿದ್ಯೆಗಳಲ್ಲಿ, ಅಶುಚಿಃ-ಅತ್ಯಂತ ಶುಚಿಯಾಗಿ ಎಂದರೆ ಅಜ್ಞಾನ ಸಂಶಯವಿಪರ್ಯಯ (ಅನ್ಯಥಾಜ್ಞಾನ) ಗಳಿಲ್ಲದೆ ಮತ್ತು ಪ್ರತಿ-ವಾದಿಗಳು ಹೇಳುವ ಕುಯುಕ್ತಿಗಳಿಂದ ತಪ್ಪುದಾರಿ ಹಿಡಿಯದೆ ಅವುಗಳ-ನ್ನೆಲ್ಲಾ ಮೀರಿಸಿ, ಉರ್ವಿಯಾ-ಅತಿ ಪ್ರೌಢವಾದ ತಮ್ಮ ಬುದ್ಧಿಶಕ್ತಿ-ಯಿಂದಲೂ ಬಹು ತೀಕ್ಷ್ಣವಾದ ಪ್ರತಿಭಾಶಕ್ತಿಯಿಂದಲೂ, ವಿಮಾವೃಧೇ-ಎಲ್ಲೆಲ್ಲಿ ಹೋದರೂ ಅಲ್ಲೆಲ್ಲಾ ವಿಜೃಂಭಿಸಿ ಮೆರೆದರು. ಈ ಪ್ರಕಾರ ಮಧ್ವಾಚಾರ್ಯರ ಪ್ರಾಗಲ್ಭ್ಯವು ಯೋಜನೆಗೂ ಮೀರಿದಂಥಾದ್ದು ಸಾಟಿ ಯಿಲ್ಲದ್ದೂ ಆಗಿದೆಯೆಂದು ಭಾವ (376 ಜ, ಪೂರ್ವಾರ್ಧದ ಕಡೆಯ ಭಾಗ, ೮೩).

(೧೮೬-೮೯) 'ಜು ಗತೌ' ಎಂದು ಧಾತುಪಾಠವಿರುವುದರಿಂದ ಜು ಎಂದರೆ ಹೋಗು, ಹೋಗಿರು ಅಥವಾ ಇರು ಎಂದೂ ಅರ್ಥವಾಗುತ್ತದೆ. ಅದರಿಂದ ಜುವಃ ಎಂದರೆ ಇರುವ ಎಂದರ್ಥ. ಸನಾತ್-ಅನಾದಿಕಾಲದಿಂದ (ಸನಾತನ ಕಾಲದಿಂದ), ಜುವಃ-ಇರತಕ್ಕವುಗಳಾದ್ದರಿಂದ ಋಗ್ವೇದಾದಿ

ನಿತ್ಯಸ್ವರಾದಿಬದ್ಧತ್ವಾ—ದರುಹದ್ ಬುಬುಧೇ ಕಿಲ । ೧೮೯
(ತಥಾ ಚ)
ಋಗಾದಿವೇದವಾಕ್ಯಾನಾಂ ತಾತ್ಪರ್ಯಾರ್ಥವಿನಿರ್ಣಯೇ ।
ಉಪಪತ್ತ್ಯಾದಿಲಿಂಗಾನಿ ವಿಚಾರ್ಯೈವ ಪ್ರವರ್ತತೇ । ೧೯೦
ನಾವಿಚಾರಂ ತ್ವರತೇ ಮಧ್ವ ಇತಿ ಭಾವಃ ಶ್ರುತೇರ್ಮತಃ ॥

ನಿ ನವ್ಯಸೀಷ್ವಪರಾಸು ಧಾವತೇ ಇತ್ಯಸ್ಯಾರ್ಥಃ

ನಿಶಬ್ದೋಽವ್ಯಯಃ ಪ್ರೋಕ್ತೋ ನಿತರಾಮರ್ಥಬೋಧಕಃ । ೧೯೧
ಧಾವತೇಶಬ್ದಯೋಗೇತು ಹ್ಯುಪಸರ್ಗಃ ಕಥಿಷ್ಯತೇ ॥

ನಾಲ್ಕು ವೇದವಿದ್ಯೆಗಳು 'ಸನಾಜುವಃ-ಸನಾತನವಾದುವು' ಎಂದು ಕರೆಯ-ಲ್ಪಡುತ್ತವೆ. ಸಜೂಃ ಶಬ್ದದಂತೆ ಸನಾಜುವಃ ಶಬ್ದವೂ ಸ್ತ್ರೀಲಿಂಗ ಊಕಾ-ರಾಂತ ಶಬ್ದ. ಸನಾಜೂಃ । ಸನಾಜುವೌ । ಸನಾಜುವಃ ॥ (376 ಚ. v, ೮೬). ಅನು ಎಂಬ ಅವ್ಯಯ ಅನುಗುಣವಾಗಿ ಅಥವಾ ಅನುಸರಿಸಿ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ. ಈಗ ಅನ್ವಯಾರ್ಥ ತೋರಿಸುತ್ತಾರೆ. ಸನಾಜುವಃ–ಅನಾದಿವಿದ್ಯೆಗಳಾದ, ಪೂರ್ವಾಃ–ಮೊದಲಿನ ನಾಲ್ಕು ವಿದ್ಯೆ-ಗಳನ್ನು (ಋಗಾದಿ ನಾಲ್ಕು ವೇದವಿದ್ಯೆಗಳನ್ನು), ಯತ್–ಅನಾದಿ ನಿತ್ಯ-ಗಳಾದ ಕಾರಣ (ಸ್ವರಗಳೂ, ಆನುಪೂರ್ವಿಯೂ, ಪದಗಳ ರೂಪಾದಿಗಳೂ ಸ್ವಲ್ಪವೂ ವ್ಯತ್ಯಾಸವಾಗದೆ ನಿತ್ಯವಾಗಿರುವುದರಿಂದ ಎಂದರ್ಥ), ಅನು–ಉಪ-ಕ್ರಮಾದಿ ತಾತ್ಪರ್ಯಲಿಂಗಗಳನ್ನು ಅನುಸರಿಸಿಯೇ, ಅರುಹತ್–ಹತ್ತಿದರು ಎಂದರೆ ವ್ಯಾಖ್ಯಾನ ಮಾಡಿದರು (ಅಥವಾ ಅರಿತುಕೊಂಡರು). (376 ಜ. ೩ನೇ ವಾಕ್ಯ, ೮೩)

(೧೯೦–೧೯೧ಪೂ) ಇದರ ಭಾವಾರ್ಥವೇನೆಂದರೆ – ಋಗಾದಿ ನಾಲ್ಕು ವಿದ್ಯೆಗಳು ಅನಾದಿನಿತ್ಯಗಳಾದ್ದರಿಂದ ಅವುಗಳ ಆನುಪೂರ್ವಿ, ಸ್ವರ, ಪದಗಳ ರೂಪಗಳಲ್ಲೇ ಅತ್ಯಂತ ಮಹತ್ವವಿದೆ. ಆದ್ದರಿಂದ ಅವುಗಳಿಗೆ ಅರ್ಥ ಹೇಳ-ಬೇಕಾದರೆ ಯಾವ ಸ್ವರ ಏಕೆ ಬಂತು ? ಯಾವ ರೂಪ ಹೇಗೆ ಬಂತು ? ಏಕೆ ಬಂತು ? ಮೊದಲೇಕೆ ಬಂತು ? ಕೊನೆಗೇಕೆ ಬಂತು ? ಚ ಏಕೆ

ನಿನವ್ಯಸೀಷು ಚಾತ್ಯಂತ—ನೂತನಾಸ್ವತ ಏವ ಹಿ । ೧೯೨
ಅವರಾಸು ಕನಿಷ್ಠಾಸು ಋಗಾದೀನಾಂ ವ್ಯಪೇಕ್ಷಯಾ ।
ಇತಿಹಾಸಪುರಾಣಾದಿ—ವಿದ್ಯಾಸು ರಚಿತಾಸು ವೈ । ೧೯೩

ಹೇಳಿದೆ? ತು ಏಕೆ ಹೇಳಿದೆ? ಎಂದು ಹೆಜ್ಜೆ ಹೆಜ್ಜೆಗೂ ವಿಚಾರ ಮಾಡಿ, ಉಪಕ್ರಮಾದಿ ಲಿಂಗಗಳಿಗೆ ವಿರೋಧ ಬರದಂತೆ ತೂಕಮಾಡಿ, ತಾತ್ಪರ್ಯ-ವನ್ನು ನಿರ್ಣಯಿಸಬೇಕಾಗುತ್ತದೆ. ಆದಕಾರಣ ಮಧ್ವಾಚಾರ್ಯರು ವೇದವಾಕ್ಯಗಳಿಗೆ ಅರ್ಥ ಹೇಳುವಾಗ ಅವಸರ ಮಾಡಿಕೊಂಡು, ವಿಚಾರ ಮಾಡದೆ, ಒಂದು ಹೆಜ್ಜೆಯೂ ಮುಂದೆ ಇಡುವುದಿಲ್ಲ. ಪ್ರತಿಯೊಂದು ಪದವನ್ನೂ, ಆದರ ಕ್ರಮವನ್ನೂ ಸ್ವರವನ್ನೂ ರೂಪವನ್ನೂ ವಿಚಾರ ಮಾಡಿಯೇ ಅರ್ಥ-ತಾತ್ಪರ್ಯಗಳ ನಿರ್ಣಯ ಮಾಡುತ್ತಾರೆ—(ಖಂಡ 393 ಪುಟ ೧೨೪ರಲ್ಲಿ ಸಾಯಣರು 'ಬಳಿತ್ಥೇತ್ಯುಭೇ ಅಪಿ ಸತ್ಯನಾಮನೀ' ಎಂದು ಸಲೀಸಾಗಿ ವ್ಯಾಖ್ಯಾನಮಾಡಿಬಿಟ್ಟರು. 'ಬಟ್ ಇತ್ಥಾ' ಎರಡಕ್ಕೂ 'ನಿಜ-ವಾಗಿ, ಸತ್ಯವಾಗಿ, ನಿಸ್ಸಂದೇಹವಾಗಿ' ಎಂದರ್ಥ ಹೇಳಿದರು. ಬಟ್ ಎಂದರೇ 'ನಿಜವಾಗಿ' ಎಂದರ್ಥವಾದರೆ 'ಇತ್ಥಾ' ಎಂದು ಪುನಃ ಹೇಳಿದ್ದು ವ್ಯರ್ಥವಾಯಿತಲ್ಲವೇ? ಪುನಃ ಹೇಳಲು ಏನು ಕಾರಣ? ಎಂದು ವಿಚಾರ ಮಾಡಿ, ಮಧ್ವಾಚಾರ್ಯರಾಗಿದ್ದರೆ ಆದಕ್ಕೂ ಏನೋ ಒಂದು ಕಾರಣ ತೋರಿಸದೆ ಇರುತ್ತಿರಲಿಲ್ಲ. ಅಲ್ಲದೆ ನಮ್ಮ ಟೀಕಾಕಾರರನ್ನು ನೋಡಿ—ಹೇಗೆ ಪ್ರಥಮ ಋಕ್ಕಿಗೂ, ಎರಡನೇ ಋಕ್ಕಿಗೂ, ಎರಡನೇ ಋಕ್ಕಿಗೂ, ಮೂರನೇ ಋಕ್ಕಿಗೂ ಹೇಗೆ ಸಂಬಂಧ ಜೋಡಿಸಿ ಹೊಂದಾಣಿಕೆ ತೋರಿಸುತ್ತಾರೆ! ಐದು ಋಕ್ಕಿನ ಭಾವವೂ ಒಂದೇ ಎಂದು ಸಮರ್ಥಿಸಲು ಎಷ್ಟು ವಿಚಾರ ಮಾಡುತ್ತಾರೆ—ನೋಡಿ. ಇದೇ ಮಧ್ವಾಚಾರ್ಯರ ವ್ಯಾಖ್ಯಾನ-ದಲ್ಲಿರುವ ವಿಶೇಷ!) ಎಂಬುದೇ ಶ್ರುತಿಯ ಭಾವ.

(೧೯೧-೯೩) ನಿನವ್ಯಸೀಷು ಎಂಬಲ್ಲಿರುವ ನಿ ಶಬ್ದ ಅವ್ಯಯಃ; ಇದಕ್ಕೆ 'ನಿತರಾಂ' ಸುತರಾಂ, ಸಂಪೂರ್ಣವಾಗಿ ಎಂದರ್ಥ. ಧಾವತೇ ಎಂಬ ಕ್ರಿಯಾಪದದೊಡನೆ ಸೇರಿದರೆ ಉಪಸರ್ಗವಾಗುತ್ತದೆ. ಧಾವತೇ-ಓಡು-

ನಿರಾಯಾಸೇನ ವ್ಯಾಖ್ಯಾನೇ ತ್ವರಯೈವ ನಿಧಾವತಿ ।
ತದರ್ಥನಿರ್ಣಯೋ ಯಸ್ಮಾತ್ ಕ್ಲೇಶೋ ನಾಸ್ತ್ಯೇವ ತಾದೃಶಃ ॥೧೯೪॥
ಇತಿ ವೈ ತಸ್ಯ ಮಧ್ವಸ್ಯ ಶಾಸ್ತ್ರವಾಕ್ಯಾರ್ಥಕೌಶಲೇ ।
ವೈಶಿಷ್ಟ್ಯಂ ದರ್ಶಯಾಮಾಸ
ನಿರ್ದಿಷ್ಟಾಭಿಜ್ಞತಾಂ (ಶ್ರುತಿಃ) ತಥಾ ॥ ೧೯೫ ॥

ತ್ತಾನೆ; ನಿಧಾವತೇ–ನಿಲ್ಲದೇ, ತಡಮಾಡದೆ, ಬೇಗ ಓಡಿಬಿಡುತ್ತಾನೆ ಎಂದು ಅರ್ಥದಲ್ಲಿ ವಿಶೇಷ. ನಿ ಎಂಬುದನ್ನು ನವ್ಯಸೀಷು ಜೊತೆ ಸೇರಿಸಬಹುದು. ಆಗ ಅದಕ್ಕೆ 'ಅತ್ಯಂತ ಹೊಸದಾದ' ಎಂದರ್ಥ. ಇಲ್ಲಿ ಹೊಸದು ಎಂದರೆ ಈಗ ತಾನೇ ಆದದ್ದು-ಬಂದದ್ದು ಎಂದರ್ಥವಲ್ಲ; ವೇದಗಳಿಗೆ ಹೋಲಿಸಿದರೆ ಈಚಿನದು ಎಂದೂ ಮತ್ತು ವೇದವು ಅಪೌರುಷೇಯವಾದ್ದರಿಂದ ರಚಿತವಲ್ಲ— ಇವಾದರೋ ರಚಿತವಾದವು, ಆದ್ದರಿಂದ ಹೊಸದು ಎಂದರ್ಥ. ಹೊಸ-ದಾದ್ದರಿಂದಲೇ 'ಅವರಾಸು' ವೇದಗಳ ಅಪೇಕ್ಷಯಾ ಕೀಳಾದ ಎಂದರ್ಥ ಅವು ಯಾವುವೆಂದರೆ 1) ಇತಿಹಾಸ (ಮೂಲರಾಮಾಯಣ, ಮಹಾಭಾರತ-ಗಳು), 2) ಪುರಾಣಗಳು ಮತ್ತು 3) ಪಂಚರಾತ್ರಾಗಮ ಎಂಬ ಮೂರು ವಿದ್ಯೆಗಳು, ಹೊಸದಾದ ಕಾರಣ ಕನಿಷ್ಠವಾದ ಈ ವಿದ್ಯೆಗಳಲ್ಲಿ ಅರ್ಥ ವಿಚಾರ ಮಾಡುವಾಗ, ನಿಧಾವತೇ–ಅಡೆತಡೆಯಿಲ್ಲದೆ ಸಲೀಸಾಗಿ ಓಡಿಬಿಡು ತ್ತಾರೆ ಎಂದು ಸಾಮಾನ್ಯಾರ್ಥ. ಏತಕ್ಕೆಂದರೆ ವೇದಗಳಲ್ಲಿರುವಂತೆ ಇವು-ಗಳಲ್ಲಿ ಸ್ವರಾದಿ ನಿತ್ಯತ್ವವಿಲ್ಲದಿರುವುದರಿಂದ ಸರಾಗವಾಗಿ ಅರ್ಥ ಹೇಳಿ ಬಿಡುತ್ತಾರೆಂದು ಭಾವ (376 ಇ, ೪ನೇ ವಾಕ್ಯ, ೮೩–೪; 376 ಛ, ಕಡೆಯ ಭಾಗ, ೮೯).

(೧೯೫) ಉಪಸಂಹಾರ— ಈ ಪ್ರಕಾರ ಶ್ರುತಿಯು ಮಧ್ವಾಚಾರ್ಯರ ವ್ಯಾಖ್ಯಾನಕ್ರಮದಲ್ಲಿರುವ ಕೌಶಲ್ಯವನ್ನು ತೋರಿಸುತ್ತಾ ವೇದವ್ಯಾಖ್ಯಾನ-ದಲ್ಲೂ ಸ್ಮೃತಿವ್ಯಾಖ್ಯಾನದಲ್ಲೂ ತಾತ್ಪರ್ಯನಿರ್ಣಯ ಮಾಡುವ ವಿಷಯದಲ್ಲಿ ವೈಶಿಷ್ಟ್ಯವನ್ನು ತೋರಿಸಿಕೊಟ್ಟು ಪ್ರಸಂಗವನ್ನು ಸಮಾಪ್ತಿಮಾಡಿತೆಂದು ತಿಳಿಯಬೇಕು.

ಪಂಚರ್ಚಸೂಕ್ತಸ್ಯ ಸಿಂಹಾವಲೋಕನವ್

ಅಥ ಪಂಚರ್ಚಸೂಕ್ತಸ್ಯ ಕುರ್ವೇ ಸಿಂಹಾವಲೋಕನವ್ ।

೧ ಋಕ್, ಪೂರ್ವಾರ್ಧವ್

ಆದ್ಯೇ ತಾವತ್ತು ಪೂರ್ವಾರ್ಧೇ ವಾಯೋರೇವ ಪ್ರಸಕ್ತಿತಃ ॥ ೧೯೬ ॥
ವಾಯುಶಬ್ದಸ್ಯ ಬಹುಧಾ ವ್ಯುತ್ಪತ್ತಿಂ ವ್ಯಂಜಯನ್ನಿವ ।
ಮಹಿಮಾ ಮೂಲರೂಪಸ್ಯ ಜನಿರ್ವಿಷ್ಣೋರಧೀನತಾ ॥ ೧೯೭ ॥
ತದಾಜ್ಞಯಾ ಚ ಸೇವಾರ್ಥಂ ತಾದೃಶಾನಾಂ ಯುಗತ್ರಯೇ ।
ತ್ರಯಾಣಾಂ ಚೈವ ರೂಪಾಣಾಂ ಧಾರಣಂ ಚೋಚ್ಯತೆ ಕ್ರಮಾತ್ ॥೧೯೮॥

ಉತ್ತರಾರ್ಧವ್

ಉತ್ತರಾರ್ಧೇಽಥ ತಸ್ಯೈವ ಪ್ರಥಮಂ ವಪುರುಚ್ಯತೇ ।
ಹನುಮಾನ್ ಮತಿರುದ್ದಿಷ್ಟ—ಸ್ತೇನ ಸೇವಾ ಯಥಾ ಕೃತಾ ॥ ೧೯೯ ॥

ಸೂಕ್ತದ ಸಿಂಹಾವಲೋಕನ

(೧೯೫) ಈ ಪ್ರಕಾರ ಬಿಡಿಬಿಡಿ ಋಕ್ಕುಗಳ ಅನ್ವಯ-ಅರ್ಥಗಳನ್ನು ವಿವರಿಸಿ ಈ ಸೂಕ್ತದಲ್ಲಿ ಏನು ಪ್ರಮೇಯ ನಿರೂಪಿತವಾಗಿದೆ (ಅಡಗಿದೆ) ಎಂಬುದನ್ನು ಗ್ರಹಿಸಲು ಅನುಕೂಲವಾಗುವಂತೆ ಐದೂ ಮಂತ್ರಗಳಲ್ಲಿ ಹೇಳಿದ ಪ್ರಮೇಯಗಳ ಸಿಂಹಾವಲೋಕನ ಮಾಡಿಸುತ್ತೇವೆ. (೧೯೫ಉ–೯೮) ಮೊದಲನೇ ಋಕ್ಕಿನ ಪೂರ್ವಾರ್ಧದಲ್ಲಿ ವಾಯುದೇವರ ಪ್ರಸಕ್ತಿಯನ್ನು ಎತ್ತಿಕೊಂಡು ವಾಯುಶಬ್ದಕ್ಕೆ ನಾನಾರೀತಿಯಿಂದ ವ್ಯುತ್ಪತ್ತಿಯನ್ನು ಸೂಚಿ-ಸುತ್ತ-ಸೂಚಿಸುತ್ತಲೇ ವಾಯುದೇವರ ಅಪಾರ ಮಹಿಮೆಯನ್ನು ವರ್ಣಿಸಿ ಅವರು ವಿಷ್ಣುವಿನಿಂದ ಹುಟ್ಟಿದರೆಂಬುದನ್ನು ಹೇಳಿ, ಆದರಿಂದ ವಿಷ್ಣ್ವಧೀನ-ರೆಂಬುದನ್ನೂ ವಿಷ್ಣುವಿನ ಆಜ್ಞಾಧಾರಕರೆಂಬುದನ್ನೂ ಸೂಚಿಸಿ, ಹರ್ಯಾಜ್ಞೆ-ಯಿಂದಲೇ ಹರಿಯ ಸೇವಾರ್ಥವಾಗಿಯೇ ತ್ರೇತಾದಿ ಮೂರು ಯುಗಗಳಲ್ಲಿ ಮೂರು ಅವತಾರ ಮಾಡಿದರೆಂದು ಪೀಠಿಕೆಯಾಗಿ ಹೇಳಿತು. (೧೯೯–೨೦೧) ಒಂದನೇ ಋಕ್ಕಿನ ಉತ್ತರಾರ್ಧದಲ್ಲಿ ಆ ವಾಯುದೇವರ ಪ್ರಥಮಾವತಾರದ ಸೇವೆಯನ್ನು ವರ್ಣಿಸಿದೆ. ಪ್ರಥಮಾವತಾರನಾದ ಹನುಮಂತ ಪರಿಶುದ್ಧ

ಉಪಹ್ವರಣಂ ಚ ರಾಮಸ್ಯ ಋತಾಖ್ಯಸ್ಯ ಮಹಾತ್ಮನಃ ।
ಧೇನಾನಯನಮಸ್ಯೈವ ಸೀತಾಂ ಪ್ರತಿ ತಥಾ ಪುನಃ ॥ ೨೦೦ ॥

ದೇವಷರ್ಯಾದಿಸ್ವಭಕ್ತೇಷು ಮೂಲರಾಮಾಯಣಾದಿಗಾಃ ।
ಅಮೃತಸ್ರಾವಿಣೋ ವಾಚೋ ಽಪ್ಯಾನಯಂತ ತಥಾಽಮುನಾ ॥
ತದೇತದಖಿಲಮಾಹಾತ್ಮ್ಯ—ಮರ್ಧರ್ಚೇನೈವ ಕೀರ್ತಿತಮ್ ॥ ೨೦೧ ॥

೨ ಋಕ್, ಪೂರ್ವಾರ್ಧೇ ಭೀಮಾವತಾರವರ್ಣನಮ್

ದ್ವಿತೀಯಾಯಾಂ ತು ಪೂರ್ವಾರ್ಧೇ ಭೀಮರೂಪಂ ನಿರೂಪ್ಯತೇ ।
ಏವಂ ಪ್ರಸ್ತಾಪಮಾರಭ್ಯ ಮುಖ್ಯಸೇವೇ ಪ್ರಸಜ್ಯತಿ ॥ ೨೦೨ ॥

ಬಲಿಷ್ಠದುಷ್ಟದೈತ್ಯಾನಾಂ ಪೃತನಾನಾಂ ಕ್ಷಯಾತ್ಮಿಕಾ ।
ಪೃಕ್ಷಶಬ್ದೋದಿತಾ ಸೇವಾ ಪ್ರಧಾನಾ ಪ್ರಥಮಮುಚ್ಯತೇ ॥ ೨೦೩ ॥

ಜ್ಞಾನಸ್ವರೂಪನೆಂದು ಸೂಚಿಸುವುದಕ್ಕೆ ಅವನ ಹೆಸರನ್ನು ನೇರವಾಗಿ ಹೇಳದೆ ಪರೋಕ್ಷವಾಗಿ 'ಮತಿಃ' ಎಂದು ಹೇಳಿತು. ಅವನು 'ಋತ'ನೆಂಬ ಶ್ರೀರಾಮನ ಸೇವೆಯನ್ನು ಹೇಗೆ ಎರಡು ಪ್ರಕಾರ ಮಾಡಿದನೆಂಬುದನ್ನು ಸಂಗ್ರಹವಾಗಿ ಹೇಳಿತು. (ಎ) ಸಮೀಪದಲ್ಲಿದ್ದು ವಿನೀತನಾಗಿ ಧ್ಯಾನಾಸಕ್ತನಾಗಿದ್ದಾನೆಂಬುದನ್ನು 'ಉಪಹ್ವರತೇ' ಎಂದೂ, (ಬಿ) ದೂರದಲ್ಲಿ ರಾಮನ ಅಮೃತಮಯವಾದ ಸಂದೇಶವನ್ನು ಸೀತೆಗೂ, ಆಕೆಯ ಮಾತನ್ನು ರಾಮನಿಗೂ ಒಯ್ದುದ್ದಲ್ಲದೆ ಮೋಕ್ಷಪ್ರದವಾದ ಮೂಲರಾಮಾಯಣಾದಿ ವಾಕ್ಯಗಳನ್ನು ದೇವಗಂಧರ್ವಾದಿಗಣಗಳಿಗೆ ಉಪದೇಶಮಾಡಿ ರಾಮಕಾರ್ಯವನ್ನು ಸಾಧಿಸಿದ ವಿಚಾರವನ್ನು 'ಧೇನಾ ಅನಯಂತ ಸಸ್ರುತಃ' ಎಂದೂ ವರ್ಣಿಸಿತು. ಇಷ್ಟು ವಿಚಾರವನ್ನೂ ಕೇವಲ ಅರ್ಧ ಋಕ್ಕಿನಲ್ಲೇ ಹೇಳಿ ಮುಗಿಸಿತು.

(೨೦೨-೩) ಎರಡನೇ ಋಕ್ಕಿನಲ್ಲಿ ಪೂರ್ವಾರ್ಧದಲ್ಲಿ ಭೀಮರೂಪದ ವರ್ಣನೆಮಾಡಲಾಗಿದೆ. ಹೀಗೆ ಭೀಮಾವತಾರದ ಪ್ರಸ್ತಾಪ ಆರಂಭಿಸಿ ಆ ಅವತಾರದ ಎರಡು ಮುಖ್ಯಸೇವೆಗಳನ್ನೇ ವರ್ಣಿಸುತ ದೆ. ಆ ಸೇವೆಗಳ ಪೈಕಿ ಬಲಿಷ್ಠರಾದ ದೈತ್ಯರ ಸಂಹಾರರೂಪವಾದ ಸೇವೆಯೇ ಮುಖ್ಯವಾದ್ದರಿಂದ ಅದನ್ನೇ ಮೊದಲಿಗೇ 'ಪೃಕ್ಷಃ' ಎಂದು ಆರಂಭಿಸುತ್ತದೆ.

ಪಿತುಮಾನನ್ನಭೋಕ್ತೃತ್ವಂ ತಸ್ಮಾನ್ನಾನ್ಯಸ್ಯ ಯುಜ್ಯತೇ ।
ಅಥಾಪಿ ಗೌಣಗುಣ್ಯತ್ವಾತ್ ಪಶ್ಚಾದೇವ ಪ್ರಕೀರ್ತಿತಮ್ ॥ ೨೦೪ ॥
ನಿತ್ಯಃ ಸ್ವಚ್ಛಂದಮೃತ್ಯುಃ ಸ ನಿತ್ಯಂ ವಿಷ್ಣುಪರೋಽಥವಾ ॥ ೨೦೫ ॥

ಇತಿ ವೈಶಿಷ್ಟ್ಯಮುಕ್ತ್ವಾಽಸ್ಯ ನಾಮ ವಕ್ತಿ ಪರೋಕ್ಷತಃ ।
ಭೃತಾ ಮಾ ಯೇನ ಯಸ್ಮಿನ್ವಾ ಇತಿ ಭೀಮಃ ಸ ಉಚ್ಯತೇ ॥ ೨೦೬ ॥

ಸೂಚಯ(ದರ್ಶಯ)ನ್ನಿತಿ ನಾಮಾರ್ಥಂ ವಿವೃಣೋತಿ ತಮೇವ ಚ ।
ಋಗಾದ್ಯಾ ಸಪ್ತವಿದ್ಯಾಶ್ಚ ಪ್ರಮಾಣಾ ಮಾತರೋ ಮತಾಃ ॥ ೨೦೭ ॥

ಶಿವಾಸು ತಾಸು ಶೇತೇಯಂ ತದ್ವಿಚಾರರತಃ ಸದಾ ।
ಏವಮೇವ ರತೋ ನಿತ್ಯಂ ಮೂಲರೂಪೇ ತಥಾಽನ್ಯಯೋಃ ॥ ೨೦೮ ॥

ಇತಿ ಚಾವೃತ್ತಿಯೋಗೇನ ಸೂಚಿತಂ ವಿಷಯಾಂತರಮ್ ।
ಅರ್ಥಮಂತ್ರೇಣ ಚೈವೇತ್ಥಂ ಭೀಮರೂಪಂ ನಿರೂಪಿತಮ್ ॥ ೨೦೯ ॥

(೨೦೪-೦೫) ಪಿತುಮಾನ್ ಎಂದರೆ ಬಹಳ ಅನ್ನವನ್ನು ತಿನ್ನುವವ-ನೆಂದು ಅರ್ಥ. ಈ ಗುಣ ಭೀಮನಲ್ಲಿ ಬಿಟ್ಟರೆ ಬೇರೆ ಯಾರಲ್ಲೂ ಕಾಣುವುದಿಲ್ಲ, ಹೀಗೆ ಬಂಡಿಗಟ್ಲೆ ಅನ್ನ ತಿಂದು ಜೀರ್ಣಿಸಿಕೊಳ್ಳುವುದು ಭೀಮನ ವಿಶೇಷ-ಗುಣವೇ ಆದರೂ ಆ ಗುಣ ಗೌಣ(ಅಮುಖ್ಯ)ವಾದ್ದರಿಂದ ಶ್ರುತಿಯು ಈ ಗುಣವನ್ನು ಆಮೇಲೆ ಹೇಳಿತು. ನಿತ್ಯಃ ಎಂದರೆ ಸ್ವಚ್ಛಂದಮೃತ್ಯುವುಳ್ಳವ-ನೆಂದೂ ನಿತ್ಯವಾಗಿ ಕೇವಲ ವಿಷ್ಣುವನ್ನೇ ನಂಬಿದವನು (ಅಥವಾ ಆಶ್ರಯಿಸಿ-ದವನು) ಎಂದೂ ಅರ್ಥವಾಗುತ್ತದೆ.

(೨೦೬-೦೯) ಹೀಗೆ ಭೀಮನ ವೈಶಿಷ್ಟ್ಯವನ್ನು ಹೇಳಿ ಅವನ ಹೆಸರನ್ನು ಪರೋಕ್ಷವಾಗಿ ಹೇಳುತ್ತದೆ. ಭೀಮ ಎಂದರೆ ಭೃತಾಃ ಮಾಃ ಯೇನ ಯಸ್ಮಿನ್ವಾ ಎಂಬ ವ್ಯುತ್ಪತ್ತಿಯಿಂದ ಸಪ್ತವಿದ್ಯೆಗಳಲ್ಲಿ ನಿರತನಾದವನು ಎಂದರ್ಥ. ಈ ಅರ್ಥವನ್ನೇ ಸೂಚಿಸುತ್ತಾ ಶ್ರುತಿಯು 'ಆ ಶಯೇ ಸಪ್ತ-ಶಿವಾಸು ಮಾತೃಷು' ಎಂದು ಪ್ರಕಾರಾಂತರದಿಂದ ಹೇಳಿತು. ಋಗಾದಿ-ಸಪ್ತವಿದ್ಯೆಗಳು, ಪ್ರಮಾಣಗಳಾದ್ದರಿಂದ ಅವಕ್ಕೆ ಮಾತೃಗಳೆಂದು ಹೆಸರು. ಮಂಗಳಕರಗಳೂ ಮೋಕ್ಷಪ್ರದಗಳೂ ಆದ ಆ ವಿದ್ಯೆಗಳಲ್ಲಿ ಇವನು ಮಲಗಿರು-

ಋಕ್ ೩ ಉತ್ತರಾರ್ಧವು ಮಧ್ವಾವತಾರಪ್ರಸಕ್ತಿಃ

ತೃತೀಯಮಂತಿಮಂ ರೂಪಂ ತಸ್ಯ ವಾಯೋಃ ಕಲಾವಭೂತ್ ।
ಮಧ್ವಾಖ್ಯಂ ಕೇವಲಂ ಜ್ಞಾನ—ಪ್ರಚಾರಾರ್ಥಂ ಯತಸ್ತತಃ ॥ ೨೧೦ ॥
ಆದರಾಚ್ಛ್ರದ್ಧಯಾ ಚಾಪಿ ಶ್ರುತಿರೇನತ್ ಸವಿಸ್ತರಮ್ ।
ಸಾರ್ಧತ್ರಯೇಣ ಶಿಷ್ಟೇನ ಪ್ರಶಶಂಸ ಪುನಃಪುನಃ ॥ ೨೧೧ ॥

ಉತ್ತರಾರ್ಧಸ್ಯ ಭಾವಾರ್ಥಃ

ದೇವಶ್ರೇಷ್ಠಸ್ಯ ವಾಯೋಸ್ತು ರೂಪಂ ಯದ್ವೈ ತೃತೀಯಕಮ್ ।
ಪೂರ್ಣಪ್ರಜ್ಞಾಭಿಧಂ ತತ್ತು ಸರ್ವಜ್ಞಂ ದೋಷವರ್ಜಿತಮ್ ॥ ೨೧೨ ॥

ತ್ತಾನೆ ಅರ್ಥಾತ್ ಅವುಗಳ ವಿಚಾರದಲ್ಲೇ ನಿರತನಾಗಿರುತ್ತಾನೆ ಎಂದು ಹೇಳಿತು. ಈ ರೀತಿ ಭೀಮರೂಪ ಮಾತ್ರವಲ್ಲ, ಪ್ರತಿಯಾಗಿ ಮೂಲರೂಪವೂ ಹನುಮದ್ರೂಪವೂ ಮಧ್ವರೂಪವೂ ಈ ಸಪ್ತವಿದ್ಯೆಗಳಲ್ಲಿ ನಿರತವಾಗಿರುತ್ತವೆ ಯೆಂಬುದನ್ನು ಯಚ್ಛಬ್ದದ ಆವೃತ್ತಿಯ ಯೋಗದಿಂದ ಶ್ರುತಿಯು ಹೇಳಿತು. ಈ ಪ್ರಕಾರ ಭೀಮಾವತಾರದ ಮಹಿಮೆಯೂ ಅರ್ಧಮಂತ್ರದಲ್ಲೇ ನಿರೂಪಿತ ವಾಯಿತು.

(೨೧೦-೧೧) ಈಗ ಮಧ್ವಾವತಾರವನ್ನು ನಿರೂಪಣೆ ಮಾಡುತ್ತದೆ. ಆ ವಾಯುದೇವರ ಮೂರನೇ ರೂಪವು ಕಲಿಯುಗದಲ್ಲಿ ಅವತಾರಮಾಡಿತು. ಈ ಮಧ್ವಾಚಾರ್ಯರೆಂಬ ಈ ಮೂರನೇ ರೂಪವನ್ನು ಕೇವಲ ಜ್ಞಾನ-ಪ್ರಚಾರಕ್ಕಾಗಿ ಎತ್ತಿದ್ದರಿಂದ ಆದರದಿಂದಲೂ ಶ್ರದ್ಧೆಯಿಂದಲೂ ಶ್ರುತಿಯು ಈ ಅವತಾರವನ್ನು ಉಳಿದ ಮೂರೂವರೆ ಮಂತ್ರಗಳಿಂದ ವಿಸ್ತಾರವಾಗಿ ವರ್ಣಿಸುತ್ತದೆ. (ಇದು ಯುಕ್ತಿಮಲ್ಲಿಕಾದಲ್ಲಿ ಹೇಳಿದ ವಿಚಾರ. ನಮ್ಮ ವಿವರಣೆಯಲ್ಲಿ ಹಿಂದೆಲ್ಲೂ ಬಂದಿಲ್ಲ.)

(೨೧೨-೧೩) ಉತ್ತರಾರ್ಧದಲ್ಲಿ—ದೇವಶ್ರೇಷ್ಠರಾದ (ವೃಷಭಸ್ಯ) ವಾಯುದೇವರ ಮೂರನೇ ರೂಪವು ದಶಪ್ರಮತಿ ಅಥವಾ ಪೂರ್ಣಪ್ರಜ್ಞ ಎಂಬ ಹೆಸರುಳ್ಳದ್ದು. ಈ ರೂಪವನ್ನು ಜ್ಞಾನಪ್ರಚಾರಮಾಡುವುದಕ್ಕಾಗಿ ವೇದಾಭಿಮಾನಿಗಳಾದ ಶ್ರೀಭೂದುರ್ಗಾದೇವಿಯರು ಗೋಪ್ಯವಾಗಿಯೂ

ಪೂರ್ಣಪ್ರಜ್ಞಂ ತಮೇನಂ ತು ಜ್ಞಾನದೋಹಾಯ ಕೇವಲಮ್ ।
ದೇವ್ಯಃ ಶ್ರೀಭೂಮಿದುರ್ಗಾಖ್ಯಾ ಮಧ್ಯಗೇಹಸತೀ ತಥಾ ।
ವಿನೈವ ಗರ್ಭವಾಸೇನ ಜನಯಾಮಾಸುರಾದರಾತ್ ॥ ೨-೩ ॥

ತೃತೀಯಾ ಋಕ್ ಪೂರ್ವಾರ್ಧಮ್

ಜ್ಞಾನದೋಹಸ್ಯ ತಸ್ಯೈವ ಪ್ರಕಾರೋ ವರ್ಣ್ಯತೇ ಽಧುನಾ ॥ ೨೧೪ ॥

ಬುಧ್ನ್ಯಾತ್ ವರ್ಪಸಃ

ತಸ್ಮಾದ್ಧಿ ಜ್ಞಾನರೂಪಾಚ್ಚ ಭಕ್ತಾನುಗ್ರಹಕಾರಿಣಃ ।
ಜ್ಞಾನಿನಾಂ ಸನ್ಮಾರ್ಗನೇತುಶ್ಚ ಮೂಲಾಧಾರ ಇವ ಸ್ಥಿತಾತ್ ॥ ೨೧೫ ॥
ವರಣೀಯಾದ್ ರಕ್ಷಕಾಚ್ಚೈವ ಬುಧ್ನ್ಯಾಖ್ಯಾದ್ವರ್ಪಸಸ್ತಥಾ ।
ಜ್ಞಾನದೋಹೋಯಮುದ್ಭೂತ—ಸ್ತತ್ಪ್ರಭಾವೇನ ಕೇವಲಮ್ ॥ ೨-೬ ॥
ರುದ್ರಾದ್ಯಾ ವಿಬುಧಾಃ ಸರ್ವೇ ಮುನಯೋ ಮಾನವಾಸ್ತಥಾ ।
ಸೂರಯೋ ಜ್ಞಾನಿನೋಽಭೂವನ್ ಶವಸಾ ಸಂಶಯೋಜ್ಝಿತಾಃ ॥ ೨೧೭ ॥
ತದೋಹಾದೇವ ತೇ ವಿಷ್ಣೋ—ರ್ಮಹಿಮ್ನಸ್ಯ ಪರಾತ್ಮನಃ ।
ಮೇನಿರೇ ಚ ಯಥಾಶಕ್ತಿ ವ್ಯಾಖ್ಯಾನಮಿತಾನ್ ಗುಣಾನ್ ॥ ೨೧೮ ॥

ಮಧ್ಯಗೇಹರ ಪತ್ನಿಯೂ ಜಗತ್ತಿಗೆ ಕಾಣುವಂತೆಯೂ ಗರ್ಭವಾಸಾದಿ ಯಾವ ದೋಷವೂ ಇಲ್ಲದಂತೆ ಆದರಪೂರ್ವಕವಾಗಿ ಜನಿಸಿದರು—ಎಂದು ಹೇಳಿದೆ.

ಮೂರನೇ ಋಕ್—(೨೧೪) ಮೂರನೇ ಋಕ್ಕಿನಲ್ಲಿ ಆ ತೃತೀಯ-ರೂಪವು ಮಾಡಿದ ಜ್ಞಾನಪ್ರಚಾರವನ್ನೇ ವರ್ಣಿಸಲಾಗಿದೆ. (೨೧೫-೧೮) ಪೂರ್ವಾರ್ಧದಲ್ಲಿ ಹೇಳಿದ ಪ್ರಮೇಯ—(ಬುಧ್ನಶಬ್ದಾರ್ಥ) ಜ್ಞಾನಸ್ವರೂಪರೂ ಭಕ್ತಾನುಗ್ರಹಕಾರಿಗಳೂ ಜ್ಞಾನಿಗಳನ್ನು ಸನ್ಮಾರ್ಗದಲ್ಲಿ ಒಯ್ಯುವವರೂ ವೈಷ್ಣವರಿಗೆ ಮೂಲಾಧಾರವೂ ಆಗಿರುವ (ವರ್ಪಸಃ ಎಂಬುದರ ಅರ್ಥ) ಶರಣ್ಯರೂ ರಕ್ಷಕರೂ ಆಶ್ರಿತಜನೋದ್ಧಾರಕರೂ ಆದ ಆ ಪೂರ್ಣಪ್ರಜ್ಞರು ಮಾಡಿದ ಜ್ಞಾನಪ್ರಚಾರದ ಪ್ರಭಾವದಿಂದಲೇ (ಯದೀಂ) ರುದ್ರಾದಿ ಸಕಲ ದೇವತೆಗಳೂ (ಈಶಾನಾಸಃ) ಋಷಿ-ಗಂಧರ್ವ-ಮನುಷ್ಯೋತ್ತಮಾದಿ ಸಕಲ

ತೃತೀಯಸ್ಯ ಉತ್ತರಾರ್ಧಸ್ಯ ಭಾವಾರ್ಥಃ

ಉತ್ತರಾರ್ಧೇತು ತದ್ದೋಹ—ರೂಪಮೇವ ಪ್ರಕಟ್ಯತೇ ॥
ಯೋ ವೈ ಪೂರ್ಣಬೋಧಾಖ್ಯಃ ಪೂರ್ವಮಂತ್ರೇ ಪ್ರಕೀರ್ತಿತಃ॥ ೨೧೯ ॥
ಸ ಏವ ಮಧ್ವನಾಮಾಪಿ ವಾಯೋರ್ವೈ ವಪುರಿಷ್ಯತೇ ।
ಸ ಏವಾನಂದತೀರ್ಥಶ್ಚ ಸುಖಶಾಸ್ತ್ರ(ಪ್ರಣೇತೃ)ಪ್ರವಕ್ತೃ ತಃ ॥ ೨೨೦ ॥
ಸೋಽಯಂ ಪ್ರದಿವ ಇತ್ಯುಕ್ತಃ ಪ್ರಕೃಷ್ಟಜ್ಞಾನಭಾಸುರಃ ॥
ಯತೋಽಸೌ ಗೂಹಿತಂ ವಿಷ್ಣು—ಮಾಚ್ಛನ್ನಂ ನಿರ್ಗುಣೋಕ್ತಿಭಿಃ॥೨೨೧॥
ಮಥಿತ್ವಾ ಸರ್ವಶಾಸ್ತ್ರಾಣಿ ಪುರಸ್ಕೃತ್ಯ ಚ ತದ್ಗಿರಃ ।
ಸರ್ವಜ್ಞಾನಪಿ ರುದ್ರಾದೀನ್ ಗ್ರಾಹಯಿತ್ವಾ ಸುಬೋಧನಾತ್ ॥೨೨೨॥

ಜ್ಞಾನಿಗಳೂ (ಸೂರಯಃ) ಉಪದೇಶ ಪಡೆದು ಸುಖವಾಗಿ(ಶವಸಾ) ಸಂದೇಹ-ರಹಿತರಾಗಿ ಜ್ಞಾನಿಗಳಾದರು. ಮತ್ತು ಆ ಪೂರ್ಣಪ್ರಜ್ಞರ ಜ್ಞಾನದೋಹದ ಮಹಿಮೆಯಿಂದಲೇ ಸರ್ವೋತ್ತಮನಾದ (ಮಹಿಷಸ್ಯ) ಆ ಶ್ರೀಹರಿಯ ವರ್ಷಾಖ್ಯ ಅನಂತ ಸದ್ಗುಣಗಳನ್ನು ತಮ್ಮ ತಮ್ಮ ಶಕ್ತಿ ಇದ್ದಷ್ಟು ಅರಿತು-ಕೊಂಡರು.

(೨೧೯–೨೦) ಉತ್ತರಾರ್ಧದಲ್ಲಿ ಆ ಜ್ಞಾನದೋಹ ಸ್ವರೂಪವನ್ನೇ ವರ್ಣಿಸಿದೆ. ಎರಡನೇ ಮಂತ್ರದ ಉತ್ತರಾರ್ಧದಲ್ಲಿ ಪ್ರಸಕ್ತರಾದ ಪೂರ್ಣ-ಪ್ರಜ್ಞರೇ ಈ ಮಂತ್ರದಲ್ಲಿ ಅವರ ನಾಮಾಂತರವಾದ ಮಧ್ವ ಎಂಬ ಹೆಸರಿ-ನಿಂದ ಕರೆಯಲ್ಪಟ್ಟಿದ್ದಾರಲ್ಲದೆ ಅವರು ವಾಯುದೇವರ ಅವತಾರವೇ ಹೌದು ಎಂಬುದನ್ನು ಮಾತರಿಶ್ವಾ ಶಬ್ದದಿಂದ ಶ್ರುತಿಯು ಸ್ಪಷ್ಟಪಡಿಸಿತು. ಮಧ್ವ ಎಂಬುದರ ವಿವರಣೆಯೇ ಆನಂದತೀರ್ಥ ಎಂಬುದು ; ಅವರು ಆನಂದಪ್ರದ-ವಾದ ಶಾಸ್ತ್ರವನ್ನು ರಚಿಸಿದ್ದರಿಂದ ಅವರಿಗೆ ಮಧ್ವ ಆನಂದತೀರ್ಥ ಎಂಬ ಎರಡು ಹೆಸರುಗಳೂ ಅನ್ವಯಿಸುತ್ತವೆ.

(೨೨೧–೨೪) ಈ ಮಧ್ವಾಚಾರ್ಯರು ಪ್ರಕೃಷ್ಟಜ್ಞಾನಸ್ವರೂಪರಾದ್ದ-ರಿಂದ ಇವರನ್ನು ಶ್ರುತಿಯು ಪ್ರದಿವಃ ಎಂದಿತು. ಇಂಥಾ ಇವರು—ದುರ್ಮತಗಳು ನಿರ್ಗುಣ–ನಿರಾಕಾರ ಮುಂತಾಗಿ ಪ್ರಚಾರಮಾಡಿ ಸಾಧನೆ-ಮಾಡಿದ್ದರಿಂದ ಮರೆಯಾಗಿಹೋಗಿದ್ದ ಶ್ರೀಹರಿಯನ್ನು—ಸಕಲಶಾಸ್ತ್ರಾರ್ಥ-

ವಿಷ್ಣುಂ ಸರ್ವೋತ್ತಮಂ ದೇವಂ ಸ್ಥಾಪಯಾಮಾಸ ತತ್ವತಃ ।
ತತಸ್ತೇ ಜ್ಞಾನಿನೋ ಭೂತ್ವಾ ಽಜಾನನ್ ವಿಷ್ಣುಂ ಪರಾತ್ಪರಮ್ ॥೨೨೩॥
ಉಭಯೋರರ್ಥಯೋರ್ಜ್ಞೇಯಾ ಮಿಥಃಸಂಬಂಧಕಲ್ಪನಾ ।
ಈದೃಶಜ್ಞಾನದೋಹಾರ್ಥ—ಮೇವ ತಾ ಜನಯಂತ ತಮ್ ।
ಇತ್ಯನ್ವಯೋಪಿ ಬೋದ್ಧವ್ಯ ಪೂರ್ವಮಂತ್ರೇಣ ವೈ ಪುನಃ ॥ ೨೨೪ ॥

ಚತುರ್ಥೀ ಋಕ್ ಪೂರ್ವಾರ್ಧಮ್

ಚತುರ್ಥೇ ಜ್ಞಾನದೋಹಸ್ಯಃ ವೈಶಿಷ್ಟ್ಯಂ ಕಿಂಚಿದುಚ್ಯತೇ ॥ ೨೨೫ ॥

ಪ್ರಥಮಚರಣಸ್ಯಾರ್ಥಃ (ಪ್ರಯತ್ಪಿತುಃ ಪರಮಾನ್ನೀಯತೇ ಪರ್ಯಾ)

ರೂಪತ್ರಯೇಽಪಿ ಯದ್ವಾಯುಃ ಪರಮಾದ್ಧಿ ಪಿತುರ್ಹರೇಃ ।
ಕನೀಯಾತ್ ಪ್ರೇರ್ಯತೇ ಚೈವ ತದಾಜ್ಞಾಮನುವರ್ತತೇ ॥ ೨೨೬ ॥

ವನ್ನೂ ಮಥನಮಾಡಿ ವೇದಾದಿವಾಕ್ಯಗಳನ್ನೇ ಆಧರಿಸಿಕೊಂಡು ವಿಷ್ಣುವೇ ಸರ್ವೋತ್ತಮನೆಂದೂ ಸರ್ವಸ್ವಾಮಿಯೆಂದೂ ನಿರ್ಣಯ ಮಾಡಿತೋರಿಸಿದ್ದರಿಂದಲೂ ಆ ವಿಚಾರಗಳನ್ನು ಸ್ವತಃ ಸರ್ವಜ್ಞರೂ ಪ್ರಕೃಷ್ಟ ಬುದ್ಧಿಪ್ರಕಾಶವುಳ್ಳವರೂ (ಪ್ರದಿವಃ-ದ್ವಿ. ಬಹು) ಆದ ರುದ್ರಾದಿ ದೇವತೆಗಳಿಗೂ ಋಷಿಗಂಧರ್ವ ಮನುಷ್ಯೋತ್ತಮರಿಗೂ (ಸೂರಯಃ) ಬೋಧಿಸಿ ತಿಳಿಸಿಕೊಟ್ಟದ್ದರಿಂದಲೂ ಅವರೆಲ್ಲರೂ ವಿಷ್ಣುಸರ್ವೋತ್ತಮತ್ವ ವಿಚಾರವನ್ನು ನಿಸ್ಸಂದಿಗ್ಧವಾಗಿ ತಿಳಿದುಕೊಂಡರು. ಇಂಥಾ ಜ್ಞಾನದೋಹಕ್ಕಾಗಿಯೇ ಶ್ರೀಭೂದುರ್ಗಾದಿಗಳು ವಾಯುವಿನ ತೃತೀಯರೂಪವನ್ನು ಪ್ರಸವಿಸಿದರೆಂದು ಎರಡನೇ ಮಂತ್ರದೊಡನೆ ಅನ್ವಯ ಮಾಡಿಕೊಳ್ಳಬೇಕು. ಆದರಿಂದ ಏಕವಾಕ್ಯತಾ ಸಿದ್ಧವಾಗುತ್ತದೆ.

ನಾಲ್ಕನೇ ಋಕ್ (ಪೂರ್ವಾರ್ಧ) (೨೨೫) ನಾಲ್ಕನೇ ಮಂತ್ರದಲ್ಲಿ ಮಧ್ವರ ಜ್ಞಾನದೋಹದ ಕೆಲವು ವೈಶಿಷ್ಟ್ಯಗಳನ್ನು ತೋರಿಸುತ್ತದೆ.

(೨೨೬-೭) ಮೂರು ರೂಪಗಳಲ್ಲಿ ಅವತರಿಸುವಾಗಲೂ ಆ ವಾಯುದೇವರು ತಮ್ಮ ತಂದೆಯಾದ ಭಗವಂತನ ಪ್ರೇರಣೆಯಿಂದಲೇ ಅವತರಿಸಿ-

ತಥಾ ಮಧ್ವೋಽಪಿ ಸರ್ವತ್ರ ಪರಮಜ್ಞಾನರೂಪತಃ ।
ವ್ಯಾಸಾದ್ಭಗವತಃ ಸಾಕ್ಷಾತ್ ಪ್ರೇರ್ಯತೇ ಚ ಪದೇ ಪದೇ ।
ಜನನೇ ಭಾಷ್ಯರಚನೇ ತಥಾ ದುರ್ವಾದಿಭಂಜನೇ ॥ ೨೨೭ ॥

ದ್ವಿತೀಯಚರಣಾರ್ಥಃ (ಪೃಕ್ಷುಧೋ ವೀರುಧೋ ದಂಸು ರೋಹತಿ)

ಅತ ಏವ ಹಿ ಮಧ್ವೋಽಯಂ ವೀರುಧೋ ವೃಷಭೋ ಯಥಾ ।
ಚರ್ವಯಿತ್ವಾ ಸ್ವದಂತೇಷು ನಿಸ್ಸಾರಂ ಪರಿವರ್ತಯೇತ್ ॥ ೨೨೮ ॥
ಪೂರ್ವಪಕ್ಷಾಂಸ್ತಥೈವಾಽಯಂ ಪ್ರತಿಪಕ್ಷಿಪ್ರಯೋಜಿತಾನ್ ।
ನಿರಾಯಾಸಂ ನಿರಾಕೃತ್ಯ ಸರ್ವತ್ರಾಪಿ ವಿಜೃಂಭತೇ ॥ ೨೨೯ ॥

ದ್ದಾರೋ ಆದಕಾರಣ ಆ ಭಗವಂತನಿಗೆ ಒಳಪಟ್ಟು ಪ್ರತಿಯೊಂದು ವಿಷಯ-ವನ್ನೂ ಅವನ ಪ್ರೇರಣೆಯಿಂದಲೇ ಮಾಡುತ್ತಾರೆ, ಅವನ ಆಜ್ಞೆಗೆ ಬದ್ಧ-ರಾಗಿದ್ದಾರೆ. ಇನ್ನು ಶ್ರೀಮಧ್ವಾಚಾರ್ಯರು ಸರ್ವಜ್ಞಮೂರ್ತಿಯಾದ (ಪರಮಾತ್) ವೇದವ್ಯಾಸರ ಆಜ್ಞಾನುವರ್ತಿಗಳಾಗಿ ಹೆಜ್ಜೆಹೆಜ್ಜೆಗೂ— ಅವತಾರಮಾಡುವ ಬಗ್ಗೆ, ಭಾಷ್ಯಾದಿಗ್ರಂಥ ರಚನೆಯ ಬಗ್ಗೆ ದುರ್ಮತ-ನಿರಾಕರಣೆಯ ಬಗ್ಗೆ ಹೀಗೆ ಪ್ರತಿಯೊಂದು ವಿಷಯದಲ್ಲೂ ಪ್ರೇರಿತರಾಗಿ ಅದರಂತೆಯೇ ನಡೆದುಕೊಳ್ಳುತ್ತಾರೆ ಎಂದು ಪ್ರಥಮ ಚರಣಕ್ಕೆ ಅವತಾರ-ತ್ರಯಪರವಾಗಿಯೂ ಕೇವಲ ಮಧ್ವಪರವಾಗಿಯೂ ಎರಡು ಪ್ರಕಾರ ಅರ್ಥವಾಗುತ್ತದೆ.

(೨೨೮–೦೯) ಮದಿಸಿದ ಗೂಳಿಯು ಹೇಗೆ ತನ್ನ ಹಲ್ಲುಗಳಿಂದ ಹುಲ್ಲು-ಕಡ್ಡಿ ಬಳ್ಳಿ-ಎಲೆಗಳನ್ನು ಅಗಿದು ಅಗಿದು ನಿಸ್ಸಾರ ಮಾಡಿಬಿಡುತ್ತದೋ ಅದೇ ರೀತಿ ಈ ಮಧ್ವಾಚಾರ್ಯರು ಪೂರ್ವಪಕ್ಷೀಯರು ಹೇಳುವ ಪೂರ್ವಪಕ್ಷದ ವಿಚಾರಗಳನ್ನೆಲ್ಲಾ ನಿರಾಯಾಸವಾಗಿ ನಿರಾಕರಣೆ ಮಾಡಿ ತಮ್ಮ ಸಿದ್ಧಾಂತ-ವನ್ನು ಮಂಡಿಸಿ ಎಲ್ಲೆಲ್ಲಿ ಹೋದರೂ ವಿಜೃಂಭಿಸಿ ಜಯಶೀಲರಾಗುತ್ತಾರೆ.

(೪ ಖಂಡ) ಉತ್ತರಾರ್ಧಸ್ಯ ವಿವರಣಮ್

ಉತ್ತರಾರ್ಧೇ ತು ಮಧ್ವಸ್ಯ ಶುಚಿತ್ವಂ ಸ್ಫೋರಯ(ಇ)ನ್ ಶ್ರುತಿಃ ।
ಕನೀಯಸ್ತ್ವಂ ಸ್ವಪಿತ್ರೋಸ್ತು ವಕ್ತಿ ಜ್ಯೇಷ್ಠತ್ವಮನ್ಯಥಾ ॥ ೨೩೦ ॥

(ಉಭಾ ಯದಸ್ಯ....ಘೃಣಾ ಶುಚಿಃ)

ಯತೋಽಸ್ಯ ಜನನಂ ಭೂಮೌ ಲಕ್ಷ್ಮೀನಾರಾಯಣೌ ಸ್ವಯಮ್ ।
ಉಭೌ ಪ್ರೇರಯತಸ್ತಸ್ಮಾತ್ ತಯೋರೇವ ದಯಾನ್ವಿತಃ ॥ ೨೩೧ ॥

ಪರಿಶುದ್ಧಶ್ಚ ಸಂನ್ಯಾಸ—ಧರ್ಮೇ ಚ ಚ್ಯುತಿವರ್ಜಿತಃ।
ಪ್ರತಿಪಕ್ಷದಯಾಲುಶ್ಚ ಹಿಂಸಾಧರ್ಮವಿವರ್ಜಿತಃ ॥ ೨೩೨ ॥

ತಾಭ್ಯಾಂ ದ್ವಾಭ್ಯಾಂ ಚಾತ ಏವ ಯವೀಯಾನ್ ಮಧ್ವ ಈರಿತಃ ।
ಸರ್ವೇಭ್ಯಶ್ಚ ತದನ್ಯೇಭ್ಯೋ ಜ್ಯೇಷ್ಠಃಶ್ರೇಷ್ಠಸ್ತಥೈವ ಚ ॥ ೨೩೩ ॥

(೨೩೦-೩೩) ನಾಲ್ಕನೇ ಮಂತ್ರದ ಉತ್ತರಾರ್ಧದಲ್ಲಿ ಮಧ್ವರ ಪರಿಶುದ್ಧತೆಯನ್ನು ಪ್ರಕಟಿಸುತ್ತಾ ಅವರು ಭಗವಂತನೊಬ್ಬನಿಗೆ ಮಾತ್ರ ಕಿರಿಯರೆಂದೂ ಮಿಕ್ಕ ಜಗತ್ತಿಗೆಲ್ಲಾ ಹಿರಿಯರೆಂಬುದನ್ನೂ ಹೇಳುತ್ತದೆ. (ಉತ್ತರಾರ್ಧದ ಭಾವಾರ್ಥ) ಈ ಮಧ್ವಾಚಾರ್ಯರು ಭೂಮಿಯಲ್ಲಿ ಅವತಾರಮಾಡಬೇಕೆಂಬುದನ್ನು ಅವರ ತಾಯಿತಂದೆಗಳಾದ ಲಕ್ಷ್ಮೀನಾರಾಯಣರೇ ಇಚ್ಛಿಸಿ ಅಪ್ಪಣೆ ಮಾಡಿದ್ದರಿಂದ ಇವರು ಅವರಿಬ್ಬರ ದಯೆಗೂ ಪಾತ್ರರಾಗಿದ್ದಾರಲ್ಲದೆ (ಘೃಣಾ) ಸಂನ್ಯಾಸಧರ್ಮವನ್ನು ಕಿಂಚಿತ್ತೂ ತಪ್ಪದೆ ಕಟ್ಟುನಿಟ್ಟಾಗಿ ನಡೆಸಿಕೊಂಡು ಬಂದು ಪರಿಶುದ್ಧರಾಗಿದ್ದಾರೆ (ಶುಚಿಃ). ಸಂನ್ಯಾಸಧರ್ಮಕ್ಕೆ ಅನುಗುಣವಾಗಿ ಪ್ರತಿಪಕ್ಷಿಗಳನ್ನು ವಾದದಲ್ಲಿ ಪರಾಜಯಗೊಳಿಸುತ್ತಾರೇ ವಿನಾ ಅವರ ಮೇಲೆ ಕಿಂಚಿತ್ತೂ ಕೈಮಾಡುವುದಿಲ್ಲ. ಅವರು ಅಹಿಂಸಾಧರ್ಮಪರರಾಗಿದ್ದಾರೆ (ಘೃಣಾ). ತನ್ನ ತಂದೆ-ತಾಯಿಗಳಾದ ಲಕ್ಷ್ಮೀನಾರಾಯಣರಿಗೆ ಇವರು ಕಿರಿಯರಾಗಿದ್ದರೂ ಮಿಕ್ಕ ರುದ್ರಾದಿಗಳೆಲ್ಲರಿಗಿಂತಲೂ ಹಿರಿಯರೂ ಶ್ರೇಷ್ಠರೂ ಆಗಿದ್ದಾರೆ. (ಈ ವಿಚಾರವನ್ನೇ ಶ್ರೀಮದ್ವ್ಯಾಸರಾಯರು 'ಧೀರನ ನೋಡಿರೈ' ಎಂಬ ಕೀರ್ತನೆಯ ಕೊನೆ-

ಪಂಚಮೀ ಋಕ್ ಪೂರ್ವಾರ್ಧಸ್ಯ ಅವತಾರಿಕಾ

ಜನಯಂತೇತಿ ಪೂರ್ವೋಕ್ತ್ಯಾ ಜಾಯತೇ ಕಿಲ ಸಂಶಯಃ |
ಮಧ್ವೇಽಪ್ಯನ್ಯಭೂದ್ದುಃಖಂ ಗರ್ಭವಾಸಾದಿಸಂಭವಮ್ || ೨೩೪ ||
ನಿವಾರಣಾರ್ಥಮಸ್ಯೈವ ವದನ್ ಶಕ್ತಿಂ ಮಹತ್ತರಾಮ್ |
ರೂಪತ್ರಯೇಽಪಿ ವಾಯೋಸ್ತು ಸರ್ವದೋಷಾನ್ ನಿಷೇಧತಿ || ೨೩೫ ||

ವಾಕ್ಯಾರ್ಥಃ (ಆದಿನಾತ್ಯಾ....ವಿವಾವೃಧೇ)

ಯತಶ್ಚ ವಾಯುರಾದಿತ್ತು ಪೂರ್ವೋಕ್ತಾರ್ಥಿ ಪಿತುರ್ಹರೇಃ || ೨೩೬ ||
ತದಾಜ್ಞಯೈವ ಚಾಮುತ್ರ ಕ್ರಮೇಣೈವ ಯುಗತ್ರಯೇ |
ಮಾತೃಸ್ತ್ರಿಸ್ರಶ್ಚ ಭಿನ್ನಾಶ್ಚ ಪ್ರಾವಿಶತ್ ಸ್ವಯಮೇವ ಹಿ || ೨೩೭ ||

ಯಲ್ಲಿ "ಪೂರ್ಣಾನಂದ ಶ್ರೀಕೃಷ್ಣಗೆ ಕಿರಿಯ ಮಿಕ್ಕ ಜಗಕ್ಕೆ ಹಿರಿಯ" ಎಂದು ಹಾಡಿದ್ದಾರೆ.)

ಐದನೇ ಋಕ್ಕಿಗೆ ಅವತಾರಿಕೆ—(೨೩೪-೫) ಎರಡನೇ ಋಕ್ಕಿನ ಉತ್ತರಾರ್ಧದಲ್ಲಿ ಶ್ರುತಿಯು 'ದೇವಿಯರು ಮೂರನೇ ರೂಪವನ್ನು ಹಡೆದರು' ಎಂದು ಸ್ಪಷ್ಟವಾಗಿ ಹೇಳಿತಷ್ಟೆ. ಇದರಿಂದ ಸಾಮಾನ್ಯರಿಗೆ ಈ ರೀತಿ ಸಂದೇಹ ಬರುವುದು ಸಹಜವಾಗಿದೆ—ಹುಟ್ಟಿದ್ದರಿಂದ ಮಧ್ವಾಚಾರ್ಯರೂ ಮಾತೃ-ಗರ್ಭವಾಸವಮಾಡಿ ಗರ್ಭವಾಸದುಃಖಗಳನ್ನೆಲ್ಲಾ ಅನುಭವಿಸಿರಲೇಬೇಕು—ಎಂದು ಸಂದೇಹ ಬರಬಹುದು. ಆ ಸಂದೇಹ ನಿವಾರಣಾರ್ಥವಾಗಿಯೇ ವಾಯುದೇವರಿಗೆ ಇರುವ ವಿಶೇಷಶಕ್ತಿಯನ್ನು ಉಲ್ಲೇಖಿಸಿ ಅದರ ದೆಸೆಯಿಂದ ಇವರು ಗರ್ಭದಲ್ಲಿ ವಾಸಿಸಲೂ ಇಲ್ಲ, ಗರ್ಭವಾಸದ ದುಃಖವೂ ಇವರಿಗೆ ಇಲ್ಲ — ಈ ಅವತಾರದಲ್ಲಿ ಮಾತ್ರವಲ್ಲ, ಮೂರೂ ಅವತಾರಗಳಲ್ಲೂ ಹೀಗೆಯೇ ಎಂದು ಹೇಳಿ ಆ ಸಂದೇಹವನ್ನು ನಿವಾರಣೆ ಮಾಡುತ್ತದೆ. (ಖಂಡ 376 ಕ. ಪುಟ ೮೧)

ಪೂರ್ವಾರ್ಧದ ಭಾವಾರ್ಥ—(೨೩೬-೩೮) ಈ ವಾಯು ಹಿಂದೆ (೪ನೇ ಮಂತ್ರದಲ್ಲಿ) ಹೇಳಿದಂತೆ ತನ್ನ ತಂದೆತಾಯಿಗಳಾದ ಶ್ರೀಲಕ್ಷ್ಮೀನಾರಾಯಣರ ಆಜ್ಞೆಯಂತೆಯೇ ಮೂರು ಅವತಾರಗಳಲ್ಲೂ ಮಾತೃಗಳನ್ನು ಪ್ರವೇಶಿಸಿದ

ಅತಶ್ಚ ಗರ್ಭವಾಸಾದಿ—ಕಿಂಚಿದ್ದುಃಖಂ ನ ವಿದ್ಯತೇ ।
ತತಶ್ಚ ಪರಿಶುದ್ಧಶ್ಚ ದುಃಖಗಂಧೈರಹಿಂಸಿತಃ ।
ವವೃಧೇ ಚ ಸ್ವಶಕ್ತ್ಯೈವ ತೀವ್ರಯಾ ಚ ಹರೀಚ್ಛಯಾ ॥ ೩೩೮ ॥

ಉತ್ತರಾರ್ಧೇ ತೃತೀಯಚರಣಾರ್ಥಃ (ಅನು ಯತ್....ಸನಾಜುವಃ)

ಉತ್ತರಾರ್ಧೇ ತು ಮಧ್ವಸ್ಯ ವ್ಯಾಖ್ಯಾವೈಶಿಷ್ಟ್ಯಮುಚ್ಯತೇ ॥ ೩೩೯ ॥

ಅನು ಯತ್....ಸನಾಜುವಃ

ಸಪ್ತವಿದ್ಯಾಸು ಯಾಶ್ಚಾದ್ಯಾ—ಶ್ಚತಸ್ರೋ ವೈ ಋಗಾದಯಃ ।
ನಿತ್ಯಸ್ವರಾದಿಬದ್ಧತ್ವಾದ್ ವಿಶ್ರುತಾ ವೈ ಸನಾತನಾಃ ॥ ೩೪೦ ॥
ಅತೋ ವ್ಯಾಖ್ಯಾಯಮಾನಸ್ತಾ ಮಧ್ವೋ ನ ತ್ವರತೇ ಽಪಿತು ।
ಉಪಕ್ರಮಾದಿಲಿಂಗಾನಿ ಪರೀಕ್ಷ್ಯ ಚ ವಿಚಾರ್ಯ ಚ ॥ ೩೪೧ ॥

ಕಾರಣ ಮೂರು ಅವತಾರಗಳಲ್ಲೂ ಅವರಿಗೆ ಗರ್ಭವಾಸವೂ ಇಲ್ಲ, ತಜ್ಜನಿತ ಕಿಂಚಿದ್ದುಃಖವೂ ಇಲ್ಲ ಏಕೆಂದರೆ ಇವರು ತಮ್ಮ ಪ್ರಬಲವಾದ ವಿಶೇಷ ಶಕ್ತಿಯಿಂದಲೂ ಭಗವದಿಚ್ಛೆಯಿಂದಲೂ ಶುಕ್ಲಶೋಣಿತಾದಿ ಸಂಬಂಧವಿಲ್ಲದೆ ನೇರವಾಗಿ ತಾಯಿಯುದರನ್ನೇ ಪ್ರವೇಶಿಸಿ ಹೊರಗೆ ಬಂದುಬಿಡುತ್ತಾರಾದ ಕಾರಣ 'ಅಹಿಂಸ್ಯಮಾನಃ' ಯಾವ ಹಿಂಸೆಗೂ ಒಳಪಡದೆ ಬೆಳೆದು ಅಭಿವ್ಯಕ್ತ-ರಾಗುತ್ತಾರೆಂದು ತಿಳಿಯಬೇಕು.

(೩೩೯) ಐದನೇ ಋಕ್ಕಿನ ಉತ್ತರಾರ್ಧಕ್ಕೆ ಅವತಾರಿಕೆ—ಉತ್ತರಾರ್ಧ-ದಲ್ಲಿ ಶ್ರುತಿಯು ಮಧ್ವಾಚಾರ್ಯರ ವ್ಯಾಖ್ಯಾನದಲ್ಲಿರುವ ಹೆಚ್ಚುಗಾರಿಕೆ-ಯನ್ನು ವರ್ಣಿಸಿ ಮಧ್ವಾಚಾರ್ಯರ ಮಹಿಮೆಯನ್ನು ಮುಕ್ತಾಯ-ಗೊಳಿಸುತ್ತದೆ.

(೩೪೦-೪೨) ಮೂರನೇ ಚರಣದ ಭಾವಾರ್ಥ—ಹಿಂದೆ (ಎರಡನೇ ಋಕ್ಕಿನ ಪೂರ್ವಾರ್ಧದಲ್ಲಿ) ಪ್ರಸಕ್ತವಾದ ಸಪ್ತವಿದ್ಯೆಗಳ ಪೈಕಿ ಮೊದಲನೆಯ ನಾಲ್ಕು ವಿದ್ಯೆಗಳಾದ ಋಗಾದಿ ವಿದ್ಯೆಗಳು ಅನಾದಿಸತ್ಯವಾಗಿ ಒಂದೇರೀತಿ ಇರುವ ಆನುಪೂರ್ವಿ, ಶಬ್ದರೂಪ, ಸ್ವರ ಮೊದಲಾದುವುಗಳಿಂದ ಬದ್ಧವಾಗಿ

ಪ್ರವರ್ತತೇ ಕ್ರಮೇಣೈವ ವಾಕ್ಯತಾತ್ಪರ್ಯನಿರ್ಣಯೇ ।
ಯಥಾ ವೃಕ್ಷಂ ವಿಚಾರ್ಯೈವ ಕಶ್ಚಿದಾರುಹತೇ ಪುಮಾನ್ ॥ ೨೪೨ ॥

ಇತಿಹಾಸಂ ಪುರಾಣಂ ಚ ಪಂಚರಾತ್ರಂ ತೃತೀಯಕಮ್ ।
ಏತಾನಿ ತ್ರೀಣಿ ನವ್ಯಾನಿ ರಚಿತಾನ್ಯವರಾಣಿ ಚ ॥ ೨೪೩ ॥

ಅತಸ್ತೇಷಾಂ ತು ವ್ಯಾಖ್ಯಾನೇ ಕ್ಷಿಪ್ರಮೇವ ಚರತ್ಯಸೌ ।
ತದರ್ಥನಿರ್ಣಯೇ ಯಸ್ಮಾನ್ ನಾತಿಕ್ಲೇಶೋ ಹಿ ವಿದ್ಯತೇ ॥ ೨೪೪ ॥

ಎಳ್ಳಷ್ಟೂ ಬದಲಾಯಿಸದೆ ಯಾವಾಗಲೂ ಒಂದೇ ರೀತಿ ಇರುತ್ತವೆಯಾದ ಕಾರಣ ಅವು ಸನಾತನವಿದ್ಯೆಗಳೆಂದು ಪ್ರಸಿದ್ಧವಾಗಿವೆ. ಆದಕಾರಣ ಅವಕ್ಕೆ ವ್ಯಾಖ್ಯಾನ ಮಾಡುವಾಗ ಮಧ್ವಾಚಾರ್ಯರು ಬಹಳ ಎಚ್ಚರಿಕೆಯಿಂದ ಉಪಕ್ರಮೋಪಸಂಹಾರಾದಿ ತಾತ್ಪರ್ಯಲಿಂಗಗಳನ್ನು ಪರೀಕ್ಷಿಸಿ ವಿಚಾರ-ಮಾಡಿಯೇ ಅವುಗಳ ತಾತ್ಪರ್ಯವನ್ನು ನಿರ್ಣಯಿಸುತ್ತಾರೆಯೇ ವಿನಾ ಅವಸರ-ಅವಸರವಾಗಿ ಮಾಡುವುದಿಲ್ಲ. ಮರ ಹತ್ತುವ ಮನುಷ್ಯ ಹೇಗೆ ಮರದ ಆಯಕಟ್ಟುಗಳನ್ನು ಪರೀಕ್ಷಿಸಿ ಎಲ್ಲಿ ಹಿಡಿತ ಸಿಕ್ಕುತ್ತದೆ ಎಂದು ನೋಡಿ-ಕೊಂಡೇ ಮರ ಹತ್ತುತ್ತಾನೋ ಹಾಗೆಯೇ ಮಧ್ವಾಚಾರ್ಯರೂ ವೇದಗಳಿಗೆ ವ್ಯಾಖ್ಯಾನಮಾಡುವಾಗ ಪ್ರತಿಯೊಂದು ಸ್ವರ, ಪ್ರತಿಯೊಂದು ಪದ, ಪ್ರತಿ-ಯೊಂದು ರೂಪವನ್ನೂ ಗಮನಿಸಿ ಅವೆಲ್ಲಕ್ಕೂ ಹೊಂದಿಕೆಯಾಗುವಂತೆಯೂ ಒಂದಕ್ಕೂ ವೈಯರ್ಥ್ಯ ಬರದಂತೆಯೂ ಹೊಂದಿಸಿ ಅರ್ಥವನ್ನು ಹೇಳಿ ತಾತ್ಪರ್ಯವನ್ನೂ ನಿರ್ಣಯಿಸುತ್ತಾರೆಂದು ಭಾವ.

(೨೪೩-೪೪) ಕಡೆಯ ಮೂರು ವಿದ್ಯೆಗಳಾದ ಇತಿಹಾಸ, ಪುರಾಣ, ಪಂಚರಾತ್ರಾಗಮ ಈ ಮೂರೂ, ವೇದಗಳಿಗೆ ಹೋಲಿಸಿದರೆ, ಈಚಿನವು (ನವ್ಯಾನಿ); ಅವು ರಚಿತವಾದ ಪೌರುಷೇಯಗ್ರಂಥಗಳೂ ಆಗಿರುವುದ-ರಿಂದ ವೇದಗಳ ಅಪೇಕ್ಷಯಾ ಕೀಳಾದವು (ಅವರಾಣಿ). ಆದಕಾರಣವೇ ಅವುಗಳಿಗೆ ನಿಯತಸ್ವರಾದಿ ಬಂಧನಗಳಿಲ್ಲ. ಆದ್ದರಿಂದಲೇ ಅವುಗಳ ಅರ್ಥ-ಹೇಳುವುದೂ ಅಷ್ಟು (ವೇದಗಳಷ್ಟು) ಕಠಿನವಲ್ಲವಾದ ಕಾರಣ ಮಧ್ವಾ-

ಉಪಸಂಹಾರಃ

ಯತೋಽಸೌ ಸರ್ವಶಾಸ್ತ್ರಾಣಾಂ ವಾಕ್ಯಾನಿ ವಿವಿಧಾನಿ ಚ ।
ಪ್ರವಿಚಾರ್ಯೈವ ತತ್ತ್ವಾರ್ಥಂ ವಕ್ತಿ ನಿರ್ಣಯಪೂರ್ವಕಮ್ ॥ ೨೪೫ ॥
ಅತ ಏವಾಸ್ಯ ಸಿದ್ಧಾಂತಃ ಸರ್ವಥಾ ಹರಿಸಮ್ಮತಃ ।
ನಿತರಾಂ ದೋಷದೂರಶ್ಚ ವಿಷ್ಣೋರುತ್ಕರ್ಷ ಬೋಧಕಃ ॥ ೨೪೬ ॥
ಆನಂದದಶ್ಚ ಮೋಕ್ಷೇಽಪಿ ಸಂಸಾರಕ್ಲೇಶನಾಶಕಃ ।
ಅತಶ್ಚ ಮಧ್ವಸಿದ್ಧಾಂತೋ ಗ್ರಾಹ್ಯಃ ಸರ್ವಮುಮುಕ್ಷುಭಿಃ ॥ ೨೪೭ ॥

ಚಾರ್ಯರು ಇವುಗಳಿಗೆ ಅರ್ಥ ಹೇಳುವಾಗ ಸಲೀಸಾಗಿ (ನಿರರ್ಗಳವಾಗಿ) ಓಡಿಬಿಡುತ್ತಾರೆಯೆಂದು ಶ್ರುತಿ ಹೇಳುತ್ತದೆ.*

ಉಪಸಂಹಾರ—(೨೪೫-೪೭) ಈ ಪ್ರಕಾರ ಶ್ರೀಮಧ್ವಾಚಾರ್ಯರು ಶ್ರುತಿವಾಕ್ಯಗಳಿಗೆ ಅರ್ಥ ಹೇಳುವ ಕ್ರಮವೇ ಬೇರೆ, ಸ್ಮೃತಿ ವಾಕ್ಯಗಳಿಗೆ ಅರ್ಥ ಹೇಳುವ ಕ್ರಮವೇ ಬೇರೆ. ಅವುಗಳ ಲಕ್ಷಣವನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಪೂರ್ವಾಪರ ವಿಚಾರಗಳನ್ನೆಲ್ಲಾ ತೂಕಮಾಡಿ, ಯಾವ ಶಾಸ್ತ್ರಕ್ಕೂ ಎಲ್ಲೂ ವಿರೋಧ ಬರದಂತೆ (ಉದಾಹರಣೆಗೆ—ಅಶ್ವತ್ಥಾಮನ ಪರಾಜಯದ ವಿಚಾರ ಭಾಗವತದಲ್ಲಿ ಒಂದು ರೀತಿ ಹೇಳಿದ್ದರೆ ಭಾರತದಲ್ಲಿ ಇನ್ನೊಂದು ರೀತಿ ಹೇಳಿದೆ—ಅದನ್ನು ಭಾಗವತತಾತ್ಪರ್ಯದಲ್ಲಿ ಪರಿಹರಿಸಿದ್ದಾರೆ. ಹೀಗೆಯೇ ರಾಮಾಯಣದ, ಮಹಾಭಾರತದ ಅನೇಕ ಪ್ರಮೇಯಗಳಿಗೆ ಸಾಮಂಜಸ್ಯ ತೋರಿಸಿಕೊಟ್ಟಿದ್ದಾರೆ. ರಾಮನು ಪರಶುರಾಮನನ್ನು ಸೋಲಿಸಿದ ಪ್ರಮೇಯವನ್ನು ಎಷ್ಟು ತೃಪ್ತಿಕರವಾಗಿ ಹೊಂದಿಸಿದ್ದಾರೆ! ಹೀಗೆಯೇ ನೂರಾರು ನಿದರ್ಶನ ಕೊಡಬಹುದು) ಹೊಂದಿಸಿ ತೃಪ್ತಿಕರವಾಗಿ

---

* ಉದಾಹರಣೆಗೆ ಗೀತಾಭಾಷ್ಯವನ್ನು ನೋಡಿ—ಎಷ್ಟೋ ಶ್ಲೋಕಗಳಿಗೆ ಅರ್ಥವನ್ನೇ ಹೇಳುವುದಿಲ್ಲ, ಇಡೀ ಪ್ರಥಮಾಧ್ಯಾಯಕ್ಕೂ ದ್ವಿತೀಯಾಧ್ಯಾಯದ ಹತ್ತು ಶ್ಲೋಕಗಳಿಗೂ ಹೇಳಿಲ್ಲ. ಹೀಗೆಯೇ ಮಧ್ಯೆ ಮಧ್ಯೆ ಕಪ್ಪೆಯಂತೆ ಹಾರಿಬಿಡುತ್ತಾರೆ. ಅದೇ ರೀತಿ ಭಾಗವತ ತಾತ್ಪರ್ಯದಲ್ಲೂ ಅಲ್ಲಿ ಇಲ್ಲಿ ಪ್ರಸಂಗವಶಾತ್ ಹೇಳುತ್ತಾರೆಯೇ ವಿನಾ ಅಧ್ಯಾಯ-ಶ್ಲೋಕಗಳನ್ನು ಅನುಸರಿಸಿ ಹೇಳುವುದಿಲ್ಲ. ಇದರಿಂದ 'ಆವರಾಸು ಧಾವತೇ' ಎಂಬುದು ನೂರಕ್ಕೆ ನೂರು ನಿಜವೆಂಬುದು ಗೊತ್ತಾಗುತ್ತದೆ.

ಹರಿಸಮರ್ಪಣಮ್

ಹರಿವಾಯುಸ್ತುತಿಪ್ರೌಢ—ವ್ಯಾಖ್ಯಾವ್ಯಾಜೇನ ಸಾದರಮ್ ।
ಬಳಿತ್ಥಾಸೂಕ್ತಸಾರಾರ್ಥಃ ಶ್ಲೋಕರೂಪೇಣ ಕೇವಲಮ್ ॥ ೨೪೮ ॥
ಶ್ರೀಪಾದರಾಜಮೌನೀಂದ್ರ—ಕರುಣಾಪಾಂಗಮಾತ್ರತಃ ।
ಪುಷ್ಟೇನ ವಿಷ್ಣುತೀರ್ಥೇನ ಸಂಪ್ರೋಕ್ತಃ ಶ್ರೀಶತುಷ್ಟಯೇ ॥ ೨೪೯ ॥
ಹಯಗ್ರೀವ ದಯಾಸಿಂಧೋ ಮಧ್ವನಾಥ ರಮಾಪತೇ ।
ತ್ವಮೇವ ಪ್ರೇರಕಃ ಸಾಕ್ಷಾತ್ ಲೇಖಕಶ್ಚ ತ್ವಮೇವ ಹಿ ॥ ೨೫೦ ॥

ಅರ್ಥಮಾಡಿ ತತ್ತ್ವಾರ್ಥವನ್ನು ನಿರ್ಣಯಪೂರ್ವಕವಾಗಿ (ಇದಮಿತ್ಥಂ ಎಂಬಂತೆ) ಸಮರ್ಥಿಸಿ ನಿರ್ಧರಿಸಿ ಹೇಳುತ್ತಾರೆ. ಆದ್ದರಿಂದಲೇ ಇವರ ಸಿದ್ಧಾಂತ ನಿರ್ದೋಷವಾಗಿದೆ, ಅಲ್ಲದೆ ಹರಿಸರ್ವೋತ್ತಮತ್ವಪ್ರತಿಪಾದಕವಾಗಿದೆ. ಆದ್ದರಿಂದಲೇ ಇವರ ಸಿದ್ಧಾಂತ ವಿಷ್ಣುವಿಗೆ ಅಚ್ಚುಮೆಚ್ಚಾಗಿದೆ. ಅಷ್ಟೇ ಅಲ್ಲದೆ ಅದರ ಅಧ್ಯಯನದಿಂದ—ಅಭ್ಯಾಸದಿಂದ-ಮನನ ಮಾಡುವುದರಿಂದ ಸಂಸಾರಕ್ಲೇಶಗಳೆಲ್ಲ ದೂರವಾಗಿ ಕೊನೆಯಲ್ಲಿ ಮೋಕ್ಷದಲ್ಲಿ ಸ್ವಸ್ವಯೋಗ್ಯವಾದ ಪೂರ್ಣಾನಂದವನ್ನೂ ಕೊಡತಕ್ಕಂಥಾದ್ದಾಗಿದೆ. ಆದ್ದರಿಂದಲೇ ಶ್ರೀಮನ್ಮಧ್ವಸಿದ್ಧಾಂತವು—ಇದು ಮಾತ್ರವೇ—ಸಕಲ ಮೋಕ್ಷಾಪೇಕ್ಷಿ ಜನಗಳಿಂದಲೂ ಸ್ವೀಕರಿಸಿ ಅನುಷ್ಠಾನಕ್ಕೆ ತರತಕ್ಕದ್ದಾಗಿದೆಯೆಂದು ಹೇಳಿ ಶ್ರುತಿಯು ಮಧ್ವಾಚಾರ್ಯರ ಪ್ರಶಂಸೆಯನ್ನು ಮುಕ್ತಾಯಮಾಡಿದೆಯೆಂಬಲ್ಲಿಗೆ ಅಶೇಷಮತಿಮಂಗಲಮ್.

ಶ್ರೀಹರಿಯಲ್ಲಿ ಕೃತಿಸಮರ್ಪಣೆ

(೨೪೮-೦೯) ಶ್ರೀಹರಿವಾಯುಸ್ತುತಿಗೆ ಪ್ರೌಢವ್ಯಾಖ್ಯಾನವನ್ನು ಬರೆಯಲು ಹೊರಟ ಈ ವಿಷ್ಣುತೀರ್ಥಾಭಿಧಾನನಾದ ನಾನು ಅದೇ ನೆಪದಿಂದ ಬಳಿತ್ಥಾಸೂಕ್ತದ ಅರ್ಥವನ್ನು ಗದ್ಯರೂಪದಲ್ಲಿ ಸಂಗ್ರಹಿಸುತ್ತಾ ಇದ್ದಾಗಲೆ ಮಹಾನುಭಾವರಾದ ಶ್ರೀಶ್ರೀಪಾದರಾಜಸ್ವಾಮಿಗಳ ಸನ್ನಿಧಿಯಲ್ಲಿದ್ದುದರಿಂದ ಅವರ ಕೃಪಾಕಟಾಕ್ಷದ ಲವಲೇಶದಿಂದಲೇ ಪ್ರೇರಿತನಾಗಿ ಅವರ ಪರಮಾನುಗ್ರಹ ಬಲದಿಂದಲೇ ಶ್ಲೋಕರೂಪದಿಂದಲೂ ಸೂಕ್ತದ ಸಾರಾರ್ಥವನ್ನು ಕೇವಲ

ಸೂಕ್ತಾರ್ಥಮನನಂ ಯಸ್ಮಾ—ದತಿಪ್ರೀತಿಕರಂ ತವ ।
ತ್ವಯೈವ ಪ್ರೇರಿತಶ್ಚಕ್ರೇ ವ್ಯಾಖ್ಯಾಂ ತ್ವತ್ಪ್ರೀತಿದಾಂ ಶುಭಾಮ್ ॥೨೫೧॥
ವಚನಪ್ರಸೂನಮಾಲಾ ಗ್ರಥಿತಾ ಪ್ರೀತಯೇ ತವ ।
ಧಾರ್ಯತಾಂ ಹೃದಯೇ ದೇವ ಕೃಪಯಾ ಮಧ್ವವಲ್ಲಭ ॥ ೨೫೨ ॥

ಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಸ್ವಾಮಿಯ ಪ್ರೀತ್ಯರ್ಥವಾಗಿಯೇ ರಚಿಸಿದೆನು. (೨೫೦) ಹೇ ಹಯಗ್ರೀವಸ್ವಾಮಿಯೇ ! ದಯಾಸಮುದ್ರನೇ ! ಲಕ್ಷ್ಮೀಪತಿಯೇ ! ಮಧ್ವಾಚಾರ್ಯರ ಸ್ವಾಮಿಯೇ ! ಈ ಶ್ಲೋಕಗಳನ್ನು ರಚಿಸುವುದಕ್ಕೆ ನೀನೇ ಪ್ರೇರಕ, ನೀನೇ ಸ್ಫೂರ್ತಿದಾಯಕ. ಇದನ್ನು ಬರೆದದ್ದೂ ನಿನ್ನ ಪ್ರೇರಣೆಯಿಂದಲೇ—ನಿನ್ನ ಪ್ರೀತಿಗಾಗಿಯೇ ! (೨೫೧) ಏಕೆಂದರೆ ಬಳಿತ್ಥಾಸೂಕ್ತದ ಅರ್ಥವನ್ನು ತಿಳಿದುಕೊಂಡು ಪುನಃ ಪುನಃ ಮನನ ಮಾಡಿಕೊಳ್ಳುವುದು, ಹೇ ಸ್ವಾಮಿ ! ವಿಷ್ಣೋ ! ನಿನಗೆ ಅತ್ಯಂತ ಪ್ರೀತಿಕರವಾದ್ದರಿಂದ ಗದ್ಯದಲ್ಲಿ ಹೇಳಿದ್ದನ್ನೇ ಪುನಃ ಪದ್ಯರೂಪದಲ್ಲಿ ಹೇಳಿದ್ದೇನೆ. ಇದರಿಂದ ನೀನು ಸುಪ್ರಸನ್ನನಾಗು ಮತ್ತು ಇದನ್ನು ಓದಿ ಅಭ್ಯಾಸಮಾಡುವವರಿಗೆ ಮಂಗಳವನ್ನುಂಟುಮಾಡು, ಸ್ವಾಮಿ !! (೨೫೨) ಹೇ ಮಧ್ವವಲ್ಲಭ ! ವೇದವ್ಯಾಸ! ಭಗವನ್! ವಾಕ್ಯರೂಪವಾದ ಈ ಹೂವಿನ ಹಾರವನ್ನು ಕೇವಲ ನಿನ್ನ ಪ್ರೀತ್ಯರ್ಥ—ಶ್ರೀಪಾದರಾಜರ ಅನುಗ್ರಹ ಬಲದಿಂದ—ರಚಿಸಿದ್ದೇನೆ, ಸ್ವಾಮಿ ! ಇದೋ—ಇದನ್ನು ನಿನಗೆ ಸಮರ್ಪಿಸಿದ್ದೇನೆ—ದಯಮಾಡಿ ಇದನ್ನು ಹೃದಯದಲ್ಲಿ ಧರಿಸಿಕೋ ! ನನ್ನನ್ನು ಕೃತಾರ್ಥನನ್ನು ಮಾಡು.

ಶ್ರೀಕೃಷ್ಣಾರ್ಪಣಮಸ್ತು

ಶ್ರೀ ವಿಷ್ಣುತೀರ್ಥರಿಂದ ರಚಿತವಾದ ಇತರ ಗ್ರಂಥಗಳು

೧. ನಖಸ್ತುತಿ (ಶ್ರೀಹರಿವಾಯುಸ್ತುತಿಯ ಪ್ರಥಮ ಭಾಗ, ಪುಟಗಳು : ೩೫೦) — ರೂ. 60-00

೨. ಶ್ರೀಹರಿವಾಯುಸ್ತುತಿ—ಭಾಗ ಎರಡು (ಶ್ಲೋಕ ೧ರಿಂದ ೨೧, ಪುಟಗಳು : ೪೧೮) — ರೂ. 60-00

೩. ಶ್ರೀಹರಿವಾಯುಸ್ತುತಿ—ಭಾಗ ಮೂರು (ಶ್ಲೋಕ ೨೨ರಿಂದ ೪೧, ಪುಟಗಳು : ೪೪೨) — ರೂ. 60-00

೪ ಖಿಲವಾಯುಸ್ತುತಿ (ಶ್ರೀಹರಿವಾಯುಸ್ತುತಿಯ ಚತುರ್ಥ ಭಾಗ—ಬಳಿತ್ಥಾಸೂಕ್ತದ ಶ್ಲೋಕ. ವ್ಯಾಖ್ಯಾನ ಸಹಿತ, ಪುಟಗಳು : ೨೦೦) — ರೂ. 25-00

(ಈ ಮೇಲಿನ ನಾಲ್ಕು ಪುಸ್ತಕಗಳಿಗೂ ಕಾಪಿರೈಟ್ ಪಡೆಯಲಾಗಿದೆ)

೫. ಯಜ್ಞೋಪವೀತ ಪ್ರತಿಷ್ಠಾ — ರೂ. 3-00

೬. ಮುಖ್ಯಪ್ರಾಣಾಭಿಷೇಕವಿಧಿ — ರೂ. 2-00

* ಪ್ರತಿಗಳು ಮುಗಿದಿವೆ

ಮುದ್ರಣಕ್ಕೆ ಸಿದ್ಧವಾಗಿರುವುದು :

ಪು ರು ಷ ಸೂ ಕ್ತ ಮ್

ಶ್ರೀ ರಾಘವೇಂದ್ರತೀರ್ಥೀಯ, ಶ್ರೀ ಸತ್ಯಸಂಧತೀರ್ಥೀಯ
ಸಂಸ್ಕೃತ ಟೀಕಾ ಹಾಗೂ ಮಹಾಮಹೋಪಾಧ್ಯಾಯ
ಶ್ರೀಮುಷ್ಣಂ ಸೇತೂಮಾಧವಾಚಾರ್ಯರ
ಕನ್ನಡ ಅರ್ಥ ತಾತ್ಪರ್ಯ ವ್ಯಾಖ್ಯಾನಸಹಿತ

ವಾಸುದೇವಪದಸಂತತಸಂಗೀ

ಆನಂದ್ ಪ್ರಿಂಟರ್ಸ್, 25, ಗಾಂಧಿ ಬಜಾರ್
ಬಸವನಗುಡಿ, ಬೆಂಗಳೂರು-560004